ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

15 ಏಪ್ರಿಲ್ 2015 ಪುಟ 20 ರೂ. 15/-




ಪೋಲೀಸರ ಸಂಗದಲ್ಲಿ... ನೂರ್‌ಶ್ರೀಧರ್



ಮಂಡ್ಯ:

ಅಂಬಿ-ಕುಮ್ಮಿಗೆ ಮುಖಭಂಗ



ಬಿಬಿಎಂಪಿ

ಎಲೆಕ್ಷನ್ನಾ? ಕಲೆಕ್ಷನ್ನಾ?





ರಾಯಚೂರು:

ಬಯಲಾಯಿತು ಎಸ್ಪಿ ನಾಗರಾಜನ ಕ್ಲಬ್ ಲಿಂಕು


ಉತ್ತರಕನ್ನಡ:

ತದಡಿ ಬಂದರು ಡೋಂಗಿ ಪರಿಸರವಾದಿಗಳಿಗೆ ಕಪಾಳಮೋಕ್ಷ!!



ಆಮ್ ಆದ್ಮಿಯ ಬಿಕ್ಕಟ್ಟಿನ ಪಾಠಗಳು

ಸಾರಾಯಿ ಮತ್ತು ಸಾಮಾಜಿಕ ನ್ಯಾಯ



ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದಮೇಲೆ ಎರಡು ಸಾರಿ ಅಗ್ಗದ ಮದ್ಯದ ಕುರಿತು ಮಾತನಾಡಿದ್ದಾರೆ. ಎರಡನೆಯ ಸಾರಿ ಮಾತನಾಡಿದ್ದು ಈ ಬಜೆಟ್ ಅಧಿವೇಶನದಲ್ಲಿಯೇ. ಅದಕ್ಕೆ ವಿರೋಧ ಬರಬಹುದೆಂಬುದನ್ನು ಮನಗಂಡು 'ಮತ್ತೆ ಸಾರಾಯಿಯನ್ನು ತರುವ ಆಲೋಚನೆ ಇಲ್ಲ' ಎಂದು ಅಧಿಕೃತವಾಗಿ ಮಾರ್ಚ್ 30ರಂದು ವಿಧಾನಸಭೆಯಲ್ಲಿ ಘೋಷಿಸಿದ್ದಾರೆ. ಆದರೆ, ತಾವು ಅಗ್ಗದ ಮದ್ಯ ಅಥವಾ ಸಾರಾಯಿ ತರಬೇಕೆಂದು ಹೇಳಿದ್ದರ ಅರ್ಥವೇನು ಎಂದು ವಿವರಿಸಿದ್ದಾರೆ. 'ಶಾಸಕ ರಮೇಶ್‌ಕುಮಾರ್ ಅವರು ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟವಾಗುತ್ತಿರುವುದರ ಕುರಿತು ಪ್ರಸ್ತಾಪಿಸಿದ್ದರು. ಸಾರಾಯಿ ರದ್ದು ಮಾಡಿದ ಮೇಲೆ, ಹಳ್ಳಿಗಳಲ್ಲಿ ಮದ್ಯ ಸಿಗುತ್ತಿಲ್ಲ; ಹೀಗಾಗಿ ಅಲ್ಲಿನ ಅಂಗಡಿಗಳಲ್ಲಿ ಮದ್ಯವು ಅಕ್ರಮವಾಗಿ ಲಭ್ಯವಾಗುವ ಸ್ಥಿತಿ ನಿರ್ಮಾಣವಾಗಿದೆ. ಇದನ್ನು ಸರಿಪಡಿಸಲು ಒಂದೋ ಸಾರಾಯಿ ತರಬೇಕು, ಇಲ್ಲವೇ ಹಳ್ಳಿಗಳಲ್ಲೂ ಬಾಟಲಿ ಮದ್ಯ ಮಾರಾಟ ಮಾಡಲು ಲೈಸೆನ್ಸ್ ನೀಡಬೇಕು'.

'ಸಂದರ್ಭ ಏನಿದೆ ಎಂಬುದನ್ನು ಹೇಳಿದ್ದೇನೆಯೇ ಹೊರತು, ಸರ್ಕಾರವು ಸಾರಾಯಿ ಮಾರಾಟವನ್ನು ಮತ್ತೆ ಆರಂಭಿಸುವ ಉದ್ದೇಶ ಹೊಂದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ಅಗ್ಗದ ಮದ್ಯದ ಉತ್ಪಾದನೆ ಹಾಗೂ ಸರಬರಾಜು ಮಾಡುವ ಕುರಿತು ಅಧಿಕಾರಿಗಳ ಸಭೆಯಲ್ಲಿ ಸಿದ್ದರಾಮಯ್ಯನವರು ಮಾತಾಡಿದಾಗಲೂ ಇಂತಹುದೇ ಕಾರಣವಿತ್ತು. ಸಾರಾಯಿಯ ಬೆಲೆ ಕಡಿಮೆಯಿತ್ತು, ಅದನ್ನು ನಿಷೇಧ ಮಾಡಿದುದರಿಂದ, ಹಳ್ಳಿಗಳ ಕೆಳ ಮಧ್ಯಮ ವರ್ಗ ಹಾಗೂ ಬಡ ಜನರು ಬಾಟ್ಲಿ ಮದ್ಯ ಕುಡಿಯಬೇಕಾಯಿತು. ಹೀಗಾಗಿ ಅವರ ಜೇಬಿನಿಂದ ಇನ್ನೂ ಹೆಚ್ಚು ಕಳೆದುಕೊಳ್ಳುತ್ತಿದ್ದಾರೆ. ಅದರ ಬದಲಿಗೆ ಇನ್ನೂ ಕಡಿಮೆ ಬೆಲೆಯ ಮದ್ಯವನ್ನು ನೀಡಿದರೆ, ಬಡವರಿಗೆ ಅಷ್ಟರಮಟ್ಟಿಗೆ ಒಳ್ಳೆಯದಾಗುತ್ತದಲ್ಲವೇ?

ಗ್ರಾಮಾಂತರ ಪ್ರದೇಶದ ಬಡ ಜನರ ಅಭ್ಯಾಸಗಳು, ಕಷ್ಟಗಳ ಬಗ್ಗೆ ಗೊತ್ತಿರುವುದರಿಂದ ಸಿದ್ದರಾಮಯ್ಯನವರು ಈ ರೀತಿ ಹೇಳುತ್ತಿದ್ದಾರೆ ಎಂದೇ ಅಂದುಕೊಳ್ಳೋಣ. ಹೇಗೂ ಜನರು ಕುಡಿಯುವುದನ್ನು ಬಿಡುವುದಿಲ್ಲ; ಅದನ್ನು ಸಂಪೂರ್ಣ ರದ್ದು ಮಾಡಿದರೆ ಕಳ್ಳಭಟ್ಟಿ ಶುರುವಾಗಿ ಇನ್ನೂ ದೊಡ್ಡ ದುರಂತವೇ ಸಂಭವಿಸಬಹುದು. ಹಾಗಾಗಿ, ಕನಿಷ್ಠ ಅವರ ಖರ್ಚನ್ನಾದರೂ ಕಡಿಮೆ ಮಾಡೋಣ ಎಂಬ ಅನಿಸಿಕೆ ಅವರ ಮನಸ್ಸಿನಲ್ಲಿರುವುದರಿಂದಲೇ ಈ ಮಾತು ಅವರ ಬಾಯಿಯಿಂದ ಹೊರಬೀಳುತ್ತಿದೆ. ಬಹುಶಃ ಇದು 'ಒಂದು ರೀತಿಯ ಸಾಮಾಜಿಕ ನ್ಯಾಯ'ದ ಆಲೋಚನೆಯೇ ಆಗಿರಬಹುದು. ಇದು ತಮಾಷೆಗಾಗಿ ಹೇಳುತ್ತಿರುವುದಲ್ಲ. ನಿಜಕ್ಕೂ ನಮ್ಮ ಜನರು ಸಾರಾಯಿ ನಿಷೇಧದ ನಂತರ ಬಹಳ ಹಣವನ್ನು ಕಂಪೆನಿ ಮದ್ಯಕ್ಕಾಗಿ ಕಳೆದುಕೊಳ್ಳುತ್ತಿದ್ದಾರೆ.

ಅದೇನೇ ಇದ್ದರೂ, ಎರಡು ಅಂಶಗಳ ಕುರಿತು ಮುಖ್ಯಮಂತ್ರಿಗಳು ಇನ್ನೂ ಆಳವಾದ ಚಿಂತನೆಯನ್ನು ಮಾಡುವ ಅಗತ್ಯವಿದೆ. ಇಂದು ಮದ್ಯವು ನಮ್ಮ ಗ್ರಾಮೀಣ ಭಾಗದ ದುಡಿವ ಜನರ ಬದುಕನ್ನು ನಾಶ ಮಾಡುತ್ತಿದೆ. ನಮ್ಮ ಹಳ್ಳಿಗಳಲ್ಲಿ ಕುಡುಕರು ಮುಂಚಿನಿಂದಲೂ ಇದ್ದರಾದರೂ, ಕಳೆದ 12 ವರ್ಷಗಳಿಂದ ಅತ್ಯಂತ ವ್ಯವಸ್ಥಿತವಾಗಿ ಕುಡುಕರನ್ನು ಹೆಚ್ಚಿಸಲಾಗಿದೆ. ಸರ್ಕಾರದ ಇಲಾಖೆಗಳು ಇದರಲ್ಲಿ ಸಕ್ರಿಯವಾಗಿ ಭಾಗಿಯಾಗಿವೆ. ಎರಡನೆಯದಾಗಿ, ಅಕ್ರಮ ಮದ್ಯವು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗಲು ಕೇವಲ ಸಾರಾಯಿ ನಿಷೇಧ ಕಾರಣವಲ್ಲ.

ಇವೆರಡನ್ನು ಪುರಾವೆ ಸಮೇತ ಮುಂದಿಟ್ಟು, ನಂತರ ಬಹಳ ಮುಖ್ಯವಾದ ಸಾಮಾಜಿಕ ನ್ಯಾಯದ ಅಂಶವನ್ನು ಪರಿಶೀಲಿಸೋಣ. ಸಾರಾಯಿ ನಿಷೇಧಕ್ಕೆ ಸ್ವಲ್ಪ ಮುಂಚೆಯೇ ಕರ್ನಾಟಕದಲ್ಲಿ ಮಾರಾಟವಾಗುವ ಎಲ್ಲಾ ಮದ್ಯವೂ ಕರ್ನಾಟಕ ರಾಜ್ಯ ಪಾನೀಯ ನಿಗಮ (ಕೆಎಸ್‌ಬಿಸಿಎಲ್)ದ ಮೂಲಕವೇ ಹೋಗಬೇಕೆಂದು ಸರ್ಕಾರ ತೀರ್ಮಾನಿಸಿತು ಮತ್ತು ಅಂತಹದೊಂದು ಸಂಸ್ಥೆಯನ್ನು ಹುಟ್ಟು ಹಾಕಿತು. ಆ ನಂತರ ಸಾರಾಯಿ ನಿಷೇಧ ಮಾಡಲಾಯಿತು. ಅಲ್ಲಿಂದ ಮುಂದಕ್ಕೆ ಪ್ರತೀ ತಿಂಗಳೂ ಸಹ ಒಂದೊಂದು ಜಿಲ್ಲೆಯಲ್ಲಿ ಎಷ್ಟು ಮದ್ಯವನ್ನು ಮಾರಾಟ ಮಾಡಬೇಕೆಂಬುದರ ಬಗ್ಗೆ ಟಾರ್ಗೆಟ್ ನಿಗದಿಪಡಿಸಲಾಯಿತು. ಮತ್ತು ಈ ಟಾರ್ಗೆಟ್‌ಅನ್ನು ಪ್ರತೀ ತಿಂಗಳೂ ಏರಿಸಲಾಯಿತು.

ಉದಾಹರಣೆಗೆ 2014ರ ಜನವರಿಯಲ್ಲಿ (ಕೊಪ್ಪಳ ಜಿಲ್ಲೆಯಿಂದ ಲಭ್ಯವಾದ ಮಾಹಿತಿಯಂತೆ) ಐಎಂಎಲ್ ಮದ್ಯದ ಟಾರ್ಗೆಟ್‌ಅನ್ನು 96,550 ಬಾಕ್ಸ್‌ಗಳೆಂದು ನಿಗದಿ ಮಾಡಲಾಯಿತು. ಆ ತಿಂಗಳು 78,210 ಬಾಕ್ಸ್‌ಗಳನ್ನು ಮಾರಾಟ ಮಾಡಲಾಯಿತು; ಫೆಬ್ರವರಿಯಲ್ಲಿ 98,305 ಬಾಕ್ಸ್‌ಗಳೆಂದು ನಿಗದಿ ಪಡಿಸಲಾಗಿದ್ದರೆ, 80,774 ಬಾಕ್ಸ್‌ಗಳನ್ನು ಮಾರಾಟ ಮಾಡಲಾಯಿತು. ಮಾರ್ಚ್‌ನಲ್ಲಿ 1,07,519 ಬಾಕ್ಸ್‌ಗಳ ಟಾರ್ಗೆಟ್ ನಿಗದಿ ಮಾಡಲಾಯಿತು ಮತ್ತು 85,998 ಬಾಕ್ಸ್‌ಗಳನ್ನು ಮಾರಾಟ ಮಾಡಲಾಯಿತು.



ಇಂತಹ ನೀತಿಯನ್ನು ಅನುಸರಿಸುತ್ತಾ ಬಂದಿದ್ದರಿಂದ ಕರ್ನಾಟಕದಲ್ಲಿ ಮದ್ಯ ಮಾರಾಟ ಹೆಚ್ಚಾಗುತ್ತಾ ಬಂದಿತು. ಸಾಮಾನ್ಯವಾಗಿ ಪಂಜಾಬ್ ಹಾಗೂ ಕೇರಳ ರಾಜ್ಯಗಳು ಅತ್ಯಂತ ಹೆಚ್ಚು ಐಎಂಎಲ್ ಮದ್ಯವನ್ನು ಕುಡಿಯುತ್ತಿದ್ದ ರಾಜ್ಯಗಳಾಗಿದ್ದವು. ಕರ್ನಾಟಕಕ್ಕೆ ಅಂತಹ 'ಹೆಸರು' ಇರಲಿಲ್ಲ. ಆದರೆ, 2009-10ರ ಹೊತ್ತಿಗೆ ಕರ್ನಾಟಕವು ದೇಶದಲ್ಲಿ (ಆಂಧ್ರದ ನಂತರ) ಎರಡನೇ ಸ್ಥಾನಕ್ಕೇರಿತು. ಆ ವರ್ಷ ಕರ್ನಾಟಕವು 389.97 ಲಕ್ಷ ಕೇಸ್‌ಗಳಷ್ಟನ್ನೂ, ಕೇರಳವು 187.42 ಕೇಸ್‌ಗಳನ್ನೂ, ಪಂಜಾಬ್ ರಾಜ್ಯವು 242 ಲಕ್ಷ ಕೇಸ್‌ಗಳಷ್ಟನ್ನೂ, ಆಂಧ್ರವು 412 ಲಕ್ಷ ಕೇಸ್‌ಗಳಷ್ಟನ್ನೂ ಮಾರಾಟ ಮಾಡಿತ್ತು. 2006-07ರಲ್ಲಿ ಕರ್ನಾಟಕದಲ್ಲಿ ಅದು ಕೇವಲ 153.61 ಲಕ್ಷ ಕೇಸ್‌ಗಳಾಗಿದ್ದವು ಎಂದರೆ, ಹೆಚ್ಚಳದ ಪ್ರಮಾಣದ ಅಂದಾಜು ಸಿಗಬಹುದು.

ಅಂದರೆ ಬಹಳ ಪ್ರಜ್ಞಾಪೂರ್ವಕವಾಗಿ, ಜಿಲ್ಲಾವಾರು ಟಾರ್ಗೆಟ್ ನಿಗದಿ ಮಾಡಿ, ಜಿಲ್ಲಾ ಅಬಕಾರಿ ಅಧಿಕಾರಿಗಳ ಮೇಲೆ ಒತ್ತಡ ಹಾಕಿ ಮದ್ಯ ಮಾರಾಟವನ್ನು ಹೆಚ್ಚಿಸಲಾಗುತ್ತದೆ. ಒಂದು ವೇಳೆ ಅವರು ಅಷ್ಟು ಮದ್ಯ ಮಾರಾಟವಾಗಲು 'ಕ್ರಮ' ಕೈಗೊಳ್ಳದಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ. 'ನಿಮ್ಮ ವ್ಯಾಪ್ತಿಯಲ್ಲಿ ಸೆಕೆಂಡ್ಸ್ ಮದ್ಯ ಮಾರಾಟವಾಗುತ್ತಿರುವುದರಿಂದಲೇ ಹೀಗಾಗುತ್ತಿದೆ' ಎಂದು. ಹಾಗಾಗಿ ಅವರುಗಳು ಇದೇ ರೀತಿಯ ಟಾರ್ಗೆಟ್‌ಅನ್ನು ಬಾರ್/ವೈನ್‌ಸ್ಟೋರ್‌ಗಳಿಗೆ ನಿಗದಿ ಮಾಡುತ್ತಾರೆ. ಅಷ್ಟು ಮಾರಾಟ ಮಾಡಲಾಗದೇ, ಅವರು ಹಳ್ಳಿಯ ಪೆಟ್ಟಿಗೆ ಅಂಗಡಿಗಳಿಂದ ಹಿಡಿದು ಎಲ್ಲರಿಗೂ ಸಾಗಿಸುತ್ತಾರೆ. ಇದು ಒಂದು ಬಹಿರಂಗ ಸತ್ಯ.

ಮದ್ಯದ ಲಭ್ಯತೆಯು ಸುಗಮವಾದಂತೆಲ್ಲಾ ಕುಡಿತವೂ ಹೆಚ್ಚಾಗುತ್ತಾ ಹೋಗುತ್ತದೆ. ಎಲ್ಲರೂ ಕುಡಿಯುತ್ತಾರಾದರೂ, ಇದರಿಂದ ಹೆಚ್ಚು ತೊಂದರೆಗೊಳಗಾಗುವವರು ಆಯಾ ಪ್ರದೇಶದ ಬಡವರು, ಭೂರಹಿತ ಕೂಲಿ ಕಾರ್ಮಿಕರು, ದಲಿತರು, ಆದಿವಾಸಿಗಳು ಮತ್ತು ಅತೀ ಹಿಂದುಳಿದ ಜಾತಿಗಳಿಗೆ ಸೇರಿದವರು. ಆಯಾ ಕುಟುಂಬಗಳ ಮಹಿಳೆಯರು ಮತ್ತು ಮಕ್ಕಳ ಪಾಡಂತೂ ಹೇಳತೀರದು. ಅಂದರೆ, ಒಂದು ಬಗೆಯ ಕುಡಿತದಿಂದ ಇನ್ನೊಂದು ಬಗೆಯ ಕುಡಿತಕ್ಕೆ ಹೊರಳಿಕೊಂಡಿದ್ದು ಮಾತ್ರವಲ್ಲ, ಹೆಚ್ಚೆಚ್ಚು ಕುಡುಕರಾಗಲೂ ಸರ್ಕಾರದ ನೀತಿ ಕಾರಣವಿದೆ. ಈ ಸಮುದಾಯಗಳ ಏಳಿಗೆಯ ಬಗ್ಗೆ ಸಿದ್ದರಾಮಯ್ಯನವರಿಗೆ ಆಸ್ಥೆಯಿರುವುದೇ ಆದಲ್ಲಿ, ಈ ಟಾರ್ಗೆಟ್‌ಅನ್ನು ಪ್ರತೀ ತಿಂಗಳೂ ಇಳಿಸುತ್ತಾ ಬರಬೇಕು. ಯಾವ ಕಾರಣಕ್ಕೂ ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ಲೈಸೆನ್ಸ್ ಕೊಡಬಾರದು. ಅದುವೇ ನಿಜವಾದ ಸಾಮಾಜಿಕ ನ್ಯಾಯವಾಗಿರುತ್ತದೆ. ■

ಗ್ರಾಮೀಣ ಜನರ ಆದಾಯ ಹೆಚ್ಚಾದರೆ-ಹೆಚ್ಚು ಕುಡಿಯುತ್ತಾರಂತೆ!

ಆನಂದ್‌ರಾಠಿ ಎಂಬ ಒಂದು ವಾಣಿಜ್ಯ ಸಂಸ್ಥೆಯಿದೆ. ಅದು ಒಂದು ಅಧ್ಯಯನ ನಡೆಸಿ ಹೀಗೆ ಹೇಳಿದೆ. 'ನರೇಗಾ ಯೋಜನೆ, ಬೆಂಬಲ ಬೆಲೆ ನೀಡುತ್ತಿರುವುದು ಮತ್ತು ಗ್ರಾಮೀಣ ಭಾಗಕ್ಕೆ ಸರ್ಕಾರ ನೀಡುತ್ತಿರುವ ಒಟ್ಟಾರೆ ಅನುದಾನ ಹಾಗೂ ಒಳ್ಳೆಯ ಮಾನ್‌ಸೂನ್ ಇವೆಲ್ಲಾ ಕಾರಣಗಳಿಂದ ತಲಾದಾಯದ ಒಟ್ಟಾರೆ ಬೆಳವಣಿಗೆಯ ಪ್ರಮಾಣ ಶೇ.13.5 ಇದೆ. ಗ್ರಾಮೀಣ ಭಾಗದ ಜನರ ತಲಾದಾಯ ಹೆಚ್ಚಾಗುತ್ತಿರುವುದರಿಂದ ಮದ್ಯ ಸೇವಿಸುವ ಪ್ರಮಾಣವೂ ಹೆಚ್ಚಾಗುತ್ತಿದೆ!'

ತಲಾದಾಯ ಹೆಚ್ಚಾಗಿರುವುದು ಶೇ.13.5. ಆದರೆ ಮದ್ಯ ಸೇವಿಸುವ ಪ್ರಮಾಣ ಹೆಚ್ಚಾಗಿರುವುದು ಶೇ.200ಕ್ಕೂ ಹೆಚ್ಚು ಎಂಬುದನ್ನು ಮಾತ್ರ ಇವರು ಮರೆಮಾಚುತ್ತಿದ್ದಾರೆ. ಒಂದು ವೇಳೆ ಯಾವುದಾದರೂ ಕಾರಣಕ್ಕೆ ತಲಾದಾಯ ಹೆಚ್ಚಾದರೂ, ಹೆಚ್ಚುವರಿಯನ್ನು ಪೌಷ್ಟಿಕ ಆಹಾರ, ಶಿಕ್ಷಣ, ಆರೋಗ್ಯ, ವಸತಿ ಹಾಗೂ ಇನ್ನಿತರ ಜೀವನಾವಶ್ಯಕ ವಸ್ತು/ಸೇವೆಗಳ ಮೇಲೆ ವ್ಯಯಿಸುವಂತೆ ಸರ್ಕಾರದ ಕ್ರಮ ಇರಬೇಕೋ ಅಥವಾ ಹೆಚ್ಚು ಮದ್ಯ ಸರಬರಾಜು ಮಾಡುವ ಕಡೆಗೋ ಎಂಬ ಪ್ರಶ್ನೆಯನ್ನು ಆರ್ಥಿಕ ತಜ್ಞರು ಹಾಕಿಕೊಳ್ಳಬೇಕಿದೆ.

ಮಾತೃಭಾಷಾ ಮಾಧ್ಯಮದ ಕುರಿತ ವಿಧೇಯಕ


'ಶಿವರ ಮಾತೃಭಾಷೆ ಯಾವುದೆಂದು ಪೋಷಕರು ತೀರ್ಮಾನಿಸಲಿ. ಮಾತೃಭಾಷಾ ಮಾಧ್ಯಮ ಕಡ್ಡಾಯದ 1994ರ ಕರ್ನಾಟಕ ಸರ್ಕಾರದ ಆದೇಶ ಅಸಿಂಧು' ಎಂದು ಕಳೆದ ಮೇನಲ್ಲಿ ಸುಪ್ರೀಂಕೋರ್ಟಿನ ಸಂವಿಧಾನಪೀಠ ತೀರ್ಪು ನೀಡಿತ್ತು. ಅದನ್ನು ಮರುಪರಿಶೀಲಿಸಲು ಹಾಕಿದ ಅರ್ಜಿಗಳನ್ನೂ ಸರ್ವೋಚ್ಚ ನ್ಯಾಯಾಲಯ ತಿರಸ್ಕರಿಸಿತ್ತು. ಇದನ್ನು ಜಾರಿ ಮಾಡುತ್ತಿಲ್ಲವೆಂದು ಕೆಲವು ಖಾಸಗಿ ಶಾಲೆಗಳು ರಾಜ್ಯ ಹೈಕೋರ್ಟಿಗೂ ಹೋಗಿದ್ದವು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈಗ ಮಹತ್ವದ ಕ್ರಮವೊಂದಕ್ಕೆ ಮುಂದಾಗಿದೆ. 3 ದಿನಗಳ ಕೆಳಗೆ ರಾಜ್ಯ ವಿಧಾನಸಭೆಯಲ್ಲಿ ಶಿಕ್ಷಣದಲ್ಲಿನ ಭಾಷಾ ನೀತಿಗೆ ಸಂಬಂಧಿಸಿದಂತೆ ಎರಡು ಮಸೂದೆಗಳನ್ನು ಮಂಡಿಸಿ ಒಪ್ಪಿಗೆ ಪಡೆದಿದೆ.

ಒಂದು, ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆಗೆ ಸಂಯೋಜಿತವಾದ ಎಲ್ಲಾ ಸರ್ಕಾರೀ, ಖಾಸಗಿ ಶಾಲೆಗಳಲ್ಲೂ ಒಂದರಿಂದ 10ನೇ ತರಗತಿಯವರೆಗೆ ಕನ್ನಡವನ್ನು ಒಂದು ಭಾಷೆಯಾಗಿ (ಮೊದಲ ಅಥವಾ ಎರಡನೇ ಭಾಷೆಯಾಗಿ) ಕಲಿಯಲೇಬೇಕೆಂಬುದು ಒಂದು ಮಸೂದೆ (ಕನ್ನಡ ಭಾಷಾ ಕಲಿಕಾ ಕಾಯ್ದೆ 2015). ಎರಡು, ಶಿಕ್ಷಣ ಹಕ್ಕು ಕಾಯ್ದೆ (ಕರ್ನಾಟಕ ತಿದ್ದುಪಡಿ) ಮಸೂದೆ 2015 ಎಂಬುದು, ಶಿಕ್ಷಣ ಹಕ್ಕು ಕಾಯ್ದೆಯ 29(2)(ಎಫ್)ಗೆ ಒಂದು ತಿದ್ದುಪಡಿ ತಂದು ಮಾತೃಭಾಷೆ ಅಥವಾ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಕಡ್ಡಾಯಗೊಳಿಸುವುದು.

ಶಿಕ್ಷಣ ಮಾಧ್ಯಮವಾಗಿ ಮಾತೃಭಾಷೆಗಳೇ ಇರಬೇಕು ಎಂಬ ಹೋರಾಟ ಮತ್ತು ಸಮಾನ ಶಿಕ್ಷಣ ನೀತಿ ಜಾರಿಗೆ ಬರಬೇಕು ಎಂಬ ಹೋರಾಟಗಳ ದೃಷ್ಟಿಯಿಂದ ಇವು ಮಹತ್ವದ ಹೆಜ್ಜೆಗಳಾಗಿವೆ ಮತ್ತು ಈ ಮಸೂದೆಗಳಿಂದ ಒಂದು ಹೆಜ್ಜೆ ಮುಂದಿಟ್ಟಂತಾಗಿದೆ. ಏನಾದರೂ ದಾರಿ ಹುಡುಕಿ ಮಾತೃಭಾಷಾ ಮಾಧ್ಯಮವನ್ನು ಪ್ರಾಥಮಿಕ ಹಂತದಲ್ಲಾದರೂ ಜಾರಿಗೆ ತರಬೇಕು ಮತ್ತು ಜನಭಾಷೆಗಳನ್ನು ಕಲಿಯುವುದನ್ನು ಶಿಕ್ಷಣ ನೀತಿಯ ಭಾಗವನ್ನಾಗಿಸಬೇಕೆಂಬ ವಿಚಾರದಲ್ಲಿ ಕರ್ನಾಟಕ ಸರ್ಕಾರವು ತಲೆ ಕೆಡಿಸಿಕೊಂಡಿರುವುದು ಕಾಣಿಸುತ್ತದೆ. ಆದರೂ ಕೆಲವು ಪ್ರಶ್ನೆಗಳು ಉಳಿದೇ ಇವೆ.

ಸ್ವತಃ ಸಿದ್ದರಾಮಯ್ಯನವರಿಗೂ ಇದರ ಅರಿವಿದ್ದಂತಿದೆ. ಈ ಮಸೂದೆಗಳಿಗೆ ರಾಷ್ಟ್ರಪತಿಯವರು ಸಹಿ ಹಾಕದೇ ಹೋಗಬಹುದು ಎಂಬ ಆತಂಕವಿದೆ. ಒಂದು ವೇಳೆ ಸಹಿ ಹಾಕಿ, ಅದು ಕಾಯ್ದೆಯಾಗಿಬಿಟ್ಟರೂ ನಂತರ ಸುಪ್ರೀಂ ಕೋರ್ಟ್ ಈ ಕಾಯ್ದೆಯನ್ನು ಅನೂರ್ಜಿತಗೊಳಿಸ ಬಹುದು. ಹಾಗಾಗಿ, ಸಂವಿಧಾನ ತಿದ್ದುಪಡಿಯನ್ನೇ ಮಾಡಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ವಿಧಾನ ಸಭೆಯಲ್ಲಿ ಹಲವರು ಅಭಿಪ್ರಾಯ ಪಟ್ಟಿದ್ದಾರೆ. ಮುಂದಿನ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಇದನ್ನು ತಾನು ಪ್ರಸ್ತಾಪಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ.

ಎರಡನೆಯದಾಗಿ, ಸದ್ಯಕ್ಕೆ ರಾಜ್ಯ ಸಿಲಬಸ್‌ಅನ್ನು ಬೋಧಿಸುತ್ತಿರುವ ಶಾಲೆಗಳಿಗೆ ಮಾತ್ರ ಇದು ಅನ್ವಯವಾಗಲಿದೆ. ಅಲ್ಪಸಂಖ್ಯಾತ ಹಣೆಪಟ್ಟಿ ಹೊಂದಿರುವ ಶಾಲೆಗಳು, ಸಿಬಿಎಸ್‌ಇ, ಐಸಿಎಸ್‌ಇ ಮತ್ತು ಐಬಿ ಸಿಲಬಸ್ ಬೋಧಿಸುತ್ತಿರುವ ಶಾಲೆಗಳಿಗೆ ಅನ್ವಯವಾಗುವುದಿಲ್ಲ. ಇವನ್ನೂ ಸದರಿ ಕಾಯ್ದೆಯ ಕೆಳಗೆ ತರಲು ಕಾಯ್ದೆ ತರಲಾಗುವುದು ಎಂದು ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಹೇಳಿದ್ದಾರೆ. ಅವೂ ಸಹ ಕೋರ್ಟಿನಲ್ಲಿ ತಡೆಯಾಜ್ಞೆ ತಂದು ಯಥಾಸ್ಥಿತಿ ಮುಂದುವರೆಯಲು ದಾರಿ ಮಾಡಿಕೊಳ್ಳುವ ಸಾಧ್ಯತೆಗಳಿವೆ.




ಮೊದಲನೆಯ ಅಂಶಕ್ಕೆ ನಂತರ ಬರೋಣ. ಇಂದು ಇರುವ 820 ಕೇಂದ್ರ ಸಿಲಬಸ್ ಶಾಲೆಗಳನ್ನು (700 ಎಂದು ಸಚಿವರು ಹೇಳಿದ್ದಾರೆ) ದಾರಿಗೆ ತರಲು ಏನು ಮಾಡಬೇಕೆಂಬುದಕ್ಕೆ ದಾರಿ ಹುಡುಕಬೇಕು ನಿಜ. ಆದರೆ, ಇನ್ನು ಮುಂದೆ ಒಂದೇ ಒಂದು ಕೇಂದ್ರ ಸಿಲಬಸ್ ಶಾಲೆಯೂ ತೆರೆಯದಂತೆ ನೋಡಿಕೊಳ್ಳುತ್ತೇವೆ ಎಂಬ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳುವುದು ಇನ್ನೂ ಹೆಚ್ಚು ಮುಖ್ಯ. ಆ ರೀತಿ ಹೊಸ ಶಾಲೆ ತೆರೆಯಲು ರಾಜ್ಯ ಸರ್ಕಾರದಿಂದ ನಿರಾಕ್ಷೇಪಣಾ ಪತ್ರ ಬೇಕೇಬೇಕು. ಒಮ್ಮೆ ಅದನ್ನು ಕೊಟ್ಟು ಬಿಟ್ಟರೆ ಅವರು ರಾಜ್ಯ ಸರ್ಕಾರದ ನಿಯಮಗಳಿಂದ ಹೊರಗೆ ಉಳಿದುಬಿಡುತ್ತಾರೆ.

ಈ ಸದ್ಯ 288 ಶಾಲೆಗಳನ್ನು ರಾಜ್ಯ ಸರ್ಕಾರವು ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿದೆ. ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಸಂವಿಧಾನವು ಬಹಳ ಸ್ಪಷ್ಟವಾದ ನಿಲುವನ್ನು ಹೊಂದಿದೆ. ಅದು ನ್ಯಾಯಯುತವೂ ಆಗಿದೆ. ಆದರೆ, ಅಲ್ಪಸಂಖ್ಯಾತ ಶಾಲೆಗಳೆಂದ ಮೇಲೆ ಅಲ್ಲಿ ಅಲ್ಪಸಂಖ್ಯಾತ ಮಕ್ಕಳಿರಬೇಕು ತಾನೇ? ಹಿಂದಿನ ಸರ್ಕಾರ ಕನಿಷ್ಠ ಶೇ.75ರಷ್ಟು ಅಲ್ಪಸಂಖ್ಯಾತ ಮಕ್ಕಳಿರಬೇಕೆಂದು ಹೊರಡಿಸಿದ್ದ ಆದೇಶವನ್ನು, ಈ ಸರ್ಕಾರವು ಶೇ.25ಕ್ಕಿಳಿಸಿದ್ದು ಅಕ್ಷಮ

▶▶ 03

...ಟ್ಟಣ್ಣಯ್ಯನಿಗೆ ಅಂತಿಮ ನಮಸ್ಕಾರ





• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

...ನು ತುಂಬಾ ಇಷ್ಟಪಡುತ್ತಿದ್ದ ನನ್ನನ್ನು ತಂಗಿಯಂತೆ ...ನ್ನ ಪ್ರೀತಿಯ ಕಿಟ್ಟಣ್ಣಯ್ಯ ಮಾರ್ಚ್ 31ರಂದು ...ಟ್ಟಿದರು. ಈ ಕಿಟ್ಟಣ್ಣಯ್ಯ ಬೇರೆ ಯಾರೂ ಅಲ್ಲ, ...ಕಾರ ಈ ರಾಜ್ಯ ಕಂಡ ಅತಿ ಶ್ರೇಷ್ಠ ಬಿಸಿನೆಸ್ ...ಸ್ಟ್ ಆಗಿದ್ದ ಯಗಟಿ ಕೃಷ್ಣಮೂರ್ತಿ.

...ಮಗಳೂರು ಜಿಲ್ಲೆಯ ಯಗಟಿ ಎಂಬ ಹಳ್ಳಿಯ ... ಕುಟುಂಬದವರಾದ ಕಿಟ್ಟಣ್ಣಯ್ಯ ತಮ್ಮ ವೃತ್ತಿ ...ನ್ನು ಹಾಸನದ ಕನ್ನಡ ಪತ್ರಿಕೆ 'ಜನಮಿತ್ರ'ದಲ್ಲಿ ...ಶಕದಲ್ಲಿ ಪ್ರಾರಂಭಿಸಿದರು. ಆ ಮೇಲೆ 'ಸಮಾಚಾರ' ...ಂದಿ ಸುದ್ದಿ ಮಾಧ್ಯಮದಲ್ಲಿ ಕೆಲಸ ಮಾಡಿದರು. ...ಆನಂದ ಬಜಾರ್ ಪತ್ರಿಕಾ ಸಮೂಹದ 'ಬಿಸಿನೆಸ್ ...ರ್' ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ತಮ್ಮ ಛಾಪನ್ನು ...ಸಿದರು. ಹೀಗೆ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ...ರು ವಿವಿಧ ಭಾಷೆಗಳ ಮಾಧ್ಯಮಗಳಲ್ಲಿ ...ವಾಗಿ ಕೆಲಸ ಮಾಡಿದ ಇನ್ನೊಬ್ಬ ಕನ್ನಡಿಗ ಸಿಗಲಾರ.

...ಟ್ಟಣ್ಣಯ್ಯ ನನಗೆ ಪರಿಚಯವಾಗಿದ್ದು 80ರ ದಶಕದ ...ಲ್ಲಿ ನಾನು ಆನಂದ ಬಜಾರ್ ಸಮೂಹ ಪ್ರಕಟಿಸುತ್ತಿದ್ದ ... ಪತ್ರಿಕೆಯನ್ನು ಸೇರಿದಾಗ. ಆದು ಬೆಂಗಳೂರು ...ಟಿ'ಯಾಗಿ ಕಣ್ಣು ತೆರೆಯುತ್ತಿದ್ದ ಕಾಲ, ಭಾರತದ ... ನೀತಿ ಬದಲಾಗುತ್ತಿದ್ದ ಸಮಯ, ಹೊಸ ...ಳನ್ನು ಸ್ಥಾಪಿಸಲು ಬ್ಯಾಂಕ್‌ಗಳು ಯಥೇಚ್ಛವಾಗಿ ...ನ್ನು ಕೊಡುತ್ತಿದ್ದ ಸಂಕ್ರಮಣದ ಕಾಲ... ಈ ಮೂರು ...ಳು ಜೊತೆಗೂಡಿ ಅಪಾರ ಹಗರಣಗಳೂ ನಡೆಯುತ್ತಿದ್ದ ಸಮಯ!

ಆಗ ಕಿಟ್ಟಣ್ಣಯ್ಯ ಬಯಲುಗೊಳಿಸಿದ ಹಗರಣಗಳಿಗೆ ಲೆಕ್ಕವಿಲ್ಲ. ಆಗಿನ ಕಾಲದಲ್ಲಿ ಸದಾನಂದ ಶೆಟ್ಟಿ ವಿಜಯಾ ಬ್ಯಾಂಕಿನ ಚೇರ್ಮನ್ - ಅಂದರೆ ಅಧಿಪತಿ - ಆಗಿದ್ದರು. ಅವರು ಅದ್ಯಾರ್ಯಾರಿಗೋ ದೊಡ್ಡ ಮೊತ್ತದ ಸಾಲಗಳನ್ನು ನೀಡಿ ಅವ್ಯವಹಾರ ನಡೆಸಿದ್ದರು. ಅದಕ್ಕೆ ಸಾಕ್ಷಿ ಎಂಬಂತೆ ಇನ್ನೂ ಶಾಲೆಯಲ್ಲಿದ್ದ ತಮ್ಮ ಮಗನ ಹೆಸರಿನಲ್ಲಿ ದೊಡ್ಡ ಬಂಗಲೆಯನ್ನೇ ಬೆಂಗಳೂರಿನಲ್ಲಿ ಕಟ್ಟಿಸಿದ್ದರು. ಕಿಟ್ಟಣ್ಣಯ್ಯ ಸದಾನಂದ ಶೆಟ್ಟಿಯ ನಿಜಬಣ್ಣವನ್ನು ಬಯಲು ಮಾಡಿದಾಗ ಇಡೀ ಬ್ಯಾಂಕಿಂಗ್ ವಲಯ ಬೆಚ್ಚಿಬಿದ್ದಿತ್ತು. ಕೆನರಾ ಬ್ಯಾಂಕಿನ ವಿ.ಬಿ.ಆಚಾರ್ಯರ ಹಗರಣಗಳನ್ನೂ ಕಿಟ್ಟಣ್ಣಯ್ಯ ಎಲ್ಲಾ ದಾಖಲಾತಿಗಳ ಮೂಲಕ ಹೊರಹಾಕಿದ್ದರು. ವಿಜಯ್ ಮಲ್ಯ ಅವರ ಸ್ನೇಹಿತನಾಗಿದ್ದರೂ ಆತನ ಫೆರಾ ಅಕ್ರಮಗಳ ಬಗ್ಗೆ ಯಾವ ಮುಲಾಜೂ ಇಲ್ಲದೆ ಕಿಟ್ಟಣ್ಣಯ್ಯ ವರದಿ ಮಾಡಿದ್ದರು.

ಪತ್ರಕರ್ತ ಮಿತ್ರ ರಾಮಕೃಷ್ಣ ಉಪಾಧ್ಯಾಯ ಅವರು ಯಗಟಿ ಕುರಿತ ಲೇಖನದಲ್ಲಿ ಹೇಳಿರುವಂತೆ ಆಗ ವ್ಯಾಪಾರಸ್ಥರು, ಕಂಪನಿಗಳು, ವಿವಿಧ ಸಂಸ್ಥೆಗಳು ತಮಗೆ ಇಷ್ಟಬಂದ ಹಾಗೆ ಹಣಕಾಸು ವರ್ಷವನ್ನು ಪಾಲಿಸುತ್ತಿದ್ದವು. ಕೆಲವರಿಗೆ ದೀಪಾವಳಿ ವರ್ಷದ ಅಂತ್ಯವಾದರೆ ಕೆಲವರಿಗೆ ಯುಗಾದಿ, ಇನ್ನು ಕೆಲವರಿಗೆ ಡಿಸೆಂಬರ್ 31 ಆದರೆ ಹಲವರಿಗೆ ಮಾರ್ಚ್ 31 ವಾರ್ಷಿಕ ಲೆಕ್ಕಾ ಹಾಕುವ ಸಮಯವಾಗುತ್ತಿತ್ತು. ಇದರಿಂದಾಗಿ ಹೊರಗಿನವರಿಗೆ ಆ ಕಂಪನಿ ಅಥವಾ ಸಂಸ್ಥೆಯ ನಿಜವಾದ ಆರ್ಥಿಕ ಸ್ಥಿತಿಗತಿ ಗೊತ್ತಾಗುತ್ತಿರಲಿಲ್ಲ. ಆ ಕಾರಣಕ್ಕೇ ಕಿಟ್ಟಣ್ಣಯ್ಯ ಏಪ್ರಿಲ್ 1ರಿಂದ ಮಾರ್ಚ್ 31 ಕಡ್ಡಾಯವಾಗಿ ಎಲ್ಲರಿಗೂ ಹಣಕಾಸಿನ ವರ್ಷವಾಗಬೇಕೆಂದು ವಾದಿಸಿ ಸರಣಿ ಲೇಖನಗಳನ್ನು ಬರೆದರು. ಅದು ಆರ್‌ಬಿಐಗೂ ಸರಿ ಅನ್ನಿಸಿದ್ದರಿಂದ ಅದನ್ನೇ ಜಾರಿಗೆ ತಂದಿದ್ದರಿಂದ ಈಗ ದೇಶದ ಎಲ್ಲರೂ ಅದನ್ನು ಪಾಲಿಸುತ್ತಿದ್ದಾರೆ.

ಮೊನ್ನೆ ಉಪಾಧ್ಯಾಯ ಒಂದು ವಿಪರ್ಯಾಸವನ್ನು ಗಮನಿಸಿದರು. ಅದೇನೆಂದರೆ "ಮಾರ್ಚ್ 31 ಎಲ್ಲರಿಗೂ ಹಣಕಾಸಿನ ವರ್ಷದ ಅಂತ್ಯವಾಗಬೇಕೆಂದು ವಾದಿಸಿದ್ದ ಯಗಟಿ ಮಾರ್ಚ್ 31 ರಂದೇ ಈ ಭೂಮಿ ಮೇಲಿನ ತಮ್ಮ ವ್ಯವಹಾರವನ್ನೂ ಚುಕ್ತಾ ಮಾಡಿದರು."

ಕಿಟ್ಟಣ್ಣಯ್ಯನ ವೃತ್ತಿಪರತೆ ಎಂತಹದ್ದಾಗಿತ್ತೆಂಬುದಕ್ಕೆ ಇಲ್ಲೊಂದು ಉದಾಹರಣೆಯನ್ನು ಕೊಡುತ್ತೇನೆ. ಒಂದು ದಿನ ನಾವಿಬ್ಬರೂ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಾಗ ಅವರಿಗೆ ಯಗಟಿಯಿಂದ ಕರೆ ಬಂತು. ಅತ್ತ ಕಡೆಯಿಂದ ಬಂದ ಮಾಹಿತಿಯನ್ನು ಆಲಿಸಿದ ಕಿಟ್ಟಣ್ಣಯ್ಯನ ಮುಖ ಗಂಭೀರವಾಯಿತು. ನಾನು ವಿಷಯ ಏನು ಎಂದು ಕೇಳಿದರೂ ಏನನ್ನೂ ಹೇಳದ ಕಿಟ್ಟಣ್ಣಯ್ಯ ಟೈಪ್ ರೈಟರ್ ಮುಂದೆ ಕೂತು ತಾವು ಬರೆಯುತ್ತಿದ್ದ ವರದಿಯನ್ನು ಮುಗಿಸಿ, ಅದನ್ನು ಟೆಲಿಆಪರೇಟರ್ ಕೈಗಿಟ್ಟು, ನನ್ನತ್ತ ತಿರುಗಿ "ಊರಿನಲ್ಲಿ ನನ್ನ ಅಪ್ಪ ತೀರಿಕೊಂಡರಂತೆ, ನಾನು ಹೋಗಿ ಬರುತ್ತೇನೆ" ಎಂದು ಹೇಳಿ ಹೊರಟರು.


ಕಿಟ್ಟಣ್ಣಯ್ಯ ತುಂಬಾ ಭಾವುಕ ವ್ಯಕ್ತಿ. ಅವರನ್ನು ಪ್ರೀತಿಸಿ ಕೈಹಿಡಿದಿದ್ದ ಲಕ್ಷ್ಮಿ ಅವರಿಗೆ ಚಿಕ್ಕ ಸಮಸ್ಯೆಯಾದರೂ ಕಿಟ್ಟಣ್ಣಯ್ಯ ಕಣ್ಣೀರಿಡುತ್ತಿದ್ದರು. "ಆಕೆ ಒಂದು ದಿನವೂ ಅಳಬಾರದು. ಅದು ನನ್ನಿಂದ ಸಹಿಸಲಾಗುವುದಿಲ್ಲ" ಎನ್ನುತ್ತಿದ್ದರು. ಮಗಳು ರೂಪಶ್ರೀ ಮತ್ತು ಮಗ ಅಭಿಜಿತ್‌ನನ್ನು ಜಾಣತನದಿಂದ ಬೆಳೆಸಿದ್ದರು. ತಮ್ಮ ಸಹೋದರಿ ಮತ್ತು ಸಹೋದರರನ್ನು ತುಂಬಾ ಇಷ್ಟಪಡುತ್ತಿದ್ದರು. ಆರ್ಥಿಕವಾಗಿ ಸ್ಥಿತಿವಂತರಾಗಿರದಿದ್ದರೂ ನೆಮ್ಮದಿಯಿಂದ ಬದುಕುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಮನೆಯಲ್ಲಿ ಸಿಂಪಲ್ಲಾದ ಸಂತೋಷಕೂಟಗಳನ್ನು ಏರ್ಪಡಿಸಿ ನಮ್ಮನ್ನೆಲ್ಲ ಕರೆದು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಚುನಾವಣೆಯ ಸಮಯದಲ್ಲಿ ನನ್ನನ್ನೂ ತಮ್ಮ ಜೊತೆಗೆ ಕರೆದುಕೊಂಡು ಹೋಗಿ ವಿವಿಧ ಕ್ಷೇತ್ರಗಳ ಪರಿಚಯ ಮಾಡಿಕೊಡುತ್ತಿದ್ದರು. ರಾಜಕೀಯ ವಿಶ್ಲೇಷಣೆಗಳನ್ನು ಬರೆಯುವಾಗ ಮಾರ್ಗದರ್ಶನ ನೀಡುತ್ತಿದ್ದರು. "ಕರಿ ಬ್ರಾಹ್ಮಣನನ್ನು ನಂಬಬೇಡ ಗೌರಿ" ಎನ್ನುತ್ತಾ ತಮ್ಮ ಮೈ ಬಣ್ಣದ ಬಗ್ಗೆಯೇ ತಮಾಷೆ ಮಾಡುತ್ತಿದ್ದರು.

ಆಗ ಬಿಸಿನೆಸ್ ಜರ್ನಲಿಸಂ ಅಂದರೆ ಹೆಚ್ಚಿನ ಪತ್ರಕರ್ತರು ಒಂದೋ ಕಂಪನಿಗಳು ನೀಡುತ್ತಿದ್ದ ಗಿಫ್ಟ್‌ಗಳಿಗೆ ಮಾರುಹೋಗುತ್ತಿದ್ದರು ಅಥವಾ ಆ ಕಂಪನಿಗಳ ಷೇರ್‌ಗಳನ್ನು ಪುಕ್ಕಟೆಯಾಗಿ ಪಡೆಯುತ್ತಿದ್ದರು. ಆದರೆ ಕಿಟ್ಟಣ್ಣಯ್ಯ ಎಂದೂ ಹಾಗೆ ಮಾಡಿದವರಲ್ಲ. ಬದಲಾಗಿ ಎಲ್ಲಾ ಕಂಪನಿಗಳ ಹಗರಣಗಳನ್ನು ಬಯಲು ಮಾಡುತ್ತಲೇ ಸಾಗಿದರು. ಇದರ ಪರಿಣಾಮವೋ ಏನೋ, ಅವರನ್ನು ಇದ್ದಕ್ಕಿದ್ದಂತೆ ಬೆಂಗಳೂರಿನಿಂದ ಕೊಲ್ಕತ್ತಾಗೆ ವರ್ಗಾ ಮಾಡಲಾಯಿತು. ಪ್ರಾಮಾಣಿಕವಾಗಿ ಪತ್ರಿಕೆಗೆ ದುಡಿದದ್ದಕ್ಕಾಗಿ ಅವರಿಗೆ ಸಿಕ್ಕ 'ಪ್ರತಿಫಲ' ಇದಾಗಿತ್ತು. ಕೊಲ್ಕತ್ತಾಗೆ ಹೋಗಲು ನಿರಾಕರಿಸಿದ ಕಿಟ್ಟಣ್ಣಯ್ಯ 'ಬಿಸಿನೆಸ್ ಸ್ಟಾಂಡರ್ಡ್' ಪತ್ರಿಕೆಯನ್ನೇ ತೊರೆದರು. ಅಷ್ಟು ಹೊತ್ತಿಗಾಗಲೆ ವಿವಿಧ ಕಂಪನಿಗಳ ಜಾಹೀರಾತುಗಳೇ ಬಿಸಿನೆಸ್ ಪತ್ರಿಕೆಗಳ ಅಸ್ತಿತ್ವವಾಗಿದ್ದರಿಂದ ಅವರು ಪತ್ರಿಕೋದ್ಯಮದಿಂದಲೇ ದೂರ ಸರಿದರು. ಒಂದಷ್ಟು ದಿನ ಚಂದನ ಚಾನೆಲ್‌ನಲ್ಲಿ ಷೇರ್ ಮಾರ್ಕೆಟ್ ಕುರಿತು ವಿಶ್ಲೇಷಣೆ ಇತ್ಯಾದಿಗಳನ್ನು ಮಾಡುತ್ತಾ ಸಮಯ ಕಳೆಯಲು, ಒಂದಿಷ್ಟು ಹಣ ಸಂಪಾದಿಸಲು ಯತ್ನಿಸಿದರು.

ಆಗ ಅವರ ಬದುಕಿನಲ್ಲಿ ಒಂದು ದೊಡ್ಡ ದುರಂತ ಸಂಭವಿಸಿತು. ಎಂಜಿನಿಯರಿಂಗ್ ಓದುತ್ತಿದ್ದ ಅವರ ಮಗ ಅಭಿಜಿತ್ ತಲೆಗೆ ರಸ್ತೆ ಅಪಘಾತದಲ್ಲಿ ದೊಡ್ಡ ಪೆಟ್ಟಾಯಿತು. ಹಲವಾರು ದಿನಗಳ ಕಾಲ ಕಿಟ್ಟಣ್ಣಯ್ಯ ತಮ್ಮ ಮಗನನ್ನು ಉಳಿಸಿಕೊಳ್ಳಲು ಹರಸಾಹಸಪಟ್ಟರು. ಆದರೆ ಅದ್ಯಾವುದೂ ಫಲಕಾರಿಯಾಗದೆ ಆತ ತೀರಿಕೊಂಡ. "ಕೈಗೆ ಬಂದಿದ್ದ ಮಗ ಹೊರಟುಹೋದ ಗೌರಿ" ಎಂದು ಕಿಟ್ಟಣ್ಣಯ್ಯ ರೋದಿಸಿದ್ದು ಇನ್ನೂ ನನ್ನ ಕಿವಿಯಲ್ಲಿ ಗುಂಯ್‌ಗುಡುತ್ತಿದೆ.

ನನ್ನನ್ನು ಹಿರಿಯ ಅಣ್ಣನಂತೆ ಪ್ರೀತಿಸುತ್ತಿದ್ದ ಪತ್ರಕರ್ತರಾಗಿ ಎಲ್ಲರ ಮೆಚ್ಚುಗೆ ಗಳಿಸಿದ್ದ ಪತಿ ಮತ್ತು ತಂದೆಯಾಗಿ ಅಷ್ಟು ಚೆನ್ನದಂತಿದ್ದ ಕಿಟ್ಟಣ್ಣಯ್ಯ ಮೊನ್ನೆ ತೀರಿಕೊಂಡ ದಿನ ನಾನು ನನ್ನ ಮೊಬೈಲ್ ಅನ್ನು ಮನೆಯಲ್ಲೇ ಮರೆತುಹೋಗಿದ್ದೆ. ಅವತ್ತು ಇಡೀ ದಿನ ನಾನು ಕೋರ್ಟ್‌ನಲ್ಲಿ ಇದ್ದಿದ್ದರಿಂದ ಅವರ ಮರಣದ ಸುದ್ದಿ ನನಗೆ ಸಿಕ್ಕಿದ್ದು ಸಂಜೆ. ಅಷ್ಟು ಹೊತ್ತಿಗೆ ಎಲ್ಲವೂ ಮುಗಿದಿದ್ದರಿಂದ ನಾನು ಅವರಿಗೆ ಅಂತಿಮ ನಮಸ್ಕಾರಗಳನ್ನು ಸಲ್ಲಿಸಲು ಆಗಲೇ ಇಲ್ಲ.

ಕಿಟ್ಟಣ್ಣಯ್ಯ, ವಿ ಆಲ್ ಮಿಸ್ ಯು. ಇದೇ ನನ್ನ ಅಂತಿಮ ನಮಸ್ಕಾರ ನಿಮಗೆ. ■



...ಮಗ ಅಭಿಜಿತ್ ಮತ್ತು ಮಗಳು ರೂಪಶ್ರೀ ಜೊತೆ ಯಗಟಿ ಕೃಷ್ಣಮೂರ್ತಿ



ಮಕ್ಕಳೊಂದಿಗೆ ಲಕ್ಷ್ಮಿ

...ಾತೃಭಾಷಾ ಮಾಧ್ಯಮ...

...ಾಗಿದೆ. ಇದನ್ನು ಅಲ್ಪಸಂಖ್ಯಾತ ಸಮುದಾಯದ ...ರ ತುಷ್ಟೀಕರಣ ಎಂದಷ್ಟೇ ಹೇಳಬಹುದು. ...ಮುದಾಗಿ, ಈ ಶಾಲೆಗಳಲ್ಲಿ ಆಯಾ ಅಲ್ಪಸಂಖ್ಯಾತ ...ಯಲ್ಲೇ ಶಿಕ್ಷಣವನ್ನು ನೀಡಬೇಕೇ ಹೊರತು, ...ಲ್ಲಿಲ್ಲ. ಆದರೆ ಇದನ್ನು ಜಾರಿಗೆ ತರುವುದು ಕಷ್ಟವಿದೆ. ...ಕೋರ್ಟಿನ ಸಂವಿಧಾನಪೀಠವೂ ಹೇಳಿರುವಂತೆ ...ನಸ್ಸು. ಅಲ್ಪಸಂಖ್ಯಾತರಿಗೆ 'ತಮಗಿಷ್ಟ ಬಂದ ರೀತಿಯ ...ಸ್ಥೆಯನ್ನು ನಡೆಸಲು' ಅವಕಾಶ ಮಾಡಿಕೊಡುತ್ತದೆ. ... ಇದು ಪ್ರತ್ಯೇಕ ಚರ್ಚೆ ಹಾಗೂ ಕ್ರಮಗಳನ್ನು ...ದೆ.

...ಪ್ರೀಂಕೋರ್ಟ್ ಮಾತೃಭಾಷಾ ಮಾಧ್ಯಮದ ...ಲ್ಲಿ ವ್ಯತಿರಿಕ್ತ ತೀರ್ಪು ಕೊಡಲು ಕಾರಣ, 1994ರಲ್ಲಿ ...ಬಿದ್ದ ಒಂದು ಸರ್ಕಾರೀ ಆದೇಶವಾಗಿತ್ತು. ಈಗ ...ಷ್ಟು ಒಂದು ಕಾಯ್ದೆಯನ್ನಾಗಿರುವುದರಿಂದ ಆ ...ಇಲ್ಲ ಎಂಬ ಅರ್ಥದ ಮಾತನ್ನು ಸಚಿವರು ...ರೆ. ಮುಂದಿನ ದಿನಗಳ ಬೆಳವಣಿಗೆಗಳು ಅದನ್ನು ...ಸುತ್ತವೆ ಎಂದಷ್ಟೇ ಈಗ ಹೇಳಬಹುದು.

...ನದ ನಂತರ ಒಂದು ಹಜ್ಜೆ ಸರ್ಕಾರದ ಮುಂದೆ ಹಾಕಲೇಬೇಕು. ಏಕೆಂದರೆ, ಅದು ಮಾತ್ರ ಸರ್ಕಾರದ ಇಚ್ಛಾಶಕ್ತಿಯನ್ನು ತೋರಿಸುತ್ತದೆ. ನಮ್ಮ ಸರ್ಕಾರೀ ಕನ್ನಡ ಮಾಧ್ಯಮದ ಶಾಲೆಗಳನ್ನು ಅತ್ಯುತ್ತಮವಾಗಿಸಲು, - ಅಂದರೆ ಕನಿಷ್ಠ ಪ್ರತಿ ತರಗತಿಗೊಬ್ಬ ಕಾಯಂ ಶಿಕ್ಷಕರು, 5ನೇ ತರಗತಿಯ ನಂತರ ವಿಷಯಕ್ಕೊಬ್ಬರು ಕಾಯಂ ಶಿಕ್ಷಕರು, ಪ್ರತಿ ಶಾಲೆಗೂ ಗುಮಾಸ್ತರು, ಗ್ರೂಪ್ ಡಿ ನೌಕರರು, ಅತ್ಯುತ್ತಮವಾದ ರೀತಿಯಲ್ಲಿ ಕಂಪ್ಯೂಟರ್ ಮತ್ತು ಇಂಗ್ಲಿಷನ್ನು ಕಲಿಸಲು ಏರ್ಪಾಡು ಇತ್ಯಾದಿ ಕ್ರಮಗಳನ್ನು ತೆಗೆದುಕೊಳ್ಳಲು - ಸರ್ಕಾರ ಈ ಸಾಲಿನಿಂದಲೇ ಮುಂದಾಗಲು ಯಾವ ಆಲೋಚನೆ ಹೊಂದಿದೆ? ಇದು ಮಾತ್ರವೇ ಶಿಕ್ಷಣವನ್ನೂ ಉಳಿಸುತ್ತದೆ, ಕನ್ನಡವನ್ನೂ ಉಳಿಸುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಸ್ಪಷ್ಟವಾದ ಕಾರ್ಯಸೂಚಿ ಪ್ರಕಟಿಸಲಿ.

ಮೇಕೆದಾಟು, ಕಾವೇರಿ ಅಂತಿಮ ತೀರ್ಪು ಮತ್ತು ಕನ್ನಡ ಹೋರಾಟ


ಮೇಕೆದಾಟಿನ ಬಳಿ ಒಂದು ಅಣೆಕಟ್ಟನ್ನು ನಿರ್ಮಿಸಲು ಕರ್ನಾಟಕ ಸರ್ಕಾರ ಉದ್ದೇಶಿಸಿದೆ. ಇದನ್ನು ವಿರೋಧಿಸಿ ತಮಿಳುನಾಡು ಬಂದ್‌ಗೆ ಕರೆಕೊಡಲಾಗಿತ್ತು, ಕನ್ನಡ ಹೋರಾಟಗಾರರು ಹಾಗೂ ಟಿಆರ್‌ಪಿ ದಾಹಿ ಚಾನೆಲ್‌ಗಳೂ ಒಂದು ದಿನ ಈ ಕುರಿತು ದೊಡ್ಡ ಸದ್ದು ಮಾಡಿದರು. ಈ ವಿಚಾರದಲ್ಲಿ ವಾಸ್ತವವನ್ನು ಸರಿಯಾಗಿ ಅರಿತು ಜನಪರ ಹಕ್ಕೊತ್ತಾಯಗಳನ್ನು ಸರ್ಕಾರದ ಮುಂದಿಡಬೇಕಿದೆ. 2007ರ ಫೆಬ್ರವರಿ 5ರಂದು ಹೊರಬಿದ್ದ ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪು 2013ರ ಫೆಬ್ರವರಿ 20ರಂದು ಕೇಂದ್ರ ಗೆಜೆಟ್‌ನಲ್ಲಿ ಪ್ರಕಟವಾಗಿದೆ. ಅಂದಮೇಲೆ ಅದೇ ಅಂತಿಮ. ಅದರ ಪ್ರಕಾರ. ತಮಿಳುನಾಡಿಗೆ 192 ಟಿ.ಎಂ.ಸಿ ನೀರು ಬಿಟ್ಟ ಮೇಲೆ ಉಳಿದ ನೀರನ್ನು ಕರ್ನಾಟಕ ಏನು ಮಾಡುತ್ತದೆಂಬುದನ್ನು ಅದು ಕೇಳುವ ಹಾಗಿಲ್ಲ.

ಒಂದು ವೇಳೆ ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪಿನ ಈ ಅಂಶವನ್ನೇನಾದರೂ ಕೇಂದ್ರ ಸರ್ಕಾರ ಅಥವಾ ಸುಪ್ರೀಂಕೋರ್ಟು ಪುನರ್‌ಪರಿಶೀಲನೆಗೆ ಕೈಗೆತ್ತಿಕೊಂಡರೆ ಅದನ್ನು ವಿರೋಧಿಸಿ ತೀವ್ರ ಹೋರಾಟವನ್ನು ನಾವೆಲ್ಲರೂ ಸೇರಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ಈ ವಿವಾದ ಶಾಶ್ವತವಾಗಿ ಉಳಿದುಬಿಡುತ್ತದೆ. ಇದರರ್ಥ ನಾವೂ ಅಂತಿಮ ತೀರ್ಪನ್ನು ಒಪ್ಪಿದಂತೆಯೇ. ಹೌದು, ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ಸಂಪೂರ್ಣ ನ್ಯಾಯ ಸಿಕ್ಕಿರದೇ ಇದ್ದರೂ, ಅದನ್ನು ಲಾಭದಾಯಕವಾಗಿ ಮಾರ್ಪಡಿಸಿಕೊಳ್ಳುವುದು ನಮ್ಮ ಕೈಯಲ್ಲಿದೆ.

ಕರ್ನಾಟಕದ ಮಟ್ಟಿಗೆ ಕಾವೇರಿ ನದಿಯ ಅತೀ ದೊಡ್ಡ ಫಲಾನುಭವಿ ಎಂದು ಭಾವಿಸಲಾದ ಮಂಡ್ಯ ಜಿಲ್ಲೆಯಲ್ಲಿ ಇಂದಿಗೂ ಶೇ.51ರಷ್ಟು ಒಣಭೂಮಿಯೇ ಇದೆ. ವಿವಿಧ ರೀತಿಯಲ್ಲಿ ಪೋಲಾಗುತ್ತಿರುವ ನೀರು ಮತ್ತು ಅನಗತ್ಯವಾಗಿ ಬಳಕೆಯಾಗುತ್ತಿರುವ ನೀರಿನ ಪ್ರಮಾಣವನ್ನು ಕಡಿಮೆ ಮಾಡಿದಲ್ಲಿ ಕರ್ನಾಟಕದ ಜನರಿಗೆ ಭಾರೀ ಅನುಕೂಲ ಮಾಡಿಕೊಡುವುದು ಸಾಧ್ಯ. ತಮಿಳುನಾಡಿಗೆ ಬಿಡುವ 192 ಟಿಎಂಸಿಯ ನಂತರ, ಸಾಮಾನ್ಯವಾಗಿ 4 ವರ್ಷಗಳಲ್ಲಿ 3 ವರ್ಷ ಕರ್ನಾಟಕಕ್ಕೆ ಹೆಚ್ಚುವರಿ ನೀರು ಉಳಿಯುತ್ತದೆ. ಈ ಎರಡೂ ಬಗೆಯ ಹೆಚ್ಚುವರಿ ನೀರನ್ನು ಸದ್ಬಳಕೆ ಮಾಡಿಕೊಳ್ಳಲು ಕರ್ನಾಟಕದ ಜನತೆ ಮತ್ತು ಸರ್ಕಾರ ಇಬ್ಬರೂ ತೀರ್ಮಾನಿಸಿದರೆ ಈ ನಾಡಿನಲ್ಲಿ ಇನ್ನೂ ಹೆಚ್ಚು ಪ್ರದೇಶ ನೀರಾವರಿ ಮಾಡಬಹುದು.

ಈಗಾಗಲೇ ಈ ಸಾರಿಯ ಬಜೆಟ್‌ನಲ್ಲಿ ಕಬ್ಬು ಬೆಳೆಗೆ ಹನಿ ನೀರಾವರಿ ಅಳವಡಿಸುವ ಕುರಿತು ಪ್ರಸ್ತಾಪಿಸಲಾಗಿದೆ. ಅದೇ ರೀತಿ ಸರ್ಕಾರ ಯಥೇಚ್ಛವಾಗಿ ಸಬ್ಸಿಡಿ ನೀಡುವುದರ ಮೂಲಕ, ಕಾಲುವೆಗಳ ಆಧುನೀಕರಣ, ಸೂಕ್ತ ಬೆಳೆ ಪದ್ಧತಿಗಳ ಮುಖಾಂತರ ರೈತರ ಮತ್ತು ನಗರವಾಸಿಗಳ ನೀರಿನ ಅಗತ್ಯವನ್ನು ಪೂರೈಸಬಹುದು. ಆದರೆ, ನಮ್ಮೆಲ್ಲಾ ಆಕ್ರೋಶವು ತಮಿಳುನಾಡಿನ ಕ್ಯಾತೆಯ ಬಗ್ಗೆ ಮಾತ್ರ ಹರಿಯಬಿಟ್ಟು, ಒಳನಾಡಿನ ಒಣನಾಡಿನ ಸಮಸ್ಯೆಯನ್ನು ಮರೆತುಬಿಟ್ಟರೆ ಸಾಧ್ಯವಿಲ್ಲ, ...ಯರ್ ಪ್ರವೃತ್ತರಾಗೋಣವೇ? ■

ಬಿಬಿಎಂಪಿ: ಎಲೆಕ್ಷನ್ನಾ? ಕಲೆಕ್ಷನ್ನಾ?



ಮೇ 30ರ ಒಳಗೆ ಚುನಾವಣಾ ಪ್ರಕ್ರಿಯೆ ಮುಗಿಸಲೇಬೇಕೆಂಬ ಹೈಕೋರ್ಟ್ ಕಟ್ಟಪ್ಪಣೆ. ಐದು ವರ್ಷಗಳ ಕಾಲ ಬಿಬಿಎಂಪಿ ಅರ್ಥಾತ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನೇ ಲೂಟಿ ಮಾಡುವ ಗಣಿಯನ್ನಾಗಿ ಮಾಡಿಕೊಂಡದ್ದು ಬಿಜೆಪಿ. ಇನ್ನೊಂದು ತಿಂಗಳು ಕಳೆದರೆ ಪಾಲಿಕೆಯ ಇನ್ನೂರು ಮಂದಿ ಕೌನ್ಸಿಲರ್‌ಗಳು ನಿರುದ್ಯೋಗಿಗಳಾಗುತ್ತಾರೆ. ಆಳಿದ ಐದೂ ವರ್ಷಗಳ ಕಾಲ ರಾಜಧಾನಿ ಬೆಂಗಳೂರಿಗೆ ಬಿಜೆಪಿ ನೀಡಿದ ಕೊಡುಗೆಗಳಾದರೂ ಎಂಥಾದ್ದು?

ಮೊದಲು ಮೇಯರಾಗಿದ್ದು ಅಶೋಕ್ ಭಟ್ಟಂಗಿಯಾಗಿದ್ದ ಎಸ್.ಕೆ. ನಟರಾಜ್. ಇದ್ದಬದ್ದ ಪಾಲಿಕೆ ಆಸ್ತಿ ನುಂಗಿದ್ದು ಬಿಟ್ಟರೆ ಈತ ಬೆಂಗಳೂರಿಗೆ ಮಾಡಿದ್ದು ಏನೇನೂ ಇಲ್ಲ. ನಂತರ ಆ ಜಾಗಕ್ಕೆ ಬಂದವಳು ಹೆಬ್ಬೆಟ್ಟು ಶಾರದಮ್ಮ. ಈಕೆ ಕೂಡ ಅಶೋಕ್ ಮನೆಕೆಲಸದವಳಂತೆಯೇ. ಅಶೋಕಣ್ಣ ಹೇಳಿದ ಫೈಲುಗಳಿಗೆಲ್ಲ ಕಣ್ಣುಮುಚ್ಚಿ ಸಹಿ ಹಾಕಿದ್ದು ಈಕೆಯ ಸಾಧನೆ. ನಂತರ ಮೇಯರಾದ ವೆಂಕಟೇಶ್ ಮೂರ್ತಿ ಜಾತಿಯಲ್ಲಿ ಕುರುಬ ಮತ್ತು ಬಿಜೆಪಿ ನಾಯಕ ಈಶ್ವರಪ್ಪ ಸಾಕಿದ್ದ ಕಿರುಬ. ತನ್ನ ಮಕ್ಕಳನ್ನೇ ಮನುಷ್ಯರನ್ನಾಗಿ ಬೆಳೆಸದವನು ಇನ್ನೂ ಬೆಂಗಳೂರಿನ ನರಪ್ರಾಣಿಗಳಿಗೆ ತಾನೇ ಏನು ಮಾಡಿಯಾನು?

ಇವರೆಲ್ಲರ ಕತೆ ಹಾಳಾಗಲಿ. ಇಲ್ಲಿಗೆ ಆರು ತಿಂಗಳ ಹಿಂದಷ್ಟೇ ಮೇಯರಾಗಿದ್ದ ಅತೀ ಸಂಭಾವಿತ ಕಟ್ಟೆ ಸತ್ಯನಾರಾಯಣರಿಗಾದರೂ ಬೆಂಗಳೂರಿನ ಬಗ್ಗೆ ಕನಸಿರಬೇಕಿತ್ತಲ್ಲವೆ? ಕಟ್ಟೆ ಸತ್ಯಣ್ಣ ಪಾಲಿಕೆಯ ಅಳಿದುಳಿದ ಆಸ್ತಿಪಾಸ್ತಿಗಳನ್ನೂ ಅಡವಿಟ್ಟು ಕೈಮುಗಿದರು. ಉಳಿಕೆ ಆರು ತಿಂಗಳ ಅವಧಿಗೊಬ್ಬಳೇ ಶಾಂತಕುಮಾರಿ. ಹೇಳಿಕೇಳಿ ವಿಜಯನಗರದ ವೀರಪುತ್ರ ಸೋಮಣ್ಣನ ಶಿಷ್ಯೆ. ಪಾಪ ಸೋಮಣ್ಣ ತಾನೇ ಈ ಪುಡಕೋಶಿ ಅವಧಿಗೆ ಶಿಷ್ಯೆಯನ್ನಿಟ್ಟುಕೊಂಡು ಏನು ತಾನೇ ಕಡಿದು ಕಟ್ಟೆ ಹಾಕಲು ಸಾಧ್ಯ?

ಸಾವಿರದೈನೂರು ಕೋಟಿ!

ಬಿಜೆಪಿಯದ್ದೇ ಸರ್ಕಾರವಿತ್ತು, ಪಾಲಿಕೆಯೂ ಅವರದ್ದೇ ಹಿಡಿತಕ್ಕೊಳಪಟ್ಟಿತ್ತು. ಅವರ ಸರ್ಕಾರವಿದ್ದಾಗಲೇ ಆಡಳಿತಾಧಿಕಾರಿಯನ್ನು ತಂದು ಸಾವಿರಾರು ಕೋಟಿ ರೂಪಾಯಿಗಳ ಕಳ್ಳ ಬಿಲ್ಲು ದೋಚಲಾಯಿತು. ರಾಜರಾಜೇಶ್ವರಿನಗರದ ಶಾಸಕ ಶ್ರೀನಿವಾಸ್ ಮತ್ತು ಮಲ್ಲೇಶ್ವರದ ಎಮ್ಮೆಲ್ಲೇ ಅಶ್ವತ್ಥನಾರಾಯಣ ಎಂಬ ಶಾಸಕರು ಸೇರಿಕೊಂಡೇ ಸಾವಿರದೈನೂರು ಕೋಟಿಗೂ ಅಧಿಕ ಮೊತ್ತದ ಲೂಟಿಗೈದಿದ್ದು ಪತ್ತೆಯಾಯಿತೆಂದರೆ ಇನ್ನು ಯಲಹಂಕದ ವಿಶ್ವನಾಥ್, ದಾಸರಹಳ್ಳಿ ಮುನಿರಾಜು, ಬೊಮ್ಮನಹಳ್ಳಿ ಸತೀಶ್ ರೆಡ್ಡಿ, ಹೆಬ್ಬಾಳದ ಕಟ್ಟಾನಾಯ್ಡು ಮುಂತಾದವರು ದೋಚಿದ ಮೊತ್ತ ಇನ್ನೆಷ್ಟಿರಬೇಡ?

ಇನ್ನೇನು ಪಾಲಿಕೆ ಭ್ರಷ್ಟಾಚಾರವನ್ನು ಸಿಬಿಐ ತನಿಖೆಗೊಪ್ಪಿಸಬೇಕೆನ್ನುವಷ್ಟರಲ್ಲೇ ಪಾಲಿಕೆ ರೆಕಾರ್ಡ್ ರೂಮಿಗೆ ಬೆಂಕಿ ಹಚ್ಚಲಾಯಿತು. ಪಾಪ; ಇರುದಯವೆಂಡನ್ ಎಂಬ ಇಂಜಿನಿಯರ್ ಜೈಲು ಪಾಲಾಗಿದ್ದು ಬಿಟ್ಟರೆ ಬರೋಬ್ಬರಿ ಒಂದು ಡಜನ್ ಬಿಜೆಪಿ ಶಾಸಕರೆಲ್ಲ ಮಾಡಿದ ಲೂಟಿಯನ್ನೇ ಅರಗಿಸಿಕೊಂಡರು, ದೋಚಿದ ದುಡ್ಡಲ್ಲೇ ಮತ್ತೆ ಗೆದ್ದು ಬಂದರು. ರಾಜ್ಯದ ಮಟ್ಟಿಗೇನೋ ಬಿಜೆಪಿ ಆಳ್ವಿಕೆಯ ಅಂತ್ಯವಾಯಿತಾದರೂ ಬೆಂಗಳೂರಿನ ಜನಕ್ಕೆ ಆ ಅದೃಷ್ಟ ಕೂಡಿಬರಲಿಲ್ಲ. ಈಗ ಬಿಬಿಎಂಪಿಯ ಸಾಲವೇ 4 ಸಾವಿರ ಕೋಟಿ ರೂಪಾಯಿಗಳನ್ನು ಮೀರಿದೆ. ತಿಂಗಳೊಂದಕ್ಕೆ ನೂರಾರು ಕೋಟಿ ಲೆಕ್ಕದಲ್ಲಿ ಬಡ್ಡಿ ಕಟ್ಟಲೇಬೇಕು. ಇಲ್ಲದೇ ಹೋದರೆ ಬ್ಯಾಂಕು ಅಡವಿಟ್ಟ ಆಸ್ತಿಗಳನ್ನು ಜಪ್ತಿ ಮಾಡಿಕೊಳ್ಳುತ್ತದೆ. ಹುಡ್ಕೋ, ನ್ಯಾಷನಲ್ ಡೆವಲಪ್‌ಮೆಂಟ್ ಬ್ಯಾಂಕ್ ಸೇರಿದಂತೆ ಕಂಡಕಂಡ ಹಣಕಾಸು ಸಂಸ್ಥೆಗಳಿಂದ ಪಾಲಿಕೆ ಸಾಲ ಎತ್ತಾಗಿದೆ. ಒಂದೆಡೆ ಸಾಲದ ಬಡ್ಡಿ ಕಟ್ಟುವುದಕ್ಕೂ ಪರದಾಡುವ ಬಿಬಿಎಂಪಿಯ ದುರ್ಗತಿಯ ಪರಮಾವಧಿಯೋ ಎಂಬಂತೆ ಕಸ ಗುಡಿಸುವ ಪೌರ ಕಾರ್ಮಿಕರಿಗೂ ಮೂರ್‍ನಾಲ್ಕು ತಿಂಗಳು ತಡವಾಗಿ ಸಂಬಳದ ಸೌಭಾಗ್ಯ!


ಬಹುಶಃ ಬಿಬಿಎಂಪಿಯಷ್ಟು ಎಕ್ಕುಟ್ಟ, ಕುಲಗೆಟ್ಟ, ಗತಿಗೆಟ್ಟ ಮತ್ತೊಂದು ಸಂಸ್ಥೆಯನ್ನು ಇಡೀ ಭೂಮಂಡಲದಲ್ಲಿ ತಡಕಾಡಿದರೂ ಸಿಗಲಿಕ್ಕಿಲ್ಲ!

ಹೆರಿಗೆ ಆಸ್ಪತ್ರೆಯನ್ನೇ...!

ಇದು ಉತ್ಪ್ರೇಕ್ಷೆ ಮಾತೆನಿಸಬಹುದು. ಆದರೆ ವಾಸ್ತವ ಇದಕ್ಕಿಂತಲೂ ಹೀನಾಯವಾಗಿದೆ. ಇದಕ್ಕೊಂದು ತಾಜಾ ಉದಾಹರಣೆಯೆಂದರೆ ಬಸವನಗುಡಿಯ ಎನ್.ಆರ್. ಕಾಲೋನಿಯ ಪಾಲಿಕೆಯ ಹೆರಿಗೆ ಆಸ್ಪತ್ರೆ. ನಿನ್ನೆಮೊನ್ನೆಯ ತನಕ ಬಡಬಗ್ಗರಿಗೆಂದು ಎನ್.ಆರ್. ಕಾಲೋನಿಯ ಹೆರಿಗೆ ಆಸ್ಪತ್ರೆಯಿತ್ತು. ಇಲ್ಲಿಗೆ 8 ತಿಂಗಳ ಹಿಂದೆ ಅದನ್ನು ನಡೆಸುವುದೇ ಕಷ್ಟವೆಂದು ತಮಿಳುನಾಡು ಮೂಲದ ರಂಗದೊರೈ ಆಸ್ಪತ್ರೆಗೆ ವಹಿಸಿಕೊಡಲಾಯಿತು. ಈ ರಂಗದೊರೈ ಆಸ್ಪತ್ರೆ ಹೇಳಿಕೇಳಿ ರೋಗಿಗಳನ್ನು ದೋಚಿಯೇ ಉದ್ಧಾರ ಕಂಡ ದಗಲುಬಾಜಿ ಸಂಸ್ಥೆ.


ಇಂಥಾ ಆಸ್ಪತ್ರೆಗೆ ಪುಡಿಕಾಸಿನ ಕಾಂಟ್ರಾಕ್ಟಿನ ಮೇಲೆ ಎನ್.ಆರ್. ಕಾಲೋನಿಯ ಪಾಲಿಕೆ ಆಸ್ಪತ್ರೆಯನ್ನು ವಹಿಸಿಕೊಟ್ಟದ್ದು ಮಾಜಿ ಮೇಯರ್ ಕಟ್ಟೆ ಸತ್ಯ. ಅದೇನು ಡೀಲೋ ದುರಾಸೆಯೋ ಗೊತ್ತಿಲ್ಲ. ಹೆಚ್ಚೂಕಮ್ಮಿ ಹತ್ತು ಕೋಟಿಗೂ ಹೆಚ್ಚು ಬೆಲೆಬಾಳುವ ಪಾಲಿಕೆ ಹೆರಿಗೆ ಆಸ್ಪತ್ರೆ ಪುಡಿಕಾಸಿಗೆ ಖಾಸಗಿ ದೊರೆಗಳ ಪಾಲಾದ ಮೇಲೆ ಕನಿಷ್ಠ ಬಡರೋಗಿಗಳಿಗೆ ಸೌಲಭ್ಯವಾದರೂ ಸಿಗಬೇಕಲ್ಲವೆ?

ಪಾಲಿಕೆ ಹೆರಿಗೆ ಆಸ್ಪತ್ರೆಯಿದ್ದದ್ದು ಈಗ ರಂಗದೊರೈ ಆಸ್ಪತ್ರೆಯಾಗಿ ಬದಲಾಗಿದೆ. ಸಣ್ಣಪುಟ್ಟ ಚಿಕಿತ್ಸೆಗೂ ಬಡರೋಗಿಗಳು ಖಾಸಗಿ ನರ್ಸಿಂಗ್ ಹೋಮುಗಳ ಬಿಲ್ಲು ಕಟ್ಟಬೇಕು. ಒಂದೆಡೆ ಪಾಲಿಕೆಯ ಸೊತ್ತು ಸಲೀಸಾಗಿ ಖಾಸಗಿ ಖದೀಮರ ಪಾಲಾದರೆ ಮತ್ತೊಂದೆಡೆ ಪಾಲಿಕೆಯೇ ನಿಂತು ಬಡರೋಗಿಗಳ ಸುಲಿಗೆಗೆ ಲೈಸೆನ್ಸು ಕಲ್ಪಿಸಿದಂತಾಯ್ತು. ಇದು ಕೇವಲ ಒಂದು ಸೊತ್ತಿನ ಕತೆಯಷ್ಟೇ ಅಲ್ಲ. ಜಯನಗರದ ಪ್ರತಿಷ್ಠಿತ ಶಾಪಿಂಗ್ ಕಾಂಪ್ಲೆಕ್ಸನ್ನೇ ಪಾಲಿಕೆ ಒತ್ತೆಯಿಟ್ಟಾಗಿದೆ. ಐತಿಹಾಸಿಕ ಸ್ಮಾರಕಗಳಾದ ರಸೆಲ್ ಮಾರುಕಟ್ಟೆ, ಪುರಭವನ, ಕೆ.ಆರ್. ಮಾರುಕಟ್ಟೆ, ಎಂ.ಜಿ. ರಸ್ತೆಯ ಯುಟಿಲಿಟಿ ಬಿಲ್ಡಿಂಗ್, ಪಾರ್ಕುಗಳು, ಪಾರ್ಕಿಂಗ್ ಜಾಗ ಇತ್ಯಾದಿ ಏನೊಂದನ್ನು ಉಳಿಸದೆ ಪಾಲಿಕೆ ಬ್ಯಾಂಕಿಗೆ ಒತ್ತಿಯಿಟ್ಟಿರುವುದು ಕೇವಲ ಸಾಲದ ಬಡ್ಡಿ ಕಟ್ಟುವುದಕ್ಕಾಗಿ!



10 ಸಾವಿರ ಕೋಟಿಯ ಹೊರೆ

2010ರಲ್ಲಿ ಅಂದರೆ ಪಾಲಿಕೆಯನ್ನು ಬಿಜೆಪಿ ಹಿಡಿಯುವುದಕ್ಕೂ ಮುನ್ನ ಹೊರೆ ಇದ್ದದ್ದು ಒಂದೂವರೆ ಸಾವಿರ ಕೋಟಿಯಷ್ಟು. ಈಗ ಪ್ರಜಾತಂತ್ರ, ಎಲೆಕ್ಷನ್ನು, ಚುನಾವಣೆ ಎಂದೆಲ್ಲ ಕೋರ್ಟ್ ಮೆಟ್ಟಿಲೇರಿರುವ ಬಿಜೆಪಿ ತಾನೇ ಅಧಿಕಾರದಲ್ಲಿದ್ದರೂ 3 ವರ್ಷಗಳ ಕಾಲ ಚುನಾವಣೆಯನ್ನೇ ನಡೆಸಲಿಲ್ಲ. ಮೂರು ವರ್ಷಗಳ ಕಾಲ


ಜಂಟಿ ಆಯುಕ್ತ ಮಥಾಯಿ.

ತನ್ನ ಕೈಗೊಂಬೆ ಆಡಳಿತಾಧಿಕಾರಿಯನ್ನು ನೇಮಿಸಿಕೊ... ಇನ್ನಿಲ್ಲದಂತೆ ಪಾಲಿಕೆಯನ್ನು ದೋಚಿದ ಫಲವೇ 1... ಕೋಟಿ ರೂಪಾಯಿಗಳ ಬೋಗಸ್ ಬಿಲ್ ಕರ್ಮಕಾ...


ಇದರ ಫಲವೆಂಬಂತೆ ಒಂದೂವರೆ ಕೋಟಿ... ಪಾಲಿಕೆ ಸಾಲ ನಾಲ್ಕೂವರೆ ಸಾವಿರ ಕೋಟಿಗೇರಿತು. ಸಾ... ನಾಲ್ಕೂವರೆ ಸಾವಿರ ಕೋಟಿಯೆಂದರೆ ಎಂಥವ... ಅಚ್ಚರಿಯೆನಿಸಬಹುದಲ್ಲವೆ? ಆದರೆ ಇದಿಷ್ಟೇ ... ಬಿಜೆಪಿಯ ಮತ್ತೊಂದು ಘನಂದಾರಿ ಕೊಡುಗೆ... ಎಂಬಂತೆ ಮತ್ತೆ ನಾಲ್ಕು ಸಾವಿರ ಕೋಟಿಯ... ಗುತ್ತಿಗೆದಾರರ ಬಿಲ್ಲನ್ನು ಬಾಕಿಯಿಟ್ಟಿತ್ತು. ಸಾಲದ ಮೆ... ಬಡ್ಡಿ ಬಾಕಿ, ಗುತ್ತಿಗೆದಾರರ ಬಿಲ್ಲು ಬಾಕಿ, ಇಷ್ಟೇ ... ಹೊಸದಾಗಿ ಕಾಮಗಾರಿಗಳಿಗೆಂದು ಕರೆದ ಟೆಂ... ಅಂದಾಜು ಮೊಬಲಗು ಎಲ್ಲವೂ ಸೇರಿ ಬೆಂಗಳೂ... ಬಿಜೆಪಿಯ ಬಳುವಳಿಯೆಂದೇ ಒಟ್ಟು ಹತ್ತು ಸಾ... ಕೋಟಿಯ ಹೊರೆ ಬಿದ್ದಿತ್ತು.


ವಿಶೇಷ ಎಲ್‌ಓಸಿ ಹಗರಣ, ಸಾವಿರಾರು ಕೋ... ಬೋಗಸ್ ಬಿಲ್ ಕರ್ಮಕಾಂಡ, ತೋಟಗಾರಿಕೆಯ ಹೆ... 2 ಸಾವಿರ ಕೋಟಿ ರೂಪಾಯಿಗಳ ದರೋಡೆ, ಕೆ... ನಿರ್ವಹಣೆಗೆಂದು ಮೀಸಲಿಟ್ಟ ದುಡ್ಡಿನ ದರೋಡೆ, ... ದೀಪಗಳ ನಿರ್ವಹಣಾ ಗುತ್ತಿಗೆಯ ದಕಾ... ಸಾಲುಮರಗಳ ಸಸಿ ನೆಡುವಿಕೆಯಲ್ಲಿ ಲೂಟಿ, ... ಕಾರ್ಮಿಕರ ಸಂಬಳದಲ್ಲಿ ಮೋಸ; ಹೀಗೆ ಒ... ಮೇಲೊಂದು ಹಗರಣಗಳನ್ನು ಹುಟ್ಟು ಹಾಕುತ್ತಲೇ ... ಬಿಜೆಪಿ ನಾಯಕರುಗಳು ಈಗ ಡಿ.ಕೆ. ರವಿಯ ಆತ... ವಿರುದ್ಧ ಬೀದಿಗಿಳಿದು ಪ್ರಾಮಾಣಿಕ ಅಧಿಕಾರಿ... ರಕ್ಷಣೆಯಿಲ್ಲ ಎಂದೇ ತಾನೇ ಬೊಬ್ಬೆ ಹಾಕುತ್ತಿರುವ...


ಪ್ರಾಮಾಣಿಕರ ಬಲಿ


ಆದರೆ ಬಿಬಿಎಂಪಿಯ ವಿಷಯಕ್ಕೆ ಬಂದರೆ ... ಒಂದಲ್ಲ ಎರಡಲ್ಲ ಹತ್ತಾರು ಪ್ರಾಮಾಣಿಕ ಅಧಿಕಾರಿ... ಬಲಿ ಹಾಕುತ್ತಲೇ ಬಂತು. ಶುರುವಿನಲ್ಲಿ ನಿಷ್ಠ ಐ... ಅಧಿಕಾರಿ ಸಿದ್ದಯ್ಯ ಪಾಲಿಕೆಗೆ ಆಯುಕ್ತರಾಗಿದ್ದರು. ಇದ್ದು... ದಕ್ಷ ಮತ್ತು ಜಾತಿಯಲ್ಲಿ ದಲಿತರಾಗಿದ್ದ ಸಿದ... ಪಾಲಿಕೆಯನ್ನು ತಮ್ಮ ಕೈಲಾದಮಟ್ಟಿಗೆ ಶುಚಿಗೊಳಿಸ... ಬಂದರು. ಅದೇ ಹೊತ್ತಿಗೆ ಟಿವಿಸಿಸಿ ಅಂದರೆ ಕಾಮಗಾ... ಗುಣಮಟ್ಟ ವಿಚಕ್ಷಣ ಮತ್ತು ತನಿಖಾದ... ಮುಖ್ಯಸ್ಥರಾಗಿದ್ದದ್ದು ದೇವರಾಜ್ ಎಂಬ ಮತ... ಪ್ರಾಮಾಣಿಕ ಅಧಿಕಾರಿ. ಇಂಥ ಪ್ರಾಮಾಣಿಕರಿದ್ದರೆ ... ಲೂಟಿಗೆಲ್ಲಿ ಆಪತ್ತೋ ಎಂದು ಮೇಯರ್ ಆದಿ... ಬಿಜೆಪಿಯ ಕೌನ್ಸಿಲರ್‌ಗಳೆಲ್ಲರೂ ಸೇರಿಕೊಂಡೇ ಇ... ಕಾಟಕೊಟ್ಟು ಸಿದ್ದಯ್ಯನವರನ್ನು ಎತ್ತಂಗಡಿ ಮಾಡಿಬಿ... ಬೆನ್ನಲ್ಲೇ ಟಿವಿಸಿಸಿ ಮುಖ್ಯಸ್ಥ ದೇವರಾಜು ಕಣ್ಣೀರಿಟ್ಟುಕೊ... ವಾಲಂಟರಿ ರಿಟೈರ್‌ಮೆಂಟ್ ಪಡೆದು ನಿಕಾಲಿಯಾಗು... ಮಾಡಲಾಯ್ತು.

ಇವತ್ತು ಪ್ರಾಮಾಣಿಕ ಅಧಿಕಾರಿ ಡಿ.ಕೆ. ರವಿ ... ಕುರಿತಂತೆ ಬೀದಿಗಿಳಿದು ಬೊಬ್ಬೆಹಾಕುವ ಇದೇ ... ಪಾಲಿಕೆಯ ಲೂಟಿ ವಿಷಯದಲ್ಲಿ ಈಗ ಮಥಾಯ್ ... ಮತ್ತೊಬ್ಬ ಪ್ರಾಮಾಣಿಕ ಅಧಿಕಾರಿಯನ್ನೂ ಬಿ...











ಮೋದಿ ಅಲೆಯ ಭ್ರಮೆಯಲ್ಲಿ

ರುಚಿ ಕಂಡ ಬೆಕ್ಕಿನಂತೆ ಶತಗತಾಯ ಬೆಂಗಳೂರು ಪಾಲಿಕೆಯನ್ನು ಹಿಡಿದು ಮುಂಬರುವ ವಿಧಾನಸಭಾ ಅಖಾಡಕ್ಕೆ ಸಜ್ಜಾಗುವುದು ಬಿಜೆಪಿ ಹುನ್ನಾರ. ಈಗಿರುವ ಪರಿಸ್ಥಿತಿ ಮತ್ತು ಪಾಲಿಕೆ ಎಕ್ಕುಟ್ಟ ರೀತಿಗೆ ಇನ್ನು ಕನಿಷ್ಠ



ಎರಡು ವರ್ಷಗಳ ಕಾಲ ಸುಧಾರಿಸಿಕೊಂಡರೂ ಅಧೋಗತಿಗಿಳಿದ ಪಾಲಿಕೆ ಸುಧಾರಿಸುವ ಲಕ್ಷಣಗಳಿಲ್ಲ. ಮತ್ತೆ ಚುನಾವಣೆಯಾಗಿ ಇನ್ನೂರು ಮಂದಿ ಕೌನ್ಸಿಲರ್‌ಗಳು ಹುಟ್ಟಿಕೊಂಡರೆಂದರೆ ಅವರ ಸಂಬಳ, ಕಮಾಯಿ, ಊಟ, ಲೂಟಿಗೆ ಮತ್ತೆ ಪಾಲಿಕೆ ತಲೆಕೊಡಲೇಬೇಕು. ಈ ಬಾಬತ್ತನ್ನು ಉಳಿಸಿ ಪಾಲಿಕೆ ಸಾಲದ ಬಡ್ಡಿಯನ್ನಾದರೂ ಸರಿದೂಗಿಸಿಕೊಂಡು ಹೋಗುವುದು ಸಿದ್ದು ಸರ್ಕಾರದ ದೊಡ್ಡ ತಲೆನೋವು.




ಕೇವಲ ಮುಖ್ಯಮಂತ್ರಿಗಳಿಗಷ್ಟೇ ಅಲ್ಲ, ಬೆಂಗಳೂರು ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿಯವರಿಗೂ ತಕ್ಷಣದ ಪಾಲಿಕೆ ಚುನಾವಣೆ ಇಷ್ಟವಿಲ್ಲ. ಇನ್ನೊಂದು ತಿಂಗಳೊಳಗೆ ಈಗಿರುವ ಕೌನ್ಸಿಲ್ ಅವಧಿ ಮುಗಿಯುತ್ತದೆ. ಇನ್ನು ಕನಿಷ್ಠ 2 ವರ್ಷ ಸುಧಾರಿಸಿಕೊಂಡರೂ ಪಾಲಿಕೆಗೆ ಸುಧಾರಣೆಯಾಗುವುದು ಕಷ್ಟವೆ.

ಆದರೆ ಬಿಜೆಪಿಗೆ ಪಾಲಿಕೆಯ ದುರ್ಗತಿಯಾಗಲಿ ಅದರ ಉದ್ಧಾರವಾಗಲಿ ಬೆಂಗಳೂರಿನ ಉಳಿವಾಗಲಿ ಯಾವ ಲೆಕ್ಕ? ಹೇಗೂ ಮೋದಿ ಅಲೆಯಿದೆ. ಕೇಂದ್ರದಲ್ಲಿ ಅಧಿಕಾರಕ್ಕೂ ಬಂದಾಗಿದೆ. ಶಾಲಾಮಕ್ಕಳ ಸರಣಿ ಅತ್ಯಾಚಾರ, ಡಿ.ಕೆ. ರವಿ ಆತ್ಮಹತ್ಯೆಯ ಕಳಂಕ, ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಕ್ಯಾತೆ ಇತ್ಯಾದಿಗಳೆಲ್ಲ ಕಾಂಗ್ರೆಸ್ ಸರ್ಕಾರದ ಕಳಂಕಗಳೆಂದೇ ಬಿಜೆಪಿ ಲೆಕ್ಕ ಹಾಕಿದೆ. ಈ ಪರಿಸ್ಥಿತಿಯಲ್ಲೇನಾದರೂ ಪಾಲಿಕೆಗೆ ಚುನಾವಣೆಯಾದರೆ ತಾವೇ ಪಾಲಿಕೆಯನ್ನು ಹಿಡಿದು ಬಿಡುತ್ತೇವೆಂಬ ಭ್ರಮೆಯೂ ಅದರ ತಲೆ ಹೊಕ್ಕಿದೆ. ಆ ಕಾರಣಕ್ಕೇ ಈಗಲೇ ಚುನಾವಣೆಗಾಗಿ ನಾನಾ ಪಟ್ಟು ಹಾಕತೊಡಗಿದೆ.

ಆದರೆ ವಾಸ್ತವ ಹಾಗಿಲ್ಲ. ಈಗ ಚುನಾವಣೆಯಾದರೂ ಅಷ್ಟೇ ಎರಡು ವರ್ಷ ಬಿಟ್ಟಾದರೂ ಅಷ್ಟೇ. ಬಿಜೆಪಿಗೆ ಈಗಿರುವ ಸ್ಥಾನಗಳ ಅರ್ಧದಷ್ಟೂ ಬರುವುದು ಕಷ್ಟವೇ. ಹೇಳಿಕೊಳ್ಳಲು ಸಾಲುಸಾಲು ಹಗರಣಗಳು, ಲೂಟಿ, ಡಕಾಯಿತಿ ಬಿಟ್ಟರೆ ಒಂದೇ ಒಂದು ಸಾಧನೆಯಿಲ್ಲ. ಬೆಂಗಳೂರಿನ ದುರ್ಗತಿಯೊಂದೇ. ಸಾಕು ಬಿಜೆಪಿಯನ್ನು ಜನ ಇನ್ನೆಷ್ಟು ದ್ವೇಷಿಸುತ್ತಾರೆಂಬುದಕ್ಕೆ ಇನ್ನು ಕೊಠಾರಿ ಆಯೋಗದ ಸಾವಿರ ಪುಟಗಳ ವರದಿ ಕುರಿತಂತೆ ಲೋಕಾಯುಕ್ತ ತನಿಖೆಯೇನಾದರೂ ಶುರುವಾಯಿತೆಂದರೆ ಕನಿಷ್ಠ ಮೂವತ್ತು ಮಂದಿ ಕೌನ್ಸಿಲರ್‌ಗಳಾದರೂ ಜೈಲುಪಾಲಾಗುತ್ತಾರೆ. ಬಿಜೆಪಿಯ ಭ್ರಮೆಗೆ ಯಾರ ಹಂಗು ಯಾವ ಮಿತಿ?

...ಪ್ರೀಂಕೋರ್ಟ್‌ವರೆಗೂ ಪಾಲಿಕೆ ಫಜೀತಿ!

...ನಿಷ್ಠ ಏಪ್ರಿಲ್ ಹೊತ್ತಿಗಾದರೂ ಪಾಲಿಕೆ ಚುನಾವಣೆ ನಡೆಯುತ್ತಾ?
...ಮೇಲುನೋಟಕ್ಕೆ ಸರ್ಕಾರ ಚುನಾವಣೆ ನಡೆಸಲು ಬೇಕಾದ ತಯಾರಿ ...ರುವಂತೆಯೇ ಇದೆಯಾದರೂ ಸರ್ಕಾರದ ಒಳ ಲೆಕ್ಕಾಚಾರ ಬೇರೆಯದೇ ಇದೆ. ಈಗ ಚುನಾವಣೆ ನಡೆಸುವಂತೆ ತಾಕೀತು ಮಾಡಿರುವುದು ಹೈಕೋರ್ಟ್ ಏಕಪೀಠ. ಈ ತೀರ್ಪನ್ನು ಆಧರಿಸಿಯೇ ಬೆಂಗಳೂರು ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಚುನಾವಣೆಯ ಮಾತಾಡಿದ್ದಾರೆ. ಆದರೆ ಮುಖ್ಯ ಕಾರ್ಯದರ್ಶಿ ಮಟ್ಟದ ತಯಾರಿಗಳು ಬೇರೆಯದೇ ಸಾಧ್ಯತೆಯೊಂದನ್ನು ಸೂಚಿಸುತ್ತವೆ. ವಾರ್ಡುಗಳ ಮರುವಿಂಗಡಣೆ, ಜಾತಿಗಣತಿ, ಮತದಾರರ ಪಟ್ಟಿ ತಿದ್ದುಪಡಿ ಇತ್ಯಾದಿಗಳನ್ನೇ ಬಲವಾದ ಕಾರಣವಾಗಿ ಬಳಸಿಕೊಂಡು ಸರ್ಕಾರ ದ್ವಿಪೀಠದ ಮೊರೆ ...ಲಿದೆ. ಅಲ್ಲೂ ತಡೆ ಸಿಗಲಿಲ್ಲವೆಂದರೆ ಸುಪ್ರೀಂಕೋರ್ಟ್‌ಗೂ ಸಜ್ಜಾಗಿದೆ. ...ಮುಗಿಯುವ ಹೊತ್ತಿಗೆ ಕನಿಷ್ಠ ಆರು ತಿಂಗಳಾದರೂ ಬೇಕೇಬೇಕು. ...ಲಿಕೆ ಚುನಾವಣೆಯ ಮಾತೇನಿದ್ದರೂ ಆರು ತಿಂಗಳ ನಂತರವೆ. ಆ ...ಪಾಲಿಕೆ ಭ್ರಷ್ಟಾಚಾರದ ಕುರಿತ ಕೊಠಾರಿ ವರದಿಯ ಬಗ್ಗೆ ಲೋಕಾಯುಕ್ತ ...ಮಾಯಿತೆಂದರೆ ಬಿಜೆಪಿ ಗತಿ ಅಧೋಗತಿಯೇ.



...ಶಿಶ್ ಮುಖರ್ಜಿ

...ಲ್ಲೆಲ್ಲ ತನ್ನ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದಲೇ ಹೆಸರು ಮಾಡಿರುವ ...ಕಮಿಷನರ್ ಮಥಾಯಿಯ ಲೆಟರ್‌ಹೆಡ್ಡುಗಳನ್ನೇ ಕದ್ದು ಅವರದೇ ...ನ್ನು ಫೋರ್ಜರಿ ಮಾಡಿದ್ದು ಹಾಲಿ ಅಪೀಲು ಸ್ಥಾಯಿ ಸಮಿತಿಯ ...ಟಿ.ವಿ. ಕೃಷ್ಣ. ಈತ ಮೈಸೂರು ರಸ್ತೆ ದೀಪಾಂಜಲಿನಗರದ ಬಿಜೆಪಿ ...ರ್ ಕೂಡಾ.

...ಪಿ ಕೌನ್ಸಿಲರ್ ಸಾಲದ್ದಕ್ಕೆ ಸ್ಥಾಯಿ ಸಮಿತಿಯ ಅಧ್ಯಕ್ಷ ಬೇರೆ. ಈತನೇ ...ತ ಪಾಲಿಕೆ ಅಧಿಕಾರಿ ಮಥಾಯಿಯವರ ಲೆಟರ್‌ಹೆಡ್ ಕದ್ದು ಫೋರ್ಜರಿ ...ತ್ತಾನೆಂದರೆ ಇನ್ನು ಬಿಜೆಪಿಯ ಪಾಲಿಕೆ ಕಾಯಕ ಅಧಿಕಾರಿಯ ಸಹಿ ...ರಿ ಮಾಡಿದ್ದು ಜಾಹೀರಾತುಗಳ ಪ್ಯಾಕೇಜ್ ಲೂಟಿಗೆಂದು. ನಕಲಿ ...ಕಿ ಕಳ್ಳ ಜಾಹೀರಾತು ಫಲಕಗಳ ಮೂಲಕ ಕೋಟಿಗಟ್ಟಲೇ ದೋಚಲು ...ಟಿ.ವಿ. ಕೃಷ್ಣ ಮಥಾಯಿ ಕೈಯಲ್ಲಿ ರೆಡ್‌ಹ್ಯಾಂಡ್ ಸಿಕ್ಕಿಬಿದ್ದ. ಆದರೇನಂತೆ ...ನಿಗೆ ಮೇಯರ್ ಶಾಂತಕುಮಾರಿಯ ಕುಮ್ಮಕ್ಕು. ಏಕೆಂದರೆ ಜಾಹೀರಾತು ...ಂಡದ ತಾಯಿಯೇ ಈ ಶಾಂತಕುಮಾರಿ. ಜಾಹೀರಾತು ದಂಧೆಕೋರರ ...ವುದೂ ಬಿಜೆಪಿಯೇ. ಏಕೆಂದರೆ ಮೋದಿ ಅಲೆಯೆಬ್ಬಿಸಲು, ಬೆಂಗಳೂರಿನ ...ಗಳಲ್ಲಿ ಮೋದಿಯ ಬ್ಯಾನರ್, ಫ್ಲೆಕ್ಸುಗಳನ್ನು ಹಾಕುವಲ್ಲಿ ಪ್ರಮುಖ ...ಹಿಸಿದ್ದೇ ಜಾಹೀರಾತು ಮಾಫಿಯಾ.

...ಇದೇ ಬಿಜೆಪಿ ಮತ್ತು ಪಾಲಿಕೆಯ ಬಿಜೆಪಿ ಕೂಟವೆಲ್ಲ ಸೇರಿಕೊಂಡು ...ಎತ್ತಂಗಡಿಗೆ ಕತ್ತಿ ಮಸೆಯುತ್ತಿದೆ. ಮತ್ತೊಂದೆಡೆ ಮುಖ್ಯಮಂತ್ರಿ ...ಮಯ್ಯ ಖುದ್ದು ನಿಂತು ಕೊಠಾರಿ ಎಂಬ ಪ್ರಾಮಾಣಿಕ ಅಧಿಕಾರಿಯ ...ಬಿಬಿಎಂಪಿಯ ಬಿಜೆಪಿ ದುರಾಡಳಿತದ ಅಷ್ಟೂ ಹಗರಣಗಳ ತನಿಖೆಗೆ ...ಬಿಟ್ಟರು. ಅಲ್ಲಿಗೆ ಬಿಜೆಪಿಯ ಪಾಲಿಕೆಯ ಪಾಪಕ್ಕೊಂದು ಗತಿಯಾಗುವುದು ...ಯಿತು. ದಕ್ಷ ಐಎಎಸ್ ಅಧಿಕಾರಿಯೆಂದೇ ಚಾಲ್ತಿಯಲ್ಲಿರುವ ಕೊಠಾರಿ ...ಟ್ಟಿ ಆರು ತಿಂಗಳುಗಳ ಕಾಲ ಬಿಜೆಪಿ ಆಳ್ವಿಕೆಯಲ್ಲಿ ನಡೆದ ಅಷ್ಟೂ ...ಗಳ ತನಿಖೆಗಿಳಿದಿದ್ದೇ ತಡ ಪಾಲಿಕೆ ಬಿಜೆಪಿ ಪಾಳೆಯದಲ್ಲಿ ನಡುಕ ...ದೆ. ಇನ್ನೇನು ಬಿಜೆಪಿ ಆಳ್ವಿಕೆಯೂ ಮುಗಿಯುತ್ತಾ ಬಂತು. ಹೆಚ್ಚೆಂದರೆ ...ಮು ತಿಂಗಳ ಕಾಲ ಶಾಂತಕುಮಾರಿ ಮೇಯರ್ ಆಗಿರಬಹುದು. ಆ ...ಆಡಳಿತಾಧಿಕಾರಿಯ ಅವಧಿ. ಅದೇ ಹೊತ್ತಿಗೆ ಕೊಠಾರಿ ಸಮಿತಿ ...ವರದಿಯನ್ನೇನಾದರೂ ಸರ್ಕಾರ ಲೋಕಾಯುಕ್ತ ತನಿಖೆಗೆ ಒಪ್ಪಿಸಿತೆಂದರೆ ...ದೆ ಮೇಯರಾಗಿದ್ದ ಐದೂ ಮಂದಿ ಬಿಜೆಪಿ ನಾಯಕರು ಜೈಲು ...ವುದು ಗ್ಯಾರಂಟಿ!


...ಷ್ಟೇ ಅಲ್ಲ, ಬಿಜೆಪಿ ಆಳ್ವಿಕೆಯಡಿ ಉಪ ಮೇಯರ್‌ಗಳಾಗಿದ್ದವರು, ...ಮಿತಿ ಅಧ್ಯಕ್ಷರುಗಳು ಮತ್ತು ಮೂವತ್ತಕ್ಕೂ ಅಧಿಕ ಬಿಜೆಪಿ ಕೌನ್ಸಿಲರ್‌ಗಳು ...ಪಾಲಾಗುತ್ತಾರೆ. ಏಕೆಂದರೆ ಕೊಠಾರಿ ಸಮಿತಿಯ ವರದಿಯೇ ಸಾವಿರ ...ನ್ನು ಮೀರಿತ್ತು, 1538 ಕೋಟಿ ರೂಪಾಯಿಗಳ ಭೋಗಸ್ ಬಿಲ್ ...ದವನ್ನೇ ಅಲ್ಲದೆ ತೋಟಗಾರಿಕೆ, ಕೆರೆಗಳ ನಿರ್ವಹಣೆ, ಬೀದಿದೀಪಗಳ ...ಜಾಹೀರಾತು ದಕಾಯಿತಿ, ವಿಶೇಷ ಎಲ್‌ಓಸಿ ದಂಧೆ, ಜಿಡಿಆರ್ ...ಂಗೆ ಸಹಸ್ರಾರು ಕೋಟಿ ರೂಪಾಯಿಗಳ ಅನೇಕಾನೇಕ ಹಗರಣಗಳನ್ನು ...ದ ಕೊಠಾರಿ ಆಯೋಗದ ವರದಿಯ ತನಿಖೆಯನ್ನು ತಡೆಗಟ್ಟುವುದು ...

...ದು ಬಿಜೆಪಿ ಕೌನ್ಸಿಲರ್‌ಗಳಾದ ರಾಮಮೂರ್ತಿ ಮತ್ತು ...ಬರ್‌ರನ್ನು ಛೂಬಿಟ್ಟಿದೆ. ಈ ಸಲದ ಮೇಯರ್ ಅವಧಿ ಮುಗಿದ ...ಪಾಲಿಕೆಗೆ ಚುನಾವಣೆ ನಡೆಸಬೇಕೆಂದು ಹೈಕೋರ್ಟ್ ಮೆಟ್ಟಿಲೇರಿದ ...ಹುನ್ನಾರವೂ ಫಲ ಕೊಟ್ಟಿದೆ. ಹೈಕೋರ್ಟ್ ಮೇ 30ರ ಒಳಗೆ ...ಪ್ರಕ್ರಿಯೆ ಮುಗಿಸುವಂತೆ ತೀರ್ಪಿತ್ತಿದ್ದೂ ಆಗಿದೆ. ಹಾಗೊಮ್ಮೆ ...ರ ಒಳಗೆ ಪಾಲಿಕೆ ಚುನಾವಣೆ ಮಾಡಲೇಬೇಕೆಂದು ಸರ್ಕಾರ ...ಂದರೆ 10 ಸಾವಿರ ಕೋಟಿ ರೂಪಾಯಿಗಳ ಬಿಜೆಪಿ ಪಾಪ ನೆನೆಗುದಿಗೆ ...ೆ. ಚುನಾವಣೆಯ ಗಾಬರಿಗೆ ಬಿದ್ದ ಸರ್ಕಾರ ಬಿಜೆಪಿ ಪಾಪದ ಬಗ್ಗೆ ...ಡುವುದೆಲ್ಲಿಂದ?

...ಗಬಾರದು. ಒಂದಲ್ಲ, ಎರಡಲ್ಲ, ಹಗರಣಗಳು ನೂರಾರು. ನೂರಲ್ಲ, ...ದುಡ್ಡಿನ ಮೊತ್ತವೇ 10 ಸಾವಿರ ಕೋಟಿಯಷ್ಟು. ರಾಜಧಾನಿ ...ಲ್ಲೇ ಲೂಟಿ ಹೊಡೆದ ಬಿಜೆಪಿಯ ಖದೀಮರನ್ನು ಜೈಲಿಗಟ್ಟುವ ...ೂ ಪಾಲಿಕೆ ಚುನಾವಣೆ ಮುಂದಕ್ಕೆ ಹೋಗಲಿ. ಸಿದ್ದರಾಮಯ್ಯ ...ಧೈರ್ಯ ಮಾಡಲಿ.

■ ರಾ. ಸೋಮನಾಥ್

ಕ್ರೈಸ್ತ ಸಮುದಾಯದ ಮೇಲೆ ಹೆಚ್ಚುತ್ತಿರುವ ದಾಳಿಗಳು



ಇದುವರೆಗೆ ತೆರೆಮರೆಯಲ್ಲಿದ್ದ ಆರೆಸ್ಸೆಸ್‌ನ ಅಜೆಂಡಾಗಳೆಲ್ಲ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಕ್ಷಣದಿಂದ ದೇಶದ ಬೀದಿಬೀದಿಗಳಲ್ಲಿ ರಾಜಾರೋಷವಾಗಿ ಜಾರಿಯಾಗತೊಡಗಿವೆ. ಮೋದಿಯನ್ನು ಮುಂದಿಟ್ಟುಕೊಂಡು ಹಿಂದೂ ರಾಷ್ಟ್ರ ಸ್ಥಾಪನೆಯ ಕನಸನ್ನು ನನಸಾಗಿಸಲು ಹೊರಟಿರುವ ಚೆಡ್ಡಿಗಳು ಅದಕ್ಕೋಸ್ಕರ ಅಲ್ಪಸಂಖ್ಯಾತರ ಮೇಲೆ ಲವ್ ಜಿಹಾದ್, ಭಯೋತ್ಪಾದನೆ, ಮತಾಂತರ ಮುಂತಾದ ಹುಸಿ ಆರೋಪಗಳನ್ನು ಇನ್ನಷ್ಟು ಹೆಚ್ಚಿಸಿದ್ದಾರೆ. ಈ ಹಿಂದೆ ಈಶಾನ್ಯ ರಾಜ್ಯಗಳು ಮತ್ತು ಬುಡಕಟ್ಟು ಪ್ರದೇಶಗಳಿಗೆ ಸೀಮಿತವಾಗಿದ್ದ 'ಘರ್ ವಾಪಸಿ' ಕಾರ್ಯಾಚರಣೆಗಳು ಈಗ ದೇಶಾದ್ಯಂತ ನಡೆಯಲಾರಂಭಿಸಿವೆ. 2014ರ ಮೇ ತಿಂಗಳಿಂದ ಇಲ್ಲಿಯತನಕ ಕ್ರೈಸ್ತರು ಮತ್ತು ಅವರ ಪ್ರಾರ್ಥನಾಕೇಂದ್ರಗಳನ್ನು ಗುರಿಯಾಗಿಸಿ ನೂರಾರು ದಾಳಿಗಳು ನಡೆದಿವೆ; ಇನ್ನೂ ನಡೆಯುತ್ತಲೇ ಇವೆ. ಕೆಲವು ಉದಾಹರಣೆಗಳನ್ನು ಉಲ್ಲೇಖಿಸುವುದಾದರೆ ಜೈಪುರಕ್ಕೆ ಬಂದಿದ್ದ ಹೈದರಾಬಾದಿನ ಹೆಬ್ರಾನ್ ಚರ್ಚಿನ ಅನುಯಾಯಿಗಳ ಮೇಲೆ ಹಲ್ಲೆ ನಡೆಸಲಾಯಿತು. ರಾಜಧಾನಿ ದಿಲ್ಲಿಯಲ್ಲಿ ಕನಿಷ್ಠ ನಾಲ್ಕು ಚರ್ಚು ಮತ್ತು ಕ್ರಿಶ್ಚಿಯನ್ ಶಾಲೆಗಳ ಮೇಲೆ ದಾಳಿ ನಡೆಸಲಾಯಿತು. ಹರಿಯಾನಾದ ಹಿಸಾರ್, ಮಧ್ಯಪ್ರದೇಶದ ಜಬಲ್‌ಪುರ, ಮಹಾರಾಷ್ಟ್ರದ ನವಿ ಮುಂಬಯಿ, ಕರ್ನಾಟಕದ ಮಂಗಳೂರುಗಳಲ್ಲಿ ಚರ್ಚುಗಳ ಮೇಲೆ ದಾಳಿಗಳಾಗಿವೆ. ಪಶ್ಚಿಮ ಬಂಗಾಳ, ಕರ್ನಾಟಕ ಮತ್ತಿತರ ಕಡೆಗಳಲ್ಲಿ ಕ್ರೈಸ್ತ ಭಗಿನಿಯರ ಮೇಲೆ ಅತ್ಯಾಚಾರಗಳು ನಡೆದಿವೆ. ಈ ಚೆಡ್ಡಿಗಳ ಮನಸ್ಸು ಎಷ್ಟೊಂದು ದ್ವೇಷದಿಂದ ತುಂಬಿದೆ ಎನ್ನುವುದನ್ನು ತಿಳಿಯಲು ಹೆಚ್ಚು ಕಷ್ಟವೇನಿಲ್ಲ, ನಿಸ್ವಾರ್ಥ ಮನೋಭಾವದಿಂದ ದಟ್ಟದರಿದ್ರರ ಸೇವೆ ಮಾಡಿದ ಮದರ್ ತೆರೆಸಾರಂಥವರ ತೇಜೋವಧೆಗಿಳಿದ ಒಂದು ದೃಷ್ಟಾಂತ ಸಾಕು. ಆದರೆ ಇಂತಹ ಹೆಚ್ಚುಕಮ್ಮಿ ಪ್ರತಿಯೊಂದು ಘಟನೆಯನ್ನು ದರೋಡೆ ಅಥವಾ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನ ಪರಿಣಾಮ ಎಂದು ಬಿಂಬಿಸಲಾಗುತ್ತಿದೆ. ಇದು ಕುತೂಹಲಕಾರಿಯಾಗಿಲ್ಲವೇ? ಯಾಕೆ ಹೀಗೆ? ಕಾರಣವೇನೆಂದರೆ ಸಂಘ ಪರಿವಾರ ಯಾವತ್ತೂ ಕ್ರೈಸ್ತರ ಮೇಲಿನ ದಾಳಿಗಳನ್ನು ಮುಚ್ಚಿಡಲು ಯತ್ನಿಸುತ್ತದೆ ಏಕೆಂದರೆ ಅದಕ್ಕೆ ಅಮೆರಿಕ, ಯುರೋಪ್ ಮತ್ತು ವ್ಯಾಟಿಕನ್‌ಗಳ ಭಯ ಇದೆ, ಅಲ್ಲಿನ ಮಾಧ್ಯಮಗಳ ಭಯ ಇದೆ, ಅಲ್ಲಿನ ಕಾರ್ಪೊರೇಟುಗಳ ಭಯ ಇದೆ; ಅದೇ ಕೊಲ್ಲಿಯ ಮುಸ್ಲಿಂ ರಾಷ್ಟ್ರಗಳ ಬಗ್ಗೆ ಕಿಂಚಿತ್ತಾದರೂ ಭಯವಿಲ್ಲ!

ಜನಗಣತಿಯ ಅಂಕಿಅಂಶಗಳೇ ಹೇಳುವಂತೆ ಭಾರತದಲ್ಲಿ ಕ್ರೈಸ್ತರ ಜನಸಂಖ್ಯೆ ಸುಮಾರು 2 ಪ್ರತಿಶತದಷ್ಟಿದೆ ಮತ್ತು ಅದು ಇಳಿಮುಖವಾಗುತ್ತಾ ಸಾಗಿದೆ. ಆದರೂ ಮತಾಂತರ, "ಲವ್ ಜಿಹಾದ್" ಇತ್ಯಾದಿಗಳಿಂದಾಗಿ ಹಿಂದೂಗಳು ನಿರ್ನಾಮವಾಗಲಿದ್ದಾರೆ ಎನ್ನುವ ಸುಳ್ಳುಗಳನ್ನು ಬಿತ್ತಿ, ಜನರಲ್ಲಿ ಭೀತಿ ಹುಟ್ಟಿಸಿ, ಅವರಲ್ಲಿ ನೆರೆಕರೆಯ ಅನ್ಯಧರ್ಮೀಯರ ಬಗ್ಗೆ ದ್ವೇಷವನ್ನು ಕೆರಳಿಸಲಾಗುತ್ತಿದೆ. ಇದೆಲ್ಲವನ್ನು ನೋಡುತ್ತಿರುವ ಅನೇಕ ಕ್ರೈಸ್ತರು ಗಲಿಬಿಲಿಗೊಂಡಿದ್ದರೆ ಅದು ಸಹಜವೇ ಆಗಿದೆ. ಏಕೆಂದರೆ ಅವರಿಗೆ ಸಂಘ ಪರಿವಾರದ ಅಜೆಂಡಾದ ಬಗ್ಗೆ, ಅದರ ಕಾರ್ಯವಿಧಾನಗಳ ಬಗ್ಗೆ ಸಾಕಷ್ಟು ಅರಿವಿಲ್ಲ, ಅವರು ಸಾವರ್ಕರ್‌ರ 'ಹಿಂದೂತ್ವ' ಮತ್ತು ಸರಸಂಘಚಾಲಕ ಗೋಲ್ವಲ್ಕರ್ ಬರೆದಿರುವ 'ವಿ ಆರ್ ಅವರ್ ನೇಷನ್‌ಹುಡ್ ಡಿಫೈನ್‌ಡ್' ***(We or Our Nationhood Defined)*** ಮತ್ತು 'ಬಂಚ್ ಆಫ್ ಥಾಟ್ಸ್' ***(Bunch of Thoughts)*** ಎಂಬ ಪುಸ್ತಕಗಳನ್ನು ಓದಬೇಕು. ಅವುಗಳಲ್ಲಿ ಅಲ್ಪಸಂಖ್ಯಾತರ ಬಗ್ಗೆ, ಅದರಲ್ಲೂ ವಿಶೇಷವಾಗಿ ಮುಸ್ಲಿಮರ ಹಾಗೂ ಕ್ರೈಸ್ತರ ಬಗ್ಗೆ ಸಂಘ ಪರಿವಾರದ ನಿಲುವೇನು ಎಂಬುದನ್ನು ಬಹಳ ಸ್ಪಷ್ಟವಾಗಿ ವಿವರಿಸಲಾಗಿದೆ.

'ಹಿಂದೂತ್ವ' ಸಿದ್ಧಾಂತದ ಜನಕನಾದ ಸಾವರ್ಕರ್ "ಹಿಂದೂತ್ವ ಬೇರೆ, ಹಿಂದೂ ಧರ್ಮ ಬೇರೆ" ಎಂದು ತನ್ನ ಪುಸ್ತಕದಲ್ಲಿ ಮತ್ತೆ ಮತ್ತೆ ಬರೆದಿದ್ದಾರೆ. ವಾಸ್ತವವಾಗಿ ಹಿಂದೂತ್ವ ಒಂದು ದ್ವೇಷದ, ರಾಜಕೀಯ ಸಿದ್ಧಾಂತವಾಗಿದೆ. ಸಾವರ್ಕರ್ ಪ್ರಕಾರ ಮುಸ್ಲಿಮರು ಮತ್ತು ಕ್ರೈಸ್ತರು "ನಾವು ನಮ್ಮ ಹಿಂದೂ *ಸಂಸ್ಕೃತಿಗೆ ಸಲ್ಲಿಸುವ ನಮನದ ಬಾಂಧವ್ಯವನ್ನು ಹಂಚಿಕೊಳ್ಳದಿರುವ*" ಗುಂಪುಗಳು. "*ತೀರಾ ಇತ್ತೀಚಿನ ವರೆಗೂ ಹಿಂದೂಗಳಾಗಿದ್ದ ಕ್ರೈಸ್ತ ಮತ್ತು ಮುಸ್ಲಿಂ ಸಮುದಾಯಗಳನ್ನು.... ಹಿಂದೂಗಳೆಂದು ಗುರುತಿಸಲಾಗುವುದಿಲ್ಲ ಏಕೆಂದರೆ ಹೊಸ ಪಂಥವನ್ನು ಆಲಂಗಿಸಿಕೊಂಡಾಗ ಅಖಂಡ ಹಿಂದೂ ಸಂಸ್ಕೃತಿಯ ಮೇಲಿನ ಅವರ ಸ್ವಾಮ್ಯ ಕೊನೆಗೊಂಡಿದೆ ......ಅದೇಕೆಂದರೆ ಇತರ ಹಿಂದೂಗಳಂತೆ ಹಿಂದೂಸ್ತಾನ ಅವರಿಗೆ ಪಿತೃಭೂಮಿಯಾದರೂ ಇತರ ಹಿಂದೂಗಳಂತೆ ಅವರಿಗೆ ಅದು ಪವಿತ್ರಭೂಮಿ ಅಲ್ಲ. ....ಅವರ ಪುಣ್ಯಕ್ಷೇತ್ರಗಳಿರುವುದು ಬಹುದೂರದ ಅರೇಬಿಯಾ ಅಥವಾ ಪ್ಯಾಲೆಸ್ಟೀನ್‌ನಲ್ಲಿ*" ಎನ್ನುತ್ತಾರೆ ಸಾವರ್ಕರ್.

ಇನ್ನು ಗೋಲ್ವಲ್ಕರ್ ಪ್ರಕಾರ ದೇಶದ ಭದ್ರತೆಗೆ ಹೆಚ್ಚು ಅಪಾಯಕಾರಿಯಾಗಿರುವ ಮೂರು ಮುಖ್ಯ ಆಂತರಿಕ ವಿಪತ್ತುಗಳೆಂದರೆ ಮುಸ್ಲಿಮರು, ಕ್ರೈಸ್ತರು ಮತ್ತು ಕಮ್ಯೂನಿಸ್ಟರು. ಗೋಲ್ವಲ್ಕರ್ ಚಿಂತನೆಗಳ ಕೆಲವು ಝಲಕ್‌ಗಳು ಇಲ್ಲಿವೆ:


"*ಒಬ್ಬ ವ್ಯಕ್ತಿ ಹಿಂದೂ ಅಥವಾ ಮುಸ್ಲಿಂ ಅಥವಾ ಕ್ರೈಸ್ತನಾಗಿ ಜನಿಸುವುದಿಲ್ಲ ಆತ ಹುಟ್ಟುವುದು ಓರ್ವ ಸರಳ ಮಾನವನಾಗಿ ಎಂದು ಇಂದಿನ ಕೆಲವು ಬುದ್ಧಿವಂತ ಜನರು ನಮಗೆ ತಿಳಿಸುತ್ತಾರೆ. ....ಆದರೆ ..... ನಾವು ನಮ್ಮ ತಾಯಂದಿರ ಹೊಟ್ಟೆಯಿಂದ ಹೊರಬೀಳುವ ಮುನ್ನವೆ ಹಿಂದೂಗಳು. ಆದುದರಿಂದಲೆ ನಾವು ಹಿಂದೂಗಳಾಗಿ ಜನ್ಮ ತಾಳುತ್ತೇವೆ. ಇನ್ನು ಇತರರ ಬಗ್ಗೆ ಹೇಳುವುದಾದರೆ, ಈ ಪ್ರಪಂಚದಲ್ಲಿ ಅವರು ಸರಳ ಅಜ್ಞಾತ ಮಾನವರಾಗಿ ಹುಟ್ಟುತ್ತಾರೆ. ಸುನ್ನತ್ ಅಥವಾ ಶುದ್ಧಸ್ನಾನದ ಬಳಿಕ ಮುಸ್ಲಿಮರು ಅಥವಾ ಕ್ರೈಸ್ತರು ಎಂದಾಗುತ್ತಾರೆ.*"

"*ಈ ನೆಲದ ಒಡೆಯರು ಹಿಂದೂಗಳು; ಇಲ್ಲಿ ಪಾರಸಿ ಮತ್ತು ಯಹೂದ್ಯರು ಅತಿಥಿಗಳು ಮತ್ತು ಮುಸ್ಲಿಮರು ಹಾಗೂ ಕ್ರೈಸ್ತರು ದರೋಡೆಕೋರರು. ಹೀಗಿರುವಾಗ ಇವರೆಲ್ಲರಿಗೂ ಈ ದೇಶದ ಮೇಲೆ ಸಮಾನ ಹಕ್ಕು ಹೇಗೆ ಸಾಧ್ಯ?*"

"*ನಮ್ಮ ನಾಡಿನಲ್ಲಿರುವ ಕ್ರೈಸ್ತ ಸದ್ಗೃಹಸ್ಥರ ಪಾತ್ರ ಹೇಗಿದೆಯೆಂದರೆ ಅವರ ಉದ್ದೇಶ ನಮ್ಮ ಜೀವನದ ಧಾರ್ಮಿಕ ಮತ್ತು ಸಾಮಾಜಿಕ ನೆಲೆಗಳನ್ನು ನಾಶಗೊಳಿಸುವುದಷ್ಟೆ ಅಲ್ಲ, ವಿವಿಧ ಕ್ಷೇತ್ರಗಳಲ್ಲಿ ಮತ್ತು ಸಾಧ್ಯವಾದರೆ ಇಡೀ ದೇಶದಲ್ಲಿ, ರಾಜಕೀಯ ಯಜಮಾನಿಕೆಯನ್ನು ಸ್ಥಾಪಿಸುವುದಾಗಿದೆ.*"

ಸಂಘ ಪರಿವಾರದ ಮತ್ತೊಬ್ಬ ಲೇಖಕ ಸೀತಾರಾಮ್ ಗೋಯಲ್‌ರ ಬರಹಗಳಂತೂ ಅತ್ಯಂತ ಅಸಹ್ಯಕರವಾಗಿವೆ. ಕ್ರೈಸ್ತರಿರಲಿ ಮುಸ್ಲಿಮರಿರಲಿ, ಅವರ್‍ಯಾರಿಗೂ ಹಿಂದೂ ಧರ್ಮದ ಪ್ರಾಚೀನ ಸೂತ್ರವಾದ 'ಸರ್ವಧರ್ಮ ಸಮಭಾವ'ವನ್ನು ಅನ್ವಯಿಸಬಾರದೆಂದು ಪ್ರತಿಪಾದಿಸಿದ (ಮಾರ್ಚ್ 1983ರ ಲೇಖನ) ವ್ಯಕ್ತಿ ಈತ. ಈ ಗೋಯಲ್ ಕ್ರೈಸ್ತರನ್ನು, ಕ್ರೈಸ್ತ ಧರ್ಮವನ್ನು ತೆಗಳುವ **'Catholic Ashrams'** (ಕ್ರೈಸ್ತ ಆಶ್ರಮಗಳು), **'Papacy'** (ಪೋಪರ ಹುದ್ದೆ), **'History of Hindu-Christian Encounters'** (ಹಿಂದೂ - ಕ್ರೈಸ್ತ ಮುಖಾಮುಖಿಗಳ ಇತಿಹಾಸ), **'Jesus Christ An Artifice for Aggression'** (ಯೇಸು ಕ್ರಿಸ್ತ: ಆಕ್ರಮಣಕ್ಕಾಗಿ ಒಂದು ಯುಕ್ತಿ) ಮೊದಲಾದ ಪುಸ್ತಕಗಳನ್ನು ಬರೆದಿದ್ದಾರೆ. 'ಹಿಂದೂ - ಕ್ರೈಸ್ತ ಮುಖಾಮುಖಿಗಳ ಇತಿಹಾಸ'ದ ದ್ವಿತೀಯ ಆವೃತ್ತಿಯ **(1996)** ಮುನ್ನುಡಿ ಹೇಗಿದೆ ನೋಡಿ:

"....ರಾಮ ಜನ್ಮಭೂಮಿ .....ಚಳವಳಿ ಇಸ್ಲಾಮಿನ ಆಕ್ರಮಣವನ್ನು ತಡೆಗಟ್ಟುವ ಸಲುವಾಗಿತ್ತು; ಕ್ರೈಸ್ತ ಧರ್ಮ ಮತ್ತು ಅದರ ಮತಪ್ರಚಾರ ಮಂಡಲಿಗಳ ಬಗ್ಗೆ ಹೆಚ್ಚು ಕಡಿಮೆ ಉಲ್ಲೇಖವೇ ಆಗಿರಲಿಲ್ಲ. ಆದರೂ ಈ ಹೊಸ ಹಿಂದೂ ಸಂಚಲನದ ಕುರಿತು ಅತ್ಯಧಿಕ ಆತಂಕ ತೋರಿಸಿದ ಕ್ರೈಸ್ತ ಧರ್ಮ 'ತೋಳ ಬಂತು ತೋಳ' ಎಂದು ಕೂಗಾಡಲಾರಂಭಿಸಿತು. ಅದು ಪಾಶ್ಚಿಮಾತ್ಯ ಮಾಧ್ಯಮಗಳ ಮೇಲೆ ಪ್ರಭಾವ ಹೊಂದಿರುವುದರಿಂದ ಅಲ್ಲೆಲ್ಲಾ ಭಾರತದ ಹಿಂದೂಗಳು ಅಲ್ಪಸಂಖ್ಯಾತರನ್ನು ನಿರ್ನಾಮ ಮಾಡಿ ನಾಜಿ ಪ್ರಭುತ್ವವನ್ನು ಹೇರಲು ಹೊರಟಿದ್ದಾರೆಂದು ಕೋಲಾಹಲವೆದ್ದಿತು. ಆ ಚಂಡಮಾರುತವಿನ್ನೂ ಬೀಸುತ್ತಲೆ ಇದೆ. ಅದು ಎಂದು ಶಮನಗೊಳ್ಳಲಿದೆ ಅಥವಾ ಶಮನಗೊಳ್ಳಲಿದೆಯೇ



ಇಲ್ಲವೇ, ಯಾರೂ ಅರಿಯರು."


ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳನ್ನೆ ಗುರಿಯಾಗಿಸಿರುವ 'ಯೇಸು ಕ್ರಿಸ್ತ: ಆಕ್ರಮಣಕ್ಕಾಗಿ ಒಂದು ಯುಕ್ತಿ' ಪುಸ್ತಕದಿಂದ ಒಂದು ಉಲ್ಲೇಖ ಇಲ್ಲಿದೆ:


"ಹಿಂದೂಗಳಾದ ನಾವು ಮುಸ್ಲಿಮರ ಹಾಗೂ ಕ್ರೈಸ್ತರ ನಡವಳಿಕೆಯ ನಮೂನೆಗಳನ್ನು ನೋಡುವುದರಲ್ಲೆ ತಲ್ಲೀನರಾಗಿದ್ದೇವೆ ಹೊರತು ಅಂತಹ ನಮೂನೆಗಳನ್ನು ಹುಟ್ಟುಹಾಕುವಂತಹ ಮತಶ್ರದ್ಧೆಯ ಸಿದ್ಧಾಂತ, ಆಚರಣೆಗಳನ್ನು ನೋಡುವುದರಲ್ಲಿ ನಿರತರಾಗಿರಲಿಲ್ಲ, ನಾವು ಕ್ರೈಸ್ತರ ಧರ್ಮಪ್ರಚಾರಕ ಮಂಡಲಿಗಳನ್ನು ವಿರೋಧಿಸುತ್ತೇವೆ. ಆದರೆ ಕ್ರೈಸ್ತಧರ್ಮ ಮತ್ತು ಅದರ ದೇವರಾದ ಯೇಸುಕ್ರಿಸ್ತನ ಕುರಿತು ಚರ್ಚಿಸಲು ನಿರಾಕರಿಸುತ್ತೇವೆ. ನಾವು ಇಸ್ಲಾಮಿಕ್ ಭಯೋತ್ಪಾದನೆಯನ್ನು ವಿರೋಧಿಸುತ್ತೇವೆ. ಆದರೆ ಇಸ್ಲಾಂ ಮತ್ತು ಪ್ರವಾದಿ ಮುಹಮ್ಮದ್‌ರನ್ನು ಪರಾಮರ್ಶಿಸಲು ನಿರಾಕರಿಸುತ್ತೇವೆ. ಹಿಂದೂಗಳ ಈ ಪ್ರವೃತ್ತಿಯಲ್ಲಿ ನನಗೆ ವಿವೇಚನೆ ಕಾಣಿಸುತ್ತಿಲ್ಲ; ಅಥವಾ ತರ್ಕವೂ ಕಾಣಿಸುತ್ತಿಲ್ಲ."

ಮೇ **2014**ರ ನಂತರ ದೇಶದಲ್ಲಿ ನಡೆಯುತ್ತಿರುವ ಘಟನೆಗಳು ನಮ್ಮ ನೆನಪನ್ನು **1998**ನೆ ಇಸವಿಗೆ ತೆಗೆದುಕೊಂಡು ಹೋಗುತ್ತವೆ. ಡಿಸೆಂಬರ್ **4, 1998**ರಂದು ಸುಮಾರು **2.30** ಕೋಟಿ ಭಾರತೀಯ ಕ್ರೈಸ್ತರು ತಮ್ಮ ಸಮುದಾಯದವರ ಮೇಲೆ ಹಿಂಸಾಚಾರ ಹೆಚ್ಚುತ್ತಿರುವುದರ ಕುರಿತು ದೇಶಾದ್ಯಂತ ಪ್ರತಿಭಟನೆ ನಡೆಸಿದ್ದರು. ಅಂದಿನ ಪ್ರತಿಭಟನಾ ಪತ್ರವೊಂದು "*ದೇಶಕ್ಕೆ ಸ್ವಾತಂತ್ರ್ಯ ದೊರೆತು 50 ವರ್ಷಗಳಲ್ಲಿ ನಡೆದಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದ ಹಿಂಸಾಚಾರ ಜನವರಿ 1998ರ ನಂತರದಲ್ಲಿ ನಡೆದಿದೆ. ಕ್ರೈಸ್ತ ಸನ್ಯಾಸಿನಿಯರ ಮೇಲೆ ಲೈಂಗಿಕ ಅತ್ಯಾಚಾರಗಳಾಗಿವೆ, ಪಾದ್ರಿಗಳನ್ನು ಹತ್ಯೆಗೈಯಲಾಗಿದೆ, ಬೈಬಲ್ ಪ್ರತಿಗಳನ್ನು ಸುಡಲಾಗಿದೆ, ಚರ್ಚುಗಳನ್ನು ಧ್ವಂಸಗೊಳಿಸಲಾಗಿದೆ, ಶೈಕ್ಷಣಿಕ ಸಂಸ್ಥೆಗಳನ್ನು ನಾಶಪಡಿಸಲಾಗಿದೆ ಮತ್ತು ಧಾರ್ಮಿಕ ವ್ಯಕ್ತಿಗಳಿಗೆ ಕಿರುಕುಳ ನೀಡಲಾಗಿದೆ*" ಎಂದು ಹೇಳುತ್ತದೆ. **1998**ರ ನವಂಬರ್ **25**ರಂದು ಚಂಡೀಗಢದಲ್ಲಿ ಮಾತನಾಡಿದ ವಿಹಿಂಪ ಪ್ರಧಾನ ಕಾರ್ಯದರ್ಶಿ ಗಿರಿರಾಜ್ ಕಿಶೋರ್ "*ಇಂದು ಎಲ್ಲಾ ಪ್ರತ್ಯೇಕತಾವಾದಿ ಮುಸ್ಲಿಂ ಶಕ್ತಿಗಳ ಒಟ್ಟಾರೆ ಅಪಾಯಕ್ಕಿಂತಲೂ ಅಧಿಕ ಅಪಾಯಕಾರಿಯಾಗಿರುವುದು ಕ್ರೈಸ್ತರು. ....ಮುಸ್ಲಿಂ, ಕ್ರೈಸ್ತರನ್ನೊಳಗೊಂಡಂತೆ ಎಲ್ಲಾ ಅಲ್ಪಸಂಖ್ಯಾತರೂ ತಮ್ಮ ಪೂರ್ವಜರು ಹಿಂದೂಗಳೆಂದು ಒಪ್ಪಿಕೊಳ್ಳಬೇಕು*" ಎಂದಿದ್ದರು.


ಕ್ರೈಸ್ತರು **1998, 2008**ನ್ನೂ ಒಳಗೊಂಡಂತೆ ಸ್ವಾತಂತ್ರ್ಯಾನಂತರದಲ್ಲಿ ತಮ್ಮ ಮೇಲಾದ ದಾಳಿಗಳು ಮತ್ತಿತರ ಅಹಿತಕರ ವಿದ್ಯಮಾನಗಳು ಮತ್ತು ಸಂಘ ಪರಿವಾರಿಗರ ಹೇಳಿಕೆಗಳೆಲ್ಲವನ್ನು ಇವತ್ತಿನ ವಿದ್ಯಮಾನಗಳು ಮತ್ತು ಹೇಳಿಕೆಗಳೊಂದಿಗೆ ಹೋಲಿಸಬೇಕು. ಅವರೆಲ್ಲರೂ ಮೇಲೆ ಹೇಳಿರುವ ಹೊತ್ತಗೆಗಳನ್ನಷ್ಟೆ ಅಲ್ಲ ಇನ್ನೂ ಅನೇಕ ಹೊತ್ತಗೆಗಳನ್ನು ಓದಬೇಕು. ಆಗ ಅವರಿಗೆ ನಿಚ್ಚಳವಾಗಿ ತಿಳಿಯುತ್ತದೆ ಸಂಘ ಪರಿವಾರದ ನಿಲುವು, ಕೃತ್ಯ ಮತ್ತು ಗುರಿಗಳಲ್ಲಿ ಎಳ್ಳಷ್ಟಾದರೂ ಬದಲಾವಣೆ ಆಗಿಲ್ಲವೆಂದು. ತಾವು ಇನ್ನಷ್ಟು ಜಾಗ್ರತರಾಗಿ, ಇನ್ನಷ್ಟು ಸಕ್ರಿಯರಾಗಿ ಇತರ ಅಲ್ಪಸಂಖ್ಯಾತರು ಮತ್ತು ಪ್ರಗತಿಪರರ ಜೊತೆ ಸೇರಿ ಬೀದಿಗಿಳಿದು ಹೋರಾಟ ಮಾಡಬೇಕು ಉಳಿಗಾಲ ಇಲ್ಲವೆಂದು.

(ಆಧಾರ: ಆರೆಸ್ಸೆಸ್ ಮತ್ತು ಬಿಜೆಪಿ, ಎ.ಜೆ.ನೂರಾನಿ).


ತದಡಿ ಬಂದರು


ತದಡಿ ಬಂದರು ನೀಲನಕ್ಷೆ

ತದಡಿ ಬಂದರು: ಢೋಂಗಿ ಪರಿಸರವಾದಿಗಳಿಗೆ ಕಪಾಳಮೋಕ್ಷ!!


ಅನಂತಕುಮಾರ್ ಹೆಗಡೆ-ಎಂಪಿ

ಉತ್ತರ ಕನ್ನಡದ ಪರಿಸರ ಹೋರಾಟ ದಂಧೆಕೋರರ ಅಸಲಿಯತ್ತು ಅನಾವರಣವಾಗಿದೆ. ಜಿಲ್ಲೆಗೆ ಯಾವ ಯೋಜನೆ-ಉದ್ಯಮ ಘೋಷಣೆಯಾದರೂ ಸಾಕು, ಅಡಿಗಡಿಗೆ ಅಡ್ಡಗಾಲು ಹಾಕಿ ಬೇಳೆ ಬೇಯಿಸಿಕೊಳ್ಳುವ ಈ ಪುರೋಹಿತಶಾಹಿ ಹಾರಾಟಗಾರರಿಗೆ ತದಡಿ ಸೀಮೆಯ ಜನ ಐತಿಹಾಸಿಕ ಕಪಾಳ ಮೋಕ್ಷ ಮಾಡಿದ್ದಾರೆ. ತದಡಿ ಕಡಲ ತಡಿಗೆ ಬರಲು ರೆಡಿಯಾಗಿರುವ 3,800 ಕೋಟಿ ರೂಪಾಯಿಗಳ ಮಹಾ ವಾಣಿಜ್ಯ ಬಂದರು ಅನಾಹುತಕಾರಿ ಎಂದು ಜನರ ತಲೆಯಲ್ಲಿ ಸಲ್ಲದ ಹುಳು ಬಿಡಲು ಹವಣಿಸಿದ ಷಡ್ರಿ ಪರಿಸರ ವ್ಯಾಧಿಗಳ ಆಟ ಫ್ಲಾಪ್ ಆಗಿ ಕುಂಡೆಗೆ ಕಾಲು ಕೊಟ್ಟು ಓಡಿದ್ದಾರೆ!


ಮಾರ್ಚ್ 23ರಂದು ತದಡಿ ಬಳಿ ಪರಿಸರ ಮಂಡಳಿ ಬಂದರು ಯೋಜನೆ ಬಗ್ಗೊಂದು ಸಾರ್ವಜನಿಕ ಅಹವಾಲು ಸಭೆ ನಡೆಸಿತ್ತು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಈ ಸಭೆಯಲ್ಲಿ ಸುತ್ತಲಿನ ಹಳ್ಳಿಯ ಜನರು ದೊಡ್ಡ ಸಂಖ್ಯೆಯಲ್ಲಿ ಜಮೆಯಾಗಿದ್ದರು: ಸ್ವಾರ್ಥ-ಒಣ ಪ್ರತಿಷ್ಠೆಗೆ ಪರಿಸರ ವೇಷಧಾರಿಗಳು ಅಮಾಯಕ ಸಮುದಾಯವನ್ನು ದಾರಿ ತಪ್ಪಿಸುತ್ತಿರುವುದು ತದಡಿ ಏರಿಯಾದವರಿಗೆ ಅರ್ಥವಾಗಿತ್ತು. ಅಹವಾಲು ಸಭೆಯಲ್ಲಿದ್ದ ಶೇ. 99ರಷ್ಟು ಜನ ತದಡಿ ಬಂದರು ಬೇಕೇಬೇಕು ಎಂದು ಒಕ್ಕೊರಲಲ್ಲಿ ಹೇಳಿದರು. ಇಂಥದೊಂದು ಬಂದರು ಪರ ಸನ್ನಿವೇಶ ತದಡಿ ಸೀಮೆಯಲ್ಲಿ ಹೆಪ್ಪುಗಟ್ಟಿರುವುದು ಮೂರ್‍ನಾಲ್ಕು ವಾರದ ಮೊದಲೇ ಇಲ್ಲಿಗೆ ವಕ್ಕರಿಸಿದ್ದ ಢೋಂಗಿ ಪರಿಸರವಾದಿಗಳಿಗೆ ಗೊತ್ತಾಗಿತ್ತು.

ಹೀಗಾಗಿ ಈ ಅಷಾಢಭೂತಿ ಗುಣಧರ್ಮದ ಪರಿಸರ ಪ್ರಭೃತಿಯೊಬ್ಬನೂ ತದಡಿ ಬಂದರು ಅಹವಾಲು ಸಭೆಯತ್ತ ತಲೆಯೇ ಹಾಕಲಿಲ್ಲ, ಇಡೀ ಜಿಲ್ಲೆಯ ಪರಿಸರ ಗುತ್ತಿಗೆ ಹಿಡಿದಂತೆ ತುಂಡುಗುಪ್ಪಳ ಹೊಡೆಯುವ ಅನಂತ ಹೆಗಡೆ ಆಶೀಸರ, ಪಾಂಡುರಂಗ ಹೆಗಡೆ, ನಾಗೇಶ್ ಹೆಗಡೆ ವಗೈರೆ ವಿಪ್ರೋತ್ತಮರ ಪಾರಮ್ಯದ ಪರಿಸರ ಪಿರಿಪಿರಿಗಾರ ಟೀಮು ಅಹವಾಲು ಸಭೆಗೆ ಬರದೇ ತಲೆ ತಪ್ಪಿಸಿಕೊಂಡಿತ್ತು. ಈ 'ಶಿರಸಿ ಪರಿಸರ ಹೆಡ್‌ಕ್ವಾಟರ್ಸ್'ನ ಓರಾಟಗಾರರು ಬೆಂಗಳೂರು, ಕಾರವಾರ ಕಡೆಯ ಪರಿಸರ ವಿಜ್ಞಾನಿಗಳಾದ ಒಂದಿಬ್ಬರನ್ನು ಕಳಿಸಿತ್ತು, ಈ 'ಜ್ಞಾನಿ'ಗಳು ಮೊದಮೊದಲು ಪರಿಸರ ಹಾನಿಯ ಬಗ್ಗೆ ಒಂದಿಷ್ಟು ಹುಸಿ ವೇದಾಂತ ಹೇಳಿದರು. ಜನ ತಿರುಗಿಬಿದ್ದಾಗ ಯೋಜನೆಯ ಪರವಾಗೇ ವಾದ ಮಂಡಿಸಿ ಬಚಾವಾಗಿ ಹೋದರು. ಇಂಥ ಕಡೆ ಬಂದು ಪರಿಸರ ಪ್ರದರ್ಶನ ಮಾಡುವ ತಾಕತ್ತು ಕುತಂತ್ರಗಾರಿಕೆಯಿಂದ ಕಾರ್ಯ ಸಾಧಿಸುವ ಅನಂತ ಹೆಗಡೆಯ ಗ್ಯಾಂಗಿಗೆ ಅದೆಲ್ಲಿಂದ ಬರಬೇಕು?!


ಅಹವಾಲು ಸಭೆಯ ಉದ್ದಕ್ಕೂ ಶಿರಸಿ ಮೂಲದ ಮೇಲುವರ್ಗದ ಪರಿಸರವಾದಿಗಳ ವಿರುದ್ಧ ಜನಾಕ್ರೋಶ ವ್ಯಕ್ತವಾಯಿತು. ಕರಾವಳಿಯವರ್‍ಯಾರೂ ಈ ಯೋಜನೆ ವಿರೋಧಿಸುತ್ತಿಲ್ಲ, ಘಟ್ಟದ ಮೇಲಿನ ಒಂದಿಷ್ಟು ಮಾಣಿಗಳ ತಂಡ ಕರಾವಳಿಯ ಎಲ್ಲ ಯೋಜನೆಗಳಿಗೂ ಅಡೆತಡೆಯೊಡ್ಡುತ್ತಿದೆ. ಈ ಪರಿಸರ ವ್ಯಾಧಿಗಳೆಲ್ಲ ನಿರುದ್ಯೋಗಿಗಳು. ಪರಿಸರದ ಹೆಸರಿನ ನಕಲಿ ಓರಾಟವೇ ಇವರಿಗೆಲ್ಲ ವೃತ್ತಿ; ಯಾವ ಯೋಜನೆ ಬಂದರೂ ಅಪಸ್ವರ ಹೊರಡಿಸುವುದೇ ಈ ಮಂದಿಗೆ ಚಟವಾಗಿದೆ ಎಂಬುದು ಅಹವಾಲು ಸಭೆಯಲ್ಲಿ ಸೇರಿದ್ದ ಜನರ ಒಟ್ಟಾಭಿಪ್ರಾಯವಾಗಿತ್ತು.

ಶಿರಸಿ ಕಡೆಯ ಪರಿಸರ ಪ್ರವೀಣರೆಂದರೆ ಒಂಥರಾ ಅಸಹ್ಯ ಅನುಮಾನ ಜನರಲ್ಲಿ ಮೂಡುವಂತಾಗಿದೆ. ಕರಾವಳಿಯ ಎಲ್ಲ ಯೋಜನೆಗಳಿಗೆ ಕಲ್ಲು ಹಾಕುವ ಈ ಹುಸಿ ಹಸಿರು ಸೈನಿಕರು ತಮಗೆ ಬೇಕಾದ ಶಿರಸಿ-ಹಾವೇರಿ ರೈಲು ಮಾರ್ಗ ಮತ್ತು ತಾಳಗುಪ್ಪಾ-ಸಿದ್ದಾಪುರ ರೈಲು ಯೋಜನೆಯಿಂದ ಪರಿಸರ-ಅರಣ್ಯ ಹಾಳಾದರೂ ಉಸಿರೆತ್ತಲಾರರು. ಆದರೆ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ ತಡೆ ಹಾಕಲು ಏನೇನು ಸಾಧ್ಯವೋ ಅದೆಲ್ಲ ಈ ಪರಿಸರ ವ್ಯಾಧಿಗಳು ಮಾಡುತ್ತಿದ್ದಾರೆ. ಒಂದು ಎಕರೆ ಅಡಿಕೆ ತೋಟಕ್ಕೆ ಇವರ ಕುಲಬಾಂಧವರು 10 ಎಕರೆ ಅರಣ್ಯ ಹಾಳು ಮಾಡುತ್ತಿದ್ದರೂ ಕಂಡೂಕಾಣದಂತಿದ್ದಾರೆ. ಬಳ್ಳಾರಿಯಿಂದ ಬರುತ್ತಿದ್ದ ಅದಿರು ಲಾರಿಗಳು 15 ಸಾವಿರಕ್ಕಿಂತ ಹೆಚ್ಚು ಮಂದಿಗೆ ಹೃದ್ರೋಗ ಅಂಟಿಸಿದಾಗಲೂ ಈ ಪರಿಸರ ಪಂಡಿತರು ಮಾತೇ ಆಡಲಿಲ್ಲ. ಗಣಿ ಝಣಝಣದ ಲೀಲೆ ಹಾಗಿತ್ತು!

ಜಿಲ್ಲೆಯಲ್ಲಿದ್ದ ಶೇ. 80ರಷ್ಟು ಅರಣ್ಯ ಈಗ ಅರ್ಧಕ್ಕರ್ಧವೂ ಇಲ್ಲ, ಇದಕ್ಕೆ ಯೋಜನೆಗಳು ಕಾರಣವಲ್ಲ, ಮೇಲು ವರ್ಗದ ತೋಟ ಪಟ್ಟಿಗೆ, ಅನಂತ ಹೆಗಡೆ, ಆಶೀಸರನಂಥ ಢೋಂಗಿ ಪರಿಸರವಾದಿಯ ಅಕ್ರಮ ಕಬಳಿಕೆಗೆ ಅರಣ್ಯ ಬಲಿಯಾಗಿ ಕರಗಿದೆ!! ಅರಣ್ಯಾಧಿಕಾರಿ-ರಾಜಕಾರಣಿಗಳೂ ಕಾಡು ಕಳ್ಳ ಸಾಗಾಣಿಕೆ ಮಾಡಿ ದುಂಡಗಾದ ಅದೆಷ್ಟೋ ಉದಾಹರಣೆ ಜಿಲ್ಲೆಯ ಜನರ ಕಣ್ಮುಂದಿದೆ. ಪರಿಸರ ಸಂರಕ್ಷಣೆ ಹೆಸರಲ್ಲಿ ವಿದೇಶದಿಂದ ಹಣ ತರುವ ಕಳ್ಳ ದಂಧೆಗಾಗಿ ಪರಿಸರ ವೇಷ ಧರಿಸಿರುವ ಪಂಡಿತರ ದೊಡ್ಡ ದಂಡೇ ಇಲ್ಲಿದೆ. ಇವತ್ತು ಉತ್ತರ ಕನ್ನಡ ಶತಮಾನದಷ್ಟು ಹಿಂದುಳಿಯಲು, ಅಕ್ಕ-ಪಕ್ಕದ ಜಿಲ್ಲೆಯ ಆರ್ಥಿಕತೆ ಜತೆ ಪೈಪೋಟಿಗಿಳಿಯದ ಹೈರಾಣ ಸ್ಥಿತಿಗಿಳಿಯಲು ಈ ಪರಿಸರ ಪ್ರಭೃತಿಗಳೇ ಕಾರಣ. ದೊಡ್ಡ ದುರಂತವೆಂದರೆ, ಜಾತಿರಾಜಕಾರಣ, ಧರ್ಮಕಾರಣದ ಕಾರಣಕ್ಕೆ ಸೋಗಲಾಡಿ ಸಂಸದ ಅನಂತಕುಮಾರ ಹೆಗಡೆ, ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಥರದ ಜವಿವಾರ ಜನ ನಾಯಕರು ಭೋಗಸ್ ಪರಿಸರ ಪಟಾಲಮ್ ಹಿಂದೆ ನಿಂತು ಸಹಕಾರ ನೀಡುತ್ತಿದ್ದಾರೆ!!


ಕಾಗೇರಿ-ಎಮ್ಮೆಲ್ಲೆ

ಹೆಚ್ಚಿದ ಜನಸಂಖ್ಯೆಗೆ ತಕ್ಕಂತೆ ಸರ್ಕಾರ ಪರ್‍ಯಾಯ ಉದ್ಯೋಗ ಜಿಲ್ಲೆಯ ಜನರಿಗೆ ಒದಗಿಸುವ ಯೋಜನೆ-ಯೋಚನೆ ಮಾಡಲೇ ಇಲ್ಲ, ಹೀಗಾಗಿ ಕಳೆದ ಅರ್ಧ ಶತಮಾನದಲ್ಲಿ ಕಲಿತವರು ಹೊಟ್ಟೆಪಾಡಿಗಾಗಿ ಊರು ಬಿಟ್ಟರು; ಇಲ್ಲೇ ಉಳಿಯಬೇಕಾದ ಅನಿವಾರ್ಯತೆಗೆ ಸಿಲುಕಿದವರು ಅರಣ್ಯ ಅತಿಕ್ರಮಿಸಿ ಬೆಳೆ ತೆಗೆದು ಬದುಕಿದರು. ಇಂಥ ಅತಿಕ್ರಮಣದಾರ ಒಕ್ಕಲೆಬ್ಬಿಸಲು ಸರ್ಕಾರ ಯೋಚಿಸುತ್ತಿದೆ. ಅಕ್ಕ-ಪಕ್ಕದ ಜಿಲ್ಲೆಯಲ್ಲಿ ಬದಲಿ ಉದ್ಯೋಗ ಕಲ್ಪಿಸಿದಂತೆ ಉತ್ತರ ಕನ್ನಡದಲ್ಲೂ ಆಗಿದ್ದರೆ ಇಂಥ ಅಭದ್ರತೆ-ಅನಿಶ್ಚಿತತೆ ಆಗುತ್ತಿರಲಿಲ್ಲ. ಈ ದುರಂತಕ್ಕೆ


ಅನಂತ ಹೆಗಡೆ ಆಶೀಸರ-ಮಾಜಿ ಅಧ್ಯಕ್ಷ-ಪಶ್ಚಿಮ ಘಟ್ಟ ಕಾರ್ಯಪಡೆ

ಜಿಲ್ಲೆ ಆಳಿದ ಷಡಪ್ಪೋಸಿ ರಾಜಕಾರಣಿಗಳಷ್ಟೇ ಹೊಣೆ ಪರಿಸರ ಗುತ್ತಿಗೆ ಹಿಡಿದಿರುವ ಬಂಡಲ್ ಪರಿಸರವಾದಿಗಳು. 40 ವರ್ಷದಿಂದ ಪರಿಸರವಾದಿಗಳು ನಡೆಸಿದ ಯೋಜನಾ ವಿರೋಧಿ-ಅಭಿವೃದ್ಧಿ ವಿರೋಧಿ ಹೋರಾಟದಿಂದಾಗಿ ಜಿಲ್ಲೆಯ ಪ್ರತಿಭೆಗಳು ಪಲಾಯನ ಮಾಡಿದವು; ಊರು ಬರಡಾಗಿ ಉಳಿದವರ ಬದುಕು ಬವಣೆಯಾಯ್ತು!!

ಈಗ ಪರಿಸರ ಪಂಡಿತರ ಬಂಡವಾಳ ಜಿಲ್ಲೆಯ ಜನರಿಗೆ ಅರ್ಥವಾಗುತ್ತಿದೆ. ಈ ದಗಲುಬಾಜಿಗಳು ಹೇಳೋದು ಒಂದು; ಮಾಡೋದು ಮತ್ತೊಂದು ಎಂಬುದು ಸಾಕ್ಷಾಧಾರ ಸಮೇತ ಸಾಬೀತಾಗಿದೆ. ಸ್ವಜಾತಿ ಬ್ರಾಹ್ಮಣರಿಗೆ ಲಾಭವಾಗುತ್ತದೆಂದರೆ ಈ ಪರಿಸರ ಸರದಾರರು ಪರಿಸರ-ಅರಣ್ಯ-ನೆಲೆ-ಜಲ ಅಪ್ಪೋಷನಕ್ಕೂ ಹೇಸುವುದಿಲ್ಲ ಎಂಬುದು ಜಿಲ್ಲೆಯ ಅಬ್ರಾಹ್ಮಣರಿಗೀಗ ಖಾತ್ರಿಯಾಗಿದೆ. ಹೀಗಾಗಿ ಪರಿಸರವಾದಿಗಳ ಮಾತು ಜನ ನಂಬುವ ಸ್ಥಿತಿಯಲ್ಲಿಲ್ಲ. ಜಿಲ್ಲೆಯ ಇತಿಹಾಸದಲ್ಲೇ ಪ್ರಥಮ ಬಾರಿಗೆ ಪರಿಸರ ಪ್ರಹಸನಕಾರರಿಗೆ ಧಿಕ್ಕಾರದ ಕೂಗು ತದಡಿ ಸೀಮೆಯಲ್ಲಿ ಮೊಳಗಿದೆ. ನಿರುದ್ಯೋಗ ನಿವಾರಣೆ ಮಾಡುವ ತದಡಿ ಬೃಹತ್ ಬಂದರಿನ ಪರ ನಿಂತು ಜನ ಪರಿಸರ ಕ್ಯಾತೆದಾರರಿಗೆ ಕ್ಯಾಕರಿಸಿ ಉಗಿಯುತ್ತಿದ್ದಾರೆ. ಖುದ್ದು ಜನರೇ ಮುಂದೆ ನಿಂತು ಬಂದರು ಯೋಜನೆಗೆ ಸ್ವಾಗತ ಕೋರುತ್ತಿದ್ದಾರೆ.

ಜನರ ಬದುಕಿನೊಂದಿಗೆ ಚೆಲ್ಲಾಟವಾಡುತ್ತ ಲ[...] ಮಾಡಿಕೊಳ್ಳುತ್ತಿರುವ ಎಡಬಿಡಂಗಿ ಪರಿಸರವ್ಯಾಧಿಗ[...] ಇನ್ನಾದರೂ ಜಿಲ್ಲೆಯನ್ನು ಕಾಡುವುದು ನಿಲ್ಲಿಸುವ[...] ಇಲ್ಲದಿದ್ದರೆ ಜನರೇ ಪಕ್ಕಾ ಪರಿಸರ ಪಾಠ ಕಲಿಸೋ[...] ಗ್ಯಾರಂಟಿ!!

■ ನಹು


ನಾಗೇಶ್ ಹೆಗಡೆ ಉವಾಚಂ!!

ಶಿರಸಿ-ಸಿದ್ದಾಪುರ ಸೀಮೆಯ ಮೂಲದ ನಾಗೇ[...] ಹೆಗಡೆ ಪ್ರಸಿದ್ಧ ಪರಿಸರ ಹೋರಾಟಗಾರ. ಇವರು ನಂದಿ[...] ಮಾರ್ಕಿನ ದಿನಪತ್ರಿಕೆಯಲ್ಲಿ ವಿಜ್ಞಾನ ಅಂಕಣ ಬರೆಯುತ್ತಾರೆ[...] ಕೆಲವು ದಿನಗಳ ಹಿಂದೆ ಹೆಗಡೆಜೀ ತದ[...] ಬಂದರಿನಿಂದಾಗುವ ಪಾರಸರಿಕ-ಸಾಮಾಜಿಕ-ಆರ್ಥಿ[...] ವಿಪ್ಲವಗಳ ಬಗ್ಗೆ ಬರೆದಿದ್ದಾರೆ. ತದಡಿ ಬಂದರಿಗೆ ವಿರೋಧ[...] ವ್ಯಕ್ತಪಡಿಸಿದ್ದಾರೆ. ಅದು ಅವರ ಅಭಿವ್ಯಕ್ತಿ ಸ್ವಾತಂತ್ರ್ಯ[...] ಹಕ್ಕು. ಆದರೆ ತದಡಿ ಬಂದರು ಸ್ಥಾಪನೆ ತಡೆಗಟ್ಟು[...] ಭರದಲ್ಲಿ ಆತ ಕಡಲ ತಡಿಯ ತಳ ಸಮುದಾಯ[...] ಮೀನುಗಾರ ಮಹಿಳೆಯರ ಶೀಲವನ್ನೇ ಶಂಕಿಸಿದ್ದಾರೆ; ಸದಾ[...] ನೈತಿಕತೆಯ ಹೆಂಗಸರೆಂಬಂತೆ ಬಿಂಬಿಸಿದ್ದಾರೆ.

ಇದು ಅಕ್ಷಮ್ಯ; ಶ್ರಮ ಸಂಸ್ಕೃತಿಯ ಬಡವರಾದಕ್ಷ[...] ನೈತಿಕತೆ ಇಲ್ಲದವೆಂದು ಅನುಮಾನಿಸುವುದಿದೆಯಲ್ಲ ಅದು[...] ಪುರೋಹಿತಶಾಹಿ ಪೊಗರು! ವಿಶ್ವದ ಹಲವ[...] ಹಡಗುಕಟ್ಟೆಗಳು ವೇಶ್ಯಾವಾಟಿಕೆ ತಾಣವಾಗಿದ್ದವೆಂದು[...] ವಿವರಿಸುವ ಹೆಗಡೆಜೀ ತದಡಿಯೂ ಮೀನುಗಾ[...] ಮಹಿಳೆಯರ ಮೈಮಾರುವ ಕೇಂದ್ರ ಆಗುವ ಅನುಮಾ[...] ವ್ಯಕ್ತಪಡಿಸಿದ್ದಾರೆ. ಕಡಲಂಚಿನ ಮೀನುಗಾರ ಗಂಡಸ[...] ವಾರಗಟ್ಟಲೆ ಮೀನಿನ ಬೇಟೆಗೆ ಸಮುದ್ರದ[...] ಉಳಿವಂತಾದಾಗ ಮನೆ ಖರ್ಚಿಗೆಂದು ಮೀನುಗಾ[...] ಹೆಂಗಸರು ಹಡಗು ಸಿಬ್ಬಂದಿಗೆ ಮೈ ಮಾರಾ[...] ಮಾಡುತ್ತಾರೆಂದು ವಿದೇಶಗಳ ಕತೆ ಹೇಳಿದ್ದಾರೆ.

ಹಾಗಂತ ಭಾರತದ ಯಾವ ಹಡಗು ಕಟ್ಟೆಯಲ[...] ಹೀಗಾದ ಉದಾಹರಣೆ ಆತ ಕೊಟ್ಟಿಲ್ಲ. ಭಾರತದ ಬೇ[...] ಬೇರೆ ಬಂದರುಗಳಲ್ಲಿ ಆಗದ್ದು ತದಡಿಯಲ್ಲಾಗಲಿದೆ ಎಂ[...] ಹೆಗಡೆಜೀ ದಿವ್ಯದೃಷ್ಟಿಗೆ ಹೊಳೆದಿರುವುದು ಉತ್ತರ ಕನ್ನಡ[...] ಮೀನುಗಾರ ಸಂಕುಲವನ್ನು ಕೆರಳಿಸಿಬಿಟ್ಟಿದೆ. ಮೀನುಗ[...] ಸಂಘಟನೆಗಳು ಬೆಸ್ತ ಮಹಿಳೆಯರ ಚಾರಿತ್ರ್ಯ ಹನನ[...] ವಿರುದ್ಧ ಪ್ರತಿಭಟಿಸಿದ್ದಾರೆ. ಬೀದಿಗಿಳಿವ ತಯಾರಿಯಲ್ಲಿದ್ದಾ[...]

ನಾಗೇಶ ಹೆಗಡೆಯಂಥ 'ವಿಜ್ಞಾನಿ'ಯ ಈ ಸಣ್ಣ 'ಜ್ಞಾ[...] ಮೀನುಗಾರರನ್ನು ಘಾಸಿಗೊಳಿಸಿದೆ; ಮೇಲುವರ್ಗದ ಪರಿ[...] ವ್ಯಾಧಿಗಳ ತಾರೀಫು ಮಾಡುವ ಶೈಲಿಯ ಲೇಖನ[...] ಕೆಳವರ್ಗದ ಹೆಂಗಸರ ಪಾತಿವ್ರತ್ಯದ ಬಗ್ಗೆ ಪ್ರಶ್ನೆಗಳನ್ನಿ[...] ಏನಾಗುತ್ತದೆ? ಯಾವ ಸಂದೇಶ ರವಾನೆಯಾಗುತ್ತದೆ? ಇ[...] ನಾಗೇಶ ಹೆಗಡೆಯಂಥ ಪರಿಸರ ಕಳಕಳಿಯ ಲೇಖಕ[...] ಹೊಳೆಯದಿರುವುದು ದುರಂತ!!







ಮಂಡ್ಯ: ಅಂಬಿ-ಕುಮ್ಮಿ ಜೋಡಿಗೆ ಮುಖಭಂಗ

ಮಂಡ್ಯ ನಗರಸಭೆ ಅಧ್ಯಕ್ಷ ಕುರ್ಚಿಗೆ ಸಿದ್ದರಾಜು
ದುಡ್ಡಿನ ಕುಳ ಫೆವಿಕಾಲ್ ಅಂಟಿಸಿಕೊಂಡು
ರೇಕು. ಇಲ್ಲದಿದ್ದಲ್ಲಿ ಪಕ್ಷೇತರ ಅಭ್ಯರ್ಥಿಯಾದಂತವನು
ನ ಅಂಬಿ ಮತ್ತು ಜೆಡಿಎಸ್ ಕುಮ್ಮಿಯ ಕಾಲೆಳೆತಕ್ಕೂ
ಅಧ್ಯಕ್ಷಗಾದಿಗೆ ಅಂಟಿಕೊಳ್ಳಲು ಸಾಧ್ಯವಿತ್ತೆ, ಅಸಲಿಗೆ
ಜುವನ್ನು ನಗರಸಭೆ ಅಧ್ಯಕ್ಷನನ್ನಾಗಿಸಿದ್ದೇ ಅವನ
ಈಗ ಅವನನ್ನು ಬಚಾಯಿಸಲು ಕೂಡಾ ಅದೇ
ಮಂಡ್ಯದಲ್ಲಿ ದರ್ಬಾರು ನಡೆಸುತ್ತಿದೆ. ಹಾಗಾಗಿಯೇ
-ಜೆಡಿಎಸ್‌ನ ಜಂಟಿ ಆಪರೇಷನ್ನು ಮೊನ್ನೆ
ಮ್ಮ ಠುಸ್ ಎಂದದ್ದು. ಮಾರ್ಚ್ 31ರಂದು
ಮಂಡಿಸುವ ಬಜೆಟ್ ಸಭೆಗೆ ಗೈರುಹಾಜರಾಗುವ
ಕೋರಂ ಕೊರತೆ ಮಾಡಿ ಮುಖಭಂಗ

ಕಾಂಗ್ರೆಸ್ ಪಕ್ಷಕ್ಕೆ ತಾನು ಬೆಂಬಲಿಸುವುದಿಲ್ಲ ಎಂಬುದಾಗಿ ಜಫ್ರುಲ್ಲಾಖಾನ್ ಪಕ್ಷನಿಷ್ಠೆಯಿಂದಲೇ ಕುಮಾರಸ್ವಾಮಿ ಮುಖಕ್ಕೆ ಹೊಡೆದಂತೆ ಹೇಳಿದ್ದರು. ಕಚೇರಿ ವಿಷಯಕ್ಕೂ, ಸಿದ್ದರಾಜು ವಿಷಯಕ್ಕೂ ಯಾಕೆ ಲಿಂಕ್ ಮಾಡ್ತೀರಾ ಅದೇ ಬೇರೆ ಇದೇಬೇರೆ ಎಂಬರ್ಥದ ತಮ್ಮ ಅವಕಾಶವಾದಿ ರಾಜಕಾರಣವನ್ನು ಬೋಧಿಸಿದ ಕುಮ್ಮಿ ವಿಷಯವನ್ನು ಸೀರಿಯಸ್ಸಾಗಿ ತೆಗೆದುಕೊಂಡಿರಲಿಲ್ಲ, ಅದೇನು ಪಕ್ಷ ನಿಷ್ಠೆಯೋ ಅಥವಾ ಸಿದ್ದರಾಜುನ 'ಮನಿ' ನಿಷ್ಠೆಯೋ ಗೊತ್ತಿಲ್ಲ ಮಧ್ಯರಾತ್ರಿ 2 ಗಂಟೆಗೆ ಜೆಡಿಎಸ್ ಸದಸ್ಯರಾದ ಮಹೇಶ್ ಕೃಷ್ಣ ಸುನೀತಾ ರವೀಂದ್ರರಿಗೆ ಕರೆ ಮಾಡಿದ ಜಫ್ರುಲ್ಲಾಖಾನ್ ಸಿದ್ದರಾಜುಗೆ ಬೆಂಬಲ ನೀಡುವಂತೆ ಹೇಳಿದ್ದರು. ಆದರೆ ಅವರೆಲ್ಲಾ ಕುಮಾರಸ್ವಾಮಿ ಹೇಳಿದಂತೆ ಕೇಳುವುದಾಗಿ ಹೇಳಿ ಫೋನಿಟ್ಟಿದ್ದರು.




ಕುಮಾರಸ್ವಾಮಿ ಬೆಂಬಲವನ್ನು ಕೇಳುತ್ತಿರುವ ಅಮರಾವತಿ ಚಂದ್ರಶೇಖರ್


ಕೇಕೆನ್ನುವುದು ಕಾಂಗ್ರೆಸ್- ಜೆಡಿಎಸ್‌ನ ಸ್ಕೆಚ್ ಆಗಿತ್ತು.
ಅದು ತಿರುಗುಬಾಣವಾಗಿ ಜಿಲ್ಲಾ ಉಸ್ತುವಾರಿ
ಅಂಬರೀಶ್ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ
ಡಿ.ಕುಮಾರಸ್ವಾಮಿಗೇ ಗರ್ವಭಂಗ ತಂದೊಡ್ಡಿದೆ.
ಶಾಸಕ ಎಂ. ಶ್ರೀನಿವಾಸ್‌ಗೆ ಸಿದ್ದರಾಜು ಅದೇನು
ಮಾಡಿದನೋ ಗೊತ್ತಿಲ್ಲ; ಜೆಡಿಎಸ್ ವರಿಷ್ಠ
ಡಿ.ಕುಮಾರಸ್ವಾಮಿ, ಚಲುವರಾಯಸ್ವಾಮಿ ಹಾಗೂ
ಸಿ.ಎಸ್.ಪುಟ್ಟರಾಜು ಮಾತನ್ನೇ ಧಿಕ್ಕರಿಸಿದ
ವಾಸ್ ತನ್ನ ಐವರು ಬೆಂಬಲಿಗ ನಗರಸಭಾ ಸದಸ್ಯರನ್ನು
ಪು ತೆಕ್ಕೆಗೆ ಹಾಕಿಕೊಟ್ಟು ಬಜೆಟ್ ಸಭೆಗೆ ಕೋರಂ
ತೆ ಮಾಡಿದ್ದಲ್ಲದೆ ತಾನು 2 ಬಾರಿ ಶಾಸಕನಾಗಲು
ರಾಗಿದ್ದ ಜೆಡಿಎಸ್ ಪಕ್ಷಕ್ಕೆ ಹಾಗೂ ಆ ಪಕ್ಷದ
ಗೆ ಭರ್ಜರಿಯಾಗಿ ಕೈ ಕೊಟ್ಟಿದ್ದಾರೆ.

ಬಜೆಟ್ ಸಭೆ ಯಶಸ್ವಿ

ಬಿ ಬಣ ಕಳೆದ ನಾಲ್ಕು ತಿಂಗಳಿನಿಂದ
ಜುನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ತಿಪ್ಪರಲಾಗ
ತ್ತಿದ್ದರೂ ಅದು ಸಾಧ್ಯವಾಗುತ್ತಿಲ್ಲ. ಅಂಬಿಯ ಕಟ್ಟಾ
ಗ ಅಮರಾವತಿ ಚಂದ್ರಶೇಖರನೇ ಈ ಕೃತ್ಯದ
ಹಿಡಿದು ಚಡಪಡಿಸುತ್ತಿದ್ದರೂ ಸಿದ್ದರಾಜುನ
ದರ್ 'ಮನಿ' ಮುಂದೆ ಇವರ ಆಟ ನಡೆಯುತ್ತಿಲ್ಲ.
ಮಾರ್ಚ್ 31ರಂದು ಬಜೆಟ್ ಮಂಡಿಸುವುದು
ಗುತ್ತಿದ್ದಂತೆಯೇ ಮಗದೊಮ್ಮೆ ಬ್ಯಾಟ್ ಬೀಸಲು
ಅಮರಾವತಿ ಚಂದ್ರ ಈ ಬಾರಿ ಹೇಗಾದರೂ
ಸಿದ್ದರಾಜುಗೆ ಗೇಟ್‌ಪಾಸ್ ಕೊಟ್ಟೇ ತೀರಬೇಕೆಂದು
ದ್ದಿದ್ದ, ಸಭೆಗೂ ಹಿಂದಿನ ದಿನ ವಿಧಾನಸೌಧಕ್ಕೆ
ಮಿಸಿದ ಚಂದ್ರ ಜೆಡಿಎಸ್‌ನ ಜಂಟಿ 'ಸ್ವಾಮಿ'ಗಳನ್ನು
ಹೆಚ್.ಡಿ. ಕುಮಾರಸ್ವಾಮಿ, ಮತ್ತೊಬ್ಬರು
ರಾಯಸ್ವಾಮಿ) ಭೇಟಿ ಮಾಡಿ ತಮ್ಮ ಪಕ್ಷದ 9
ಸದಸ್ಯರು ಸಭೆಗೆ ಹಾಜರಾಗದಂತೆ ನೋಡಿಕೊಳ್ಳ
ಮ ಸಹಕಾರ ಕೋರಿದ್ದ, ಸ್ವಾಮಿಗಳೂ ಅದಕ್ಕೆ
ಎಂದಿದ್ದರು. ಹೋಗುವಾಗ ತನ್ನ ಜೊತೆಗೇ
ರ್ ಮಾಡಿ ಹೊತ್ತೊಯ್ದಿದ್ದ ಜೆಡಿಎಸ್ ಸದಸ್ಯರಾದ
ಚಿಕ್ಕಣ್ಣ, ಸುನೀತಾ ರವೀಂದ್ರ, ಮಹೇಶ್‌ಕೃಷ್ಣ
ರು ಸೋಮಶೇಖರ, ಪಕ್ಷೇತರ ಸದಸ್ಯ ಕೆ.ಸಿ.ರವೀಂದ್ರ
ಶಿಧರ್ ಮೊದಲಾದವರಿಗೆ ಸ್ವತಃ ಕುಮಾರಸ್ವಾಮಿ
ಸಭೆಗೆ ಹಾಜರಾಗದಂತೆ ಉಪದೇಶ ನೀಡಿಸುವಲ್ಲಿ
ಯಶಸ್ವಿಯಾಗಿದ್ದ, ಜೊತೆಗೆ ಈ ನಿಯೋಗದೊಟ್ಟಿಗೆ
ಗದ ಮಧುಶ್ರೀ, ಬೋರೇಗೌಡ, ಶಿವರತ್ನ,
ಪಿಂದ್.. ಸುಮಿತ್ರರವರಿಗೆ ಫೋನ್ ಮಾಡಿ ಸಭೆಗೆ
ತೆ ಕುಮಾರಸ್ವಾಮಿ ತಾಕೀತು ಮಾಡಿದ್ದರು. ಜೆಡಿಎಸ್
ರು ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾಖಾನ್‌ಗೂ
ಯಿಸಿದ್ದ ಕುಮ್ಮಿ 'ನಿಮ್ಮ ಬೆಂಬಲಿಗ ಮುಜಾಹಿದ್
ಸಭೆಗೆ ಹೋಗದಂತೆ ನೀವೂ ಒಂದು ಮಾತು
ರಿ' ಅಂತ ಫರ್ಮಾನು ಹೊರಡಿಸಿದ್ದರು. ಆದರೆ
ರಿಸಿದ ಜೆಡಿಎಸ್ ಕಚೇರಿಯನ್ನು ಕಿತ್ತುಕೊಂಡ

ರಾತ್ರೋರಾತ್ರಿ ಅದೇನು ಪವಾಡ ನಡೆಯಿತೊ, ಕುಮ್ಮಿಯ ಮುಂದೆ ಹೇಳಿದ್ದಕ್ಕೆಲ್ಲ 'ಹ್ಞೂಂ'ಗುಟ್ಟಿದ್ದ ಜೆಡಿಎಸ್ ಸದಸ್ಯರಲ್ಲಿ ಐದು ಮಂದಿ ಸಿದ್ದರಾಜು ಪಕ್ಕ ಹಲ್ಲು ಕಿಸಿಯುತ್ತಾ ನಿಂತು ಸಭೆ ಯಶಸ್ವಿಯಾಗುವಂತೆ ಮಾಡಿದರು. ಇದು ತಿಳಿಯುತ್ತಿದ್ದಂತೆಯೇ ಅಂಬಿ ಮತ್ತು ಕುಮ್ಮಿ ಇಬ್ಬರೂ ಸಿದ್ದರಾಜು ಮೇಲೆ ಮತ್ತಷ್ಟು ಗರಂ ಆಗಿದ್ದಾರೆ.

ಎಂ.ಶ್ರೀನಿವಾಸ್ ಕೃಪಾಕಟಾಕ್ಷ


ಶಾಸಕ ಎಂ.ಶ್ರೀನಿವಾಸ್

ಸಿದ್ದರಾಜು ಜೊತೆ ಜೆಡಿಎಸ್ ಮಾಜಿ ಶಾಸಕ ಶ್ರೀನಿವಾಸ್ ಕಳೆದ ಕೆಲ ತಿಂಗಳಿನಿಂದ ಒಳ್ಳೆಯ ಒಡನಾಟ ಇಟ್ಟುಕೊಂಡಿದ್ದಾರೆ. ಇದರ ಫಲವಾಗಿ ಹಿಂದೊಮ್ಮೆ, ಸಿದ್ದರಾಜು ಪದಚ್ಯುತಿಗೊಳಿಸುವ ಸಂದರ್ಭ ಬಂದರೆ ಜೆಡಿಎಸ್ ಸದಸ್ಯರೆಲ್ಲ ಸಿದ್ದರಾಜುಗೆ ಸಹಕಾರ ನೀಡಬೇಕೆಂದು ಶ್ರೀನಿವಾಸ್ ಸೂಚಿಸಿದ್ದರು. ಆಗ ಎಂ.ಜೆ.ಚಿಕ್ಕಣ್ಣ ಮಹೇಶ್ ಕೃಷ್ಣ ಸುನೀತಾ ರವೀಂದ್ರರಿಗೆ ಸಿದ್ದರಾಜು ಪರ ನಿಲ್ಲುವುದು ಇಷ್ಟವಿರಲಿಲ್ಲವಾದ್ದರಿಂದ ಅವರೆಲ್ಲ ಕುಮಾರಸ್ವಾಮಿ ಹಾಗೂ ಚಲುವರಾಯಸ್ವಾಮಿ ಹೇಳಿದಂತೆ ಮಾಡುವುದಾಗಿ ಶ್ರೀನಿವಾಸ್ ಮುಖಕ್ಕೆ ಹೊಡೆದಂತೆ ಹೇಳಿ ಬಂದಿದ್ದರು.

ಅದಾದ ಮೇಲೆ ಸಿದ್ದರಾಜುನನ್ನು ಕೆಳಗಿಳಿಸಲು ಅಮರಾವತಿ ಚಂದ್ರನ ನೇತೃತ್ವದ ಸಾತನೂರು ನಾಗ, ಪುರುಷೋತ್ತಮ, ಮೆಡ್ಡಾ ಚಂದ್ರ, ಅಂಬುಜಮ್ಮನ ಅಳಿಯ ಚಂದ್ರು ಮೊದಲಾದವರ ಟೀಮು ಪ್ರಯತ್ನ ಪಡುತ್ತಲೇ ಇತ್ತು, ಹಾಗಾಗಿ ಸಿದ್ದರಾಜು, ಈ ಬಣದ ಒಂದೊಂದು ನಡೆಯನ್ನೂ ತುಂಬಾ ಎಚ್ಚರಿಕೆಯಿಂದ ಗಮನಿಸುತ್ತ ತಂತ್ರಕ್ಕೆ ಪ್ರತಿತಂತ್ರ ರೂಪಿಸಲು ಜಾಗರೂಕನಾಗೇ ನಿಂತಿರುತ್ತಿದ್ದ. ಮೊನ್ನೆ ಕೂಡಾ ಬಜೆಟ್ ಸಭೆ ನಡೆಸಲು ಸಿದ್ದರಾಜುಗೆ ಅವಕಾಶ ಕೊಡುವುದಿಲ್ಲ ಅಂತ ಅಮರಾವತಿ ಚಂದ್ರ ಹೇಳಿಕೊಂಡು ತಿರುಗಾಡುತ್ತಿದ್ದನ್ನು ಗಮನಿಸಿದ ಸಿದ್ದರಾಜು ಕಳೆದ ಭಾನುವಾರ ರಾತ್ರಿ ಪ್ರವಾಸಿಮಂದಿರದಲ್ಲಿ ಎಂ. ಶ್ರೀನಿವಾಸ್ ಜೊತೆ ಹಾಥ್ ಮಿಲಾಕಾತ್ ಮಾಡಿಕೊಂಡಿದ್ದ. ಸಿದ್ದರಾಜು ಕೊಟ್ಟ ಪ್ರಸಾದವನ್ನು ಕಣ್ಣಿಗೊತ್ತಿಕೊಂಡ ಶ್ರೀನಿವಾಸ್ ತನ್ನ ಬೆಂಬಲಿಗರಾದ ಬೋರೇಗೌಡ, ಸುಮಿತ್ರ, ಶಿವರತ್ನ, ಮಧುಶ್ರೀಗೆ ಸಭೆಗೆ ಹೋಗುವಂತೆ ಹುಕುಂ ಹೊರಡಿಸಿ, ತಾನು ಮಾತ್ರ ಶಬರಿಮಲೆ ಅಯ್ಯಪ್ಪಸ್ವಾಮಿ ಸನ್ನಿಧಿಗೆ ಯಾತ್ರೆ ತೆರಳಿದ್ದ.

ಮಾರ್ಚ್ 30ರಂದು ಶ್ರೀನಿವಾಸ್‌ನನ್ನು ಸಂಪರ್ಕಿಸಲು ಹೆಚ್.ಡಿ.ಕುಮಾರಸ್ವಾಮಿ ಪ್ರಯತ್ನಿಸಿದರೂ ಆತ ಕರೆಯನ್ನು ಸ್ವೀಕರಿಸಲಿಲ್ಲ. ಸ್ವಲ್ಪ ಸಮಯದ ನಂತರ ಆತನ ಮೊಬೈಲೇ ಸ್ವಿಚ್ ಆಫ್ ಆಗಿತ್ತು, ಇದಕ್ಕೂ ಮುನ್ನ ಚಲುವರಾಯಸ್ವಾಮಿ ಹಾಗೂ ಸಂಸದ ಸಿ.ಎಸ್.ಪುಟ್ಟರಾಜು ಇಬ್ಬರೂ ಬಜೆಟ್ ಸಭೆಗೆ ತನ್ನ ಬೆಂಬಲಿಗ ಸದಸ್ಯರನ್ನು ಕಳುಹಿಸದಂತೆ ಎಂ.ಶ್ರೀನಿವಾಸ್‌ರಿಗೆ ತಾಕೀತು ಮಾಡಿದ್ದರು. ಆದರೆ 'ಪ್ರಸಾದ' ಫಲಾನುಭವಿಯಾಗಿದ್ದ ಶ್ರೀನಿವಾಸ್ ಕೊನೇಗಳಿಗೆಯಲ್ಲಿ ಜೆಡಿಎಸ್ ನಾಯಕರಿಗೇ ಕೈಕೊಟ್ಟು ಸಿದ್ದರಾಜು ಪರ ತನ್ನ ಬೆಂಬಲಿಗರಿಂದ ಜೈ ಎನಿಸಿದ್ದಾನೆ.

ಮೂಲಗಳ ಪ್ರಕಾರ ಇದಕ್ಕಾಗಿ ಸಿದ್ದರಾಜು ಲಕ್ಷಾಂತರ ರೂಪಾಯಿಯನ್ನು ನೀರಿನಂತೆ ಸುರಿದಿದ್ದಾನೆ. ಜೆಡಿಎಸ್‌ನ ಪ್ರತಿ ಸದಸ್ಯರಿಗೆ ತಲಾ ಒಂದು, ಅವರ ಲೀಡರ್ ಸೀನಣ್ಣನಿಗೆ 5 ಲಕ್ಷ ಮತ್ತು ಕಾಂಗ್ರೆಸ್, ಬಿಜೆಪಿ ಹಾಗೂ ಪಕ್ಷೇತರ ಸದಸ್ಯರ ಖರೀದಿಗೆಂದೇ 20 ಲಕ್ಷ ರೂಪಾಯಿ ಚೆಲ್ಲಾಡಿದ್ದರಿಂದಲೇ ಆ ಸಭೆ ಯಶಸ್ವಿಯಾಯಿತು ಅಂತ ಬಹಿರಂಗವಾಗೆ ಚರ್ಚೆಯಾಗುತ್ತಿದೆ. ಏನೂ ಇಲ್ಲದೆ ಕುಮಾರಸ್ವಾಮಿಯ ಆದೇಶವನ್ನೇ ಧಿಕ್ಕರಿಸಲು ಎಂ.ಶ್ರೀನಿವಾಸ್‌ಗೆ ಸಾಧ್ಯವಿತ್ತೇ? ಅಂತ ಸ್ವತಃ ಜೆಡಿಎಸ್ ಕಾರ್ಯಕರ್ತರೆ ತರ್ಕಿಸುತ್ತಿದ್ದಾರೆ.

ಸಂಯುಕ್ತ ಜನಾತದಳದಿಂದ ಎರಡು ಬಾರಿ ಸ್ಪರ್ಧಿಸಿ, ಸೋತು ಬರಿಗೈ ದಾಸನಾಗಿದ್ದ ಎಂ.ಶ್ರೀನಿವಾಸ್‌ಗೆ ರಾಜಕೀಯ ಮರುಜನ್ಮ ನೀಡಿದ್ದೇ ಜೆಡಿಎಸ್ ಪಕ್ಷ. ನಂತರ ಮಂಡ್ಯ ನಗರ ವಿಧಾನಸಭಾ ಕ್ಷೇತ್ರದಿಂದ ಎರಡೆರಡು ಬಾರಿ ಗೆದ್ದು ಶಾಸಕನಾಗಿದ್ದ ಶ್ರೀನಿವಾಸ್ ಸತತ ಮೂರನೇ ಬಾರಿಗೂ ಗೆದ್ದು ಹ್ಯಾಟ್ರಿಕ್ ಸಾಧಿಸುವ ತವಕದಲ್ಲಿದ್ದ. ಆದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಅಂಬರೀಷ್ ಸ್ಪರ್ಧೆಗಿಳಿಯುವ ಸಂದರ್ಭದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ಒಳ ಒಪ್ಪಂದವೊಂದು ನಡೆದಿತ್ತು. ಅದರಂತೆ ಮಂಡ್ಯದಲ್ಲಿ ಅಂಬರೀಷ್ ಗೆಲ್ಲಲು ಜೆಡಿಎಸ್ ಸಹಾಯ ಮಾಡಬೇಕು ಮತ್ತು ಶ್ರೀರಂಗಪಟ್ಟಣದಲ್ಲಿ ಜೆಡಿಎಸ್ ಗೆಲ್ಲಲು ಕಾಂಗ್ರೆಸ್ ಸಹಾಯ ಮಾಡಬೇಕಾಗಿತ್ತು. ಆ ಕಾರಣದಿಂದ ಜೆಡಿಎಸ್ ಮಂಡ್ಯದಲ್ಲಿ ಗೆಲ್ಲುವ ಪ್ರಯತ್ನವನ್ನೇ ಮಾಡದಂತೆ ಸ್ವಯಂ ನಿರ್ಬಂಧಿಸಿಕೊಳ್ಳುವ ತೀರ್ಮಾನಕ್ಕೆ ಬಂದಿತ್ತು. ಅದರ ಬಲಿಪಶು ಆದದ್ದು ಜೆಡಿಎಸ್ ಅಭ್ಯರ್ಥಿ ಎಂ.ಶ್ರೀನಿವಾಸ್! ತನ್ನ ಹ್ಯಾಟ್ರಿಕ್ ಕನಸು ಭಗ್ನವಾಗಲು ಪಕ್ಷದ ವರಿಷ್ಠರೇ ಕಾರಣವೆನ್ನುವ ಆಕ್ರೋಶ ಶ್ರೀನಿವಾಸ್‌ಗೆ ಒಳಗೊಳಗೇ ಇದ್ದದ್ದು ಇದೀಗ ಈ ರೂಪದಲ್ಲಿ ಸೇಡು ತೀರಿಸಿಕೊಂಡಿದೆ ಎಂದೇ ಅಂದಾಜಿಸಲಾಗುತ್ತಿದೆ.


ಜೆಡಿಎಸ್ ಸದಸ್ಯರ ಜೊತೆ ನಿಂತಿರುವ ...

ಸಿದ್ದರಾಜನ ಬೋಗಸ್ ಅಭಿವೃದ್ಧಿ

ಮೈಕು ಮತ್ತು ಮಾಧ್ಯಮಗಳ ಮುಂದೆ 'ಮಂಡ್ಯ ನಗರದ ಅಭಿವೃದ್ಧಿಗೆ ನಾನು ಸಾಕಷ್ಟು ಕೆಲಸ ಮಾಡಿದ್ದರೂ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಹುನ್ನಾರ ನಡೆಸಲಾಗುತ್ತಿದೆ' ಅಂತ ಕಣ್ಣೀರುಗರೆದು ಗೋಗರೆಯುವ ಸಿದ್ದರಾಜನ ಅಭಿವೃದ್ಧಿ ಕೂಡಾ ಅವನಷ್ಟೇ ಬೋಗಸ್ ಪುರಾಣ. ಎಸ್‌ಎಫ್‌ಸಿ ಅನುದಾನ, 12 ಹಾಗೂ 13ನೇ ಹಣಕಾಸು ಯೋಜನೆಯಡಿ ನಡೆಯುವ ಕಾಮಗಾರಿ ಬಿಟ್ಟರೆ ವಿಶೇಷ ಅನುದಾನ ಅಂತ ಸಿದ್ದರಾಜು ಹೊತ್ತುತಂದದ್ದು ನಯಾಪೈಸೆಯೂ ಇಲ್ಲ. ಏನಾದರು ಒಳ್ಳೆಯ ಕಾರ್ಯಗಳು ಅಂತ ನಗರಸಭೆ ವ್ಯಾಪ್ತಿಯಲ್ಲಿ ನಡೆದಿದ್ದರೆ ಅದು ಆಯುಕ್ತ ಶಶಿಕುಮಾರ್‌ರಿಂದಾಗಿ ಮಾತ್ರ. ತೆರಿಗೆ ಸಂಗ್ರಹದಿಂದ ನಗರಸಭೆಗೆ ಕೋಟ್ಯಾಂತರ ರೂ. ಹರಿದುಬರುವ ಶಶಿಕುಮಾರ್ ಒತ್ತುವರಿಯಾಗಿದ್ದ ನಗರಸಭೆ ಜಾಗಗಳನ್ನು ತೆರವುಗೊಳಿಸಿ ರಾಜ್ಯ ಹೆದ್ದಾರಿಯ ಇಕ್ಕೆಲಗಳಲ್ಲಿ ಪಾದಚಾರಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ನಗರಸಭೆ ಕಚೇರಿಯಲ್ಲಿ ಸಿಸಿಟಿವಿ ಹಾಕಿಸುವ ಮೂಲಕ ಸಿಬ್ಬಂದಿಗಳು ಕಾಲಹರಣ ಮಾಡದೆ ಸಾರ್ವಜನಿಕರ ಕೆಲಸಕಾರ್ಯ ಮಾಡುವಂತೆ ಕ್ರಮ ತೆಗೆದುಕೊಂಡಿದ್ದಾರೆ. ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವುದಿಲ್ಲ ಎಂಬ ಕಾರಣಕ್ಕೆ ಅಂತವರನ್ನೂ ಟೀಕಿಸುವ, ಅವರ ಮೇಲೆ ಹರಿಹಾಯುವ ಕೆಲಸವನ್ನಷ್ಟೇ ಸಿದ್ದರಾಜು ಮತ್ತವನ ಬೆಂಬಲಿಗರು ಮಾಡಿಕೊಂಡು ಬರುತ್ತಿರೋದು.

ತನ್ನ ಬೆಂಬಲಿಗರು ಯುಟರ್ನ್ ಮಾಡಿ ವಿರೋಧಿ ಪಾಳಯ ಸೇರದಂತೆ ಸದಾಕಾಲ ಕಾವಲು ಕಾಯುವುದರಲ್ಲೇ ಮಗ್ನನಾಗಿರುವ ಸಿದ್ದರಾಜನಿಂದ ಇನ್ನೇನು ಅಭಿವೃದ್ಧಿಯಾಗಲು ಸಾಧ್ಯ? ಈತನನ್ನು ಎಟಿಎಂ ಮಾಡಿಕೊಂಡಿರುವ ಟಿ.ಕೆ.ರಾಮಲಿಂಗಯ್ಯ, ಮಹೇಶ್, ಅನಿಲ್ ಕುಮಾರ್, ಪಕ್ಷೇತರ ಸದಸ್ಯರಾದ ಚಂದ್ರಕುಮಾರ್, ನಯಾಜ್, ಬಿಜೆಪಿ ಸದಸ್ಯ ಶಿವಪ್ರಕಾಶ್‌ಬಾಬುನಂತವರು ಬೇಕೆಂದಾಗ ಅಮೌಂಟ್ ಡ್ರಾ ಮಾಡಿಕೊಂಡು ತಮ್ಮ ತಿಜೋರಿ ತುಂಬಿಸಿಕೊಳ್ಳುತ್ತಿದ್ದಾರೆ. ಮೊದಮೊದಲು ಸಿದ್ದರಾಜುನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವುದಕ್ಕೆ ತೀವ್ರ ವಿರೋಧ ಪಡಿಸುತ್ತಿದ್ದ ಸೋಮಶೇಖರ್ ಕೆರಗೋಡು, ಈಗ ಸಿದ್ದರಾಜುನ ವಿರುದ್ಧ ನಿಂತಿರುವುದು ಆತನಿಗೆ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ ನೀಡದ ಕಾರಣಕ್ಕಾಗಿ. ಇಂತವರ ಸಂಖ್ಯೆ ಮತ್ತಷ್ಟು ಹೆಚ್ಚಾಗದಂತೆ ನೋಡಿಕೊಂಡು ತನ್ನ ಸೀಟು ಉಳಿಸಿಕೊಳ್ಳುವುದರಲ್ಲೇ ಉಸ್ಸಪ್ಪಾ ಎನ್ನುತ್ತಿರುವ ಸಿದ್ದರಾಜು ಬಡಬಡಿಸುತ್ತಿರುವ 'ಅಭಿವೃದ್ಧಿ' ಮಂಡ್ಯದಲ್ಲೆಲ್ಲೂ ಕಾಣಿಸುತ್ತಿಲ್ಲ.

ಸರಿ ಇಷ್ಟೆಲ್ಲಾ ಖರ್ಚು ಮಾಡಲು ಸಿದ್ದರಾಜುಗೆ ಹಣ ಎಲ್ಲಿಂದ ಹರಿದು ಬರುತ್ತೆ ಅಂತ ಕೆದುಕುತ್ತಾ ಹೋದರೆ ಸದಾಕಾಲ ನಗರಸಭೆಯಲ್ಲೇ ಠಳಾಯಿಸುವ ಅವನ ಭಾಮೈದ ಬಾಬು ಗಂಗಡ್ಕರ್ ಎಂಬಾತ ಉತ್ತರವಾಗಿ ನಿಲ್ಲುತ್ತಾನೆ. ಅಕ್ರಮ ಖಾತೆ ಸಕ್ರಮ ಮಾಡಿಸುವುದು; ನಗರೋತ್ಥಾನ ಕಾಮಗಾರಿ, ತಾಜ್ಯ ವಿಲೇವಾರಿ ಗುತ್ತಿಗೆದಾರ, ಬೀದಿ ದೀಪ ನಿರ್ವಹಣೆ ಮತ್ತು ಇನ್ನಿತರ ಕಂಟ್ರಾಕ್ಟರ್‌ಗಳಿಂದ ವಸೂಲಿ ಮಾಡೋದೆ ಇವನ ಕಾಯಕ. ಭಾವ ಸಿದ್ದರಾಜು ಅಧ್ಯಕ್ಷನಾದ ನಂತರ ತನ್ನ ಪೊಟೋಗ್ರಾಫರ್ ವೃತ್ತಿಯನ್ನೇ ಮರೆತಿರುವ ಬಾಬು ನಗರಸಭೆಯಲ್ಲಿ ಆದಾಯದ ಮೂಲಗಳನ್ನು ಕೆದಕಿ ಹೆಗ್ಗಣದಂತೆ ಗೆಬರುತ್ತಿದ್ದಾನೆ.

ನಗರಸಭೆಗೆ ಗುತ್ತಿಗೆ ಆಧಾರದಲ್ಲಿ ಕಾರು ಓಡಿಸುತ್ತಿದ್ದ ದಿನೇಶ ಎಂಬಾತನಿಗೆ ನೀಡಲು ಅಕೌಂಟೆಂಟ್ ಕೊಟ್ಟಿದ್ದ 78,000 ರೂ. ಚೆಕ್ಕನ್ನೇ ತನ್ನ ಅಕೌಂಟ್‌ಗೆ ಜಮಾ ಮಾಡಿಕೊಂಡಿದ್ದ ಬಾಬು ಮೇಲೆ ಪಶ್ಚಿಮ ಠಾಣೆಯಲ್ಲಿ ದೂರು ಕೂಡ ದಾಖಲಾಗಿದೆ. ಭಾವ ಸಿದ್ದರಾಜು ಬಲಗೈ ಭಂಟನಂತೆ ಸಿಬ್ಬಂದಿಗಳಿಗೆ ಅವಾಜ್ ಹಾಕುತ್ತಾ ಬಾಬು ಓಡಾಡಿಕೊಂಡಿದ್ದಾನೆ.

ಒಟ್ಟಿನಲ್ಲಿ ಇಂಥಾ ಅಧ್ಯಕ್ಷನಿಂದ ನಗರಸಭೆ ಎಳ್ಳಷ್ಟು ಅನುಕೂಲ ಇಲ್ಲವೆನ್ನುವುದು ಎಷ್ಟು ಸತ್ಯವೋ, ಆತನನ್ನು ಕೆಳಗಿಳಿಸಲು ಹವಣಿಸುತ್ತಿರುವವರ ಹಿಂದೆಯೂ ನಗರಸಭೆಯನ್ನು ಉನ್ನತಿಯತ್ತ ಕೊಂಡೊಯ್ಯಬೇಕೆನ್ನುವ ಕಾಳಜಿ ಲವಲೇಶವೂ ಇಲ್ಲವೆನ್ನುವುದೂ ಅಷ್ಟೇ ಸತ್ಯ. ತಮ್ಮ ಮಾತು ನಡೆಯಬೇಕೆಂಬ ಸ್ವಪ್ರತಿಷ್ಠೆಯ ಕಾರಣಕ್ಕೆ ಈ ಪ್ರಯತ್ನದಲ್ಲಿದ್ದಾರೆ. ಇಂತವರನ್ನು ತಮ್ಮ ಪ್ರತಿನಿಧಿಗಳೆಂದು ಮತಹಾಕಿ ಚುನಾಯಿಸಿಕೊಂಡಿರುವ ಜನರಿಗೆ ಸದ್ಯಕ್ಕೆ ಉಳಿದಿರೋದು ಈ ಹಾವುಏಣಿ ಆಟದ ಏರಿಳಿತಗಳನ್ನು ಗಮನಿಸುವುದು ಮಾತ್ರ. ಅಂಬಿ-ಕುಮ್ಮಿಯ ಜಂಟಿ ಕಾರ್ಯಾಚರಣೆ ಸದ್ಯಕ್ಕೇನೊ ಠುಸ್ ಎಂದಿರಬಹುದು. ಆದರೆ ಇದರಿಂದಾಗಿ ಇಬ್ಬರೂ ಕೆರಳಿರುವುದರಿಂದ ಮುಂದೇನಾಗುತ್ತೋ ಕಾದು ನೋಡಬೇಕು...

■ ವರದಿಗಾರ

ರಾಯಚೂರು: ಬಯಲಾಯಿತು ಎಸ್ಪಿ ನಾಗರಾಜನ ಕ್ಲಬ್ಬು ಲಿಂಕು

ಮೊನ್ನೆ ಶನಿವಾರ ರಾತ್ರಿ ಸುಮಾರು ಹತ್ತು ಗಂಟೆಯ ಸಮಯ. ರಾಯಚೂರಿನ ಹೊರವಲಯದ ಯರಮರಸ್‌ನಲ್ಲಿ ರಾಯಚೂರು- ಹೈದರಾಬಾದ್ ಹೆದ್ದಾರಿಯ ಪಕ್ಕದಲ್ಲಿ ತಲೆಯೆತ್ತಿರುವ ಐಶಾರಾಮಿ ಡಿವಿಆರ್ ರಿಕ್ರಿಯೇಷನ್ ಕ್ಲಬ್ ಎಂದಿನಂತೆ ಹೆಂಡ ನೀರಿನಂತೆ ಹರಿಯುತ್ತಿತ್ತು ಕೋಟ್ಯಾಂತರ ರೂಪಾಯಿ ದುಡ್ಡು ಜೂಜಾಟದಲ್ಲಿ ಭರ್ಜರಿಯಾಗಿ ಕುಣಿಯುತ್ತಿತ್ತು, ಕುಡಿದು ಕೇಕೆ ಹಾಕುವವರು, ಅಮಲಿನಲ್ಲಿ ತೂಗಾಡುವವರು, ಜೂಜಿನಲ್ಲಿ ಲಕ್ಷ ಲಕ್ಷ ಗೆದ್ದು ಆರ್ಭಟಿಸುವವರು, ಕಳೆದುಕೊಂಡು ಪರದಾಡುತ್ತಾ ಮತ್ತೆ ಗೆಲ್ಲುವುದಕ್ಕಾಗಿ ಗಂಟು ಬಿಚ್ಚುವವರು - ಹೀಗೆ ಹಲವು ಬಗೆಯ ದೃಶ್ಯಗಳು ಏಕಕಾಲದಲ್ಲಿ ದೃಗೋಚರವಾಗಿದ್ದವು.

ನೋಡುನೋಡುತ್ತಿದ್ದಂತೆಯೇ ರಾಯಚೂರಿನ ಬಿಸಿರಕ್ತದ ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್ ಮತ್ತು ಸಹಾಯಕ ಆಯುಕ್ತ ಎಂ.ಪಿ.ಮಾರುತಿ ಕಂದಾಯ ಮತ್ತು ಅಬಕಾರಿ ಇಲಾಖೆಯ ಏಳೆಂಟು ಅಧಿಕಾರಿಗಳೊಂದಿಗೆ ಹಠಾತ್ತನೆ ದಾಳಿಯಿಟ್ಟರು! ಪಂಚೆ ಎತ್ತಿಕೊಂಡು, ಪ್ಯಾಂಟ್ ಏರಿಸಿಕೊಳ್ಳುತ್ತಾ ಓಡುವವರು ಒಂದುಕಡೆ, ಐಶಾರಾಮಿ ಕಾರುಗಳನ್ನು ಯರ್ರಾಬಿರ್ರಿಯಾಗಿ ಓಡಿಸಿಕೊಂಡು ಸತ್ತೆನೋ ಕೆಟ್ಟೆನೋ ಎನ್ನುತ್ತಾ ಪರಾರಿಯಾಗುವವರು ಇನ್ನೊಂದು ಕಡೆ. ಅಂತೂ ಕೊನೆಗೆ ಏಳೆಂಟು ನೂರು ಜನರಲ್ಲಿ ಕೈಗೆ ಸಿಕ್ಕವರು ಇಪ್ಪತ್ತು ಮಂದಿ ಮಾತ್ರ. ಏಳೆಂಟು ಅಧಿಕಾರಿಗಳು ಇನ್ನೆಷ್ಟು ಜನರನ್ನು ಹಿಡಿದಾರು?

ರಾಯಚೂರು ಎಎಸ್‌ಪಿ ಜೆ.ಪಾಪಯ್ಯ ಹಾಗೂ ಡಿವೈಎಸ್‌ಪಿ ವಿಜಯಕುಮಾರ್ ಮಡಿವಾಳರ್ ಪೊಲೀಸ್ ಬಲದೊಂದಿಗೆ ಸ್ಥಳಕ್ಕೆ ಬರುವ ಹೊತ್ತಿಗೆ ಎಲ್ಲಾ ಮುಗಿದುಹೋಗಿತ್ತು, ಅಷ್ಟು ಹೊತ್ತಿಗಾಗಲೇ ಡಿವಿಆರ್ ರಿಕ್ರಿಯೇಷನ್ ಕ್ಲಬ್ ಅನ್ನು ಸಂಪೂರ್ಣ ಹಿಡಿತಕ್ಕೆ ತೆಗೆದುಕೊಂಡಿದ್ದ ಜಿಲ್ಲಾಧಿಕಾರಿ ನೇತೃತ್ವದ ತಂಡ ಪೊಲೀಸರಿಗೆ ವಿಶೇಷ ಕೆಲಸವನ್ನೇನೂ ಉಳಿಸಿರಲಿಲ್ಲ. ಜನ ಓಡುವಾಗ ಉದುರಿದ ನೋಟುಗಳ ಕಂತೆಗಳನ್ನು ಆರಿಸಿ ಎಣಿಸುವುದಕ್ಕೆ, ಕುಡಿದು ಬಿಟ್ಟಿದ್ದ ಕುಡಿದು ಉಳಿಸಿದ್ದ ಬಾಟಲಿಗಳನ್ನು ಮತ್ತು ಇಸ್ಪೀಟ್ ಕಾರ್ಡುಗಳನ್ನು ಗುಡ್ಡೆಹಾಕಿ ಮಹಜರ್ ಮಾಡುವುದಕ್ಕೆ ಪೊಲೀಸರಿಗೆ ಹಚ್ಚಿದರು. ಅಂತಿಮವಾಗಿ, ಏಳೂವರೆ ಲಕ್ಷ ರೂಪಾಯಿ ದುಡ್ಡು, ಯಥೇಚ್ಛ ಲಿಕ್ಕರ್ ಬಾಟಲಿಗಳು, ಇಸ್ಪೀಟ್ ಕಾರ್ಡುಗಳು ಹಾಗೂ ಒಂದು ಕಾರನ್ನು ವಶಪಡಿಸಿಕೊಳ್ಳಲಾಯಿತು. ಮರುದಿನ ಇಡೀ ರಾಯಚೂರಿನಾದ್ಯಂತ ಜಿಲ್ಲಾಧಿಕಾರಿಯ ಕ್ಲಬ್ ರೇಡ್ ಬಗ್ಗೆ ಸಂಚಲನ ಮೂಡಿತ್ತು.


ಮೂವರು ಪತ್ರಕರ್ತರೂ...

ಈ ಒಟ್ಟಾರೆ ಘಟನೆಯಲ್ಲಿ ಬೆಳಕಿಗೆ ಬಂದ ಇನ್ನೊಂದು ವಿಷಯ ಎಂದರೆ ರಾಯಚೂರಿನ ಎಲೆಕ್ಟ್ರಾನಿಕ್ ಮತ್ತು ಪ್ರಿಂಟ್ ಮಾಧ್ಯಮದಲ್ಲಿ 'ಸೇವೆ' ಸಲ್ಲಿಸುತ್ತಿರುವ ಮೂವರು ಪತ್ರಕರ್ತರೂ ಡಿವಿಆರ್ ರಿಕ್ರಿಯೇಷನ್ ಕ್ಲಬ್‌ನ ಗ್ಯಾಂಬ್ಲರ್ ತಿಮ್ಮಾರೆಡ್ಡಿಯಿಂದ ಕಾಣಿಕೆ ಪಡೆದು ಕ್ಲಬ್ಬಿನ ಅಕ್ರಮ ದಂಧೆಗೆ ಬೆಂಗಾವಲಾಗಿ ನಿಂತಿದ್ದಾರೆ. ಈ ಮೂವರ ಹೆಸರುಗಳು ಈಗಾಗಲೇ ಜಿಲ್ಲಾಧಿಕಾರಿ ಮತ್ತು ಅಸಿಸ್ಟೆಂಟ್ ಕಮೀಷನರ್‌ಗೆ ಗೊತ್ತಾಗಿದ್ದು ಅವರನ್ನೂ ಈ ಕೇಸಿನಲ್ಲಿ ಸಿಕ್ಕಿಸುವುದಕ್ಕಾಗಿ ಸಣ್ಣದೊಂದು ಆಧಾರ ಹುಡುಕಾಟ ನಡೆಸಿದ್ದಾರೆ. ಆ ಮೂಲಕ ಭ್ರಷ್ಟಾಚಾರಕ್ಕೆ ಬೆಂಗಾವಲಾಗಿ ನಿಲ್ಲುವ ಪತ್ರಕರ್ತರಿಗೂ ಕಠಿಣ ಸಂದೇಶ ರವಾನಿಸುವ ಆಲೋಚನೆ ಈ ಅಧಿಕಾರಿಗಳಿಗಿದೆ.



ಎಸ್ಪಿ ನಾಗರಾಜನೇ ಕ್ಲಬ್ಬಿನ ಗೇಟ್‌ಕೀಪರ್!


ಆಂಧ್ರಪ್ರದೇಶ ಮತ್ತು ತೆಲಂಗಾಣ ಮೂಲದ ದೊಡ್ಡ ದೊಡ್ಡ ರಾಜಕಾರಣಿಗಳು ಮತ್ತು ರಿಯಲ್ ಎಸ್ಟೇಟ್ ಕುಳಗಳು ಸೇರಿ ಈಗ್ಗೆ ಎಂಟು ತಿಂಗಳ ಹಿಂದಷ್ಟೆ ಪ್ರಾರಂಭಿಸಿದ ಕ್ಲಬ್ ಅದು. ಹೆಣ್ಣು ಹೆಂಡ ಮತ್ತು ಜೂಜಿನ ಮೂಲಕ ಹೈದರಾಬಾದ್, ಮಹಬೂಬ್‌ನಗರ, ಕರ್ನೂಲು ಮುಂತಾದ ಆಂಧ್ರ ಮತ್ತು ತೆಲಂಗಾಣಗಳ ವಿವಿಧ ಊರುಗಳ ಭಾರಿ ಕುಳಗಳಿಗೆ ಮನರಂಜನೆ ನೀಡುವುದಕ್ಕಾಗಿಯೇ ಅದನ್ನು ಪ್ರಾರಂಭಿಸಲಾಗಿತ್ತು. ಜೂಜಾಟ ಆಡುವುದಕ್ಕೆ, ಪರವಾನಗಿಯಿಲ್ಲದೇ ಹೆಂಡ ಕುಡಿಸುವುದಕ್ಕೆ, ವೇಶ್ಯಾವಾಟಿಕೆ ನಡೆಸುವುದಕ್ಕೆ ಅವರಿಗೆ ರಾಯಚೂರು ಪೊಲೀಸರ ರಕ್ಷಣೆ ಅತ್ಯವಶ್ಯವಾಗಿ ಬೇಕಿತ್ತು, ಈ ರಕ್ಷಣೆಯ ಕೆಲಸವನ್ನು ಯಶಸ್ವಿಯಾಗಿ ಮಾಡಿದವನು ರಾಯಚೂರು ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ನಾಗರಾಜ್! ಅದಕ್ಕೆ ಪ್ರತಿಯಾಗಿ ಅವನಿಗೆ ಕ್ಲಬ್ಬಿನ ಕಡೆಯಿಂದ ಪ್ರತಿದಿನ ಒಂದು ಲಕ್ಷ ರೂಪಾಯಿ ಸಂದಾಯವಾಗುತ್ತಿತ್ತು, ಕ್ಲಬ್ಬಿನ ಸಂಪೂರ್ಣ ಜವಾಬ್ದಾರಿ ಹೊತ್ತಿರುವ ಗ್ಯಾಂಬ್ಲರ್ ತಿಮ್ಮಾರೆಡ್ಡಿಯೇ ಪ್ರತಿನಿತ್ಯ ಈ ಕಪ್ಪಕಾಣಿಕೆಯನ್ನು ನಾಗರಾಜನಿಗೆ ಒಪ್ಪಿಸುವ ಜವಾಬ್ದಾರಿ ಹೊತ್ತುಕೊಂಡಿದ್ದ.


ಡಿವಿಆರ್ ರಿಕ್ರಿಯೇಷನ್ ಕ್ಲಬ್ ಮೇಲೆ ದಾಳಿಯಿಡುತ್ತಿರುವ ರಾಯಚೂರು ಜಿಲ್ಲಾಧಿಕಾರಿ ಎಸ್. ಸಸಿಕಾಂತ್ ಸೆಂಥಿಲ್

ಹೇಳಿಕೇಳಿ ಎಸ್ಪಿ ನಾಗರಾಜ ಬಳ್ಳಾರಿಯಲ್ಲಿ ಗಣಿರೆಡ್ಡಿಗಳ ಸೇವೆ ಮಾಡಿ ದುಂಡಗಾದವನು. ಲೋಕಾಯುಕ್ತ ಸಂತೋಷ್ ಹೆಗ್ಡೆಯವರ ಅಕ್ರಮ ಗಣಿಗಾರಿಕೆ ಕುರಿತ ವರದಿಯಲ್ಲೂ ಈತ ಎಂಜಲು ತಿಂದು ಸಾರ್ವಜನಿಕ ಆಸ್ತಿಯನ್ನು ಲೂಟಿ ಹೊಡೆಯುವುದಕ್ಕೆ ರೆಡ್ಡಿಗಳಿಗೆ ಅವಕಾಶ ಮಾಡಿಕೊಟ್ಟಿರುವ ಬಗ್ಗೆ ಅಧಿಕೃತವಾಗಿ ಬರೆಯಲಾಗಿದೆ. ಇರಲಿ, ಆ ಬಗ್ಗೆ ಇನ್ನೊಮ್ಮೆ ಬರೆಯೋಣ. ಸದ್ಯಕ್ಕೆ ಈಗ ರಾಯಚೂರಿನ ಡಿವಿಆರ್ ಕ್ಲಬ್ ವಿಷಯಕ್ಕೆ ಬರುವುದಾದರೆ, ಈತ ಅದರ ರಕ್ಷಣೆಗೆ ನಿಂತಿದ್ದೇ ತಡ ಕ್ಲಬ್ಬಿನಲ್ಲಿ ಏನೆಲ್ಲಾ ಅಕ್ರಮ, ಅನೈತಿಕ ಚಟುವಟಿಕೆಗಳನ್ನು ನಡೆಸುವುದಕ್ಕೆ ಸಾಧ್ಯವೋ ಅವೆಲ್ಲಾ ನಡೆಯಲಾರಂಭಿಸಿದವು. ಪ್ರಾರಂಭದಲ್ಲಿ ಸ್ಥಳೀಯ ಹತ್ತಾರು ಮಂದಿ ಮಾತ್ರ ಅಲ್ಲಿ ಗ್ಯಾಂಬ್ಲಿಂಗ್ ಮಾಡುತ್ತಿದ್ದರು. ನಂತರ ಒಂದೆರಡು ತಿಂಗಳಲ್ಲಿ ಡಿವಿಆರ್ ಕ್ಲಬ್‌ನ ಖ್ಯಾತಿ ಹೈದರಾಬಾದ್‌ತನಕ ಹಬ್ಬಿ ಹೈದರಾಬಾದ್, ಮಹಬೂಬ್‌ನಗರ, ಕರ್ನೂಲು ಜಿಲ್ಲೆಗಳಿಂದ ರಿಯಲ್ ಎಸ್ಟೇಟ್ ಕುಳಗಳು, ಕಂಡಕಂಡಲ್ಲಿ ತಿಂದು ಮೈಕೈ ಹೊಲಸು ಮಾಡಿಕೊಂಡು ಕೊಬ್ಬಿರುವ ರಾಜಕಾರಣಿಗಳು, ಹಡಬೆ ದುಡ್ಡು ಸಂಪಾದಿಸಿದ ಕೆಲವು ಅಧಿಕಾರಿಗಳೂ ನೂರಾರು ಸಂಖ್ಯೆಯಲ್ಲಿ ಬರಲಾರಂಭಿಸಿದರು. ಪರಿಣಾಮವಾಗಿ ಕ್ಲಬ್ಬಿನಲ್ಲಿ ಹೆಂಡ ಮತ್ತು ಇಸ್ಪೀಟಿನ ಜೊತೆಗೆ ಹೆಣ್ಣಿನ ಸರಬರಾಜೂ ಶುರುವಾಯಿತು. ತೆಲುಗು ಚಲನಚಿತ್ರ ಮತ್ತು ತೆಲುಗು ಧಾರಾವಾಹಿಗಳ ಹಲವು ನಟಿಯರೂ, ಟೀವಿ ನಿರೂಪಕಿಯರೂ ಒಬ್ಬೊಬ್ಬರಾಗಿ ಕಾಣಿಸಿಕೊಳ್ಳಲಾರಂಭಿಸಿ ದರು. ನಂತರ ಹುಡುಗಿಯರನ್ನು ಹಿಂಡುಹಿಂಡಾಗಿ ಕರೆಸಿಕೊಳ್ಳುವ ಪರಿಪಾಠ ಬೆಳೆಯಿತು. ಹೀಗೆ ಬಂದ ಅತಿಥಿಗಳನ್ನು ಉಳಿಸುವುದಕ್ಕಾಗಿಯೇ ರಾಯಚೂರು ನಗರದ ಸಂತೋಷಿ ಸರೋವರ್ ಲಾಡ್ಜಿನಲ್ಲಿ ವ್ಯವಸ್ಥೆ ಮಾಡಲಾಯಿತು. ಇದರಿಂದ ಆಂಧ್ರ ಮತ್ತು ತೆಲಂಗಾಣಗಳಿಂದ ಬರುವ ಗ್ಯಾಂಬ್ಲಿಂಗ್ ಗಿರಾಕಿಗಳ ಸಂಖ್ಯೆಯೂ ದುಪ್ಪಟ್ಟು ಆಯಿತು. ನೋಡುನೋಡುತ್ತಿದ್ದಂತೆಯೇ ಐದಾರು ತಿಂಗಳಲ್ಲಿ ಡಿವಿಆರ್ ರಿಕ್ರಿಯೇಷನ್ ಕ್ಲಬ್ ಅದ್ಯಾವ ಪರಿ ಬೆಳೆದುಬಿಟ್ಟಿತೆಂದರೆ ಬರೀ ಇಸ್ಪೀಟು, ಹೆಂಡ ಮತ್ತು ಹೆಣ್ಣಿನ ಮೋಜಿಗಾಗಿಯೇ ಜನ ಹೈದರಾಬಾದಿನಿಂದ ಐಶಾರಾಮಿ ಕಾರುಗಳಲ್ಲಿ ಬರಲಾರಂಭಿಸಿದರು. ಈ ಎಲ್ಲಾ ಅಕ್ರಮ ಚಟುವಟಿಕೆಗಳಿಗೆ ಬೆಂಗಾವಲಾಗಿ ನಿಂತವನು ರಾಯಚೂರಿನ ಎಸ್ಪಿ ಎಂ.ಎಸ್. ನಾಗರಾಜ! ಈ ಕ್ಲಬ್ಬು ರಾಯಚೂರಿನ ಎಸ್ಪಿಯೊಬ್ಬನಿಗೇ ದಿನಕ್ಕೆ ಒಂದು ಲಕ್ಷ ರೂಪಾಯಿ ಕಾಣಿಕೆ ಸಂದಾಯ ಮಾಡುತ್ತಿತ್ತು ಎಂದರೆ ಈ ಕ್ಲಬ್ಬಿನ ಆದಾಯ ಇನ್ನೆಷ್ಟಿದ್ದಿರಬಹುದು, ಅಲ್ಲಿ ಗ್ಯಾಂಬ್ಲಿಂಗ್‌ನಲ್ಲಿ ಎಷ್ಟು ದುಡ್ಡು ಹರಿಯುತ್ತಿತ್ತು ಎಂಬುದನ್ನು ನೀವೇ ಯೋಚಿಸಿ.


ಜಾಣ ಡಿಸಿ!

ರಾಯಚೂರು ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್ ಮೂಲತಃ ತಮಿಳು ಮೂಲದ ಯುವಕ. ಇನ್ನೂ ಮೂವತ್ತೈದು ವರ್ಷ ವಯಸ್ಸು. ಇತ್ತೀಚೆಗೆ ಆತ್ಮಹತ್ಯೆಯ ಮೂಲಕ ಸುದ್ದಿ ಮಾಡಿದ ಐಎಎಸ್ ಅಧಿಕಾರಿ ಡಿ.ಕೆ. ರವಿಯ ಬ್ಯಾಚ್‌ಮೇಟ್ ಮತ್ತು ಸ್ನೇಹಿತ. ಐಎಎಸ್ ಮಗಿಸಿದ ಮೇಲೆ ಬಳ್ಳಾರಿಯಲ್ಲಿ ಅಸಿಸ್ಟೆಂಟ್ ಕಮೀಷನರ್ ಆಗಿ, ಆಮೇಲೆ ಶಿವಮೊಗ್ಗದಲ್ಲಿ ಜಿಲ್ಲಾ ಪಂಚಾಯತ್ ಸಿಇಓ ಆಗಿ, ಈಗ ರಾಯಚೂರಿಗೆ ಜಿಲ್ಲಾಧಿಕಾರಿಯಾಗಿ ಬಂದಿದ್ದಾರೆ. ಅವರ ಇಡೀ ಸಾರ್ವಜನಿಕ ಬದುಕನ್ನು ನೋಡಿದರೆ ಎಲ್ಲಿಯೂ ಒಂದು ಕಪ್ಪುಚುಕ್ಕೆಯಿಲ್ಲದ ವ್ಯಕ್ತಿತ್ವ ಕೈ ಬಾಯಿ ಸಂಪೂರ್ಣವಾಗಿ ಶುದ್ಧವಾಗಿದೆ. ಬಡವರನ್ನು


ಡಿವಿಆರ್ ರಿಕ್ರಿಯೇಷನ್ ಕ್ಲಬ್ಬಿಗೆ ದಾಳಿಯಿಟ್ಟಾಗ ಸಿಕ್ಕ ಇಸ್ಪೀಟು ಕಾರ್ಡುಗಳು ಮತ್ತು ಹೆಂಡದ ಬಾಟಲಿಗಳು

ಸೇಂದಿ ಮಾರುವ ಅಮಾಯಕರನ್ನು ಹಿಡಿದದ್ದೇ ಸಾಧನೆ


ಡಿವಿಆರ್ ರಿಕ್ರಿಯೇಷನ್ ಕ್ಲಬ್‌ನಂತಹ ಅಡ್ಡೆಗಳಲ್ಲಿ ದೊಡ್ಡ ದೊಡ್ಡ ಹುಲಿಗಳ ಅಕ್ರಮ ದಂಧೆಗಳು ಸರಾಗವಾಗಿ ನಡೆಯುವಂತೆ ನೋಡಿಕೊಳ್ಳಲು ಅವುಗಳ ಗೇಟ್‌ಕೀಪರ್ ರೀತಿಯಲ್ಲಿ ಕೆಲಸ ಮಾಡುವ ಎಸ್ಪಿ ನಾಗರಾಜ್ ತಾನು ದಕ್ಷ ಅಧಿಕಾರಿ ಎಂಬುದನ್ನು ತೋರಿಸಿಕೊಳ್ಳಲು ರಸ್ತೆಬದಿಯಲ್ಲಿ ಸಣ್ಣಪುಟ್ಟ ಅಪರಾಧ ಮಾಡುವ ಇಲಿಗಳನ್ನು ಹಿಡಿಸಿ ಪತ್ರಕರ್ತರೆದುರು ಪೋಜು ಕೊಡುತ್ತಾನೆ.


ಸಿಎಚ್ ಪೌಡರ್ ಸೇಂದಿ ಮಾರುವ ಅಮಾಯಕರನ್ನು ಹಿಡಿದು ಪೋಜು ಕೊಡುತ್ತಿರುವ ರಾಯಚೂರು ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ನಾಗರಾಜ್.

ಸಿಎಚ್ (chloral hydrate) ಪೌಡರ್ ಎಂಬ ಮತ್ತು ತರಿಸುವ ಅಗ್ಗದ ಪದಾರ್ಥವನ್ನು ಬೆರೆಸಿ ಮಾಡಲಾದ ದೇಸಿ ಮದ್ಯವನ್ನು ರಾಯಚೂರು ಜಿಲ್ಲೆಯಾದ್ಯಂತ ಮಾರಾಟ ಮಾಡಲಾಗುತ್ತದೆ. ಹದಿನೈದು, ಇಪ್ಪತ್ತು ರೂಪಾಯಿಗೆ ಬಾಟಲಿ ಲೆಕ್ಕದಲ್ಲಿ ಸಿಗುವ ಈ ಸೇಂದಿ ದೇಹಕ್ಕೆ ಬಹಳ ಅಪಾಯಕಾರಿ. ಸಾಮಾನ್ಯವಾಗಿ ಪಕ್ಕದ ಆಂಧ್ರದ ಕೆಲವು ಜನ ಇದನ್ನು ತಮ್ಮ ಊರಿನಲ್ಲಿ ತಯಾರಿಸಿಕೊಂಡು ರಾಯಚೂರಿಗೆ ತಂದು ಮಾರುತ್ತಾರೆ. ರಾಯಚೂರು ಪೊಲೀಸರು ಅಂಥವರನ್ನು ಆಗಾಗ್ಗೆ ಹಿಡಿದು ಅವರ ಮೇಲೆ ಕೇಸು ದಾಖಲಿಸುತ್ತಾರೆ. ಇಂತಹ ಪ್ರಕರಣಗಳು ಆದಾಗಲೆಲ್ಲ ಎಸ್ಪಿ ನಾಗರಾಜ್ ತನ್ನ ಆಫೀಸಿನಲ್ಲಿ ಪತ್ರಿಕಾಗೋಷ್ಠಿ ಕರೆದು "ನನ್ನ ಮಾರ್ಗದರ್ಶನದಲ್ಲಿ ಸಿಎಚ್ ಪೌಡರ್ ಸೇಂದಿ ಮಾರಾಟಗಾರರನ್ನು ಹಿಡಿಯಲಾಗಿದೆ, ಮುನ್ನೂರೈವತ್ತು ರೂಪಾಯಿ ಮೌಲ್ಯದ ಸೇಂದಿ ವಶಪಡಿಸಿಕೊಳ್ಳಲಾಗಿದೆ" ಎಂದೆಲ್ಲಾ ಪುಂಗಿ ಊದುತ್ತಾನೆ! ಆತ ಹೇಳುವ ರೀತಿ ನೋಡಿದರೆ ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಭಾಗಿಯಾದ ಭಯೋತ್ಪಾದಕರನ್ನು ಹಿಡಿದಂತೆ, ಅಂತರರಾಜ್ಯ ದರೋಡೆಕೋರರನ್ನು ಬಂಧಿಸಿ ಕೋಟ್ಯಾಂತರ ರೂಪಾಯಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಂತೆ, ಅಬೇಧ ಕ್ರಿಮಿನಲ್ ಪ್ರಕರಣಗಳನ್ನು ತನ್ನ ಬುದ್ಧಿಶಕ್ತಿಯಿಂದ ಬೇಧಿಸಿದಂತೆ ವರ್ಣಿಸುತ್ತಾನೆ. ಹಿಡಿದದ್ದು ಮಾತ್ರ ರಸ್ತೆಬದಿಯಲ್ಲಿ ಸಣ್ಣಪುಟ್ಟ ಅಪರಾಧ ಮಾಡುವ ಇಲಿಗಳನ್ನೆ

ಈಗ ಇಂತಹ ಸಿಎಚ್ ಪೌಡರ್ ಮಾರಾಟ ಮಾಡುವ ಸಣ್ಣಪುಟ್ಟ ಜನರ ಮೇಲೆ ಗೂಂಡಾ ಕಾಯ್ದೆಯಂತಹ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಅವರನ್ನು ಶಾಶ್ವತವಾಗಿ ಜೈಲಿಗೆ ಕಳಿಸುವ ಮಹತ್ಕಾರ್ಯವನ್ನೂ ಈ ನಾಗರಾಜ ಶುರುಮಾಡಿದ್ದಾನೆ. ಎಸ್ಪಿ ಸಾಹೇಬರು ಭಾರಿ ದೊಡ್ಡ ಕೆಲಸ ಮಾಡುತ್ತಿದ್ದಾರೆ ಅಂತ ರಾಯಚೂರು ಜನರಿಗೆ ತೋರಿಸಬೇಕಲ್ಲ?

ಸಿಎಚ್ ಪೌಡರ್ ಸೇಂದಿ ಮಾರಾಟ ಒಂದು ಅಪರಾಧ ನಿಜ, ಅದನ್ನು ಮಟ್ಟಹಾಕಬೇಕು ಎಂಬುದರಲ್ಲೂ ಯಾವುದೇ ಗೊಂದಲಗಳಿಲ್ಲ. ಆದರೆ, ಸಿಎಚ್ ಪೌಡರ್ ವಿರುದ್ಧ ತೋರಿಸುವ ಪೌರುಷವನ್ನು ಎಸ್ಪಿ ನಾಗರಾಜ್ ಅಕ್ರಮ ಮರಳು ಗಣಿಗಾರಿಕೆ ತಡೆಯುವಲ್ಲಿ, ಡಿವಿಆರ್ ರಿಕ್ರಿಯೇಷನ್ ಕ್ಲಬ್‌ಗಳಲ್ಲಿ ನಡೆಯುವ ಅಕ್ರಮ ದಂಧೆಗಳನ್ನು ತಡೆಯುವಲ್ಲಿ ಯಾಕೆ ತೋರುವುದಿಲ್ಲ ಎಂಬುದು ಮೊನ್ನೆ ಜಿಲ್ಲಾಧಿಕಾರಿ ನಡೆಸಿದ ದಾಳಿಯಲ್ಲಿ ಬಟಾಬಯಲಾಗಿದೆ!



ರಾಯಚೂರು ಜಿಲ್ಲಾಧಿಕಾರಿ ಎಸ್. ಸಸಿಕಾಂತ್ ಸೆಂಥಿಲ್

ಸಮಾಜದ ಕೆಳಸ್ತರದವರನ್ನು ಕಂಡರೆ ತುಂಬಾ ಅಕ್ಕರೆ, ಪ್ರೀತಿ. ಒಬ್ಬ ಜಿಲ್ಲಾಧಿಕಾರಿಯಾಗಿ ಜಿಲ್ಲೆಗೆ, ದೇಶಕ್ಕೆ, ಹಿಂದುಳಿದಸಮುದಾಯುಗಳ ಏಳ್ಗೆಗೆ ಏನೆಲ್ಲಾ ಮಾಡಲು ಸಾಧ್ಯವಿದೆಯೋ ಅದನ್ನೆಲ್ಲಾ ಬಹಳ ಪ್ರಾಮಾಣಿಕತೆಯಿಂದ ಮಾಡುತ್ತಿರುವ ವ್ಯಕ್ತಿ. ಪ್ರಾಮಾಣಿಕತೆಯ ಜೊತೆಗೆ ದಕ್ಷತೆಯನ್ನೂ ಮೈಗೂಡಿಸಿಕೊಂಡಿರುವ ಮನುಷ್ಯ. ಇವೆಲ್ಲಕ್ಕಿಂತ ಹೆಚ್ಚಾಗಿ ಬುದ್ಧಿವಂತ ಕೂಡ.

ಈತನ ಬಗ್ಗೆ ಎಸ್ಪಿ ನಾಗರಾಜನಿಗೂ ಗೊತ್ತಿದೆ, ಎಸ್ಪಿ ನಾಗರಾಜನ ಬಗ್ಗೆ ಜಿಲ್ಲಾಧಿಕಾರಿ ಸೆಂಥಿಲ್‌ಗೂ ಗೊತ್ತಿದೆ. ಏಕೆಂದರೆ ಅವರಿಬ್ಬರೂ ಬಳ್ಳಾರಿಯಲ್ಲಿ ಕೆಲಸ ಮಾಡಿಬಂದವರು. ವ್ಯತ್ಯಾಸ ಏನೆಂದರೆ ನಾಗರಾಜ ಧಣಿಧಣಿಗಳ ಎಂಜಲು ತಿಂದು ಸಾರ್ವಜನಿಕ ಸಂಪತ್ತನ್ನು ಲೂಟಿ ಹೊಡೆಯುವುದಕ್ಕೆ ಅವಕಾಶ ಮಾಡಿಕೊಟ್ಟವನು, ಸೆಂಥಿಲ್ ಭಾರಿ ಸಾಧನೆ ಮಾಡಲು ಸಾಧ್ಯವಾಗದಿದ್ದರೂ ಇದ್ದಷ್ಟು ದಿನ ಪ್ರಾಮಾಣಿಕವಾಗಿ ಕೆಲಸ ಮಾಡಿ ಕೈಬಾಯಿ ಸ್ವಚ್ಛನಾಗಿ ಇಟ್ಟುಕೊಂಡವರು. ಯಾವಾಗ, ರಾಯಚೂರಿಗೆ ಸಸಿಕಾಂತ್ ಸೆಂಥಿಲ್ ಜಿಲ್ಲಾಧಿಕಾರಿಯಾಗಿ ಬಂದರೋ ಅಷ್ಟರಲ್ಲಾಗಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ವಿರಾಜಮಾನನಾಗಿದ್ದ ನಾಗರಾಜನಿಗೆ ಪ್ಯಾಂಟಿನೊಳಗೆ ನಾಗರಹಾವು ಹೊಕ್ಕಂತಾಯಿತು.

ಡಿವಿಆರ್ ರಿಕ್ರಿಯೇಷನ್ ಕ್ಲಬ್‌ಗೆ ವಾಸ್ತವದಲ್ಲಿ ಗೇಟ್ ಕೀಪರ್ ಆಗಿ ಕೆಲಸ ಮಾಡುತ್ತಿದ್ದುದು ಎಸ್‌ಪಿ ನಾಗರಾಜನೇ ಎಂಬ ಬಗ್ಗೆ ಜಿಲ್ಲಾಧಿಕಾರಿ ಸೆಂಥಿಲ್‌ಗಾಗಲೀ, ಅಸಿಸ್ಟೆಂಟ್ ಕಮೀಷನರ್ ಎಂ.ಪಿ. ಮಾರುತಿಗಾಗಲೀ ಯಾವುದೇ ಅನುಮಾನಗಳಿರಲಿಲ್ಲ. ಪೊಲೀಸ್ ಇಲಾಖೆಯೇ ಕ್ಲಬ್‌ನ ಬೆಂಗಾವಲಿಗೆ ನಿಂತಿದ್ದರಿಂದ ದಾಳಿಯ ಮುನ್ನ ಪೊಲೀಸ್ ಇಲಾಖೆಗೆ ತಿಳಿಸಿ ಪೊಲೀಸ್ ತುಕಡಿಯನ್ನೂ ಕರೆದುಕೊಂಡು ಹೋಗುವ ನಿರ್ಧಾರ ಮಾಡಿದರೆ ಇಡೀ ದಾಳಿಯೇ ವಿಫಲವಾಗುತ್ತಿತ್ತು. ಎಸ್ಪಿ ನಾಗರಾಜನೇ ನೇರವಾಗಿ ತಿಮ್ಮಾರೆಡ್ಡಿಗೆ ಕಾಲ್ ಮಾಡಿ ದಾಳಿಯ ವಿಷಯವನ್ನು ಲೀಕ್ ಮಾಡಿಬಿಡುತ್ತಿದ್ದ. ಜಿಲ್ಲಾಧಿಕಾರಿ ನೇತೃತ್ವದ ತಂಡ ಕ್ಲಬ್ ಆವರಣವನ್ನು ತಲುಪುವ ಮುನ್ನವೇ ಕ್ಲಬ್ ಖಾಲಿಯಾಗಿರುತ್ತಿತ್ತು. ಹಾಗಾಗಿ, ಪೊಲೀಸ್‌ನವರಿಗೆ ಹೇಳುವ ತಪ್ಪನ್ನು ಜಿಲ್ಲಾಧಿಕಾರಿ ಮಾಡಲೇ ಇಲ್ಲ!

ಜೂಜುಕೋರನಿಂದ ಎಸ್ಪಿಗೆ 20 ಕರೆಗಳು!

ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್ ನೇತೃತ್ವದ ತಂಡ ಕ್ಲಬ್‌ಮೇಲೆ ದಾಳಿ ಮಾಡಿದಾಗ ಆ ಕ್ಲಬ್ಬಿನ ಸಂಪೂರ್ಣ ಜವಾಬ್ದಾರಿ ಹೊತ್ತುಕೊಂಡಿರುವ, ಖುದ್ದು ಗ್ಯಾಂಬ್ಲರ್ ಆಗಿರುವ ಹಾಗೂ ಎಸ್ಪಿ ನಾಗರಾಜನಿಗೆ ಪ್ರತಿನಿತ್ಯ ಒಂದು ಲಕ್ಷ ಕಾಣಿಕೆ ಅರ್ಪಿಸುವ ತಿಮ್ಮಾರೆಡ್ಡಿ ತನ್ನ ಮೊಬೈಲ್‌ನಿಂದ ಎಸ್ಪಿ ನಾಗರಾಜನಿಗೆ ಬರೋಬ್ಬರಿ ಇಪ್ಪತ್ತು ಬಾರಿ ಕಾಲ್ ಮಾಡಿದ್ದಾನೆ! ನಿತ್ಯ ಕಪ್ಪ ಕೊಟ್ಟರೂ ಈ ದಾಳಿಯೇಕೆ ಎಂದು ಪ್ರಶ್ನಿಸುವುದಕ್ಕೆ! ದಾಳಿಯಿಂದ ರಕ್ಷಣೆ ಮಾಡಿ ಅಂತ ಗೋಗರೆಯುವುದಕ್ಕೆ! ಅತ್ತ ಎಸ್ಪಿಗೆ ದಾಳಿಯ ವಿಷಯ ಗೊತ್ತಾಗುತ್ತಿದ್ದಂತೆ ತಾನು ಅಲ್ಲಿಗೆ ಬರುವುದಕ್ಕೆ ಮುಖ ಇಲ್ಲದಿದ್ದುದರಿಂದ ಎಎಸ್‌ಪಿ ಜೆ.ಪಾಪಯ್ಯ ಹಾಗೂ ಡಿಎಸ್‌ಪಿ ವಿಜಯಕುಮಾರ್ ಮಡಿವಾಳರನ್ನು ಒಂದು ಡಜನ್ ಪೊಲೀಸರ ಜೊತೆ ಕ್ಲಬ್ಬಿಗೆ ಅಟ್ಟಿದ್ದಾನೆ. ತಿಮ್ಮಾರೆಡ್ಡಿಯ ಮೊಬೈಲ್‌ನಿಂದ ಬರುವ ಕರೆಯಿರಲಿ, ಆ ಸಂದರ್ಭದಲ್ಲಿ ಯಾವುದೇ ಮೊಬೈಲಿನಿಂದ ಬರುವ ಕರೆಗಳನ್ನೂ ಆತ ಸ್ವೀಕರಿಸಲಿಲ್ಲ! ಕೊನೆಗೆ ದಾರಿಕಾಣದ ನಡುನೀರಲ್ಲಿ ಸಿಲುಕಿದಂತಾಗಿದ್ದ ತಿಮ್ಮಾರೆಡ್ಡಿ ಈಶಾನ್ಯ ವಲಯ (ಕಲಬುರಗಿ) ಐಜಿಪಿ ಸುನೀಲ್ ಅಗರ್‌ವಾಲ್‌ಗೆ ಕಾಲ್ ಮಾಡಿದ್ದಾನೆ! ಈ ಮೊಬೈಲ್‌ಅನ್ನು ತಕ್ಷಣ ವಶಕ್ಕೆ ತೆಗೆದುಕೊಂಡು ಈ ಎಲ್ಲಾ ಕರೆಗಳ ವಿವರಗಳನ್ನು ನೋಡಿ ಜಿಲ್ಲಾಧಿಕಾರಿ ಮತ್ತು ಅಸಿಸ್ಟೆಂಟ್ ಕಮೀಷನರ್ ಇಬ್ಬರೂ ದಂಗಾಗಿದ್ದಾರೆ. ಅಂದರೆ, ಜಿಲ್ಲಾಧಿಕಾರಿ ನೇತೃತ್ವದ ತಂಡ ದಾಳಿ ಮಾಡಿದಾಗ ಗ್ಯಾಂಬ್ಲರ್ ಒಬ್ಬ ತನ್ನ ರಕ್ಷಣೆಗೆ ಎಸ್‌ಪಿಗೆ ಮತ್ತು ಐಜಿಪಿಗೆ ಕಾಲ್ ಮಾಡುತ್ತಾನೆ ಎಂದರೆ ಈ ಅಕ್ರಮ ದಂಧೆಗಳಿಗೆ ಅವರಿಬ್ಬರ ಬೆಂಬಲ ಎಷ್ಟಿತ್ತೆಂಬುದು ಸ್ಪಷ್ಟವಾಗುತ್ತದೆ.

ಕೋರ್ಟಿನ ಆದೇಶವೆಂಬ ಬೆದರುಬೊಂಬೆ!

ಎಎಸ್‌ಪಿ ಜೆ.ಪಾಪಯ್ಯ, ವಿಜಯಕುಮಾರ್ ಮಡಿವಾಳರ್ ಪೊಲೀಸ್ ಬಲದೊಂದಿಗೆ ಕ್ಲಬ್ಬಿಗೆ ಬಂದಾಗ ಗರಂ ಆಗಿದ್ದ ಜಿಲ್ಲಾಧಿಕಾರಿ ಇಷ್ಟೊಂದು ಅಕ್ರಮ ನಡೆಯುತ್ತಿದ್ದರೂ ಪೊಲೀಸರು ಏನು ಮಾಡುತ್ತಿದ್ದರು ಎಂದು ಸ್ವಲ್ಪ ಖಾರವಾಗಿಯೇ ಪ್ರಶ್ನಿಸಿದ್ದಾರೆ. ಅದಕ್ಕೆ ಜೆ.ಪಾಪಯ್ಯನೆಂಬ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ತಡವರಿಸುತ್ತಾ "ಪೊಲೀಸರು ಕ್ಲಬ್ಬಿನೊಳಗೆ ಬಂದು ಪರಿಶೀಲಿಸಬಾರದು ಅಂತ ಕ್ಲಬ್ಬಿನವರು ಹೈಕೋರ್ಟಿನ ಕಲಬುರಗಿ ಪೀಠದಿಂದ ಆದೇಶ ಮಾಡಿಸಿಕೊಂಡು ಬಂದಿದ್ದಾರೆ" ಅಂತ ಹೇಳಿದ. ಜಿಲ್ಲಾಧಿಕಾರಿಗೆ ಅದನ್ನು ನಂಬಲಾಗಲಿಲ್ಲ. ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿದ್ದರೂ ಭೇಟಿ ಕೊಟ್ಟು ಪರಿಶೀಲಿಸಬಾರದು ಅಂತ ಯಾವ ಕೋರ್ಟು ತಾನೆ ಹೇಳುವುದಕ್ಕೆ ಸಾಧ್ಯ? ಆದರೆ, ಕೊನೆಗೆ ಕೋರ್ಟಿನ ಆದೇಶ ಪ್ರತಿಯನ್ನು ಪರಿಶೀಲಿಸಿದಾಗಲೇ ಅಸಲೀಯತ್ತು ಗೊತ್ತಾಗಿದ್ದು.

ವಿಷಯ ಏನಪ್ಪಾ ಅಂದರೆ ಕ್ಲಬ್ಬಿನವರು ಹಾಕಿದ ರಿಟ್ ಪೆಟಿಷನ್ ವಿಚಾರಣೆ ಮಾಡಿದ ಹೈಕೋರ್ಟಿನ ಕಲಬುರ್ಗಿ ವಿಭಾಗೀಯ ಪೀಠವು 2014ರ ಡಿಸೆಂಬರ್ 15ರಂದು ಒಂದು ಆದೇಶ ಹೊರಡಿಸಿದ್ದು ನಿಜ. ಆದರೆ, ಅದರಲ್ಲಿ ಪೊಲೀಸರು ಕ್ಲಬ್ಬಿನೊಳಗೆ ತಪಾಸಣೆ ಮಾಡಬಾರದು ಅಂತ ಹೇಳಿಲ್ಲ, ಬದಲಿಗೆ, ಕ್ಲಬ್ಬಿನವರಿಗೆ ಹತ್ತಾರು ಷರತ್ತುಗಳನ್ನು ಹಾಕಿದ್ದು ಮಾತ್ರವಲ್ಲದೇ ಯಾವುದೇ ಅಕ್ರಮ ಚಟುವಟಿಕೆಗಳು ಕ್ಲಬ್ಬಿನಲ್ಲಿ ನಡೆಯುತ್ತಿರುವುದರ ಬಗ್ಗೆ ಮಾಹಿತಿ ಸಿಕ್ಕರೆ ಕ್ಲಬ್ಬಿಗೆ ಹೋಗಿ ಪರಿಶೀಲಿಸಬೇಕೆಂದು ಪೊಲೀಸರಿಗೆ ನಿರ್ದೇಶನ ಕೊಟ್ಟಿದೆ!

ತಾನೇ ಬಹಳ ಬುದ್ಧಿವಂತ ಎಂದುಕೊಂಡಿರುವ ಎಸ್ಪಿ ನಾಗರಾಜ ಹೈಕೋರ್ಟಿನ ಆದೇಶವೆಂಬ ಬೆದರುಬೊಂಬೆಯನ್ನು ತೋರಿಸಿ ಜಿಲ್ಲಾಧಿಕಾರಿ ಮತ್ತು ಅಸಿಸ್ಟೆಂಟ್ ಕಮೀಷನರ್ ಇಬ್ಬರನ್ನೂ ಯಾಮಾರಿಸುವುದಕ್ಕೆ ಎಎಸ್ಪಿ ಪಾಪಯ್ಯ ಮತ್ತು ಡಿಎಸ್‌ಪಿ ವಿಜಯಕುಮಾರ್ ಮಡಿವಾಳರ್ ಅವರನ್ನು ಉಪಯೋಗಿಸಿಕೊಂಡಿದ್ದಾನೆ! ಆದರೆ, ಜಿಲ್ಲಾಧಿಕಾರಿಯಿಂದ ಬಾಯಿಗೆ ಬಂದಂತೆ ಬೈಸಿಕೊಂಡಿದ್ದು ಮಾತ್ರ ತೆರೆಮರೆಯಲ್ಲಿ ಮುಖಮುಚ್ಚಿಕೊಂಡು ಕುಳಿತಿದ್ದ ಎಸ್ಪಿಯಲ್ಲ, ಬದಲಿಗೆ ಬೆದರುಬೊಂಬೆ ಹಿಡಿದುಕೊಂಡು ಹೆದರಿಸಲು ಬಂದಿದ್ದ ಪಾಪಯ್ಯ ಮತ್ತು ಮಡಿವಾಳರ್!

ಬಸವರಾಜ ಬಲಿಯಾದ!

ಜಿಲ್ಲಾಧಿಕಾರಿ ತಮಗೆ ಗೊತ್ತಿಲ್ಲದಂತೆ ಕ್ಲಬ್ಬಿನ ಮೇಲೆ ದಾಳಿ ನಡೆಸಿದ್ದು ರಾಯಚೂರು ಪೊಲೀಸರಿಗೆ, ಅದರಲ್ಲೂ ವಿಶೇಷವಾಗಿ ಎಸ್ಪಿಗೆ ಭಾರಿ ಮುಜುಗರ ತಂದಿತ್ತು! ಎರಡು ದಿನ ಆತ ಯಾರ ಕಣ್ಣಿಗೂ ಬೀಳಲಿಲ್ಲ, ಈ ದಾಳಿ ವಾಸ್ತವದಲ್ಲಿ ಜಿಲ್ಲೆಯಲ್ಲಿ ಮಾತ್ರವಲ್ಲದೇ ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಂಚಲನ ಮೂಡಿಸಿತಲ್ಲದೇ ರಾಯಚೂರು ಪೊಲೀಸರ ಅದಕ್ಷತೆ ಮತ್ತು ಲಂಚಗುಳಿತನವನ್ನು ಜಗಜ್ಜಾಹೀರುಗೊಳಿಸಿತು. ಎಸ್ಪಿ ನಾಗರಾಜನ ಮಾನಮರ್ಯಾದೆಯನ್ನು ಬೀದಿಪಾಲು ಮಾಡಿತು. ಇಂತಹ ಸಂದರ್ಭದಲ್ಲಿ ತಮ್ಮ ಮುಖ ಉಳಿಸಿಕೊಳ್ಳುವುದಕ್ಕೋಸ್ಕರ ಐಜಿಪಿ ಸುನೀಲ್ ಅಗರವಾಲ್ ಮತ್ತು ಎಸ್ಪಿ ನಾಗರಾಜ್ ಇಬ್ಬರೂ ಸೇರಿಕೊಂಡು ಷಡ್ಯಂತ್ರ ರೂಪಿಸಿದರು. ಅದರ ಪ್ರಕಾರ, ಕ್ಲಬ್ಬಿನಲ್ಲಿ ನಡೆಯುತ್ತಿದ್ದ ಅಕ್ರಮ ಚಟುವಟಿಕೆಗಳನ್ನು ನಿಲ್ಲಿಸಲು ವಿಫಲರಾಗಿದ್ದಾರೆ ಎಂಬ ಆರೋಪವನ್ನು ರಾಯಚೂರು ಗ್ರಾಮೀಣ ವೃತ್ತದ ಇನ್ಸ್‌ಪೆಕ್ಟರ್ ಕೆ. ಬಸವರಾಜ್ ಅವರ ತಲೆಗೆ ಕಟ್ಟಿ ಅವರನ್ನು ಅಮಾನತ್ತು ಮಾಡಿದರು! ತನ್ನ ವ್ಯಾಪ್ತಿಯಲ್ಲಿ ಬರುವ ಈ ಕ್ಲಬ್ಬಿನಲ್ಲಿ ಅಕ್ರಮ ಚಟುವಟಿಕೆಗಳು ನಡೆಯದಂತೆ ತಡೆಯುವುದಕ್ಕೆ ವಾಸ್ತವದಲ್ಲಿ ಬಸವರಾಜ್ ಆಗಲೀ ಅಥವಾ ಹಿಂದಿನ ಸಬ್‌ಇನ್ಸ್‌ಪೆಕ್ಟರ್ ಸಣಮನಿಯಾಗಲೀ ಎಷ್ಟು ಪ್ರಾಮಾಣಿಕ ಪ್ರಯತ್ನ ನಡೆಸಿದ್ದರು ಎಂಬುದು ನಮಗೆ ಗೊತ್ತಿಲ್ಲ. ಕ್ಲಬ್ಬಿನ ಮೇಲೆ ಕಡಿವಾಣ ಹಾಕುವುದಕ್ಕೆ ಹೋದಾಗ ಎಸ್ಪಿ ನಾಗರಾಜನೇ ಅದಕ್ಕೆ ಅಡ್ಡಬಂದನಾ ಎಂಬುದೂ ಸ್ಪಷ್ಟವಿಲ್ಲ ಅಥವಾ ಇನ್ಸ್‌ಪೆಕ್ಟರ್ ಬಸವರಾಜ ಮತ್ತು ಸಬ್‌ಇನ್ಸ್‌ಪೆಕ್ಟರ್ ಸಣಮನಿ ಇಬ್ಬರೂ ತಮ್ಮ ಪಾಲಿನ ಲಂಚದ ಪಾಲನ್ನು ಉಂಡು ಸುಮ್ಮನಾಗಿಬಿಟ್ಟರಾ ಎಂಬುದೂ ಸರಿಯಾಗಿ ತಿಳಿದಿಲ್ಲ. ಆದರೆ, ಅಲ್ಲಿ ಅಕ್ರಮ ದಂಧೆಗಳು ನಡೆಯುತ್ತಿದ್ದುದು ನಿಜ, ಅದಕ್ಕಾಗಿ ಎಸ್ಪಿ ನಾಗರಾಜನಿಗೆ ದಿನಕ್ಕೊಂದು ಲಕ್ಷ ಲಂಚ ಸುದಾಯವಾಗುತ್ತಿದ್ದುದೂ ಅಷ್ಟೇ ನಿಜ. ಹಾಗಿದ್ದ ಮೇಲೆ ಎಸ್ಪಿ ನಾಗರಾಜನನ್ನೇ ಅದಕ್ಕೆ ನೇರ ಹೊಣೆಗಾರರನ್ನಾಗಿ ಮಾಡಬೇಕಿತ್ತು, ಅದನ್ನು ಬಿಟ್ಟು ತಮ್ಮ ಕೈಕೆಳಗಿನ ಅಧಿಕಾರಿಗಳನ್ನೇ ಸಂಪೂರ್ಣ ಹೊಣೆಗಾರರನ್ನಾಗಿಸಿ, ಬಲಿಪಶುವನ್ನಾಗಿ ಮಾಡಿ ತಾವು ಮಾತ್ರ ಶುದ್ಧಹಸ್ತರೆಂದು ತೋರಿಸಿಕೊಳ್ಳುತ್ತಿರುವ ಎಸ್ಪಿ ನಾಗರಾಜ ಮತ್ತು ಐಜಿಪಿ ಸುನಿಲ್ ಅಗರ್‌ವಾಲ್ ವಿರುದ್ಧವೂ ರಾಯಚೂರು ನಾಗರಿಕರಲ್ಲಿ ತೀವ್ರ ಅಸಹನೆ, ಕೋಪ ಮೂಡುತ್ತಿದೆ. ಮಾತ್ರವಲ್ಲ, ಸತ್ಯ ಗೊತ್ತಿರುವ ರಾಯಚೂರು ಜಿಲ್ಲೆಯ ಇನ್ಸ್‌ಪೆಕ್ಟರ್‌ಗಳು, ಸಬ್‌ಇನ್ಸ್‌ಪೆಕ್ಟರ್‌ಗಳು, ಕಾನ್ಸ್‌ಟೇಬಲ್‌ಗಳು ಎಸ್ಪಿ ನಾಗರಾಜ್ ವಿರುದ್ಧ ಒಳಗೊಳಗೇ ಕುದಿಯುತ್ತಿದ್ದಾರೆ. ಅವರ ಸಿಟ್ಟಿನ ಕಟ್ಟೆ ಯಾವಾಗ ಒಡೆಯುತ್ತೋ ಗೊತ್ತಿಲ್ಲ,

ಒಂದಂತೂ ಸ್ಪಷ್ಟ. ನಾಲಾಯಕ್ ನಾಗರಾಜ ರಾಯಚೂರಿನಿಂದ ತೊಲಗದ ಹೊರತು ಜಿಲ್ಲೆಯಲ್ಲಿ ಇಂತಹ ಅಕ್ರಮ ದಂಧೆಗಳು ನಿಲ್ಲುವುದಿಲ್ಲ,

■ ವರದಿಗಾರ

ಕಂತೆಭಿಕ್ಷೆ ಜನ ಸಂತೆಯಲ್ಲಿ ಕಿತ್ತಾಡಿದರಂತಲ್ಲಾ

ಥೂತ್ತೇರಿ


▸ ಯಾಹೂ

"ಕಂತೆ ಭಿಕ್ಷೆ ತಂದು ಹಂಚಿ ಉಣ್ಣುವಾಗ ಹೊಡೆದಾಡಿ ಸತ್ತರಂತೆ" ಎನ್ನುವಂತೆ ದೆಹಲಿ ಗದ್ದುಗೆ ಏರಿದ ಅಪ್ರಬುದ್ಧರು ತಮ್ಮತಮ್ಮವರನ್ನೆ ಉಚ್ಚಾಟಿಸುತ್ತ ಹೊರಟಿದ್ದಾರಂತಲ್ಲಾ, ಇದನ್ನು ನೋಡಿದ ಚಡ್ಡಿಗಳು ಶಾನೆ ಪುಳಕಗೊಂಡು, ಬೇಟೆ ನೆಲಕ್ಕೊರಗುವವರೆಗೂ ಕಾಯುವ ಹೈನಾಗಳಂತೆ ನೆಗೆದಾಡುತ್ತಿರುವಾಗ, ಅತ್ತ ಕಾಂಗೈಗಳು ನಿರಿಂದ್ರಿಯರಂತೆ ಯಾವುದಕ್ಕೂ ಸ್ಪಂದಿಸದೆ ಗೊತ್ತುಗುರಿಯಿಲ್ಲದ ಗಡವಗಳಾಗಿದ್ದಾರಂತಲ್ಲಾ, ಇಂತ ಸಂದರ್ಭದಲ್ಲಿ ಅತ್ತ ಕೇಜ್ರಿವಾಲ, ಇತ್ತ ಯಾದವನನ್ನು ಸಮನಾಗಿ ನೋಡುವುದಾದರೆ, ಕೇಜ್ರಿವಾಲ ದೆಹಲಿಗೆ ಏನಾದರೂ ಮಾಡಲು ಬಂದವನಂತೆ ಕಂಡರೆ, ಯಾದವ "ಮೊದಲು ನಮ್ಮ ಜಗಳ ಇತ್ಯರ್ಥವಾಗಲಿ. ನಮ್ಮ ಬೇಡಿಕೆ ಕಾರ್ಯಗತವಾಗಲಿ" ಎನ್ನುವಂತಹ ಆಸಾಮಿಯಂತಲ್ಲಾ,

ಏನೇ ಆದರೂ ಆಮ್ ಆದ್ಮಿಯಂತಹ ಪಾರ್ಟಿಗೆ ಕೇಜ್ರಿಯೂ ಬೇಕು, ಯಾದವನೂ ಬೇಕು. ಆದ್ದರಿಂದ ದೆಹಲಿಯ ಜನ ಕೇಜ್ರಿ ಕೆನ್ನೆಗೆ ಮತ್ತೊಮ್ಮೆ ಹೊಡೆದು, ಯಾದವನ ಕಪಾಳಕ್ಕೂ ಎರಡು ಬಿಟ್ಟು, ಸರಿಯಾಗಿರಿ ಎಂದು ಕೇಳುವಷ್ಟರಲ್ಲಿ, ಎಲ್ಲಾ ಮುಗಿದುಹೋಗಿದೆಯಂತಲ್ಲಾ, ಇದರಿಂದ ದೇಶದಾದ್ಯಂತ ಆಮ್ ಆದ್ಮಿಗಳು ಹಾಕಿದ್ದ ಟೋಪಿಗಳು ಬಣ್ಣ ಕಳೆದುಕೊಂಡ ಕಾಂಗ್ರೆಸ್ಸಿಗರ ಟೋಪಿಯಂತೆ ಕಾಣುತ್ತಿವೆಯಂತಲ್ಲಾ, ಅದೇನೇ ಆಗಲಿ, ನಮ್ಮ ಎದುರು ನೂರಾರು ಘಟನೆಗಳ ಉದಾಹರಣೆಗಳಿರುವಾಗ, ಅವನ್ನು ನೋಡಿಯಾದರೂ ತಿಳಿದುಕೊಳ್ಳದ ಆಮ್ ಆದ್ಮಿಗಳು ಕುಲಕ್ಕೆ ಮೂಲವಾದ ಕೊಡಲಿಯ ಕಾವಿನಂತಾದದ್ದು ದೆಹಲಿ ದುರಂತ, ಅಲ್ಲಲ್ಲ ದೇಶದ ದುರಂತವೇ ಸರಿ, ಥೂತ್ತೇರಿ!

* * *

ಕಂಡವರ ಆಫೀಸಿನಲ್ಲಿದ್ದುಕೊಂಡು ರಾಜ್ಯವನ್ನಾಳಿದ ದೇವೇಗೌಡರ ಪಟಾಲಮ್ಮು, ಈಗ ಸ್ವಂತ ಶೆಡ್ಡಾಕಿಕೊಂಡಿದೆಯಂತಲ್ಲಾ, ಶೆಡ್ಡಿನೊಳಗೆ ಪಾರ್ಟಿಯಿಂದ ಉಚ್ಚಾಟಿತರ ಕಡತಗಳು, ದೇಣಿಗೆ ರಸೀದಿ ಪುಸ್ತಕ ಮತ್ತು




ಲ್ಯಾಪ್‌ಟಾಪನ್ನು ತಂದು ಮಡಗಿದ ನಂತರ "ಪ್ರತಿ ಕಾರ್ಯಕರ್ತರಿಂದ ಹಣ ಸಂಗ್ರಹಿಸಿ ಆಫೀಸು ಕಟ್ಟುತ್ತೇನೆ" ಎಂದು ಗೌಡರು ಶಪಥ ಮಾಡಿದರಂತಲ್ಲಾ, ಕೂಡಲೇ ಜೆಡಿಎಸ್ ಸರಕಾರವಿದ್ದಾಗ ಹೊಡೆದು ಮುಕ್ಕಿದವರ ಪೈಕಿ ಒಬ್ಬ ಶಾಸಕ ಸ್ಪಾಟಲ್ಲೇ ಇಪ್ಪತ್ತೈದು ಲಕ್ಷವನ್ನು ಎಣಿಸದೇ ಕೊಟ್ಟನಂತಲ್ಲಾ, ಸದರಿ ಆಸಾಮಿ ಪಾಲಿಗೆ ಹಣ ಎಂದರೆ ಕರಡಿ ಕೂದಲಿಗೆ ಸಮ, ಅವನೇನೋ ಕೊಡುತ್ತಾನೆಂದರೆ ನಾವೆಲ್ಲಿಂದ ತರೋದು ಎಂದು ಉಳಿದ ಹಾಲಿ-ಮಾಜಿ ಶಾಸಕರು ಗೊಣಗುತ್ತಿರುವಾಗಲೇ ಕುಮಾರಣ್ಣನ ಕುಲಪುತ್ರನ ಸಿನಿಮಾಕ್ಕೆ ಅರವತ್ತು ಕೋಟಿ ಬಜೆಟ್ ತಯಾರಾಗಿದೆಯಂತಲ್ಲಾ, ಒಂದು ಮೂರ್ಖ ಸಿನಿಮಾಕ್ಕಾಗಿ ಅರವತ್ತು ಕೋಟಿ ಉಡಾಯಿಸುವ ಜನಕ್ಕೆ ಕನಿಷ್ಠ ಇಪ್ಪತ್ತು ಕೋಟಿ ಸುರಿದು ಒಂದು ಪಾರ್ಟಿ ಆಫೀಸು ಕಟ್ಟಲು ಏನಾಗಿದೆ? ಸಿನಿಮಾ ದುಡ್ಡು ನೀರಿಗೆ ಹಾಕಿದಂತಾದರೆ, ಪಾರ್ಟಿ ಆಫೀಸಿನ ಮೇಲೆ ಸುರಿಯುವ ಹಣ ಬಡ್ಡಿ ನೀಡುವ ಬ್ಯಾಂಕಿನಲ್ಲಿ ಠೇವಣಿ ಇಟ್ಟಂತಲ್ಲವೆ? ಪಾರ್ಟಿ ಆಫೀಸಿನ ಭವ್ಯತೆಯನ್ನು ನೋಡಿ ಇನ್ನೂರ ಇಪ್ಪತ್ನಾಲ್ಕು ಜನ ಟಿಕೆಟ್‌ಗೆಂದು ಬಂದಾಗ ತಲಾ ಒಂದು ಲಕ್ಷ ಕೊಟ್ಟರೂ ಸಾಕು, ಹಾಕಿದ ದುಡ್ಡು ಅಲ್ಲೇ ಬರುತ್ತೆ, ಅದರೇನು, ತಮ್ಮ ಜೀವಮಾನದಲ್ಲಿ ಬೇರೆಯವರ ಜೇಬಿನಿಂದಲೇ ಪಾರ್ಟಿ ಕಟ್ಟಿ ರಾಜ್ಯವಾಳಿದ ಗೌಡರು ಮನೆ ದುಡ್ಡು ತರುವಂತಹ ಮೂರ್ಖರಲ್ಲಾ ಎಂಬುದು ಪಾರ್ಟಿ ಜನಕ್ಕೂ ಗೊತ್ತಿದೆಯಂತಲ್ಲಾ, ಥೂತ್ತೇರಿ!!

* * *

ಕನ್ನಡ ಭಾಷೆಯನ್ನು ನಿರ್ನಾಮ ಮಾಡುವಲ್ಲಿ ನಮ್ಮ ಕೋರ್ಟು, ಸರಕಾರ ಮುಖ್ಯವಾಗಿ ಕನ್ನಡಿಗರು ಟೊಂಕ ಕಟ್ಟಿ ನಿಂತಿರುವಾಗಲೇ ವೀರಪ್ಪ ಮೊಯ್ಲಿಯವರು ಬರೆದ ಶ್ರೀರಾಮಾಯಣ ಮಹಾನ್ವೇಷಣಂ ಕೃತಿಗೆ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪ್ರಾಪ್ತವಾಗಿದೆಯಂತಲ್ಲಾ, ಮೊಯ್ಲಿ ಸುಳ್ಳು ಹೇಳುವುದನ್ನು ಬಿಟ್ಟರೆ ಉತ್ತಮ ರಾಜಕಾರಣಿ. ಬಂಗಾರಿ ಭ್ರಷ್ಟತೆಯನ್ನೆಲ್ಲಾ ಉಪ್ಪುಕಾರ ಹಚ್ಚಿ ನರಸಿಂಹರಾಯನಿಗೆ ಹೇಳಿ ಅವನಿಗೆ ಉರಿಯತ್ತುವಂತೆ ಮಾಡಿ, ಮುಖ್ಯಮಂತ್ರಿ ಪದವಿ ಹೊಡೆದ ಲೆಕ್ಕಾಚಾರವಂತೆ. ಜೊತೆಗೆ, ಉತ್ತಮ ಆಡಳಿತ ಕೊಡಲು ಶ್ರಮಿಸಿದಾತ. ಲಂಕೇಶರ ಕೈಯಲ್ಲಿ ಭೇಷ್ ಎನ್ನಿಸಿಕೊಂಡ ಮುಖ್ಯಮಂತ್ರಿ. ಅಂತಹ ಭೇಷ್‌ಗಿರಿ ಎದುರು ಸರಸ್ವತಿ ಸಮ್ಮಾನ್ ಏನೇನೂ ಅಲ್ಲ ಎಂದು ಲಂಕೇಶ್ ಅಭಿಮಾನಿಗಳು ಹೇಳುತ್ತಿದ್ದಾರಂತಲ್ಲಾ, ನಿಜಕ್ಕೂ ಸರಸ್ವತಿ ಸಮ್ಮಾನ್ ಪ್ರಶಸ್ತಿಗೆ ಗೌರವ ಬಂದಿರುವುದು ಈಗಲೇ. ಏಕೆಂದರೆ, ಅದು ಈ ಹಿಂದೆ ಜನ ಸಂಘದ ಹುರಿಯಾಳಾಗಿದ್ದ ಗೋಪಾಲಕೃಷ್ಣ ಅಡಿಗರಿಗೆ ಸಂದಿತ್ತು, ನಂತರ ಸಂಘದ ಸಕ್ರಿಯ ಕಾರ್ಯಕರ್ತನಾದ ಸಂತೆ ಶಿವಾರದ ಭೈರಪ್ಪನಿಗೆ ಬಂದಿತ್ತು, ಆಗ ಪುಳಕಿತಗೊಂಡ ಪ್ರತಾಪ ಸಿಂಹನೆಂಬ ಸಿಂಘಳೀಕ ಪುಟಗಟ್ಟಲೆ ಪ್ರತಾಪ ಕೊಚ್ಚಿಕೊಂಡು ಇದೊಂದು ಜ್ಞಾನಪೀಠವನ್ನು ಹಿಂದಿಕ್ಕಿದ ಪ್ರಶಸ್ತಿ ಎಂದು ಹೊಗಳಿದ್ದ, ಅದೇ ಅಮಲಿನಲ್ಲಿರುವಾಗಲೇ ಈಗ ಸರಸ್ವತಿ ಸಮ್ಮಾನ್ ಅಪ್ಪಟ ಶೂದ್ರ, ಮಾನವತಾವಾದಿ ಮೊಯ್ಲಿಗೆ ದಕ್ಕಿರುವುದರಿಂದ ತಡವಾಗಿಯಾದರೂ ಪ್ರಶಸ್ತಿಗೇ ಗೌರವ ಬಂದಿದೆಯಂತಲ್ಲಾ, ಥೂತ್ತೇರಿ!!

* * *

ಉತ್ತಮ ವಾಗ್ಮಿ, ಬೆಸ್ಟ್ ಪಾರ್ಲಿಮೆಂಟೇರಿಯನ್, ಬಿಜೆಪಿಯ ಸಂಸ್ಥಾಪಕ ಮತ್ತು ಸಂಘದಿಂದ ಬಂದು ಪ್ರಧಾನಿಯಾದ ಮೊದಲಿಗ, ಇತ್ಯಾದಿ ಸಾಧನೆಗೈದಿರುವ ಅಟಲ್ ಬಿಹಾರಿ ವಾಜಪೇಯಿಯವರಿಗೆ ಮೋದಿ ಬದುಕಿರುವಾಗಲೇ ಭಾರತ ರತ್ನ ದಯಪಾಲಿಸಿ ಕೃತಜ್ಞನಾದನಂತಲ್ಲಾ, ಅದರೇನು ಕಾಲ ಪುರುಷನ ಅಮಾನುಷ ಹೊಡೆತಕ್ಕೆ ಸಿಕ್ಕಿ ಕಳೆದೊಂದು ದಶಕದಿಂದಲೂ ಮರಣಶಯ್ಯೆಯಲ್ಲಿರುವ ವಾಜಪೇಯಿಯವರಿಗೆ ಭಾರತ ರತ್ನ ಪ್ರಶಸ್ತಿ ಪ್ರದಾನ ಅರಿವಿಗೇ ಬರಲಿಲ್ಲವಂತಲ್ಲಾ, ಆದರೂ ಹಟ್ಟು ಬಿಡದ ಬಿಜೆಪಿಗಳು ವಾಜಪೇಯಿಯವರನ್ನು ಹಳೇ ಡ್ರೆಸ್‌ಗಳಲ್ಲೇ ಶೃಂಗರಿಸಿ, ಆಸನದ ಮೇಲೆ ಕೂರಿಸಿದಾಗಲೂ ಕೂಡ ಚಡ್ಡಿಗಳ ಚೇಷ್ಟೆಗೆ ಬೇಸತ್ತ ವಾಜಪೇಯಿ ತಲೆಯನ್ನೇ ಎತ್ತಲಿಲ್ಲವಂತಲ್ಲಾ, ಆಗ ಭಾರತ ರತ್ನವನ್ನೇ ಮುಖಕ್ಕೆ ಅಡ್ಡವಾಗಿಡಿದು ಪ್ರದಾನ ಮಾಡಿದ್ದನ್ನು ನೋಡಿದ ಮೋದಿ, ಇದು ನಿಜಕ್ಕೂ ಭಾರತದ ಪಾಲಿಗೆ ಐತಿಹಾಸಿಕ ದಿನ ಎಂದನಂತಲ್ಲಾ, ಆಗ ಅಲ್ಲೇ ಇದ್ದ ರಾಷ್ಟ್ರಪತಿ ಕನೆಯುವರು, "ಹೌದು, ಇದೊಂದು ರೀತಿ ಮರಗೋಸ್ಕರ ಪ್ರಶಸ್ತಿಯಿದ್ದಂತೆ", ಎಂದುಕೊಂಡವರಂತಲ್ಲಾ, ಥೂತ್ತೇರಿ!!! ■



ಆಮ್ ಆದ್ಮಿ ಪಾರ್ಟಿ

ಬಿಕ್ಕಟ್ಟಿನ ಪಾಠಗಳು

"ನಿಮು ಹೀಗಾಗಬಾರದಿತ್ತು, ಇಡೀ ದೇಶದ ರಾಜಕೀಯ ವಾತಾವರಣದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿ ಚಾರಿತ್ರಿಕ ಗೆಲುವು ಸಾಧಿಸಿದ್ದ ಆಮ್ ಆದ್ಮಿ ಪಕ್ಷ ಒಂದು ತಿಂಗಳು ತುಂಬುವ ಮೊದಲೇ 'ಪರಿಹಾರ ಕಾಣದಂತ' ಆಂತರಿಕ ಸಂಘರ್ಷದಲ್ಲಿ ಮುಳುಗಿಹೋಗಿದೆ. ಇದು ಈ ಕಾಲಮಾನದ ದೊಡ್ಡ ರಾಜಕೀಯ ದುರಂತ.

ಕೆಲವು ತಿಂಗಳುಗಳ ಹಿಂದೆ ದೇಶದಲ್ಲಿ ಎಂಥಾ ಪರಿಸ್ಥಿತಿ ಇತ್ತು? ಇಡೀ ದೇಶದಲ್ಲಿ ಮೋದಿಯ ಅಲೆ ಎದ್ದಿತ್ತು, ಕೇಂದ್ರದಲ್ಲಿ ಭಾರೀ ಬಹುಮತದಿಂದ ಬಿಜೆಪಿ ಅಧಿಕಾರ ಹಿಡಿದಿತ್ತು? ಒಂದಾದನಂತರ ಒಂದರಂತೆ ಹಲವಾರು ರಾಜ್ಯಗಳಲ್ಲಿ ಬಿಜೆಪಿಯ ಗೆಲುವಿನ ರಥ ಓಡುತ್ತಿತ್ತು, ದೇಶದ ಜನರಲ್ಲಿ ಆತಂಕ ಮನೆ ಮಾಡಿತ್ತು, ಈ ಮೋದಿ-ಬಿಜೆಪಿ ರಥವನ್ನು ತಡೆಯುವುದು ಸಾಧ್ಯವೆ? ಎಂಬ ಪ್ರಶ್ನೆ ಮೂಡಿದ್ದಂಥ ಸಂದರ್ಭದಲ್ಲಿ ದೆಹಲಿಯ ಆಮ್ ಆದ್ಮಿಗಳು ಮೋದಿ ರಥವನ್ನು ದೆಹಲಿಯಲ್ಲಿ ತಡೆದು ನಿಲ್ಲಿಸಿದರು. ಆಮ್ ಆದ್ಮಿಗಳಿಗೆ ಎಂಥಾ ಗೆಲುವು ಅಂತೀರಿ. 70ರಲ್ಲಿ 67 ಸೀಟಿನ ಗೆಲುವು. ಆಮ್ ಆದ್ಮಿಗಳ ಈ ಗೆಲುವನ್ನು ಕಂಡು ಬಿಜೆಪಿ-ಕಾಂಗ್ರೆಸ್ ಪಕ್ಷಗಳಿಗೆ ಭಾರೀ ಶಾಕ್ ಹೊಡೆದಂತಾಯ್ತು.

ಇಡೀ ದೇಶ ನೆಮ್ಮದಿಯ ನಿಟ್ಟುಸಿರು ಬಿಟ್ಟಿತು. ಮೋದಿ ಮೋಡಿಯನ್ನು ತಡೆಯಲು ಸಾಧ್ಯ ಎಂಬ ಆಶಾಭಾವ ಮತ್ತೆ ಎಲ್ಲೆಡೆ ಚಿಗುರತೊಡಗಿತು" .

ಮಾರ್ಚ್ 28ರಂದು ನಡೆದ ಎಎಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಅರವಿಂದ್ ಕೇಜ್ರಿವಾಲ್ ಮಾಡಿದ ಭಾಷಣದ ತುಣುಕು ಇದು.

ಕೇಜ್ರಿವಾಲರ ಈ ಮಾತು ಅಕ್ಷರಶಃ ಸತ್ಯ. ಬೆಳೆಯುತ್ತಿರುವ ಫ್ಯಾಸಿಸ್ಟ್ ಶಕ್ತಿಗಳನ್ನು ಕಂಡು ಇಡೀ ದೇಶದ ತುಂಬಾ ಆತಂಕದ ವಾತಾವರಣ ನಿರ್ಮಾಣವಾಗಿದ್ದ ದಿನಗಳಲ್ಲಿ ಮೋದಿ ಮೋಡಿಯನ್ನು ಮಕಾಡೆ ಕೆಡವಿದ್ದು ಮಾತ್ರ ದೆಹಲಿ ಜನತೆ ಮತ್ತು ಆಮ್ ಆದ್ಮಿ ಪಕ್ಷ. ಅದರಲ್ಲೂ ಈ ಚಾರಿತ್ರಿಕ ನಡೆಯನ್ನು ಸಾಧಿಸಿದ ಹೆಚ್ಚಿನ ಕೀರ್ತಿ ಅದರ ನಾಯಕತ್ವದಲ್ಲಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲರಿಗೆ ಸಲ್ಲಬೇಕು.

ಅಷ್ಟು ಮಾತ್ರವಲ್ಲ, ಕೇಜ್ರಿವಾಲ್ ನಾಯಕತ್ವದ ದೆಹಲಿ ಸರ್ಕಾರ ಕೇವಲ ಒಂದೂವರೆ ತಿಂಗಳ ಅವಧಿಯಲ್ಲೇ ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. "ಕೇಂದ್ರದಲ್ಲಿರುವ ಮೋದಿ ಸರ್ಕಾರ ಕಳೆದ 10 ತಿಂಗಳುಗಳಲ್ಲಿ ಮಾಡಿದ್ದಕ್ಕಿಂತಲೂ 4-5 ಪಟ್ಟು ಹೆಚ್ಚಿನ ಕೆಲಸವನ್ನು ಸಾಧಿಸಿದ್ದೇವೆ" ಎಂಬ ಕೇಜ್ರಿವಾಲರ ಮಾತನ್ನು ಅಲ್ಲಗಳೆಯಲಾಗದು.

ಕೆಲವು ಉದಾಹರಣೆಗಳನ್ನು ನೋಡೋಣ.

1. ಜನರಿಗೆ ಹೊರೆಯಾಗಿದ್ದ ವಿದ್ಯುತ್ ಬಿಲ್‌ನಲ್ಲಿ ಶೇ.50 ಕಡಿತ

2. 20 ಸಾವಿರ ಲೀಟರ್‌ವರೆಗಿನ ಗೃಹ ಬಳಕೆ ನೀರು ಉಚಿತ

3. ಒಂದೇ ವಾರದಲ್ಲಿ ಸ್ಲಮ್ಮುಗಳ ಎತ್ತಂಗಡಿ ವಿರುದ್ಧ ಆದೇಶ

4. ಮಹಿಳಾ ಭದ್ರತೆಗಾಗಿ ಮಾರ್ಷಲ್‌ಗಳ ನೇಮಕ (ಯಾಕೆಂದರೆ ದೆಹಲಿಯ ಪೊಲೀಸ್ ಇಲಾಖೆ ರಾಜ್ಯ ಸರ್ಕಾರದ ಅಡಿಯಲ್ಲಿಲ್ಲ)

5. ಡೊನೇಷನ್ ವಸೂಲಿ ಮಾಡುತ್ತಿದ್ದ 200 ಖಾಸಗಿ ಶಾಲೆಗಳ ಮೇಲೆ ಕ್ರಮ

6. ರೇಷನ್ ಮಾಫಿಯಾ ತಡೆಗಟ್ಟಲು ಇ-ರೇಷನ್ ಕಾರ್ಡ್ ಜಾರಿ

ಇವುಗಳಲ್ಲದೆ ಭ್ರಷ್ಟಾಚಾರದ ವಿರುದ್ಧ, ಆರೋಗ್ಯ ವ್ಯವಸ್ಥೆಯ ಸುಧಾರಣೆಗಾಗಿ, ರಿಕ್ಷಾವಾಲಾರ ಯೋಗಕ್ಷೇಮಕ್ಕಾಗಿ ಹತ್ತು ಹಲವು ವಿಭಿನ್ನ ಯೋಜನೆಗಳನ್ನು ಜಾರಿಗೆ ತಂದು ಜನಪರ ಆಳ್ವಿಕೆಯ ಒಂದು ಸಣ್ಣ ಸ್ಯಾಂಪಲ್‌ನ್ನು ನಮ್ಮ ಮುಂದಿರಿಸಿದೆ.

ಇಡೀ ದೇಶ ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಎಎಪಿ ಆಡಳಿತದ ಇಂಥಾ ಮಹತ್ವದ ಸುದ್ದಿಗಳನ್ನು ಮಾಧ್ಯಮಗಳು ಪ್ರಚುರಪಡಿಸಬೇಕಾಗಿತ್ತು, ಆದರೆ ಮಾಧ್ಯಮಗಳು ಎಎಪಿಗೆ ಸಂಬಂಧಿಸಿ ಇಂಥಾ ಯಾವ ವಿಚಾರಕ್ಕೂ ಅಷ್ಟು ಮಹತ್ವ ಕೊಡಲಿಲ್ಲ, ಎಎಪಿಗೆ ಪಾಸಿಟಿವ್ ಪ್ರಚಾರ ಕೊಡುವುದನ್ನು ನಿಲ್ಲಿಸಿ ಯಾವುದೋ ಕಾಲವಾಯ್ತು ಬಿಡಿ. ಏನಿದ್ದರೂ ನೆಗೆಟಿವ್ ಪ್ರಚಾರ ಮಾತ್ರ ಕಾಯಂ. ಆಡಿಕೊಳ್ಳೋರ ಮುಂದೆ ಜಾರಿಕೊಂಡು ಬಿದ್ದರು ಎಂಬಂತೆ ಇದೇ ಸಂದರ್ಭದಲ್ಲಿ ಎಎಪಿ ಪಕ್ಷದ ಆಂತರಿಕ ಸಂಘರ್ಷ ತಾರಕಕ್ಕೇರಿದೆ. ನಿತ್ಯವೂ ಎಎಪಿಗೆ ಸಂಬಂಧಿಸಿದ ನೆಗೆಟಿವ್ ಸುದ್ದಿಗಳು ಮಾಧ್ಯಮಗಳ ತುಂಬಾ ರಾರಾಜಿಸುತ್ತಿವೆ.

ಇಂಥಾ ಚಾರಿತ್ರಿಕ ಗೆಲುವಿನ ಆಚರಣೆಯ ಸಂಭ್ರಮ ತೀರುವ ಮುಂಚೆಯೇ ಆಪ್‌ನಲ್ಲಿ ಇಂಥಾ ನಕಾರಾತ್ಮಕ ಬೆಳವಣಿಗೆ ಉಂಟಾಗಿರುವುದು ತೀರಾ ದುರದೃಷ್ಟಕರ. ಇದು ದೇಶದಲ್ಲಿ ಜನಪರ ರಾಜಕೀಯವನ್ನು ನಿರೀಕ್ಷಿಸುತ್ತಿರುವ ಲಕ್ಷಾಂತರ ಜನರಲ್ಲಿ ಮತ್ತೆ ಆತಂಕವನ್ನು ಮೂಡಿಸಿದೆ. ಆಶಾವಾದದೆಡೆಗೆ ಮುಖ ಮಾಡಿದ್ದ ಅದೆಷ್ಟೋ ಮಂದಿ ಈ ಬೆಳವಣಿಗೆಗಳಿಂದಾಗಿ ಮತ್ತೆ ಸಿನಿಕತನಕ್ಕೆ ಜಾರಿದ್ದಾರೆ.

ಎಲ್ಲರಿಗಿಂತ ಹೆಚ್ಚಿನ ಆತಂಕ ನಿರಾಶೆಗೆ ಸಿಲುಕಿರುವವರು ಆಪ್ ಪಕ್ಷದ ಕಾರ್ಯಕರ್ತರು. ಈ ಗೆಲುವಿನ ಹಿಂದಿನ ನಿಜವಾದ ರೂವಾರಿಗಳು ಅವರೇ. ತನು-ಮನ-ಧನ ಎಲ್ಲವನ್ನೂ ಧಾರೆಯೆರೆದು ಕೆಲಸ ಮಾಡಿದ ಸಾವಿರಾರು ಕಾರ್ಯಕರ್ತರಲ್ಲಿ ಈ ಬೆಳವಣಿಗೆ ನಿರುತ್ಸಾಹ, ಜಿಗುಪ್ಸೆ ಮೂಡಿಸಿದೆ.

ಇದು ನಮ್ಮೆಲ್ಲರಿಗೂ ಆಶ್ಚರ್ಯದ, ಅತ್ಯಂತ ಬೇಸರದ ಸಂಗತಿ ಎಂಬುದೇನೋ ನಿಜ. ಆದರೆ ಆಪ್‌ನ ಆಂತರಿಕ ವಿಚಾರಗಳನ್ನು ಅರಿತಿದ್ದವರಿಗೆ ಈ ಬೆಳವಣಿಗೆಗಳು ಹೆಚ್ಚಿನ ಆಶ್ಚರ್ಯವನ್ನು ತರುತ್ತಿಲ್ಲ, ಯಾಕೆಂದರೆ ಆಪ್‌ನ ಈ ಸಮಸ್ಯೆಯ ಬೇರುಗಳು ಆ ಪಕ್ಷದ ಹುಟ್ಟಿನೊಂದಿಗೆ ಹೆಣೆದುಕೊಂಡಿವೆ.

ಪಕ್ಷದ ಹಿನ್ನೆಲೆ

ಈ ಪಕ್ಷ ಅಸ್ತಿತ್ವಕ್ಕೆ ಬಂದು ಇದೀಗ ಕೇವಲ ಎರಡು ವರ್ಷವಷ್ಟೆ ಸಂದಿದೆ. ಪಕ್ಷದ ಅಧಿಕೃತ ಘೋಷಣೆಯಾಗಿದ್ದು 2012ರ ನವೆಂಬರ್‌ನಲ್ಲಿ, ಚುನಾವಣಾ ಆಯೋಗದ ಮಾನ್ಯತೆ ಪಡೆದದ್ದು 2013ರ ಮಾರ್ಚ್‌ನಲ್ಲಿ.

ಇಷ್ಟು ಕಡಿಮೆ ಅವಧಿಯಲ್ಲಿ ಇಡೀ ದೇಶಾದ್ಯಂತ ತನ್ನ ಶಾಖೆಗಳನ್ನು ವ್ಯಾಪಿಸಿ, ಬಹುತೇಕ ಎಲ್ಲ ರಾಜ್ಯಗಳಲ್ಲೂ ಘಟಕವನ್ನು ಸ್ಥಾಪಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ಬದ್ಧತೆಯುಳ್ಳ ಸಾವಿರಾರು ಕಾರ್ಯಕರ್ತರನ್ನು ತನ್ನತ್ತ ಸೆಳೆದುಕೊಂಡಿದೆ. ತಮ್ಮ ಕಾರ್ಯಚಟುವಟಿಕೆಗಳೂ, ಕಾರ್ಯತಂತ್ರಗಳ ಮೂಲಕ ದಿನೇದಿನೇ ಸ್ವದೇಶದಲ್ಲಿ ಮಾತ್ರವಲ್ಲದೆ, ವಿದೇಶಗಳಲ್ಲೂ ತನ್ನ ಶಕ್ತಿ ಸಂಚಯ ಮಾಡಿಕೊಂಡಿದೆ. ಇಂದು ಹಲವಾರು ದೇಶಗಳಲ್ಲಿ ಎಎಪಿಗಾಗಿ ದುಡಿಯುವ ಕಾರ್ಯಕರ್ತರ ದೊಡ್ಡ ಪಡೆಯೇ ಸಜ್ಜಾಗಿದೆ.

ಇಷ್ಟು ಕಡಿಮೆ ಅವಧಿಯಲ್ಲಿ ಆ ಪಕ್ಷ 2013ರಲ್ಲಿ ದೆಹಲಿ ರಾಜ್ಯದ ಚುನಾವಣೆ ಎದುರಿಸಿದೆ. ನಂತರ ಲೋಕಸಭಾ ಚುನಾವಣೆ, ಅದರ ಬೆನ್ನ ಹಿಂದೆಯೇ ದೆಹಲಿ ರಾಜ್ಯದ ಚುನಾವಣೆ ಹೀಗೆ ಎಡೆಬಿಡದ ಚಟುವಟಿಕೆಯಲ್ಲಿ ಆ ಪಕ್ಷದ ನಾಯಕರೂ, ಕಾರ್ಯಕರ್ತರೂ ತೊಡಗಿಸಿಕೊಂಡಿದ್ದು ನಮ್ಮ ಕಣ್ಣಮುಂದಿದೆ.

ದೆಹಲಿ ಚುನಾವಣೆಯ ಭಾರೀ ಗೆಲುವಿನ ನಂತರ ಈ ಪಕ್ಷದ ಬಗೆಗಿನ ಒಲವು ಜನಸಾಮಾನ್ಯರಲ್ಲಿ ಹಲವು ಪಟ್ಟು ಹೆಚ್ಚಾಗಿತ್ತು, ಇಡೀ ದೇಶದ ರಾಜಕೀಯಕ್ಕೆ ಎಎಪಿಯೊಂದೇ ಪರ್ಯಾಯ ಎಂಬ ಮಾತುಗಳೂ ಕೇಳಿಬಂದಿದ್ದವು. ಅತಿ ಕಡಿಮೆ ಅವಧಿಯಲ್ಲಿ ಈ ದೇಶದ ಜನಸಾಮಾನ್ಯರ ನಾಡಿಮಿಡಿತಕ್ಕೆ ಸ್ಪಂದಿಸಿ, ಜನರ ಕನಸುಗಳಿಗೆ ರೆಕ್ಕೆಮೂಡಿಸಿದ್ದು ಆಪ್ ಪಕ್ಷ. ಇದು ಈ ಪಕ್ಷದ ಬಹುದೊಡ್ಡ ಶಕ್ತಿ ಮತ್ತು ಹೆಗ್ಗಳಿಕೆ ಎಂಬುದರಲ್ಲಿ ಎರಡು ಮಾತಿಲ್ಲ, ಈ ಪಕ್ಷದ ಅನುಭವದಿಂದ ಈ ದೇಶದ ಪ್ರಗತಿಪರ ಶಕ್ತಿಗಳು, ಸಾಮಾಜಿಕ ಸಂಘಟನೆಗಳು, ಎಡಪಂಥೀಯರು ಕಲಿಯಬೇಕಾದ ಪಾಠ ಬಹಳ ದೊಡ್ಡದು.

ಇಂಥಾ ಬಹು ದೊಡ್ಡ ಶಕ್ತಿಯನ್ನು ಪಡೆದುಕೊಂಡಿರುವಂತೆಯೇ ಈ ಪಕ್ಷದಲ್ಲಿ ಬಹು ದೊಡ್ಡ ಮಿತಿಯೂ ಅಡಗಿದೆ. ಆ ಮಿತಿಗೆ ಕಾರಣ ಆ ಪಕ್ಷದ ಹುಟ್ಟಿನೊಂದಿಗೆ ಮಿಳಿತವಾಗಿದೆ.

ನಮಗೆಲ್ಲ ತಿಳಿದಿರುವಂತೆ ಅಣ್ಣಾ ನೇತೃತ್ವದ 'ಭ್ರಷ್ಟಾಚಾರ ವಿರೋಧಿ ಆಂದೋಲನ'ದ ಫಲಿತಾಂಶವೇನೋ ಎಂಬಂತೆ ಎಎಪಿ ಹುಟ್ಟಿ ಬಂತು. ಹೀಗೆ ಈ ಪಕ್ಷದಡಿ ಒಟ್ಟಾದ ಸಾವಿರಾರು ಮಂದಿ ಭಿನ್ನಭಿನ್ನವಾದ ಹಿನ್ನೆಲೆಯುಳ್ಳವರು. ವಿಭಿನ್ನ ಸೈದ್ಧಾಂತಿಕ ಹಿನ್ನೆಲೆಯವರು. ವಿಬಿನ್ನ ಸಾಮಾಜಿಕ ಚಳವಳಿಗಳ ಧಾರೆಗಳಿಂದ ಬಂದವರು. ಇದರ ಕೇಂದ್ರ ವ್ಯಕ್ತಿಯಾಗಿ ಅರವಿಂದ್ ಕೇಜ್ರಿವಾಲ್ ನಿಂತಿದ್ದರೆ ಅವರ ಎಡಬಲಗಳಲ್ಲಿ ಯೋಗೇಂದ್ರ ಯಾದವ್, ಪ್ರಶಾಂತ್ ಭೂಷಣ್, ಆಶಿಶ್ ಕೇತಾನ್‌ನಂತಹ ಚಿಂತಕರು, ಸಾಮಾಜಿಕ ಕಾರ್ಯಕರ್ತರು ಅಣಿನೆರೆದರು. ಕ್ರಮೇಣ ನರ್ಮದಾ ಬಚಾವೋ ಆಂದೋಲನದ ಮೇಧಾ ಪಾಟ್ಕರ್, ಮಾಹಿತಿ ಹಕ್ಕು ಹೋರಾಟಗಾರ್ತಿ ಅರುಣಾ ರಾಯ್ ಮುಂತಾದವರು ಜೊತೆಯಾದರು. ಹೀಗೆ ವೈವಿಧ್ಯಮಯ ಹಿನ್ನೆಲೆಯ ಸಾವಿರಾರು ಮಂದಿ ಒಟ್ಟುಗೂಡಿ ಎಎಪಿ ರೂಪು ತಳೆಯಿತು.

ಇಂದಿನ ಬಿಕ್ಕಟ್ಟಿನ ಬಗ್ಗೆ ಎಕನಾಮಿಕ್ ಟೈಮ್ಸ್ ಪತ್ರಿಕೆಯಲ್ಲಿ ಕಾಂಚನ್ ಭಟ್ಟಾಚಾರ್ಯ ಎಂಬುವವರು ಒಂದು ಲೇಖನ ಬರೆದಿದ್ದಾರೆ. ಈಕೆ ಭಾರತದ ಪ್ರಪ್ರಥಮ ಮಹಿಳಾ ಡಿಜಿಪಿ ಹುದ್ದೆಯೇರಿ ನಿವೃತ್ತಿಯಾದವರು. ನಂತರ ಆಮ್ ಆದ್ಮಿ ಪಕ್ಷದ ಅಭ್ಯರ್ಥಿಯಾಗಿ ಉತ್ತರಾಖಂಡ್‌ನ ಹರಿದ್ವಾರ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದವರು. ಅವರು ಈ ವಿದ್ಯಮಾನವನ್ನು ಈ ರೀತಿ ವಿಶ್ಲೇಷಿಸುತ್ತಾರೆ: "ಪರ್ಯಾಯದ ಹುಡುಕಾಟದಲ್ಲಿದ್ದ ನಮ್ಮಂಥವರಿಗೆ ಒಂದು ಆಶಾಕಿರಣವಾಗಿ ಈ ಪಾರ್ಟಿ ಕಂಡುಬಂತು. ಇಂದಿನ ರಾಜಕಾರಣದಲ್ಲಿ ದನಿಯೇ ಇಲ್ಲದ ಜನರ ದನಿಯಾಗಿದ್ದ ಈ ಪಕ್ಷದ ಜೊತೆ ಸಾವಿರಾರು ಮಂದಿ ಹೆಜ್ಜೆ ಹಾಕಿದ್ದರು.

ಆದರ ನಾಯಕತ್ವದ ಶ್ರೇಣಿಯಲ್ಲಿದ್ದ ವ್ಯಕ್ತಿಗಳು ಧೈರ್ಯಶಾಲಿಗಳು, ಸಾಹಸ ಮನೋಭಾವದವರು, ಪ್ರಾಮಾಣಿಕರು ಆಗಿದ್ದರು. ನಮ್ಮೆಲ್ಲರಲ್ಲಿದ್ದ ಉತ್ತಮ ಸತ್ವಗಳಿಗೆ ಇದು ವೇದಿಕೆಯಾಯಿತು. ನಮ್ಮೆಲ್ಲರ ಕನಸು ಒಂದೇ - ಅಂತಿಮವಾಗಿ ಜನ ಸಾಮಾನ್ಯರಿಂದ ಜನಸಾಮಾನ್ಯರಿಗಾಗಿ ಜನಸಾಮಾನ್ಯರ ಭಾರತದ ನಿರ್ಮಾಣ."

ಹೀಗೆ ನಾನಾ ಹಿನ್ನೆಲೆಯ ಜನಸಾಗರವೇನೋ ಕಲೆಯಿತು. ಆದರೆ ಇಷ್ಟೆಲ್ಲಾ ಸಂಕೀರ್ಣ ಸಂಯೋಜನೆ ಹೊಂದಿರುವ ಪಕ್ಷವನ್ನು ಯಶಸ್ವಿಯಾಗಿ ಮುನ್ನಡೆಸಬಲ್ಲಂಥ ಸಂಘಟನಾ ನೀತಿ ನಿಯಮಾವಳಿಗಳನ್ನು ಸರಿಯಾಗಿ ರೂಪಿಸಿಕೊಳ್ಳುವಲ್ಲಿ ಪಕ್ಷ ಎಡವಿದೆ. ಇರುವ ನಿಯಮಾವಳಿಗಳನ್ನು ಸರಿಯಾಗಿ ಜಾರಿಗೆ ತರುವುದರಲ್ಲಿಯೂ ಈ ಪಕ್ಷದ ನಾಯಕತ್ವಕ್ಕೆ ಪೂರ್ಣ ಪ್ರಮಾಣದ ಮನಸ್ಸಿಲ್ಲ ಎಂಬುದು ಈ ಎಲ್ಲ ಬೆಳವಣಿಗೆಗಳಲ್ಲಿ ಎದ್ದು ಕಾಣುವ ಸಂಗತಿ.

ಒಟ್ಟಾರೆ ಈ ಬಿಕ್ಕಟ್ಟು ಕೇಜ್ರಿವಾಲ್ ಮತ್ತು ಯಾದವ್-ಭೂಷಣ್‌ರ ಮಧ್ಯೆ ಕಿತ್ತಾಟದಂತೆ ಕಂಡುಬರುತ್ತಿದ್ದರೂ ಇದರ ಹಿಂದೆ ಆಳವಾದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿವೆ. ಬಹುತೇಕ ಭಿನ್ನಾಭಿಪ್ರಾಯಗಳು ಪಕ್ಷದ ಆಂತರಿಕ ಪ್ರಜಾತಂತ್ರದ ಸುತ್ತ ಇವೆ ಎಂಬುದು ಒಂದು ದೊಡ್ಡ ದುರಂತವೇ ಸರಿ.

ಈ ಬಿಕ್ಕಟ್ಟಿನ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ನೋಡೋಣ.

ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲೇ ಪಕ್ಷದ ಹಿರಿಯ ನಾಯಕರ ಮಧ್ಯೆ ತೀವ್ರ ಭಿನ್ನಾಭಿಪ್ರಾಯಗಳು ತಲೆದೋರಿದವು. ಸಾರಾಂಶದಲ್ಲಿ ಕೇಜ್ರಿವಾಲ್ ಏಕಪಕ್ಷೀಯ

ಸ್ಟಿಂಗ್ ಆಪರೇಷನ್ ಕೇಜ್ರಿವಾಲ್!

ಈ ಮಧ್ಯೆ ಕೇಜ್ರಿವಾಲ್‌ರ ಫೋನ್ ಸಂಭಾಷಣೆಯ ಸ್ಟಿಂಗ್ ಆಪರೇಷನ್ ಒಂದು ಬಹಿರ್ಗತಗೊಂಡು ಎಎಪಿಯ ಆಂತರಿಕ ಸ್ಥಿತಿಯನ್ನು ಬಿಚ್ಚಿಟ್ಟಿದೆ.

ಬಿಹಾರದ ಉಸ್ತುವಾರಿ ನಾಯಕ ಉಮೇಶ್ ಸಿಂಗ್ ಎಂಬುವವರು ಕೇಜ್ರಿವಾಲ್‌ಗೆ ಫೋನಾಯಿಸಿ "ನಿಮ್ಮನ್ನು ಕೈಮುಗಿದು ಕೇಳುತ್ತೇನೆ, ಯಾದವ್-ಭೂಷಣ್ ಅಂಥವರಲ್ಲ, ದಯವಿಟ್ಟು ಎಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡೋಣ. ನಾನು ಬೇಕಾದರೆ ಅವರ ಬಳಿಯೂ ಮಾತಾಡುತ್ತೇನೆ. ಅವಕಾಶ ಮಾಡಿಕೊಡಿ ಪ್ಲೀಸ್" ಎಂದು ಗೋಗರೆದರು.

ಆದರೆ ಎದುರು ಬದಿಯಿಂದ ಬಂದ ಕೇಜ್ರಿವಾಲ್‌ರ ಉತ್ತರಗಳನ್ನು ಕೇಳಿ. "ಮೈ ವೋ ಕಮೀನೋಂಕಿ ಸಾತ್ ಸಾತ್ ಕಾಮ್ ಕರ್‌ನಾ ನಹಿಂ ಹೋಗಾ", "ನಿಮಗೆ ಬೇಕಿದ್ದರೆ ಅವರ ಜೊತೆಗೆ ಹೋಗಿ, ನಿಮಗೆ ಒಳ್ಳೇದಾಗಲಿ", "ನಾನು ನಮ್ಮ 67 ಎಂಎಲ್‌ಎಗಳನ್ನು ಕರೆದುಕೊಂಡು ಬೇರೆ ಪಾರ್ಟಿ ಮಾಡುತ್ತೇನೆ" - ಹೀಗೇ ವಾದಸರಣಿ ಮುಂದುವರೆದಿದೆ.

ಉಮೇಶ್ ಸಿಂಗ್ ಮತ್ತಷ್ಟು ವಿನಂತಿಸಿಕೊಳ್ಳುತ್ತಿದ್ದಂತೆ ನಿಯಂತ್ರಣ ಕಳೆದುಕೊಂಡ ಕೇಜ್ರಿವಾಲ್ "ಇವರು (ಯ ಸಾಲೋಂ) ಬೇರೆ ಪಾರ್ಟಿಯಲ್ಲೇನಾದ್ರೂ ಇದ್ದಿದ್ದರೆ ಒದ್ದು ಹೊರಗೆ ಹಾಕುತ್ತಿದ್ದರು" ಎಂದು ಕೂಗಾಡಿದ್ದಾರೆ.

ಹಾಗಾದರೆ ನಮ್ಮ ಪ್ರಶ್ನೆ ಇಷ್ಟೆ. ನಿಮ್ಮ ಪಕ್ಷವನ್ನು ಇತರೆ ಪಕ್ಷಗಳ ಜೊತೆ ಹೋಲಿಸಿಕೊಳ್ಳುವ ದುಸ್ಥಿತಿಗೆ ನೀವು ಇಳಿದಿದ್ದೀರಾ? ಇಲ್ಲವಾದರೆ ಆ ಮಾತಿನ ಅರ್ಥವೇನು?

AAP
AAM AADMI PARTY

ಮಾತಿಗೂ ಕೃತಿಗೂ ಅಂತರವಾದಾಗ...

ಜನಲೋಕಪಾಲ್ ಜಾರಿಗೆ ಒತ್ತಾಯಿಸಿ ದೇಶಾದ್ಯಂತ ಚಳವಳಿ ನಡೆದದ್ದು ನಮಗಿನ್ನೂ ನೆನಪಿದೆಯಲ್ಲವೆ? ಅಂಥಾ ಚಳವಳಿಯ ಹಿಂದಿನ ರೂವಾರಿಗಳು ಇದೇ ಕೇಜ್ರಿವಾಲ್ ಮತ್ತಿತರರು. ಆ ಚಳವಳಿಯ ಫಲಿತಾಂಶವೆಂಬಂತೆ ಹುಟ್ಟಿಕೊಂಡಿದ್ದೇ ಆಮ್ ಆದ್ಮಿ ಪಾರ್ಟಿ.

ಇಂಥಾ ಆಮ್ ಆದ್ಮಿ ಪಾರ್ಟಿ ತನ್ನ ಪಕ್ಷದ ಆಂತರಿಕ ಆಗುಹೋಗುಗಳ ಮೇಲೆ ನಿಗಾ ಇಟ್ಟು ಪಕ್ಷವನ್ನು ನೀತಿಬದ್ಧವಾಗಿ ಮುನ್ನಡೆಸಲು 'ಆಂತರಿಕ ಲೋಕಪಾಲ್'ರನ್ನು ನೇಮಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಂಡಿದೆ. ಆಂತರಿಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವುದು, ಶಿಸ್ತುಕ್ರಮಗಳನ್ನು ತೆಗೆದುಕೊಳ್ಳುವುದು, ಒಟ್ಟಾರೆ ಪಕ್ಷದ ಸ್ಥಾಪಿತ ಮೌಲ್ಯಗಳಿಗೆ ಅನುಸಾರ ಪಕ್ಷದ ವಿವಿಧ ಶ್ರೇಣಿಗಳು ಕೆಲಸ ನಿರ್ವಹಿಸುವಂತೆ ನಿಗಾ ವಹಿಸುವುದು ಈ ಆಂತರಿಕ ಲೋಕಪಾಲರ ಕರ್ತವ್ಯ.



ಹಾಲಿ ಈ ಹುದ್ದೆಗೆ ನೌಕಾಪಡೆಯ ನಿವೃತ್ತ ಅಡ್ಮಿರಲ್ ರಾಮದಾಸ್‌ರನ್ನು ಸರ್ವಾನುಮತದಿಂದ ನೇಮಕ ಮಾಡಲಾಗಿತ್ತು. ಅವರ ಅಧಿಕಾರಾವಧಿ ಇನ್ನೂ ಎರಡು ವರ್ಷ ಬಾಕಿ ಉಳಿದಿತ್ತು. ಆದರೆ ಹಠಾತ್ತನೆ ಅಡ್ಮಿರಲ್ ರಾಮದಾಸ್‌ರನ್ನು ಆ ಹುದ್ದೆಯಿಂದ ಕೆಳಗಿಳಿಸಿ ಕೇಜ್ರಿವಾಲ್ ಗುಂಪು ಮತ್ತೊಂದು ಭಸ್ಮಾಸುರ ನಿರ್ಣಯ ಕೈಗೊಂಡಿದೆ. ಇನ್ನೂ ದುರಂತವೆಂದರೆ ಈ ಸುದ್ದಿಯನ್ನು ರಾಮದಾಸ್ ಅವರು ಸುದ್ದಿಮಾಧ್ಯಮಗಳ ಮೂಲಕ ತಿಳಿದುಕೊಳ್ಳಬೇಕಾಗಿ ಬಂದದ್ದು!

ಈ ಸುದ್ದಿ ಲೋಕಪಾಲರಿಗೆ ದೊಡ್ಡ ಶಾಕ್ ಆಗಿತ್ತು. ಮರುದಿನ ಅವರು ನೀಡಿದ ಪತ್ರಿಕಾ ಹೇಳಿಕೆಯ ಸಾರಾಂಶ ಹೀಗಿದೆ.

"ಎಎಪಿ ಪಕ್ಷಕ್ಕೆ ಆಂತರಿಕ ಲೋಕಪಾಲನಾಗಿದ್ದ ನನ್ನ ಸೇವೆಯನ್ನು ರದ್ದುಪಡಿಸಿರುವ ವಿಷಯ ಮಾಧ್ಯಮಗಳ ಮೂಲಕ ತಿಳಿದು ಆಶ್ಚರ್ಯ, ದುಃಖ ಎರಡೂ ಆಗಿದೆ. ಈ ವಿಚಾರವನ್ನು ಸಾರ್ವಜನಿಕಗೊಳಿಸುವ ಮೊದಲು ಕನಿಷ್ಟ ಸೌಜನ್ಯಕ್ಕಾದರೂ ಮೊದಲು ನನಗೆ ಈ ವಿಷಯವನ್ನು ಪಕ್ಷದ ಮುಖಂಡರು ತಿಳಿಸದಿದ್ದುದಕ್ಕೆ ನನ್ನಲ್ಲಿ ನಿರಾಶೆ ಮೂಡಿದೆ. ನಾನಿನ್ನೂ ಅವರ ಕರೆಯ ನಿರೀಕ್ಷಣೆಯಲ್ಲಿದ್ದೇನೆ.

ಕೇವಲ ಎರಡು ವಾರಗಳ ಹಿಂದಷ್ಟೆ ಇದೀ ಪಕ್ಷ ನನ್ನ ಮೇಲೆ ತನ್ನ ವಿಶ್ವಾಸವನ್ನು ಪುನರುಚ್ಚರಿಸಿತ್ತು. ನನ್ನ ಇದೀ ಸೇವಾವಧಿಯಲ್ಲಿ ನನ್ನ ಕಾರ್ಯದ ಬಗ್ಗೆ ಯಾರೂ ಅತೃಪ್ತಿ ವ್ಯಕ್ತಪಡಿಸಿರಲಿಲ್ಲ. ನನ್ನ ತಟಸ್ಥ ಧೋರಣೆಯ ಬಗ್ಗೆಯಾಗಲಿ, ವಾಸ್ತವಿಕತೆಯ ಬಗ್ಗೆಯಾಗಲಿ ಯಾವುದೇ ಕಾರ್ಯಕರ್ತರಿಂದಲೂ ಒಮ್ಮೆಯಾದರೂ ದೂರು ಬಂದಿರಲಿಲ್ಲ. ಇಂಥಾ ದಿಢೀರ್ ನಿರ್ಧಾರಕ್ಕೆ ಕಾರಣವೇನು ಎಂಬುದು ನನಗಂತೂ ಅರ್ಥವಾಗುತ್ತಿಲ್ಲ."

ವಿಷಯ ಇಷ್ಟೆ. ಆಂತರಿಕ ಲೋಕಪಾಲ್‌ರನ್ನು ವಜಾಗೊಳಿಸಿದ್ದಕ್ಕೂ, ಯಾದವ್, ಭೂಷಣ್‌ರನ್ನು ಹೊರಗೆ ಹಾಕಿದ್ದಕ್ಕೂ ನೇರವಾದ ಸಂಬಂಧವಿದೆ. ಲೋಕಪಾಲ್ ರಾಮದಾಸ್ ಅವರು ನಾಯಕತ್ವ ಒಗ್ಗಟ್ಟಾಗಿ ಕಾರ್ಯ ನಿರ್ವಹಿಸಬೇಕೆಂದು, ತಮ್ಮ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಪಕ್ಷವನ್ನು ಮುನ್ನಡೆಸಬೇಕೆಂದು ಕೇಜ್ರಿವಾಲ್ ಮುಂತಾದವರಿಗೆ ಬುದ್ಧಿವಾದ ಹೇಳಿದ್ದರು.

ಅಷ್ಟು ಮಾತ್ರವಲ್ಲ; ನಿಷ್ಪಕ್ಷಪಾತ ತನಿಖೆಗೆ ಬದ್ಧರಾಗಿದ್ದ ಅವರು ಯಾದವ್, ಭೂಷಣ್‌ರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸುವಂತಹ ಸಾಕ್ಷ್ಯಾಧಾರಗಳನ್ನು ಒದಗಿಸುವಂತೆ ಕೇಳಿದ್ದರು.

ಇನ್ನೂ ಮುಂದುವರೆದು ಹೇಳಬೇಕೆಂದರೆ ಯಾದವ್-ಭೂಷಣ್‌ರನ್ನ ಪಕ್ಷದಿಂದಲೇ ಹೊರಹಾಕಲು ತಯಾರಿ ನಡೆಸಿರುವ ಕೇಜ್ರಿವಾಲ್ ಬಣಕ್ಕೆ ಈ ಲೋಕಪಾಲ್‌ರು ಖಂಡಿತ ಅಡ್ಡಿಯಾಗಿದ್ದರು. ಯಾಕೆಂದರೆ ಲೋಕಪಾಲ್‌ರ ಅಂತಿಮ ನಿರ್ಣಯವಿಲ್ಲದೆ ಯಾರನ್ನೂ ಪಕ್ಷದಿಂದ ಉಚ್ಚಾಟಿಸುವಂತಿಲ್ಲ.

ಜನಲೋಕಪಾಲ್ ಮಸೂದೆ ಮಂಡಿಸಲು ವಿಧಾನಸಭೆಯಲ್ಲಿ ಅವಕಾಶ ಕೊಡಲಿಲ್ಲ ಎಂಬ ಕಾರಣಕ್ಕಾಗಿಯೇ ಸಿಎಂ ಹುದ್ದೆಗೆ ರಾಜೀನಾಮೆ ಕೊಟ್ಟು ಬೀದಿಗಿಳಿದಿದ್ದ ಕೇಜ್ರಿವಾಲ್ ತಮ್ಮ ಪಕ್ಷದ ಆಂತರಿಕ ಲೋಕಪಾಲರು ತಮ್ಮ ಕಣ್ಸನ್ನೆಗೆ ತಕ್ಕಂತೆ ಕೆಲಸ ಮಾಡುತ್ತಿಲ್ಲ ಎಂಬ ಒಂದೇ ಕಾರಣಕ್ಕೆ ಏಕಾಏಕಿ ವಜಾ ಮಾಡುತ್ತಾರೆಂದರೆ ಇದಕ್ಕಿಂತ ವಿಪರ್ಯಾಸ ಬೇರೊಂದಿರಲು ಸಾಧ್ಯವೆ?!

...ರಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ಪಕ್ಷದ ಇತರ ...ಕರ ಮಾತಿಗಾಗಲಿ, ಕಾರ್ಯಕರ್ತರ ಮಾತಿಗಾಗಲಿ ... ಕೊಡುತ್ತಿಲ್ಲ ಎಂಬ ಕೂಗು ವ್ಯಾಪಕವಾಗಿತ್ತು. ... ದೆಹಲಿ ಚುನಾವಣೆ ಮನೆಬಾಗಿಲಿಗೆ ...ದ್ದರಿಂದ ಒಂದು ರಾಜೀಸೂತ್ರಕ್ಕೆ ಬರಲಾಯಿತು. ... ಚುನಾವಣೆಗೆ ಸಂಬಂಧಿಸಿದ ಪ್ರಮುಖ ...ರಗಳನ್ನು ತೆಗೆದುಕೊಳ್ಳಲು ಕೇಜ್ರಿವಾಲರಿಗೆ ... ಅಧಿಕಾರ ನೀಡಲಾಯಿತು ಮತ್ತು ...ವಣೆಯ ನಂತರ ಪಕ್ಷದ ಆಂತರಿಕ ಪ್ರಜಾತಂತ್ರ, ...ಟನಾ ನೀತಿನಿಯಮಗಳಿಗೆ ಸಂಬಂಧಿಸಿ ಸೂಕ್ತ ... ನಡೆಸಿ ತೀರ್ಮಾನ ಕೈಗೊಳ್ಳುವುದು ಎಂದು ...ಮುವಾಯಿತು.

...ದರೆ ದೆಹಲಿ ಚುನಾವಣೆಯ ನಂತರ ಆಗಿದ್ದೇ ...

...ದೆಹಲಿಯ ಭಾರೀ ಗೆಲುವಿನ ...ಏರಿದೆಯೇನೋ ಎಂಬಂತೆ ನಾಯಕರ ವರ್ತನೆ ...ಾಗಿಹೋಗಿದೆ. ಪಕ್ಷದ ಆಂತರಿಕ ಸಂಘರ್ಷವನ್ನು ...ದಲೇ ನಿರೀಕ್ಷಿಸಿದ್ದ ಕೇಜ್ರಿವಾಲ್ ಸಿಎಂ ಹುದ್ದೆ ...ಕೊಂಡರೂ, ಯಾವುದೇ ಇಲಾಖೆಯನ್ನು ...ಕೊಳ್ಳಲಿಲ್ಲ. ಮಾತ್ರವಲ್ಲ, ತಮ್ಮ ಬಲಗೈ ಬಂಟ ...ಶ್ ಸಿಸೋಡಿಯಾರನ್ನು ಉಪ ಮುಖ್ಯಮಂತ್ರಿ ... ತಂದು ತಮ್ಮ ಮುಂದಿನ ಆಟಕ್ಕೆ ರಂಗ ...ಳಿಸಿಕೊಂಡಿದ್ದರು.

ಕೇಜ್ರಿವಾಲ್ ದೆಹಲಿ ಸಿಎಂ ಆಗಿರುವುದರಿಂದ ರಾಷ್ಟ್ರೀಯ ಸಂಚಾಲಕ ಹುದ್ದೆಯಿಂದ ಕೆಳಗಿಳಿಯಬೇಕಾಗಬಹುದೆಂಬ ಲೆಕ್ಕಾಚಾರದಿಂದಲೇ ಇಷ್ಟೆಲ್ಲ ಕಸರತ್ತು ನಡೆಸಿದ್ದು ಎಂಬುದು ಈಗ ಜನಜನಿತ ಸುದ್ದಿ. ಇದೇ ವೇಳೆಯಲ್ಲಿ ಪಕ್ಷದಲ್ಲಿ ಚರ್ಚೆ ಶುರುವಾಗುತ್ತಿದ್ದಂತೆ, 'ಚಿಕಿತ್ಸೆಗಾಗಿ' ಹತ್ತು ದಿನಗಳ ಕಾಲ ಬೆಂಗಳೂರಿಗೆ ಪ್ರಯಾಣ ಬೆಳೆಸಿಬಿಟ್ಟರು.



ಅತ್ತ ದೆಹಲಿಯಲ್ಲಿ ಕೇಜ್ರಿವಾಲ್ ಬಣದವರು ರಾಜಕೀಯ ವ್ಯವಹಾರಗಳ ಸಮಿತಿಯಿಂದ ಭೂಷಣ್ ಮತ್ತು ಯಾದವ್‌ರನ್ನು ಹೊರಗೆ ಹಾಕುವ ಏಕ ಪಕ್ಷೀಯ ನಿರ್ಣಯ ತೆಗೆದುಕೊಂಡುಬಿಟ್ಟರು. ಈ ಸಭೆಯಲ್ಲಿ ಹಾಜರಿದ್ದ 19 ಮಂದಿಯಲ್ಲಿ 8 ಮಂದಿ ಇಂಥಾ ಅಪ್ರಜಾತಾಂತ್ರಿಕ ನಿರ್ಣಯವನ್ನು ವಿರೋಧಿಸಿದ್ದರು ಎಂಬುದು ಗಮನಾರ್ಹ.

ಪಕ್ಷದ ಆಂತರಿಕ ಸಂಘರ್ಷ ಕೊಳಕು ಕಚ್ಚಾಟದ ಮಟ್ಟಕ್ಕಿಳಿಯಲು ಸ್ವತಃ ಕೇಜ್ರಿವಾಲ್ ಕಾರಣ ಎಂಬುದನ್ನು ನಂತರದ ಬೆಳವಣಿಗೆಗಳು ಅನುಮಾನಕ್ಕೆಡೆಯಿಲ್ಲದಂತೆ ಸಾಬೀತುಪಡಿಸುತ್ತಿವೆ.

ಪರಸ್ಪರ ಬಣಗಳು ಆರೋಪ ಪ್ರತ್ಯಾರೋಪದಲ್ಲಿ ತೊಡಗಿವೆ. ಕೇಜ್ರಿವಾಲ್‌ರಿಂದ ಅಧಿಕಾರ ಕಸಿದುಕೊಳ್ಳಲು ಯಾದವ್-ಭೂಷಣ್ ಜೋಡಿ ಹುನ್ನಾರ ನಡೆಸಿದ್ದಾರೆ ಮತ್ತು ದೆಹಲಿ ಚುನಾವಣೆಯಲ್ಲಿ ಪಕ್ಷವನ್ನು ಸೋಲಿಸಲು ಪ್ರಯತ್ನಿಸಿದ್ದಾರೆ ಎಂಬುದು ಕೇಜ್ರಿವಾಲ್ ಬಣದ ಪ್ರಮುಖ ಆರೋಪ. ಆದರೆ ಈ ವಾದವನ್ನು ಸಮರ್ಥಿಸಿಕೊಳ್ಳುವ ಯಾವುದೇ ಪುರಾವೆ ಒದಗಿಸಲು ಈ ಬಣ ವಿಫಲವಾಗಿದೆ.

ಕೇಜ್ರಿವಾಲ್ ಬಣದ ಆರೋಪಗಳನ್ನು ಯಾದವ್-ಭೂಷಣ್‌ರು ಅಲ್ಲಗಳೆದಿದ್ದಾರೆ. ಅಷ್ಟು ಮಾತ್ರವಲ್ಲದೆ ಈ ಬೆಳವಣಿಗೆಗಳನ್ನು ಹತ್ತಿರದಿಂದ ಕಂಡ ಹಲವಾರು ನಾಯಕರು ಕೇಜ್ರಿವಾಲ್ ಕೂಟದ ಬಗ್ಗೆ ಬಹಿರಂಗವಾಗಿ ತಿರುಗಿ ಬಿದ್ದಿದ್ದಾರೆ. ಮಹಾರಾಷ್ಟ್ರದ ನಾಯಕ ಮಾಯಾಂಕ್ ಗಾಂಧಿ ಕೇಜ್ರಿವಾಲ್ ಮತ್ತು ಪಕ್ಷದ ಅಪ್ರಜಾತಾಂತ್ರಿಕ ನಡವಳಿಕೆಗಳನ್ನು ಪ್ರಶ್ನಿಸಿ ಹಲವು ಬಾರಿ ತಮ್ಮ ಬ್ಲಾಗ್‌ನಲ್ಲಿ ಬರೆದಿದ್ದು ಮಾಧ್ಯಮಗಳಿಗೆ ರಸದೌತಣ ಬಡಿಸಿದಂತಾಗಿತ್ತು. ಯಾದವ್-ಭೂಷಣ್‌ರ ಕೆಲಸ ಕಾರ್ಯಗಳನ್ನು, ಅವರ ಬದ್ಧತೆಯನ್ನು ಹತ್ತಿರದಿಂದ ಬಲ್ಲ ಕಾರ್ಯಕರ್ತರೂ ಕೂಡ ಈ ಆರೋಪವನ್ನು ವಿರೋಧಿಸಿ ಪ್ರತಿಭಟನೆಗಿಳಿದಿದ್ದಾರೆ. ಆನ್‌ಲೈನ್ ಕ್ಯಾಂಪೇನ್ ಕೈಗೊಂಡಿದ್ದಾರೆ. ಮನವಿ ಪತ್ರ ಧರಣಿ ಇತ್ಯಾದಿ ಮಾಡಿದ್ದಾರೆ. ಆದರೆ ಕೇಜ್ರಿವಾಲ್ ಮತ್ತು ಅವರ ಬಣ ಈ ಯಾವ ಅಭಿಪ್ರಾಯಕ್ಕೂ ಸೊಪ್ಪು ಹಾಕಿಲ್ಲದಿರುವುದು ದುರಂತ.

ಇಂಥಾ ಬೆಳವಣಿಗೆಗಳಿಂದ ರೋಸಿಹೋಗಿದ್ದ ಮೇಧಾ ಪಾಟ್ಕರ್ ಅವರು ಎಎಪಿ ಗೆ ರಾಜೀನಾಮೆ ನೀಡಿ ಪ್ರತಿಭಟಿಸಿದ್ದಾರೆ. ಇದು ಏಕವ್ಯಕ್ತಿ ಕೇಂದ್ರಿತವಾಗುತ್ತಿರುವ ಎಎಪಿ ಪಕ್ಷಕ್ಕೆ ಒಂದು ಅಪಾಯದ ಎಚ್ಚರಿಕೆ ಗಂಟೆ.

ಇದಕ್ಕೆ ಪ್ರತಿಯಾಗಿ ಯಾದವ್-ಭೂಷಣ್-ಆನಂದಕುಮಾರ್ - ಅಜಿತ್ ಝಾ ಮುಂತಾದವರು ಒಂದು ಲಿಖಿತ ರೂಪದ ಬೇಡಿಕೆಯನ್ನು ಪಕ್ಷದ ಮುಂದಿರಿಸಿದ್ದಾರೆ. ಅದರ ಪ್ರಮುಖ ಅಂಶಗಳೆಂದರೆ ಪಕ್ಷದಲ್ಲಿ ಆಂತರಿಕ ಪ್ರಜಾತಂತ್ರವನ್ನು ಬಲಗೊಳಿಸುವುದು, ಕಾರ್ಯಕರ್ತರ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದು, ಪಕ್ಷವನ್ನು ಆರ್‌ಟಿಐ ವ್ಯಾಪ್ತಿಗೆ ತಂದು ಪಕ್ಷದ ವ್ಯವಹಾರಗಳನ್ನು ಪಾರದರ್ಶಕತೆ ತರುವುದು, ರಾಜ್ಯ ಘಟಕಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವುದು ಇತ್ಯಾದಿ..

ಆದರೆ ಈ ಮಹತ್ವದ ವಿಚಾರಗಳಿಗೆ ನಿರ್ದಿಷ್ಟವಾಗಿ ಸ್ಪಂದಿಸದ ಕೇಜ್ರಿ ನಾಯಕತ್ವ ಮತ್ತಷ್ಟು ವಿನಾಶಕಾರಿ ನಡೆಗಳಿಗೆ ಮುಂದಾಗಿದೆ.

ಆಮ್ ಆದ್ಮಿ ಪಕ್ಷವನ್ನು ಯಶಸ್ಸಿನ ಉತ್ತುಂಗಕ್ಕೆ ಒಯ್ದ ಪ್ರಪ್ರಥಮ ಖ್ಯಾತಿ ಕೇಜ್ರಿವಾಲ್‌ರಿಗೆ ಸಲ್ಲುವಂತೆಯೇ ಇಂದಿನ ದುಸ್ಥಿತಿಗೆ ಇತರ ನಾಯಕರ ಪಾತ್ರವಿರಬಹುದಾದರೂ ಅದರ ಪ್ರಮುಖ ಹೊಣೆಗಾರಿಕೆ ಕೇಜ್ರಿವಾಲರದೇ. ಯಾಕೆಂದರೆ ಉದ್ದಕ್ಕೂ ಅವರು ನಡೆದುಕೊಂಡ ರೀತಿ ಇತರೆ ಪಕ್ಷದ ನಾಯಕರಿಗಿಂತ ಯಾವುದೇ ರೀತಿಯಲ್ಲಿ ಭಿನ್ನವಾಗಿರಲಿಲ್ಲ. ಮೊನ್ನೆ ನಡೆದ ನ್ಯಾಷನಲ್ ಕೌನ್ಸಿಲ್ ಸಭೆಯಲ್ಲಿ ಅತ್ಯಂತ ಭಾವನಾತ್ಮಕವಾದ (ಅಂದರೆ ತಮ್ಮ ವಿರೋಧಿಗಳ ವಿರುದ್ಧ ನೆರೆದಿದ್ದವರನ್ನು ಉದ್ರೇಕಗೊಳಿಸುವಂಥ) ಭಾಷಣ ಮಾಡಿದ ಕೇಜ್ರಿವಾಲ್ ಆ ಸಭೆಯ ಅಧ್ಯಕ್ಷತೆಯನ್ನು ತಮ್ಮ ಬೆಂಬಲಿಗ ಗೋಪಾಲ್ ರಾಯ್‌ಗೆ ವಹಿಸಿ ಸಭೆಯಿಂದ ನಿರ್ಗಮಿಸಿದರು.

ಕೇಜ್ರಿವಾಲ್ ಭ್ರಷ್ಟರಲ್ಲದಿರಬಹುದು. ಅವರು ಈ ದೇಶದ ಜನರ ಬಗ್ಗೆ ಅತಿಯಾದ ಕಾಳಜಿಯನ್ನೂ ಹೊಂದಿದ್ದಾರೆ ಎಂದೇ ಇಟ್ಟುಕೊಳ್ಳೋಣ. ಆದರೆ ತನ್ನ ನಡೆಯನ್ನು ಸಮರ್ಥಿಸಿಕೊಳ್ಳಲು ಸಹೋದ್ಯೋಗಿಗಳ ಮೇಲೆ ಸುಳ್ಳು ಆರೋಪ ಹೊರಿಸಿ, ರಾಜಕೀಯ ಮಾಡುವುದು ಎಷ್ಟು ಸರಿ? ವ್ಯಕ್ತಿಗತ ಅಥವ ಸಂಘಟನಾ ಭಿನ್ನಾಭಿಪ್ರಾಯಗಳಿಗೆ ಲಕ್ಷಾಂತರ ಜನರ ಆಶಯಗಳನ್ನು ಮಣ್ಣುಪಾಲು ಮಾಡುವುದು ಎಷ್ಟು ಸರಿ?

ಯಾದವ್, ಭೂಷಣ್, ಮೇಧಾ ಇತ್ಯಾದಿಗಳು ದೆಹಲಿಯ ಮತದಾರರಿಗೆ ಅಪರಿಚಿತರು ಎಂಬುದು ನಿಜ. ಆದರೆ ಈ ಪಕ್ಷದ ಜೀವನಾಡಿಯಾಗಿರುವ, ಇದಕ್ಕೆ ಶಕ್ತಿ ಚೈತನ್ಯ ತುಂಬಿರುವ ಸಾವಿರಾರು ಕಾರ್ಯಕರ್ತರ ಪಾಲಿಗೆ ಇವರೆಲ್ಲ ಚಿರಪರಿಚಿತರೇ. ಅಷ್ಟು ಮಾತ್ರವಲ್ಲ; ಯಾದವ್, ಭೂಷಣ್ ಎತ್ತುತ್ತಿರುವ ಪ್ರಶ್ನೆಗಳು ತಮ್ಮದೇ ಮನಸ್ಸಿನಲ್ಲಿದ್ದ ಪ್ರಶ್ನೆಗಳಾಗಿ ಹೆಚ್ಚಿನ ಕಾರ್ಯಕರ್ತರಿಗೆ ಭಾಸವಾಗುತ್ತಿರುವುದೂ ನಿಜ.

ಯಾದವ್, ಭೂಷಣ್ ಮುಂತಾದವರನ್ನು ಹೊರಗೆ ಹಾಕಿ ಕೇಜ್ರಿವಾಲ್ ಬಲಿಷ್ಠಗೊಳ್ಳುತ್ತಾರೆ ಎಂಬುದು ಮೂರ್ಖತನದ ಅಂದಾಜು. ಅದು ಕೇವಲ ತಾತ್ಕಾಲಿಕ ಪರಿಣಾಮ ಬೀರುವಂಥದ್ದು. ವಿಮರ್ಶಕರನ್ನು, ಮುತ್ಸದ್ದಿಗಳನ್ನು ಸಹಿಸಿಕೊಳ್ಳದೆ ಕೇವಲ ಹೊಗಳುಭಟ್ಟರನ್ನು ಮಾತ್ರ ನೆಚ್ಚಿಕೊಂಡ ಯಾವ ಸಾಮ್ರಾಟರೂ ಉಳಿಯಲಿಲ್ಲವೆಂದ ಮೇಲೆ ಇಂದಿನ ಪ್ರಜಾತಾಂತ್ರಿಕ ಕಾಲಘಟ್ಟದಲ್ಲಿ ಇದು ಎಷ್ಟು ದಿನ ನಡೆಯಲು ಸಾಧ್ಯ?

...ನೆ ಹಳ್ಳಕ್ಕೆ ಬಿದ್ದಾಗ...

ಆಮ್ ಆದ್ಮಿ ಪಕ್ಷದ ಆಂತರಿಕ ಸಂಘರ್ಷ ಬೀದಿಗೆ ...ತ್ತಿದ್ದಂತೆ ಬಿಜೆಪಿ, ಕಾಂಗ್ರೆಸ್‌ಗಳು ಮಾತ್ರವಲ್ಲದೆ ಎಲ್ಲ ...ಳೆಯ ಅವಕಾಶವಾದಿ ಪಕ್ಷಗಳಿಗೂ ಹಾಲು ಕುಡಿದಷ್ಟು ...ತೋಷವಾಗಿದೆ. ಎಲ್ಲರೂ ತಮ್ಮ ತಮ್ಮ ...ಬೇಯಿಸಿಕೊಳ್ಳಲು ಉತ್ಸುಕರಾಗಿದ್ದಾರೆ.

ಅದ್ವಾನಿ ...ಯನ್ನು ಕಳೆದ ವರ್ಷವಷ್ಟೆ ಮೋದಿ ... ಬದಲಾಯಿಸಿದ ಕೇಂದ್ರ ಸಚಿವ ಅರುಣ್ ಜೈಟ್ಲಿ ... ಆಂತರಿಕ ಕಿತ್ತಾಟದಿಂದ ದೆಹಲಿಯ ಆಡಳಿತದ ... ದುಷ್ಪರಿಣಾಮ ಉಂಟಾಗುತ್ತದೆ ಎಂದು ಬಿಟ್ಟಿ ...ದೇಶ ನೀಡಿದ್ದಾರೆ.

...ವಸೇನಾದ ಮುಖಂಡಾಗಿ ಸಾಮ್ನಾದಲ್ಲಿ ಈ ಬಗ್ಗೆ ... ಆತಂಕ ಕಿತ್ತಾಗಿದೆ. ಇದೀ ದೇಶದ ಜನತೆ ... ಬಗ್ಗೆ ಅಪಾರ ಭರವಸೆ ಇಟ್ಟುಕೊಂಡಿದ್ದಾರೆ. ಅಂಥಾ ...ಜನಗಳಿಗೆ ಏನು ಬೆಲೆ? ಏಮ್ಮಲ್ಲೇ ಆಂತರಿಕ ...ತಂತ್ರವಿಲ್ಲದೆ ಹೋದರೆ ದೇಶಕ್ಕೆ ಹೇಗೆ ಪ್ರಜಾತಂತ್ರ ...? ಹೀಗೆ ಪ್ರಜಾತಂತ್ರದ ಬಗೆಬಗೆಯ ...ನ್ನು ...ಡಿದ್ದಾರೆ.


... ...ದಾಗ 'ಅಹಂಕಾರ' ಎಂಬ ಆರ್‌ಎಸ್ ... 'ಅವಕಾಶವಾದಿ ನಾಯಕರಂತೂ' ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಯಾದವ್ ಮತ್ತು ಭೂಷಣ್‌ರನ್ನು ತಮ್ಮ ಪಕ್ಷಕ್ಕೆ ಆಹ್ವಾನಿಸಿ ಪುಕ್ಕಟೆ ಪ್ರಚಾರ ಗಿಟ್ಟಿಸಲು ಹವಣಿಸುತ್ತಿದ್ದಾನೆ.

ಅದಕ್ಕಿಂತಲೂ ತಮಾಷೆಯ ಸಂಗತಿಯೆಂದರೆ ಜನರಿಗೆ ಮಂಕುಬೂದಿ ಎರಚಿ ಹೊಟ್ಟೆಹೊರೆಯುತ್ತಿರುವ ಜ್ಯೋತಿಷಿಯೊಬ್ಬ 2017ರ ವೇಳೆಗೆ ಆಮ್ ಆದ್ಮಿ ಪಾರ್ಟಿಯ ಗ್ರಹಗತಿಗಳೆಲ್ಲವೂ ವಿಷಮಸ್ಥಿತಿಗೆ ತಲುಪಿ ನಾಶವಾಗುತ್ತದೆ ಅಂತ ಭವಿಷ್ಯ ನುಡಿದಿದ್ದಾನೆ. ತಮಗಿಷ್ಟವಾದ ಪಾಸಿಟಿವ್ ಸುದ್ದಿಯೆಂಬಂತೆ ಈ ನಾಲಾಯಕ್ ಸುದ್ದಿಗೆ ಹಲವು ಪತ್ರಿಕೆಗಳು ಸ್ಥಳಾವಕಾಶ ಮಾಡಿಕೊಟ್ಟಿವೆ. ಮಾತ್ರವಲ್ಲದೆ, ಆ ಜ್ಯೋತಿಷಿ ಹಿಂದೆ ಹೇಳಿದ್ದ ಭವಿಷ್ಯವಾಣಿಗಳು ಎಷ್ಟೆಲ್ಲಾ ಸತ್ಯವೆಂದು ರುಜುವಾತಾಗಿದೆ ಎಂಬ ವಿಶ್ಲೇಷಣೆಯನ್ನೂ ಒದಗಿಸಿ ಪುಣ್ಯ ಕಟ್ಟಿಕೊಂಡಿವೆ.

ಇನ್ನು ಆನ್‌ಲೈನ್‌ನಲ್ಲಿರುವ ಮೋದಿಯ ಪಡೆಗಂತೂ ಪುರುಸೊತ್ತಿಲ್ಲದಷ್ಟು ಕೆಲಸ ಸಿಕ್ಕಿಬಿಟ್ಟಿದೆ. ಎಎಪಿಯನ್ನು ಜರಿದು ಮೋದಿಗೆ ಪರಾಕು ಹಾಕಲು ಇದಕ್ಕಿಂತ ಉತ್ತಮ ಅವಕಾಶ ಈ ಜನ್ಮದಲ್ಲಿ ತಮಗೆ ಸಿಗಲಾರದೆಂದು ನಾಲ್ಕೂ ದಿಕ್ಕಿನಿಂದ ದಾಳಿಗೆ ಇಳಿದಿದ್ದಾರೆ.

ಅದೇನೋ ಹೇಳ್ತಾರಲ್ಲಾ, 'ಆನೆ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು' ಅಂತಾ ಹಾಗಾಗಿದೆ ಸದ್ಯದ ಪರಿಸ್ಥಿತಿ. ಆದರೆ ಇದಲ್ಲವೂ ಸ್ವಯಂಕೃತ ಅಪರಾಧದಿಂದ ತಾನೇ?

ಪೊಲೀಸರ ಸಂಗದಲ್ಲಿ...



ಸಿರಿಮನೆ ನಾಗರಾಜ್ ಅವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವ ಪ್ರಕ್ರಿಯೆ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳ ಕಾನ್ಫರೆನ್ಸ್ ಹಾಲಿನಲ್ಲಿ ಆರಂಭವಾಗಿತ್ತು. ನನ್ನನ್ನು ಅದಕ್ಕೆ ಹೊಂದಿಕೊಂಡಿರುವ ಜಿಲ್ಲಾಧಿಕಾರಿಯವರ ಚೇಂಬರಿನಲ್ಲಿ ಕೂರಿಸಲಾಗಿತ್ತು. ನನ್ನ ಕಾವಲಿಗೆ ಇಬ್ಬರು ಕಾನ್‌ಸ್ಟೇಬಲ್‌ಗಳಿದ್ದರು. ಬರೋಬ್ಬರಿ 28 ವರ್ಷದ ನಂತರ ಮತ್ತೆ ಅಧಿಕೃತವಾಗಿ ಪೊಲೀಸರ ಸಾಂಗತ್ಯದ ಸಂದರ್ಭ ಎದುರಾಗಿತ್ತು. ಆಗ ಮಂಡಲ್ ಹೋರಾಟದ ಸಂದರ್ಭದಲ್ಲಿ 8-10 ಜನ ಪೊಲೀಸರು ಚಿತ್ರದುರ್ಗದ ಬೀದಿಯಲ್ಲಿ ನನ್ನ ಮೇಲೆ ತಮ್ಮ ಚಿತ್ತಗಳನ್ನೆಲ್ಲಾ ಪುಡಿಪುಡಿ ಮಾಡಿ, ನನ್ನನ್ನು ನಾಯಿಯಂತೆ ಜೀಪಿನಲ್ಲಿ ಎತ್ತಿಹಾಕಿಕೊಂಡು ಹೋಗಿ, ಕೊಲೆಗಾರನಂತೆ ಸ್ಟೇಷನ್ನಿನಲ್ಲಿ ಕೂರಿಸಿದ್ದರು. ಆಗಲೇ ನನ್ನ ಮೊದಲ ಹೋರಾಟದ ಕವನ ತಾನಾಗೇ ಹೊರಬಿದ್ದಿತ್ತು ...

ಹೊಡೆದರೆ ಒಡೆಯಲು ಮಡಕೆಗಳಲ್ಲ
ಬಾಂಬುಗಳು ನಾವು ಬಾಂಬುಗಳು
ಸಿಡಿಯುವೆವು ನಾವು ಸಿಡಿಯುವೆವು
ಸಾವಿರ ಶತ್ರುಗಳ ಸಂಹರಿಸುತ್ತಲೆ ಮಡಿಯುವೆವು
ಹೊಸ ನಾಡಿಗೆ ನಾಂದಿಯ ಹಾಡುವೆವು ...

ಡ್ರಮ್ಯಾಟಿಕ್ ಕವನ ಎಂದು ಈಗ ಅನ್ನಿಸಿದರೂ ಅಂದಿನ ಬಿಸಿನೆತ್ತರ ಸಹಜ ಸಿಟ್ಟು ಅದರಲ್ಲಿ ಅಭಿವ್ಯಕ್ತಗೊಂಡಿತ್ತು.

ಈ ಮಧ್ಯೆ ಹಲವಾರು ಬಾರಿ ಹಲವಾರು ಕಾರಣಕ್ಕೆ ಪೊಲೀಸರ ಜೊತೆ ಮಾತನಾಡಿದ್ದೇನೆ. ಒಮ್ಮೆ ನನ್ನ ಹಿನ್ನೆಲೆ ತಿಳಿಯದ ಸ್ನೇಹಿತರು ಕಷ್ಟದಲ್ಲಿ ಸಿಲುಕಿ, ನನ್ನ ಸಹಾಯ ಕೇಳಿದ ಅನಿವಾರ್ಯ ಸಂದರ್ಭದಲ್ಲಿ ಬೆಂಗಳೂರಿನ ಕೇಂದ್ರೀಯ ಪೊಲೀಸ್ ಕಚೇರಿಗೂ ಹೋಗಿ, ಖುದ್ದು ಐಜಿಯವರನ್ನು ಭೇಟಿ ಮಾಡಿ ಕೆಲಸ ಮಾಡಿಸಿಕೊಂಡು ಬಂದಿದ್ದೇನೆ (ದಯವಿಟ್ಟು ರೀಲ್ ಬಿಡುತ್ತಿದ್ದಾನೆ ಎಂದುಕೊಳ್ಳಬೇಡಿ.) ಆದರೆ ಅವೆಲ್ಲ ಅನಧಿಕೃತ, ಅನಾಮಿಕ ಭೇಟಿಗಳು. ಇದು ಮತ್ತೆ ಅಧಿಕೃತ ಭೇಟಿ.

ಇಬ್ಬರು ಪೊಲೀಸರ ನಡುವೆ ನಾನು ಕೂತಿದ್ದೆ. ನೋಡನೋಡುತ್ತಿದ್ದಂತೆ ಇನ್ನೂ 6-7 ಜನ ಪೊಲೀಸರು ಬಂದು ನಮ್ಮನ್ನು ಸೇರಿಕೊಂಡರು.

ಇವರನ್ನು ಪೊಲೀಸರು ಎಂದು ಕರೆಯಲಿಕ್ಕೇ ವಿಚಿತ್ರವೆನಿಸುತ್ತದೆ. ನನ್ನ ತಲೆಯಲ್ಲೂ ಪೊಲೀಸರೆಂದರೆ ದಪ್ಪ ಮೀಸೆಯ, ಡೊಳ್ಳು ಹೊಟ್ಟೆಯ, ಖಾಕಿ ಬಟ್ಟೆಯ, ದಪ್ಪ ಟೋಪಿಯ ಪೇದೆಯ ಚಿತ್ರವೇ ಮೂಡುತ್ತದೆ. ಆದರೆ ಇವರಲ್ಲಿ ಆ ಯಾವ ಚಹರೆಗಳೂ ಇಲ್ಲ, ಎಲ್ಲಾ ಸಿವಿಲ್‌ನಲ್ಲಿ ಸ್ಲಿಮ್ ಆಗಿ, ಸ್ಮಾರ್ಟ್ ಆಗಿ ಕೂತಿದ್ದಾರೆ. ನನ್ನ ಮೈಂಡೇ ಅಪ್‌ಡೇಟ್ ಆಗಿಲ್ಲ, ಜಗತ್ತಲ್ಲಿ ಎಲ್ಲಾ ಬದಲಾಗುತ್ತಿರುವಂತೆ ಪೊಲೀಸರ ಚಹರೆಯೂ ಬದಲಾಗಿದೆ.

“ಸಾರ್, ನಿಮಗಾಗಿ ತುಂಬಾ ಓಡಾಡಿದ್ದೀವಿ. ನಿಮ್ಮ ಅಣ್ಣ ಶಿರಸಿಯಲ್ಲಿದ್ದಾಗ ಅಲ್ಲಿಗೂ ಹೋಗಿದ್ವಿ, ನಿಮ್ಮ ತಂದೆ ತೀರಿಕೊಂಡಿದ್ದಾಗಲೂ ನಮ್ಮವರು ಬಂದಿದ್ದರು. ನೀವು ಬರಲಿಲ್ವೆ?” ಎಂದು ಕೇಳಿದರು. “ಇಲ್ಲ, ಹೇಗೆ ಬರೋಕಾಗುತ್ತೆ?” ಎಂದೆ. “ಬಂದಿದ್ರೂ ನಮಗೆ ಗೊತ್ತಾಗ್ತಾ ಇರ್ಲಿಲ್ಲ ಬಿಡಿ. ನಾವು ಅಂದುಕೊಂಡಿದಿದ್ದೇ ಬೇರೆ ರೀತಿ, ನೀವು ಇರೋದೇ ಬೇರೆ ರೀತಿ. ಅಂದಹಾಗೆ ನಿಮ್ಮ ಆ ಫೋಟೋ ಯಾವಾಗ ತೆಗೆದಿದ್ದು?” ಎಂದು ಮತ್ತೆ ಪ್ರಶ್ನಿಸಿದರು. “ನಾನು ಎಸ್ಸೆಸ್ಸೆಲ್ಸಿಯಲ್ಲಿದ್ದಾಗ” ಎಂದೆ. “ಅಲ್ಲಾ ಸಾರ್, ನಿಮ್ಮ ಕಾಲೇಜಿಗೆ ಹೋಗಿದ್ರೆ ಇನ್ನಷ್ಟು ಬೆಳೆದಿರುವ ನಿಮ್ಮ ಫೋಟೋ ಸಿಗುತ್ತಿರಲಿಲ್ವೆ?” ಎಂದು ನನ್ನನ್ನೇ ಪ್ರಶ್ನಿಸಿದರು. “ಈ ಪ್ರಶ್ನೆ ನನಗೂ ಹಲವಾರು ಬಾರಿ ಬಂದಿದೆ” ಎಂದೆ. “ಅಯ್ಯೋ ನಮ್ಮವರ್ ಕತೆ ಬಿಡಿ” ಎಂದು ಬೇರೆ ವಿಚಾರ ಪ್ರಾರಂಭಿಸಿದರು. ನಮ್ಮ ಬದುಕಿನ ಬಗೆಗಿನ ಅವರ ನೂರೆಂಟು ಕುತೂಹಲದ ಪ್ರಶ್ನೆಗಳಿಗೆ ಉತ್ತರಿಸುತ್ತಲೇ ಇದ್ದೆ, ಪ್ರಶ್ನೆ ಕೇಳುವುದರ ಜೊತೆಜೊತೆಗೆ ನಕ್ಸಲ್ ಚಳವಳಿ ಕುರಿತ ಅವರ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು, ಆಲೋಚನೆಗಳನ್ನು ಸಹ ಮುಂದಿಡುತ್ತಿದ್ದರು.

ಅವರ ಆಲೋಚನಾ ಲಹರಿ ನಿಜಕ್ಕೂ ನನ್ನಲ್ಲಿ ಅಚ್ಚರಿ ಮೂಡಿಸಿತು. ನಕ್ಸಲ್ ಚಳವಳಿ ಬಗೆಗಿನ ಅವರ ಅಭಿಪ್ರಾಯಗಳಲ್ಲಿ ಒಮ್ಮುಖತೆ, ದ್ವೇಷ, ಅವಹೇಳನ ಇರಲಿಲ್ಲ, ಹಲವಾರು ಅಂಶಗಳನ್ನು ಮೆಚ್ಚಿಕೊಳ್ಳುತ್ತಾ ಇನ್ನೂ ಕೆಲವನ್ನು ವಿಮರ್ಶಿಸುತ್ತಾ, ಪೊಲೀಸರ ಕಡೆಯಿಂದ ಆದ ಕೆಲವು ತಪ್ಪುಗಳನ್ನು ಒಪ್ಪಿಕೊಳ್ಳುತ್ತಾ, ಕೆಲವು ವಿಚಾರಗಳ ಬಗ್ಗೆ ನೊಂದುಕೊಳ್ಳುತ್ತಾ ಮಾತನಾಡುತ್ತಿದ್ದರು. ನಕ್ಸಲರ ಆಶಯ, ಪರಿಶ್ರಮ, ಬದ್ಧತೆ, ಮೇಧಾವಿತನಗಳನ್ನು ಮೆಚ್ಚಿಕೊಳ್ಳುತ್ತಾ, “ಕಾಡಿನಲ್ಲಿ ಈ ರೀತಿ ಅಲೆದರೆ ಅವರ ಗುರಿ ಸಾಧನೆ ಆಗುತ್ತಾ?” ಎಂದು ಪ್ರಶ್ನಿಸುತ್ತಾ, “ಬಿ.ಜಿ.ಕೃಷ್ಣಮೂರ್ತಿ ಅಪ್ಪ-ಅಮ್ಮನ್ನ ನೋಡಿದರೆ ಬಹಳ ಬೇಸರ ಆಗುತ್ತೆ ಸಾರ್” ಎಂದು ಮರುಕಪಡುತ್ತಾ, “ಏನೇ ಇದ್ದರೂ ವೆಂಕಟೇಶನನ್ನು ಅವನ ಹೆಂಡತಿಯೆದುರೇ ಕೊಲ್ಲಬಾರದಿತ್ತು ಸಾರ್. ಆಕೆ ಅರೆಹುಚ್ಚಿಯಾಗಿ ಅಲೆದು ಅಲೆದು ಸತ್ತುಹೋದಳು” ಎಂದು ಟೀಕಿಸುತ್ತಾ “ನಮಗೇನು ನಿಮ್ಮವರನ್ನು ಕೊಂದರೆ ಖುಷಿಯಾಗಲ್ಲ ಸಾರ್. ಆದರೆ ಏನು ಮಾಡೋದು ಹೇಳಿ” ಎಂದು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾ, ನಾನು ಪಾರ್ವತಿ-ಹಾಜಿಮಾ-ಕಾವೇರಮ್ಮ ಮುಂತಾದ ಪ್ರಕರಣಗಳನ್ನು ಮುಂದಿಟ್ಟು ‘ಇದೆಂಥ ಕಾನೂನು?’ ಎಂದು ಪ್ರಶ್ನಿಸಿದರೆ ತಲೆತಗ್ಗಿಸಿ ಮೌನದಲ್ಲೇ ತಪ್ಪನ್ನು ಒಪ್ಪಿಕೊಳ್ಳುತ್ತಾ, ತಮ್ಮ ಮಿಶ್ರ ಭಾವಗಳನ್ನು ಮುಂದಿಡುತ್ತಿದ್ದರು. ಏನೇ ಇದ್ದರೂ ಈ ಚರ್ಚೆಯಲ್ಲಿ ಕ್ರೋಧ ಅಥವಾ ಕುಟಿಲತೆ ಇರಲಿಲ್ಲ. ಈ ಪೊಲೀಸ್ ಯುವಕರು ತುಂಬಾ ಇಷ್ಟವಾದರು. ಅವರು ಸಹ “ನಿಮ್ಮ ಜೊತೆ ಮಾತನಾಡಿ ಬಹಳ ಸಂತೋಷವಾಯಿತು ಸಾರ್” ಎಂದರು. ಹೆಮ್ಮೆಯಿಂದ ಜೊತೆ ನಿಂತು ಅನೇಕ ಫೋಟೋ ತೆಗೆಸಿಕೊಂಡರು.



ಅಷ್ಟರಲ್ಲಿ ನಾಗರಾಜ್‌ರ ‘ಇಂಟರಾಗೇಶನ್’ ಮುಗಿದು ನನ್ನನ್ನು ಕರೆದರು. ಶೃಂಗೇರಿಯ ಸರ್ಕಲ್ ಇನ್‌ಸ್ಪೆಕ್ಟರ್ ಸುಧೀರ್ ಹೆಗಡೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ನಾನು ಚಳವಳಿಗೆ ಬಂದ ರೀತಿ, ನಂತರ ನಾನು ವಹಿಸಿಕೊಂಡ ಬೇರೆಬೇರೆ ಜವಾಬ್ದಾರಿಗಳು, ಪಕ್ಷದಲ್ಲಿ ಬಂದ ರಾಜಕೀಯ ಭಿನ್ನಾಭಿಪ್ರಾಯಗಳು, ನಾನು ಮತ್ತು ನಾಗರಾಜ್ ಪಕ್ಷದಿಂದ ಪ್ರತ್ಯೇಕಗೊಂಡ ಸಂದರ್ಭ, ನಂತರ ನಾವು ಕೈಗೊಂಡ ಅಧ್ಯಯನ ಇತ್ಯಾದಿ ವಿಚಾರಗಳನ್ನು ವಿವರಿಸಿದೆ. ಪ್ರತಿ ತಿರುವಿನ ಘಟ್ಟ ಬಂದಾಗಲೂ ‘ಆಗ ಇನ್ನು ಯಾರ್‍ಯಾರಿದ್ದರು?’ ಎಂಬ ಪ್ರಶ್ನೆ ಕೇಳುತ್ತಿದ್ದರು. ಕಾಡಿನಲ್ಲಿರುವವರ ಅನೇಕ ಫೋಟೋಗಳನ್ನು ತೋರಿಸಿ ಇವರು ಯಾರು? ಎಂದು ಕೇಳುತ್ತಿದ್ದರು. ಹುತಾತ್ಮರಾದವರಲ್ಲಿ ಬಹುಪಾಲು ಮಂದಿ ನನಗೆ ಗೊತ್ತಿದ್ದುದರಿಂದ ಹೇಳಿದೆ. ಇನ್ನು ಕೆಲವರನ್ನು ನೋಡಿದ್ದೇನೆ, ಆದರೆ ಮೂಲ ಹೆಸರು ಗೊತ್ತಿಲ್ಲ, ಪಕ್ಷದ ಹೆಸರು ಏನೋ ಇತ್ತು, ಈಗ ಮರೆತುಹೋಗಿದೆ ಎಂದೆ. ಇನ್ನು ಕೆಲವರನ್ನು ನಾನೆಂದೂ ನೋಡಿರಲಿಲ್ಲ, ದಪ್ಪ ಮೀಸೆಯ, ಹಳೆಯ ಹೇರ್ ಸ್ಟೈಲ್ ಇರುವ, ಕಪ್ಪು-ಬಿಳುಪು ಭಾವಚಿತ್ರವಿರುವ ಪೋಸ್ಟರ್ ಒಂದನ್ನು ತಂದು ತೋರಿಸಿ ಇದು ಯಾರು? ಎಂದು ಕೇಳಿದರು. ನಾನಂತೂ ಅಂಥವರನ್ನು ನೋಡಿರಲಿಲ್ಲ, ನಾನು ಬೇಕೆಂದೇ ಎಲ್ಲವನ್ನೂ ಮುಚ್ಚಿಡುತ್ತಿದ್ದೇನೆ ಎನಿಸಿರಲಿಕ್ಕೆ ಸಾಕು. ಆದರೆ ಅವರು ಸಹ ಹೆಚ್ಚು ಒತ್ತಾಯ ಮಾಡಲಿಲ್ಲ, ಹೊರಗೆ ನಾವು ಎಲ್ಲಿದ್ದೆವು, ಯಾರ್‍ಯಾರು ಸಹಾಯ ಮಾಡಿದರು, ಯಾರ್‍ಯಾರು ಸಂಪರ್ಕದಲ್ಲಿದ್ದಾರೆ ಎಂದು ಕೇಳಿದರು. ಅವರೆಲ್ಲಾ ಅವರ ಪಾಡಿಗೆ ಇದ್ದಾರೆ. ಅನಗತ್ಯವಾಗಿ ಇದರಲ್ಲಿ ಎಳೆದು ತರುವುದು ಬೇಡ. ಯಾರೂ ಪೊಲೀಸರ ಕೇಸಲ್ಲಿ ಬೇಕಾದವರು ಅಲ್ಲ, ಅವರ ಬಗ್ಗೆ ದಯವಿಟ್ಟು ಮಾತನಾಡುವುದು ಬೇಡ ಎಂದೆ. ಸುಮ್ಮನಾದರು. ನಾನು ನಿರೀಕ್ಷಿಸಿದ್ದಕ್ಕಿಂತಲೂ ನಿರಾಳವಾಗಿ ಇಂಟರಾಗೇಶನ್ ಸೆಶನ್ ಮುಗಿಯಿತು. ಸಂಬಂಧಪಟ್ಟವರಿಗೆ ಥ್ಯಾಂಕ್ಸ್ ಹೇಳಿದೆ.

ನಮ್ಮಿಬ್ಬರನ್ನು ಕೊಪ್ಪ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲು ತೀರ್ಮಾನಿಸಿದ್ದರು. ರಾತ್ರಿಯೇ ಹೋಗುವುದಾ ಅಥವಾ ರಾತ್ರಿ ಚಿಕ್ಕಮಗಳೂರಲ್ಲಿ ಉಳಿದು ಬೆಳಗ್ಗೆ ಹೊರಡುವುದಾ ಎಂದು ಕೇಳಿದರು. ನಮಗೇನೂ ಅಭ್ಯಂತರವಿಲ್ಲ, ಆದರೆ ನಿಮ್ಮ ಸಿಬ್ಬಂದಿ ದಣಿದಂತಿದೆ, ಬೆಳಗ್ಗೆ ಬೇಕಾದರೂ ಹೋಗೋಣ ಎಂದೆವು. ನಮ್ಮನ್ನು ಕರೆದುಕೊಂಡು ಜಿಲ್ಲಾಸ್ಪತ್ರೆಗೆ ಹೋಗಿ ವೈದ್ಯಕೀಯ ತಪಾಸಣೆಯ ಶಾಸ್ತ್ರ ಮುಗಿಸಿಕೊಂಡು, ಜಿಲ್ಲಾ ಮೀಸಲು ಪೊಲೀಸ್ ಹೆಡ್‌ಕ್ವಾರ್ಟರ್ಸ್‌ಗೆ ಕರೆದುಕೊಂಡು ಹೋಗಲಾಯಿತು. ರೂಮೊಂದರಲ್ಲಿ ಸಿಂಪಲ್-ಬಟ್-ಡೀಸೆಂಟ್ ವ್ಯವಸ್ಥೆ ಮಾಡಲಾಗಿತ್ತು. ಊಟ ಸಹ ಚೆನ್ನಾಗಿತ್ತು. 10 ಗಂಟೆ ಹೊತ್ತಿಗೆ ಎಸ್‌ಪಿ ಚೇತನ್ ಕುಮಾರ್ ಅವರು ಬಂದರು. 12 ಗಂಟೆಯ ತನಕ ಅದೂ ಇದೂ ಮಾತುಕತೆ ನಡೆಯಿತು.

ಬೆಳಗ್ಗೆ ತಿಂಡಿ ಮುಗಿಸಿಕೊಂಡು 9 ಗಂಟೆಗೆ ನಮ್ಮ ಜೀಪು ಕೊಪ್ಪ ಕಡೆಗೆ ಹೊರಟಿತು. ಜೀಪಿನ ಚಕ್ರಗಳು ನೆಲದ ಮೇಲೆ ಸುತ್ತುತ್ತಿದ್ದರೆ ನಮ್ಮ ಮಾತುಗಳು ಜಗತ್ತನ್ನೇ ಸುತ್ತುತ್ತಿದ್ದವು. ಇದಕ್ಕೆ ಕಾರಣ ನಮ್ಮನ್ನು ಕರೆದೊಯ್ಯುತ್ತಿದ್ದ ಸರ್ಕಲ್ ಇನ್‌ಸ್ಪೆಕ್ಟರ್ ಸುಧೀರ್ ಹೆಗಡೆ. ಶಿರಸಿ ಕಡೆಯ ಇವರು ಒಂದು ರೀತಿ ಸ್ಪೆಶಲ್ ಕ್ಯಾರೆಕ್ಟರ್. ಲಾ ಮುಗಿಸಿಕೊಂಡು 2 ವರ್ಷ ವಕೀಲಿ ಮಾಡಿ, ನ... ಸಬ್‌ಇನ್‌ಸ್ಪೆಕ್ಟರ್ ಹುದ್ದೆಗೆ ಪರೀಕ್ಷೆ ಬರೆದರು. ವ್ಯವ... ಭ್ರಷ್ಟಾಚಾರದಿಂದಾಗಿ ಕೆಲಸ ಸಿಗದೇ ಹೋದಾಗ 2 ... ತಾವೇ ನ್ಯಾಯಾಲಯದಲ್ಲಿ ಫೈಟ್ ಮಾಡಿ ಕೆಲಸ ಪಡೆದ... ಕುಡಿತ, ಸಿಗರೇಟ್, ಟೀ ಇತ್ಯಾದಿ ಯಾವ ಚಟಗ... ಇಲ್ಲದ, ಧರ್ಮಾಂಧತೆಯನ್ನು ವಿರೋಧಿಸ... ಕಾನೂನುಬದ್ಧವಾಗಿರಲು ಪ್ರಯತ್ನಿಸುವ, ವಿ... ವಿಚಾರಗಳಲ್ಲಿ ಆಸಕ್ತಿಯನ್ನು-ತಿಳಿವಳಿಕೆಯ... ಹೊಂದಿರುವವರು. ನಮಗೆ ಕಂಡಂತೆ ಜನ... ಮನಸ್ಸುಳ್ಳವರು. ಇನ್ನೊಂದು ಮುಖ ಹೇಗಿದೆ ಎಂಬ... ಗೊತ್ತಿಲ್ಲ. (ಸಾಮಾನ್ಯವಾಗಿ ನಮಗೆಲ್ಲರಿಗೂ ಎ... ಮುಖಗಳಿರುತ್ತವೆ. ದೌರ್ಬಲ್ಯದ ಮುಖ ಅಷ್ಟು ಸುಲಭ... ಹೊರಗೆ ಕಾಣುವುದಿಲ್ಲ.) ಏನೇ ಇದ್ದರೂ, ನಾಗರಾ... ಅವರ ವ್ಯಕ್ತಿತ್ವವನ್ನು ಅವರ ಮುಂದೆಯೇ ಸರಿ... ಸಮಪ್ ಮಾಡಿದಂತೆ ‘ಪೊಲೀಸ್‌ತನ’ದ ... ಹೊಂದಿರುವ ಒಳ್ಳೆ ಮನುಷ್ಯ.

ಹೆಗಡೆಯವರು ಒಂದರನಂತರ ಒಂದು ವಿಚಾರ... ಎತ್ತುತ್ತಿದ್ದುದರಿಂದ ಪಯಣದುದ್ದಕ್ಕೂ ಆರೋಗ್ಯಪೂ... ಚರ್ಚೆ ನಡೆಯಿತು. ಸಹಮತವಿರುವ, ಭಿನ್ನಮತ ಇ... ಅಂಶಗಳೆಲ್ಲವೂ ಚರ್ಚೆಯಾಗುತ್ತಿದ್ದವು. ಒಟ್ಟಾರೆ ದ... ಪರಿಸ್ಥಿತಿ, ಕೃಷಿ ಬಿಕ್ಕಟ್ಟು, ಇಂದಿನ ಯುವಜನತೆಯ ಜೀ... ಮೌಲ್ಯ, ಸಮಾಜದಲ್ಲಿ ಹೆಚ್ಚುತ್ತಿರುವ ಸ್ವಾರ್ಥ, ಲೈ... ಹಿಂಸೆ ಹೆಚ್ಚಾಗಲು ಕಾರಣ, ಚಳವಳಿಗಳ ಸ್ಥಿತಿ, ಇ... ವಿಚಾರಗಳು ಬಂದವು. ನಕ್ಸಲ್ ಚಳವಳಿಯ ಸುತ್ತ ಇ... ಹಲವು ಆರೋಪ-ಪ್ರತ್ಯಾರೋಪಗಳ ಪ್ರಸ್ತಾಪ ಬ... ಕೆಲವದರ ಬಗ್ಗೆ ಚರ್ಚೆಯಾಯಿತು. ಕೆಲವದರ ಬಗ್ಗೆ ಒಂದೆರಡು ಮುಖ್ಯ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿ... ಬಯಸುತ್ತೇನೆ.

ಹೆಗಡೆಯವರು ಒಂದು ಚರ್ಚೆ ಪ್ರಾರಂಭಿಸಿ... “ಬೇಜಾರು ಮಾಡಿಕೊಳ್ಳಬೇಡಿ. ಒಂದು ಪ್ರಶ್ನೆ ... ನಾವು ನಕ್ಸಲ್ ಕ್ಯಾಂಪ್‌ಗಳನ್ನು ರೈಡ್ ಮಾಡಿ, ... ಕಿಟ್‌ಗಳು ಸಿಕ್ಕಾಗ ಅದರಲ್ಲಿ ಕಾಂಡೋಮ್ ಪ್ಯಾಕ... ಸಿಕ್ಕವಲ್ಲ ಹೇಗೆ?” ನಾವು ವಿವರಿಸಿದೆವು: “... ಸಂಘಟನೆಯೊಳಗೇ ಮದುವೆಗಳು ಜರುಗುತ್ತವೆ. ... ಜೋಡಿಗಳಿರುತ್ತವೆ. ಸಾಮಾನ್ಯವಾಗಿ ನಕ್ಸಲ್ ಸಂಘಟನೆ... ಮದುವೆಯಾದರೂ ಮಕ್ಕಳನ್ನು ಮಾಡಿಕೊಳ್ಳುವ... ಮೊದಲಾದರೆ ಮದುವೆಗೆ ಮುನ್ನ ಅಥವಾ ನಂತರ ಫ್ಯಾ... ಪ್ಲಾನಿಂಗ್ ಆಪರೇಶನ್ ಮಾಡಿಸಿಕೊಳ್ಳುವುದಿತ್ತು. ಈಗ ಕಾಡಿನಿಂದ ಹೊರಗೆ ಮತ್ತು ಒಳಗೆ ಓಡಾಟ ಸುಲಭವಿಲ್ಲ. ಹಾಗಾಗಿ ಹೊಸ ಜೋಡಿ... ಮದುವೆಯಾದರೂ ಕೂಡಲೇ ಆಪರೇ... ಮಾಡಿಸಿಕೊಳ್ಳಲು ಆಗುವುದಿಲ್ಲ, ಹಾಗಾಗಿ ಪ್ರತಿ ಜೋ... ಪಕ್ಷದ ಕಡೆಯಿಂದಲೇ ಕಾಂಡೋಮ್ ಸಪ್ಲೈ ಇರ... ಮತ್ತೆ ಮತ್ತೆ ತರುವುದು ಸಾಧ್ಯವಿಲ್ಲವಾದ್ದರಿಂದ ತಂದ... ಇಟ್ಟುಕೊಳ್ಳಲು ಸ್ಟಾಕ್ ನೀಡಲಾಗುತ್ತದೆ. ಇದೇ ... ಪೊಲೀಸರು ಪ್ರಚಾರ ಮಾಡುವಂತೆ ಅ... ಸಂಬಂಧಗಳಲ್ಲ, ನೈತಿಕ ವಿಚಾರದಲ್ಲಿ ಪಕ್ಷದಲ್ಲಿ ಬಿಗಿ... ಕಟ್ಟುನಿಟ್ಟು ಇರುತ್ತದೆ. ಹಾಗಿದ್ದಾಗ್ಯೂ ಅಲ...

ಇದು ತಪ್ಪುಗಳು ನಡೆಯುತ್ತವೆ. ಆಗ ಅವರನ್ನು ರ್ತೆಗೆ ಒಳಪಡಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ''. ಡೆಯವರು ಕನ್ವಿನ್ಸ್ ಆದಂತೆ ಕಂಡಿತು.

ಮಾತು ಆಕಡೆ ಈಕಡೆ ಹೊರಳುತ್ತಿದ್ದುದರಿಂದ ಲೀಸ್ ಸ್ನೇಹಿತರು ಎತ್ತಿದ ಇನ್ನೂ ಕೆಲವು ಪ್ರಶ್ನೆಗಳಿಗೆ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳಲು ಆಗಲಿಲ್ಲ. ವೆ 'ನವಯುವಕ'ರಾಗಿದ್ದ ನಾಗರಾಜ್ ಮಾತಿನ ಮ್ಮಸ್ಸಿನಲ್ಲಿದ್ದರು. ಅವರು ಕಳೆದುಕೊಂಡಿದ್ದ ಕೊಪ್ಪ ಪ್ಪಕ್ಕೆ ಪುನಃ ಕಾಲಿಡುತ್ತಿರುವ ದಳಪತಿ ಬೇರೆ. ಗಿ ಉದ್ಘಟತನ ಬೇಡವೆಂದು ನಾನು ಮಧ್ಯ ಬಾಯಿ ಲಿಲ್ಲ. ಇವು ಸಾಮಾನ್ಯವಾಗಿ ಪೊಲೀಸ್ ವಲಯದಲ್ಲಿ ವ ಪ್ರಶ್ನೆಗಳೇ ಆಗಿರುವುದರಿಂದ ಮತ್ತೆ ಅವನ್ನು ಪಿಸುತ್ತಿದ್ದೇನೆ. ನಮ್ಮ ಅಭಿಪ್ರಾಯವನ್ನು ಸ್ವಲ್ಪ ಗಮನ ಪರಿಗಣಿಸಬೇಕಾಗಿ ವಿನಂತಿ.


1. "ಸಮಾಜದ ಎಲ್ಲರ ಕಷ್ಟಗಳ ಬಗ್ಗೆ ತನಾಡಲಾಗುತ್ತೆ. ಆದರೆ ಪೊಲೀಸರ ಕಷ್ಟಗಳ ಬಗ್ಗೆ ರೂ ಮಾತನಾಡುವುದಿಲ್ಲ. ಪೊಲೀಸರೆಂದರೆ ರಾಕ್ಷಸರು ುದೇ ಅಭಿಪ್ರಾಯ. ಹಾಗಾದರೆ ನಾವೆಲ್ಲಾ ಕೆಟ್ಟವರಾ? ಮಾಡಿದ ಸಣ್ಣ ತಪ್ಪನ್ನು ಸಹ ದೊಡ್ಡದು ಮಾಡಿ ಸಲಾಗುತ್ತದೆ. ಇದಕ್ಕೇನಂತೀರಿ?''

ಇದಕ್ಕೆ ಅವರು ಹಲವು ಉದಾಹರಣೆಗಳನ್ನು ಕೊಟ್ಟರು. ಗಳಿಗೆಗೆ ಕೆಲವು ಅಂಶಗಳನ್ನಿಟ್ಟುಕೊಂಡು ಉತ್ತರ ಟ್ಟರೂ ನನ್ನ ಉತ್ತರ ನನಗೇ ಸಮಾಧಾನ ತರಲಿಲ್ಲ. ರಟುಬಂದ ನಂತರವೂ ಅದು ನನ್ನನ್ನು ಕಾಡುತ್ತಿತ್ತು. ಹೀಗನಿಸುತ್ತಿದೆ: ಅವರು ಮುಂದಿಟ್ಟಿರುವ ವಿಚಾರದಲ್ಲಿ ಅಕ ಸತ್ಯವಿದೆ. ಹೋರಾಟಗಾರರಾಗಿ ನಾವು ಗಮನಕ್ಕೆ ಮಕೊಳ್ಳಬೇಕಾದ ಅಂಶಗಳೂ ಇವೆ. ಪೊಲೀಸರೇನೂ ವಾಗಿ ಕೆಲಸ ಮಾಡುತ್ತಿಲ್ಲ. ಮಿಕ್ಕ ಇಲಾಖೆಗಳಿಗಿಂತ ಟ್ಟ ಗಂಟೆಯ ಕೆಲಸ, ಕಠಿಣ ಕೆಲಸ, ರಿಸ್ಕಿನ ಕೆಲಸ. ಕ್ಯವರಿಗಿರುವ ಸ್ವಾತಂತ್ರ್ಯವೂ ಇವರಿಗಿಲ್ಲ. ಸಂಘ ಡುವಂತಿಲ್ಲ, ಮೇಲಿನವರಿಗೆ ಎದುರಾಡುವಂತಿಲ್ಲ, ರಗೆ ಮಾತಾಡುವಂತಿಲ್ಲ. ನೆಮ್ಮದಿಯ ಬದುಕಿಗೆ ಕಾಶವಿಲ್ಲ, ಮಾಡಿದ ಕೆಲಸಕ್ಕೆ ಮನ್ನಣೆಯೂ ಇಲ್ಲ, ಯಲ್ಲಿ ಕೆಳಗಿದ್ದಷ್ಟೂ ಸಂಕಷ್ಟಗಳು ಜಾಸ್ತಿ. ಅಧಿಕಾರಿಗಳ , ಬೈಗಳು, ಸರ್ವಾಧಿಕಾರ, ಕಿರುಕುಳ, ಅವಮಾನ ವನ್ನೂ ಬಾಯಿಬಿಚ್ಚದೆ ಸಹಿಸಿಕೊಳ್ಳಬೇಕು. ಎಲ್ಲದಕ್ಕೂ ಸ್ ಸಾರ್'' ಎಂದು ಸೆಲ್ಯೂಟ್ ಹೊಡೆಯಬೇಕು.

ಪೊಲೀಸರ ಈ ಕಷ್ಟಗಳ ಬಗ್ಗೆ ಸಮಾಜದ ಗಮನವಿಲ್ಲ. ಹೋರಾಟಗಾರರಾದ ನಾವು ಔಪಚಾರಿಕವಾಗಿ ಅದರ ಬಗ್ಗೆ ತನಾಡಿದರೂ ಅಂತರಾತ್ಮಕ್ಕೆ ತೆಗೆದುಕೊಂಡಿಲ್ಲ. ಹಾಗಿಯೇ ಅವರ ಹಕ್ಕುಗಳ ಬಗ್ಗೆ ನಾವ್ಯಾರೂ ದನಿ ತ್ತುವುದಿಲ್ಲ. ಪೊಲೀಸರಲ್ಲಿ ಬಹುತೇಕರು ಬಡ ಹಾಗೂ ಧ್ಯಮ ವರ್ಗದ ಕುಟುಂಬಗಳಿಂದಲೇ ಬಂದವರು. ಗತವಾಗಿ ಬಹುಪಾಲು ಪೊಲೀಸರು ದುಷ್ಟರೂ ಅಲ್ಲ, ದಯಹೀನರೂ ಅಲ್ಲ. ಪೊಲೀಸರನ್ನೆಲ್ಲಾ ಸಾರಾಸಗಟಾಗಿ ಮ್ಮುವ, ಅವರ ತಪ್ಪುಗಳನ್ನು ಅತಿಮಾಡಿ ಖಂಡಿಸುವ ರಣೆಯೂ ಇಲ್ಲದಿಲ್ಲ. ಇದೆಲ್ಲದರ ಬಗ್ಗೆ ನಾವಿನ್ನೂ ಕ್ಷ್ಮಸಂವೇದಿಗಳಾಗಿರುವ ಅಗತ್ಯವಿದೆ.

ಆದರೂ ಮೇಲ್ಕಂಡ ಪ್ರಶ್ನೆಗೆ ಇದು ಅರ್ಧ ಉತ್ತರ ತ್ರ. ಇದರ ಇನ್ನೊಂದು ಮಗ್ಗಲಿನ ಕುರಿತು ಪೊಲೀಸ್ ತ್ರರೂ ಆಲೋಚಿಸುವ ಅಗತ್ಯವಿದೆ. ಪೊಲೀಸರ ಬಗ್ಗೆ ರಾತ್ಮಕ ಭಾವನೆ ಸಮಾಜದಲ್ಲಿ ಮೂಡಿರಲು ರಣವೇನು? ಪೊಲೀಸರ ಹಕ್ಕುಗಳ ಬಗ್ಗೆ ಯಾರೂ ದನಿ ಎತ್ತುವುದಿಲ್ಲ? ಬೇರೆಯವರಿರಲಿ, ಪೊಲೀಸರೇ ತಮ್ಮ ಹಕ್ಕುಗಳ ಬಗ್ಗೆ ದನಿ ಎತ್ತುವುದಿಲ್ಲ? ಮ್ಮಸುಮ್ಮನೆ ಪೊಲೀಸರ ಬಗ್ಗೆ ತಿರಸ್ಕಾರದ ಭಾವನೆ ದಿದೆಯೆ? ಅಥವಾ ಇದನ್ನು ಬೆಳೆಸುತ್ತಿರುವ ಶಕ್ತಿಗಳು ...?

ನನ್ನ ಪ್ರಕಾರ ಇದಕ್ಕೆ ಉತ್ತರ ಈ ವ್ಯವಸ್ಥೆಯು ಪೊಲೀಸರ ತ್ರವನ್ನು ಯಾವ ರೀತಿ ರೂಪಿಸಿದೆ ಹಾಗೂ ಸಿಕೊಳ್ಳುತ್ತಿದೆ ಎಂಬುದರಲ್ಲಿ ಅಡಗಿದೆ. ಹಸಿಹಸಿ ಳಿಕೆ ನೀಡುವುದಾದರೆ, ಜಮೀನ್ದಾರಿ ಕಾಲದ ದಣಿಗಳ ಳಗಿನ ಭಂಟರ ಪರಿಸ್ಥಿತಿ ಅವರದಾಗಿದೆ. ಭಂಟರು ವಂತ ಕುಟುಂಬದಿಂದ ಬಂದವರಲ್ಲ, ಬಡ ಟ್ರೆಯಿಂದ ಬಂದವರು. ಆದರೆ ಅವರು ಮಾಡುವ ಬಡವರ ಸೇವೆ ಮಾಡುವುದಲ್ಲ, ದಣಿಯ ಸೇವೆ ಡಬೇಕು. ಅದಕ್ಕಾಗಿ ದಣಿ ಅವರ ಕೈಗೆ ಒಂದಿಷ್ಟು ಹಾಗೂ ಅಧಿಕಾರವನ್ನು ನೀಡುತ್ತಾನೆ. ... ಯಲು ಒಂದಷ್ಟು ಅವಕಾಶ ಮಾಡಿಕೊಡುತ್ತಾನೆ. ಟರಾಗಲು ಒಂದೇ ನಿಯಮ: ಅವರು ಸದಾ ದಣಿಗೆ ... ಗಬಾರದು, ದಣಿ ಹೇಳಿದ್ದನ್ನು ಪಾಲಿಸಬೇಕು. ದಣಿ ... ಬಡಿಯಲು ಕಳಿಸಿದರೆ ಬಡಿಯಲು ...



ಚಾಕರಿ ಮಾಡಬೇಕು, ಅವನ ಜೊತೆ ಎಣ್ಣೆ ಹೊಡೆಯುತ್ತಾ ಅವನ ಸ್ವಯಂ ಕೊಚ್ಚಿಕೊಳ್ಳುವಿಕೆಗೆ ತಾಳ ಹಾಕಬೇಕು, ತಾನೂ ಹೊಗಳುತ್ತಿರಬೇಕು. ಅವನ ಅಕ್ರಮಗಳನ್ನೆಲ್ಲಾ ಮುಚ್ಚಿಟ್ಟುಕೊಳ್ಳಬೇಕು, ಅವನ ತೋರಿಕೆಯ ಔದಾರ್ಯವನ್ನು ಹಾಡಿ ಹೊಗಳಬೇಕು. ಇದೇ ಪಾತ್ರ, ಈ ಸೋಗಲಾಡಿ ಪ್ರಜಾಪ್ರಭುತ್ವದಲ್ಲಿ ಕಾನೂನು ಭಟರ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ. ಆಳುವವರು, ಅಂದರೆ ಬಲಾಢ್ಯರು ಒಂದು ವ್ಯವಸ್ಥೆಯಾಗಿ ಪೊಲೀಸರನ್ನು ಸಮವಸ್ತ್ರದ ಭಂಟರನ್ನಾಗಿ ಮಾಡಿದ್ದಾರೆ. ಅವರನ್ನು ವ್ಯಕ್ತಿಗಿಂತ ಹೆಚ್ಚಾಗಿ ವ್ಯವಸ್ಥೆಯ ರಕ್ಷಕರನ್ನಾಗಿ ಮಾಡಿದ್ದಾರೆ.

ಆಧುನಿಕ ದಣಿಗಳು ಓಟಗಾಗಿ ಹಾಗೂ ವ್ಯಾಪಾರಕ್ಕಾಗಿ ನೇರಾನೇರ ಜನರನ್ನು ಎದುರು ಹಾಕಿಕೊಳ್ಳಲು ಬಯಸದೆ ಜನರನ್ನು ಸೆಳೆದುಕೊಳ್ಳುವ ನಾಟಕವಾಡುತ್ತಾರೆ. ತಮ್ಮ ವಿರುದ್ಧ ಅಶಾಂತಿ ಮೂಡದಂತೆ ನಿಯಂತ್ರಿಸಲು, ತಮ್ಮ ದುಷ್ಟ ಯೋಜನೆಗಳನ್ನು ಜಾರಿ ಮಾಡಿಕೊಳ್ಳಲು ಜನರ ವಿರುದ್ಧ ಪೊಲೀಸರನ್ನು ಬಿಡುತ್ತಾರೆ. ದಣಿಗಳು ಸೌಮ್ಯವಾಗಿಯೇ ಕಾಣುತ್ತಾರೆ. ಪೊಲೀಸರು ರಾಕ್ಷಸರಂತೆ ಕಾಣುತ್ತಾರೆ. ಅಲ್ಲದೆ ದಣಿ ಭಂಟನಿಗೆ ನೀಡುವ ಆಯುಧ ಹಾಗೂ ಅಧಿಕಾರ ಅವನ ವ್ಯಕ್ತಿತ್ವದಲ್ಲಿ ದರ್ಪ-ದೌರ್ಜನ್ಯದ ಬೀಜವನ್ನು ಬಿತ್ತಿ ಬೆಳೆಸುತ್ತದೆ. ಅಂದಮಾತ್ರಕ್ಕೆ ಪೊಲೀಸರು ಜನರ ಪರವಾಗಿ, ಸಾಮಾನ್ಯ ಜನರ ಪರವಾಗಿ ಏನೂ ಮಾಡುವುದಿಲ್ಲವೆಂದಲ್ಲ, ಅಂಥ ಕೆಲಸವನ್ನು ಮಾಡುವುದೂ ಇದೆ. ಜನಹಿತವನ್ನು ಬಯಸುವ ಅಧಿಕಾರಿಗಳೂ ಇದ್ದಾರೆ. ಆದರೆ ಆಳುವವರು ರಚಿಸಿರುವ ಚೌಕಟ್ಟಿನಲ್ಲಿ ಅದಕ್ಕಿರುವ ಅವಕಾಶವೂ ಕಡಿಮೆ, ಅಧಿಕಾರವೂ ಕಡಿಮೆ.

ಸಾರಾಂಶದಲ್ಲಿ, ಬಲಾಢ್ಯರ ಹಿತಾಸಕ್ತಿಯನ್ನು ಕಾಯುವ ಅವರ ಪಾತ್ರ, ಅವರ ಅಧಿಕಾರ ಹಾಗೂ ಅದರ ದುರುಪಯೋಗ ಜನರು ಅವರನ್ನು ದ್ವೇಷಿಸುವಂತೆ ಮಾಡುತ್ತದೆ. ಹಾಗಾಗಿ ಅವರ ಬಗ್ಗೆ ಸಮಾಜದಲ್ಲಿ ತಾತ್ಸಾರ ಮೂಡಲೂ ಬಲಾಢ್ಯರ ಪರವಾದ ವ್ಯವಸ್ಥೆಯೇ ಕಾರಣ. ಅವರ ಕಷ್ಟದ, ಕಠಿಣ, ರಿಸ್ಕಿನ, ನೆಮ್ಮದಿ ಇಲ್ಲದ ಬದುಕಿಗೂ ಅದೇ ಬಲಾಢ್ಯರ ವ್ಯವಸ್ಥೆ ಕಾರಣ, ಜನರಲ್ಲ. ಜನರು ಅತಿ ಮಾಡುವುದು ಇದೆ. ನೊಂದವರ ವರ್ತನೆ ಸಂಯಮ ಸಮತೋಲನದಿಂದ ಕೂಡಿರಬೇಕೆಂದು ನಿರೀಕ್ಷಿಸಲು ಬರುವುದಿಲ್ಲ. ಆದರೆ ಹೋರಾಟಗಾರರು ಅದನ್ನು ಮೈಗೂಡಿಸಿಕೊಳ್ಳಬೇಕಿದೆ. ಪೊಲೀಸ್ ಮಿತ್ರರೂ ತಮ್ಮನ್ನು ನಿಯಂತ್ರಿಸುತ್ತಿರುವ ಸೂತ್ರಧಾರರತ್ತ ತಮ್ಮ ಸಿಟ್ಟನ್ನು ತಿರುಗಿಸುವ ಅಗತ್ಯವಿದೆ.

2. 'ನಕ್ಸಲರನ್ನು ಕೊಂದರೆ ನಮಗೇನು ಸಂತೋಷವಾಗುವುದಿಲ್ಲ. ಆದರೆ ಅವರು ಕಾನೂನಿನ ವಿರುದ್ಧ ಹೋಗುವುದರಿಂದ ಹಾಗೂ ನಮ್ಮ ಕರ್ತವ್ಯಕ್ಕೆ ನಾವು ಬದ್ಧರಾಗಿರಬೇಕಿರುವುದರಿಂದ ಅದನ್ನೆಲ್ಲಾ ಮಾಡಬೇಕಾಗುತ್ತದೆ.' (ನಮ್ಮ ನಡುವೆ ಚರ್ಚೆ ಇದೇ ರೂಪದಲ್ಲಿ ಬರದಿದ್ದರೂ ಇದು ಎಲ್ಲಾ ಪೊಲೀಸರ ನಡುವೆ ಚಾಲ್ತಿಯಲ್ಲಿರುವ ಸಾರ್ವತ್ರಿಕ ನಿಲುವು.)

ನಕ್ಸಲರು ಮಾಡುತ್ತಿರುವ ಕಾನೂನುಬಾಹಿರ ಕೆಲಸವೇನು? ಅವರು ಬಂದೂಕು ಹಿಡಿದಿದ್ದಾರೆ: ಹೌದು, ಅದು ಕಾನೂನುಬಾಹಿರ ಕೆಲಸವೇ. ಕಾನೂನುಬಾಹಿರ ಕೆಲಸವನ್ನು ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಮಾಡಲಿಲ್ಲವೆ? ಗಾಂಧೀಜಿ ಕಾನೂನುಭಂಗ ಚಳವಳಿ ನಡೆಸಲಿಲ್ಲವೆ? ಸುಭಾಷ್‌ಚಂದ್ರ ಬೋಸ್ ಸೈನ್ಯ ಕಟ್ಟಲಿಲ್ಲವೆ? ಭಗತ್ ಸಿಂಗ್ ಬಾಂಬ್ ಹಾಕಲಿಲ್ಲವೆ? ಆದರೆ ನಾವದನ್ನು ತಪ್ಪು ಎನ್ನುವುದಿಲ್ಲ. ಏಕೆ? ಏಕೆಂದರೆ ನ್ಯಾಯ ಅವರ ಪರವಾಗಿತ್ತು, ಅನ್ಯಾಯದ ವಿರುದ್ಧ ಅವರೆಲ್ಲಾ ಹೋರಾಡಿದರು. ಅವರುಗಳು ಅಳವಡಿಸಿದ ಹೋರಾಟದ ಮಾರ್ಗ ಚಳವಳಿಯನ್ನು ಮುಂದಕ್ಕೊಯ್ಯಲು ಸಹಾಯಕವಾಗಿತ್ತೇ ಇಲ್ಲವೆ ಎಂಬುದು ಬೇರೆ ವಿಚಾರ. ಆದರೆ ಅವರು ಮಾಡಿದ್ದು ಕಾನೂನುಬಾಹಿರ ಕೆಲಸವಾದರೂ ದೇಶದ್ರೋಹದ ಕೆಲಸವಲ್ಲ, ಗಾಂಧೀಜಿಯೇ ಒಂದು ಕಡೆ ಹೇಳುತ್ತಾರೆ - "ಸತ್ಯ ಹಾಗೂ ಕಾನೂನಿನ ನಡುವೆ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭ ನನ್ನ ಮುಂದೆ ಬಂದರೆ ನಾನು ಸತ್ಯವನ್ನು ಆಯ್ಕೆ ಮಾಡಿಕೊಳ್ಳುತ್ತೇನೆ'' ಎಂದು.

ನಕ್ಸಲೈಟರು ಅಳವಡಿಸುತ್ತಿರುವ ಮಾರ್ಗದ ಬಗ್ಗೆ ನಮಗೆ ಏನೇ ಭಿನ್ನಾಭಿಪ್ರಾಯವಿದ್ದರೂ (ನಮಗೂ ಇದೆ ಎಂಬುದು ನಿಮಗೂ ಗೊತ್ತು), ಅವರು ಬಡವರ ಪರವಾಗಿ ಹೋರಾಡುತ್ತಿದ್ದಾರೆ ಎಂಬುದು ಸತ್ಯವಲ್ಲವೆ? ಅವರು ಈ ಸಮಾಜದ ಶೋಷಣೆಯ ವಿರುದ್ಧ ಹೋರಾಡುತ್ತಿದ್ದಾರೆ ಎಂಬುದು ಸತ್ಯವಲ್ಲವೆ? ಪೊಲೀಸರು ಪ್ರಚಾರ ಮಾಡುವಂತೆ ಜನಸಾಮಾನ್ಯರನ್ನು ಬೆದರಿಸುತ್ತಿಲ್ಲ ಎಂಬುದು ಸತ್ಯವಲ್ಲವೆ? ನಕ್ಸಲೈಟರು ಮಾತ್ರವಲ್ಲದೆ ಪೊಲೀಸರು ಸಹ ಕಾನೂನುಬಾಹಿರವಾಗಿ ನಡೆದುಕೊಂಡಿರುವುದು ಸತ್ಯವಲ್ಲವೆ? (ಉದಾ: ಈದು, ಮೆಣಸಿನಹಾಡ್ಯ 'ಎನ್‌ಕೌಂಟರ್'ಗಳು). ಹಾಗಾದರೆ ಸತ್ಯ ಮಾರ್ಗದಲ್ಲಿರುವವರನ್ನು ಕಾನೂನುಬಾಹಿರವಾಗಿದ್ದಾರೆಂಬ ಕಾರಣಕ್ಕೆ ಕೊಲ್ಲುವುದು ಸಮರ್ಥನೀಯವೆ? ಗಾಂಧೀಜಿ ಹೇಳಿದಂತೆ ಪ್ರಾಮಾಣಿಕ ಪೊಲೀಸರ ಮುಂದೆಯೂ 'ಸತ್ಯ ಅಥವಾ ಕಾನೂನನ್ನು' ಆಯ್ಕೆ ಮಾಡಿಕೊಳ್ಳುವ ಸಂದರ್ಭವಿದೆ.

ಬದುಕಿಗಾಗಿ ಪೊಲೀಸ್ ಇಲಾಖೆ ಸೇರಿರುವಾಗ ಈ ತಾತ್ವಿಕ ವಿಚಾರದಲ್ಲಿ ಸತ್ಯದ ಪರ ನಿಲುವು ತೆಗೆದುಕೊಳ್ಳುವುದು ಸುಲಭವಲ್ಲ ಎನ್ನುವುದು ನನಗೂ ಗೊತ್ತು. ಆದರೆ ನ್ಯಾಯದ ತಕ್ಕಡಿಯಲ್ಲಿ ತಾವು ಕಾನೂನಿನ ಮಗ್ಗಲಲ್ಲಿದ್ದೇವೆಯೇ ಹೊರತು ಸತ್ಯದ ಮಗ್ಗಲಲ್ಲಿ ಅಲ್ಲ ಎಂಬ ಸತ್ಯವಾದರೂ ನಮ್ಮ ಮನದ ಮೂಲೆಯಲ್ಲಿರಬೇಕಲ್ಲವೆ?

3. 'ವಿಚಾರಣೆಯ ಸಂದರ್ಭದಲ್ಲಿ ಆರೋಪಿಗಳನ್ನು ಹೊಡೆಯಬಾರದು ಎನ್ನುತ್ತಾರೆ. ಹೊಡೆಯದಿದ್ದರೆ ಯಾವ ಕಳ್ಳನೂ ತಾನು ಕಳ್ಳತನ ಮಾಡಿದ್ದೇನೆಂದು ಒಪ್ಪಿಕೊಳ್ಳುವುದಿಲ್ಲ.'

ಈ ಮಾತಿನಲ್ಲೂ ಸತ್ಯವಿದೆ. ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ, ತಪ್ಪು ಮಾಡಿದವರು ಒಪ್ಪಿಕೊಳ್ಳುವುದಿಲ್ಲ. ಹಾಗೆಂದು ಹೊಡೆ-ಬಡಿಯುವುದಲ್ಲ, ತನಿಖೆಯ ಮೂಲಕ, ಅವರೇ ಆ ಅಪರಾಧ ಮಾಡಿದ್ದಾರೆಂದು ನಿರೂಪಿಸಬೇಕು. ಆದರೆ ಅಂಥ ತರಬೇತಿಯೂ ನಮ್ಮ ಪೊಲೀಸರಿಗಿಲ್ಲ, ಅಷ್ಟು ಸಿಬ್ಬಂದಿಯೂ ನಮ್ಮಲ್ಲಿಲ್ಲ. ಹಾಗಾಗಿ ಸದ್ಯಕ್ಕೆ ಈ ಶಾರ್ಟ್‌ಕಟ್ ಪದ್ಧತಿಯೇ ಅನಿವಾರ್ಯ ಎಂದು ಇಟ್ಟುಕೊಳ್ಳೋಣ. ಆಗಲೂ ಮತ್ತೆ ಮೂರು ತಾತ್ವಿಕ ಪ್ರಶ್ನೆಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ:

1. ಸಂಬಂಧಪಟ್ಟ ವ್ಯಕ್ತಿ ಇಂಥ ತಪ್ಪು ಮಾಡಿದ್ದಾನೆಂದು ಪೊಲೀಸರಿಗೆ ಗೊತ್ತು ಅಥವಾ ಬಲವಾದ ಗುಮಾನಿ ಇದೆ. ಆದರೆ ಅದಕ್ಕೆ ಸಾಕ್ಷ್ಯಾಧಾರಗಳಿಲ್ಲ, ಹಾಗಾಗಿ ಹೊಡೆಯುವುದು ಅನಿವಾರ್ಯ ಎನ್ನುವುದಾದರೆ, ಎಲ್ಲಾ ಪೊಲೀಸ್ ಅಧಿಕಾರಿಗಳೂ ಒಂದು ಕ್ಷಣ ಕಣ್ಣು ಮುಚ್ಚಿಕೊಂಡು, ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಬಲಾಢ್ಯರು (ರಾಜಕಾರಣಿಗಳು, ಉದ್ಯಮಪತಿಗಳು, ಗುತ್ತಿಗೆದಾರರು, ಭೂಮಾಲೀಕರು, ಮಠಾಧೀಶರು ಇತ್ಯಾದಿ) ಏನೇನು ಅಪರಾಧಗಳನ್ನು ಮಾಡಿದ್ದಾರೆ ಎಂದು ಆಲೋಚಿಸಲಿ. ಯಾರು ಕಳ್ಳ ದಂಧೆ ನಡೆಸುತ್ತಿದ್ದಾರೆ, ಯಾರು ... ಕುದುರಿಸುತ್ತಿದ್ದಾರೆ, ಯಾರು ಕೊಲೆ ಮಾಡಿಸಿದ್ದಾರೆ, ಯಾರು ವಂಚಕ ಚಟುವಟಿಕೆಯಲ್ಲಿ ತೊಡಗಿದ್ದಾರೆ, ಯಾರು ಹೆಣ್ಣುಮಕ್ಕಳನ್ನು ಹಾಳು ಮಾಡುತ್ತಿದ್ದಾರೆ ಎಂಬ ಬಗ್ಗೆ ತಮಗೆ ಗೊತ್ತಿಲ್ಲವೆ ಅಥವಾ ಬಲವಾದ ಗುಮಾನಿ ಇಲ್ಲವೆ? ಅವರ ಬಗ್ಗೆ ಸಾಕ್ಷ್ಯಾಧಾರಗಳಿಲ್ಲ ಎಂಬುದೂ ನಿಜವಿರಬಹುದು. ಹಾಗಾದರೆ ಅವರನ್ನೂ ಸಹ ಎಳೆದು ತಂದು ಬಾರಿಸಿ ಬಾಯಿ ಬಿಡಿಸಬಹುದಲ್ಲವೆ? ಹಾಗೆ ಮಾಡಿದರೆ ನೌಕರಿಯಿಂದ ಕೈತೊಳೆದುಕೊಳ್ಳಬೇಕಷ್ಟೇ ಎನ್ನುತ್ತೀರಾ? ಹಾಗಿದ್ದರೆ, ಕೆಲವರ ಮೇಲೆ ನಿಮ್ಮ ಲಾಠಿಗಳು ಪುಡಿಯಾಗುವುದು ಅವರು ಬಾಯಿ ಬಿಡುತ್ತಿಲ್ಲ ಎಂಬ ಕಾರಣಕ್ಕೆ ಮಾತ್ರವಲ್ಲ. ಅವರು ಬಲಾಢ್ಯರಲ್ಲ ಎಂಬ ಕಾರಣಕ್ಕಾಗಿ ಎನ್ನುವುದೇ ವಾಸ್ತವ. ಈ ದೇಶದ ಪ್ರಮುಖ ಶೋಷಕರ ಮೈ ಮುಟ್ಟುವ ಶಕ್ತಿ ಹೊಂದಿಲ್ಲದ ನಮಗೆ ಪುಡಿ ಅಪರಾಧಿಗಳ ಮೇಲೆ ಮಾತ್ರ ಏರಿಹೋಗುವ ನೈತಿಕ ಹಕ್ಕಾದರೂ ಎಲ್ಲಿದೆ?

2. ಸರಿಯೋ ತಪ್ಪೋ, ಕಾನೂನು ಪಾಲಿಸುವುದು ನಮ್ಮ ಕರ್ತವ್ಯ ಎಂದು ಪೊಲೀಸರು ಹಲವು ಸಂದರ್ಭದಲ್ಲಿ ಹೇಳುತ್ತಾರೆ (ಹೋರಾಟಗಾರರ ಮೇಲೆ ಕ್ರಮ ಕೈಗೊಳ್ಳುವಾಗಲೂ). ಹಾಗಾದರೆ ಕಾನೂನು ನಿಷೇಧಿಸಿರುವ ಚಿತ್ರಹಿಂಸೆಯನ್ನು ಮಾಡುವ ಹಕ್ಕು ಪೊಲೀಸರಿಗೆ ಎಲ್ಲಿಂದ ಬರುತ್ತದೆ? ಕಾನೂನಿಗಿಂತ ಪೊಲೀಸರು ದೊಡ್ಡವರಾದಂತೆ ಆಗುವುದಿಲ್ಲವೆ?

3. ನೂರು ಅಪರಾಧಿಗಳು ತಪ್ಪಿಸಿಕೊಂಡರೂ ಪರವಾಗಿಲ್ಲ, ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು ಎಂದು ನಮ್ಮ ನ್ಯಾಯಾಂಗ ಹೇಳುತ್ತದೆ. ಆದರೆ ಅನೇಕ ನಿರಪರಾಧಿಗಳು ಈ 'ಕರಾಳ-ಕೋಣೆ'ಯ ತನಿಖೆಯಲ್ಲಿ ಆಕ್ರಂದನಗೈಯುತ್ತಿಲ್ಲವೆ? ಹಾಗಾದರೆ ನ್ಯಾಯಾಂಗದ ದಿವ್ಯ ಮಾತಿಗೆ ನಾವು ಯಾವ ಬೆಲೆ ನೀಡುತ್ತಿದ್ದೇವೆ?

ಅಂದು ಇಷ್ಟೆಲ್ಲಾ ಮಾತನಾಡಲು ಅವಕಾಶ ಸಿಗಲಿಲ್ಲ, ಅಷ್ಟರಲ್ಲಿ 'ಕರೆಯುತ್ತಿದ್ದಾರೆ' ಎಂದರು. ಕೋರ್ಟ್ ಹಾಲ್‌ಗೆ ಧಾವಿಸಿದೆವು. ನ್ಯಾಯಾಲಯ ನಾಗರಾಜ್ ಅವರಿಗೆ ಜಾಮೀನು ಕೊಟ್ಟು, ನನ್ನನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿತು. ನಾಗರಾಜ್‌ಗೆ ಬೀಳ್ಕೊಟ್ಟು, ಮಾಧ್ಯಮದವರಿಗೆ ಪೋಸ್ ಕೊಟ್ಟು ಮತ್ತೆ ಜೀಪ್ ಹತ್ತಿದೆವು.

ಹೋಗುವ ದಾರಿಯಲ್ಲಿ ಹೆಗಡೆಯವರು ಕೇಳಿದರು, "ಶ್ರೀಧರ್, ಒಳಗಿರುವವರೂ ಸಹ ನಿಮ್ಮ ರೀತಿ ತೀರ್ಮಾನ ತೆಗೆದುಕೊಂಡು ಬರಬಹುದಾ?'' "ಕಾಡಿನಲ್ಲಿ ನಮ್ಮ ಸಂಗಾತಿಗಳು ಸಹ ಈ ಸಂದರ್ಭವನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ನಾವು ಬಯಸುತ್ತೇವೆ. ಆದರೆ ತಕ್ಷಣದ ಪರಿಸ್ಥಿತಿಯಲ್ಲಿ ಅದು ಸಾಧ್ಯ ಎನಿಸುತ್ತಿಲ್ಲ. ನಮ್ಮ ಪ್ರಕ್ರಿಯೆ ಹೇಗಾಗುತ್ತದೆ ಎಂಬುದರ ಮೇಲೆ ಕೆಲವರಾದರೂ ಬರುವ ಸಾಧ್ಯತೆ ಇದೆ'' ಎಂದೆ. ಅದರ ಸುತ್ತ ಅದೂ ಇದೂ ಚರ್ಚೆಯಾಗುವ ಹೊತ್ತಿಗೆ ಜೀಪು ನ.ರಾ.ಪುರ ಸಬ್‌ಜೈಲಿನ ಮುಂದೆ ನಿಂತಿತು. ನನ್ನೊಟ್ಟಿಗೆ ಬಂದಿದ್ದ ಪೊಲೀಸರೆಲ್ಲಾ ನನ್ನ ಜೊತೆ ಮತ್ತೊಮ್ಮೆ ಫೋಟೋ ತೆಗೆಸಿಕೊಂಡರು. ಜೈಲಿನ ಸೂಪರಿಂಟೆಂಡೆಂಟರಿಗೆ ನನ್ನನ್ನು ಒಪ್ಪಿಸಿ, "ಇವರು ಹೋರಾಟಗಾರರು, ಬೇರೆ ಕೈದಿಗಳಂತಲ್ಲ. ಚೆನ್ನಾಗಿ ನೋಡಿಕೊಳ್ಳಿ'' ಎಂದರು. ನನ್ನ ಕೈಕುಲುಕಿ, ಶುಭ ಹಾರೈಸಿ ಹೊರಟರು. ಆತ್ಮೀಯರು ಹೊರಟಾಗ ಉಂಟಾಗುವ ಭಾವ ಮನದಲ್ಲಿ ಮೂಡಿತ್ತು.

■ ನೂರ್ ಶ್ರೀಧರ್

ಇರೋಮ್ ಶರ್ಮಿಳಾ ಆಗಿರುವುದು ಸುಲಭವಲ್ಲ..

"ಸೊರಿಯುತ್ತಿರುವ ಯೌವನ; ಬಾಧಿಸುತ್ತಿರುವ ಕಾಯಿಲೆ; ಕೇವಲ ತನ್ನ ಉಪವಾಸವೊಂದನ್ನೇ ಹೋರಾಟವಾಗಿಸಿ ಉಳಿದಂತೆ ನಿಷ್ಕ್ರಿಯವಾಗಿರುವ ಜನತೆ; ತಾರಾಡಬೇಕೆಂಬ ಮನಸು 15 ವರ್ಷದಿಂದ ಮಲಗಿದಲ್ಲೇ ಮಲಗಿ, ಇದ್ದಲ್ಲೇ ಇದ್ದು ಹುಟ್ಟಿರುವ ವಿಕಾಸನ; ಅದರ ನಡುವೆ ಬೆಚ್ಚನೆಯ ಭಾವನೆಗಳನ್ನು ಹುಟ್ಟಿಸಿದಾತನ ಒಂದು ಹಿಡಿ ಪ್ರೀತಿ ಪಡೆಯಲು ಸಮಾಜ ತೋರುತ್ತಿರುವ ವಿರೋಧ"

ವಿಶ್ವದಲ್ಲೇ ಅತಿ ದೀರ್ಘಕಾಲ ಉಪವಾಸ ಸತ್ಯಾಗ್ರಹ ನಡೆಸಿದ ವ್ಯಕ್ತಿ ಇರೋಂ ಶರ್ಮಿಳಾ. ಆಕೆ ಧೈರ್ಯಕ್ಕೆ, ಬದುಕುಳಿವ ಛಲಕ್ಕೆ, ಹೋರಾಟದ ಗುಣಕ್ಕೆ ಇನ್ನೊಂದು ಹೆಸರು. ಮಣಿಪುರದಲ್ಲಿ ಮಾನವ ಹಕ್ಕು ಉಲ್ಲಂಘನೆ ಮಾಡುತ್ತಿರುವ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ ಕುರಿತು ಸಮಾಜದ ಗಮನ ಸೆಳೆದು ಅದನ್ನು ವಾಪಸ್ ತೆಗೆದುಕೊಳ್ಳುವಂತೆ ಸರ್ಕಾರದ ಮೇಲೆ ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಒತ್ತಡ ತಂದಿದ್ದು ಇರೋಂ ಶರ್ಮಿಳಾ ಉಪವಾಸ. ಈ ಕಾರಣಕ್ಕಾಗಿಯೇ ಅವರಿಗೆ ಹಲವು ಪ್ರಶಸ್ತಿ-ಮನ್ನಣೆಗಳು ಸಂದಿವೆ.

ಆಕೆ ಉಪವಾಸ ಶುರುಮಾಡಿ 15 ವರ್ಷಗಳಾದವು. ಅದು ನವೆಂಬರ್ 2, 2000ನೇ ಇಸವಿ. ಮಣಿಪುರದ ಇಂಫಾಲ ಕಣಿವೆಯ ಒಂದು ಹಳ್ಳಿ ಮಾಲೋಮ್ನ ನಿಲ್ದಾಣದಲ್ಲಿ ಬಸ್ ಕಾಯುತ್ತಿದ್ದ ಹತ್ತು ಜನರನ್ನು ಅಸ್ಸಾಂ ರೈಫಲ್ಸ್ ಅರೆಸೇನಾ ಪಡೆಯ ಯೋಧರು ಗುಂಡು ಹಾರಿಸಿ ಕೊಂದರು. ಸತ್ತವರಲ್ಲಿ 62 ವರ್ಷದ ಲಿಸಾಂಗ್ಬಮ್ನಿಂದ ಹಿಡಿದು 1988ರಲ್ಲಿ ರಾಷ್ಟ್ರೀಯ ಮಕ್ಕಳ ಶೌರ್ಯ ಪ್ರಶಸ್ತಿ ಪಡೆದ ಸಿನಮ್ ಚಂದ್ರಮಣಿ ಕೂಡಾ ಸೇರಿದ್ದರು. 28 ವರ್ಷ ವಯಸ್ಸಿನ, ಪಶುವೈದ್ಯ ಇಲಾಖೆಯ ನೌಕರರ ಮಗಳಾದ ಇರೋಂ ಶರ್ಮಿಳಾ ಬಾನು ಪ್ರತಿ ಗುರುವಾರದಂತೆ ಅಂದೂ ಉಪವಾಸವಿದ್ದಳು. ಆಕೆ ಲಂಗುಲಗಾಮಿಲ್ಲದ ಸೇನೆಯ ಆಟಾಟೋಪಗಳ ಕುರಿತು ಕೇಳಿದ್ದಳು. ಮೆಯಿರಾ ಪೈಬಿ ಮಹಿಳಾಸಂಘಟನೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದಳು. ಈ ಹತ್ಯಾಕಾಂಡದ ನಂತರ ಎಷ್ಟು ನೊಂದುಕೊಂಡಳೆಂದರೆ ಸೈನ್ಯ ಮತ್ತು ಅರೆಸೇನಾಪಡೆಗಳಿಗೆ ವಿಶೇಷಾಧಿಕಾರ ನೀಡಿ, ಮನಬಂದಂತೆ ಕೊಲ್ಲುವ ಅವಕಾಶ ಕೊಟ್ಟ ಎಎಫ್ಎಸ್ಪಿಎ ಕಾಯ್ದೆ ವಾಪಸು ತೆಗೆದುಕೊಳ್ಳುವವರೆಗೆ ಉಪವಾಸ ಮಾಡುವುದಾಗಿ ಘೋಷಿಸಿದಳು.

ಉಪವಾಸ ಕುಳಿತ ಮೂರನೇ ದಿನಕ್ಕೆ ದೇಹಸ್ಥಿತಿ ಗಂಭೀರವಾಯಿತು.



ಪೊಲೀಸರು ಆತ್ಮಹತ್ಯೆ ಪ್ರಯತ್ನವೆಂದು ಐಪಿಸಿ ಸೆ. 309ರ ಅಡಿಯಲ್ಲಿ ಬಂಧಿಸಿದರು. ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಬದುಕುಳಿಯಲೆಂದು ಆಕೆಯ ಮೂಗಿಗೆ ಒತ್ತಾಯವಾಗಿ ಆಹಾರ ನಳಿಕೆ (ರೈಲ್ಸ್ ಟ್ಯೂಬ್) ಏರಿಸಲಾಯಿತು. ಅಂದಿನಿಂದ ಆಹಾರ ಮತ್ತು ನೀರು ಎರಡೂ ನಳಿಕೆ ಮೂಲಕ ಆಕೆಯ ದೇಹ ಸೇರುತ್ತಿವೆ. ಆತ್ಮಹತ್ಯೆ ಪ್ರಯತ್ನಕ್ಕಾಗಿ ಗರಿಷ್ಠ ಒಂದು ವರ್ಷ ಕಾಲ ಮಾತ್ರ ಜೈಲು ಶಿಕ್ಷೆ ನೀಡಬಹುದು. ಆದ್ದರಿಂದ ಕಳೆದ 15 ವರ್ಷಗಳಿಂದ ಪ್ರತಿ ವರ್ಷ ಶರ್ಮಿಳಾ ಬಿಡುಗಡೆಯಾಗುವುದು, ಆತ್ಮಹತ್ಯೆ ಪ್ರಯತ್ನವೆಂದು ಮತ್ತೆ ಮರುದಿನ ಬಂಧಿಸುವುದು, ಒಂದು ವರ್ಷದ ಬಳಿಕ ಮತ್ತೆ ಬಿಡುಗಡೆಯಾಗುವುದು ಮುಂದುವರೆದಿದೆ. ಬಂಧನದಲ್ಲಿರುವಾಗ ಪ್ರತಿ 15 ದಿನಕ್ಕೊಮ್ಮೆ ಆಸ್ಪತ್ರೆಯಿಂದ ಕಮ್ಯಾಂಡೋಗಳ ರಕ್ಷಣೆಯಲ್ಲಿ ಕೋರ್ಟಿಗೆ ಹೋಗುವುದು; ಸೌಖ್ಯವೇ? ಉಪವಾಸ ನಿಲ್ಲಿಸುವೆಯಾ? ಎಂಬ ಪ್ರಶ್ನೆಗಳು ನ್ಯಾಯಾಧೀಶರಿಂದ ಬಂದಾಗ ಮಾಮೂಲಿಯಾಗಿ ನಿರಾಕರಿಸುವುದು ಪ್ರಹಸನದಂತೆ ನಡೆಯುತ್ತಲೇ ಇದೆ.

ಶರ್ಮಿಳಾ ಎಂಬ ಕೃಶದೇಹಿ ಮಣಿಪುರದ ಉಕ್ಕಿನ ಮಹಿಳೆ ಎನಿಸಿಕೊಂಡಿದ್ದಾರೆ. ಆದರೆ ಶರ್ಮಿಳಾ ಆಗುವುದು, ಆಗಿರುವುದು ಸುಲಭವಲ್ಲ.

ಜಗಿಯುವ ಕ್ರಿಯೆ ಮನಸ್ಸನ್ನು ಪ್ರಫುಲ್ಲವಾಗಿಡುವ ಒಂದು ಮಾರ್ಗ. ಉಂಡ, ಚ್ಯೂಯಿಂಗ್ ಗಂ/ಕವಳ ಜಗಿದ ವ್ಯಕ್ತಿ ಫ್ರೆಷ್ನೆಸ್ ಅನುಭವಿಸುವುದು ಜಗಿಯುವಿಕೆಯಿಂದಲೇ. ಜಗಿಯುವುದನ್ನೇ ಮರೆತು ಬದುಕುವುದು, ನಾಲಗೆಯ ರುಚಿಯ ಸೆಳೆತವನ್ನು ನಿರಾಕರಿಸುವುದು, ಪೊಲೀಸು-ಆಸ್ಪತ್ರೆ, ಸಿಬ್ಬಂದಿ-ಪತ್ರಕರ್ತರು-ಆಕ್ಟಿವಿಸ್ಟರ ನಡುವೆ ಆಸ್ಪತ್ರೆ ಕಂ ಜೈಲಿನಲ್ಲಿ 15 ವರ್ಷ ಬದುಕುವುದು ಸುಲಭವಲ್ಲ. ಯಾರೊಡನೆಯೂ ಖಾಸಗಿ ಮಾತುಕತೆಯಿಲ್ಲದೆ ಬರೀ ಓದಿ, ಟಿವಿ ನೋಡಿ, ಪತ್ರ-ಚಿತ್ರ ಬರೆದು, ಸಂದರ್ಶನ ನೀಡುತ್ತ, ಕೋರ್ಟಿಗೆ ಹೋಗಿಬರುತ್ತ ಇರುವುದು ಭಾವಜೀವಿಗೆ ಇನ್ನೂ ಕಷ್ಟ. ಆದರೂ ತಾನು ಹಾಗೆ ಬದುಕಲೇಬೇಕಾಗಿದೆ ಎಂದು ಈ ಎಲ್ಲ ವರ್ಷಗಳಲ್ಲಿ ಶರ್ಮಿಳಾ ಮನಸ್ಸನ್ನು ಗಟ್ಟಿ ಮಾಡಿಕೊಂಡು ಬದುಕಿದ್ದರು.

ಅಥವಾ ನಾವು ಹಾಗಂದುಕೊಂಡಿದ್ದೆವು. ಈಗ ಉಪವಾಸ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ.

ಅವರಿಗೆ ಉಪವಾಸ ಸಾಕೆನಿಸುತ್ತಿದೆ. ತಾನು ಗೆದ್ದು, ಸರ್ಕಾರ ಆ ಕಾಯ್ದೆ ವಾಪಸು ಪಡೆದು, ಎಲ್ಲರೊಡನೆ ಊಟಮಾಡಬೇಕೆನಿಸತೊಡಗಿದೆ. ಕಳೆದ 15 ವರ್ಷದಿಂದ ಊಟದ ರುಚಿಯನ್ನೇ ನೋಡದ ಬಾಯಿಗೆ ರುಚಿಯೇ ಮರೆತುಹೋಗಿದೆ. ಏನೇನನ್ನೋ ತಿನ್ನುವ ಬಯಕೆ. ಎಲ್ಲವನ್ನು ಬಾಯಿಗೆ ಹಾಕಿ ತಮ್ಮ ಕಳೆದುಕೊಂಡ ರುಚಿಯ ಸಂವೇದನೆಯನ್ನು ಮರಳಿ ಪಡೆಯುವ ಬಯಕೆ. ಅವರ ಬಳಿ ನಿಮ್ಮಿಷ್ಟದ ತಿನಿಸು ಯಾವುದು ಎಂದರೆ ಎಲ್ಲವನ್ನೂ ಕಣ್ಣೆದುರು ತಂದುಕೊಂಡು ಎಲ್ಲರೊಡನೆ ಎಲ್ಲವನ್ನೂ ತಿನ್ನಬೇಕೆನಿಸಿದೆ ಎನ್ನುತ್ತ ಸಂಭ್ರಮಿಸುತ್ತಾರೆ.

ಇದರ ಜೊತೆಗೆ ಸದ್ಯದಲ್ಲೇ ಐಪಿಸಿಯ ಸೆಕ್ಷನ್ 309 ರದ್ದಾಗಿ ಆತ್ಮಹತ್ಯೆ ಕ್ರಿಮಿನಲ್ ಅಪರಾಧವಲ್ಲ ಎಂಬ ತೀರ್ಮಾನವಾಗಲಿದೆ. ಹಾಗಾದಲ್ಲಿ ಶರ್ಮಿಳಾ ಜೈಲಾಗಿ ಪರಿವರ್ತನೆಗೊಂಡ ಆಸ್ಪತ್ರೆಯ ರೂಮಿನಿಂದ ಬಿಡುಗಡೆಯಾಗುತ್ತಾರೆ. ಆಗ ಅವರ ರೈಲ್ಸ್ ಟ್ಯೂಬ್ ತೆಗೆದು ಆಸ್ಪತ್ರೆಯಿಂದ ಮನೆಗೆ ಕಳಿಸಲಾಗುತ್ತದೆ. ಆದರೆ ದಿನಕ್ಕೆ 3 ಬಾರಿ ನಾಳದಲ್ಲಿ ಆಹಾರ ಒಳಹೋಗಿ ಹೋಗಿ ಶರ್ಮಿಳಾ ಊಟ ಮಾಡುವುದನ್ನು ಮರೆತಿದ್ದಾರೆ. ಅವರ ಬಾಯಿ ಜಗಿಯುವುದನ್ನು ಮರೆತಿದೆ, ಹಲ್ಲು ನಾಲಿಗೆ ತಂತಮ್ಮ ಕೆಲಸ ಮರೆತಿವೆ; ಅನ್ನನಾಳ, ಲಾಲಾಗ್ರಂಥಿಗಳು ಸ್ರವಿಸುವುದನ್ನು ಮರೆತಿವೆ. ತೂಕ 65 ಕೆಜಿಯಿಂದ 40ಕ್ಕೆ ಇಳಿದಿದೆ. ಅವರಿಗೆ ಬಿಪಿ, ಡಯಾಬಿಟೀಸ್ ಶುರುವಾಗಿದೆ. ಹೀಗೇ ಉಪವಾಸ ಮುಂದುವರೆಸಿದರೆ ಶ್ವಾಸಕೋಶದ ಸೋಂಕು ತಗಲುವ ಸಾಧ್ಯತೆಯಿದೆ. ಅಷ್ಟೇ ಅಲ್ಲ, ನರವ್ಯೂಹದ ಸಮಸ್ಯೆಗಳೂ ಕಾಣಿಸಿಕೊಳ್ಳಬಹುದು. ಶರ್ಮಿಳಾರನ್ನು ಇಷ್ಟು ದೀರ್ಘಕಾಲದ


ಮಾನಸಿಕ ಗುಲಾಮಗಿರಿಯ ವಿರುದ್ಧ ದೈಹಿಕ ಶ್ರಮ

ಕಾಯಕ ಎಂಬುದು ಸಾಮಾನ್ಯ ಪದವಲ್ಲ. ಅದು ಮಾನಸಿಕ ಗುಲಾಮಗಿರಿಯ ವಿರುದ್ಧದ ದೈಹಿಕ ಶ್ರಮವಾಗಿದೆ. ಅದು ದಾಸೋಹಕ್ಕೆ ದಾರಿ ತೋರಿಸುವ ಮೂಲಕ ಇಡೀ ಸಮಾಜವನ್ನೇ ಗುಲಾಮಗಿರಿಯಿಂದ ಮುಕ್ತಗೊಳಿಸುವಂಥ ಸಾಧನೆಗೆ ಸಾಧನವಾಗಿದೆ. ಈ ಎರಡು ಪದಗಳ ಮಧ್ಯೆ ಇರುವ ಪ್ರಸಾದ ಪದವು 'ಜಗತ್ತಿನ ಎಲ್ಲವೂ ದೇವರ ಕಾಣಿಕೆ' ಎಂಬುದನ್ನು ಸೂಚಿಸುತ್ತದೆ. ನಾವು ಕಾಯಕ ಮಾಡುವುದರಿಂದ ಬರುವಂಥದ್ದು ಗಳಿಕೆ ಅಲ್ಲ; ದೇವರ ಪ್ರಸಾದ. ಅದು ದೇವರ ಪ್ರಸಾದವಾದ ಕಾರಣ ಅದರಲ್ಲಿ ಸಮಾಜದ ಪಾಲೂ ಇದೆ. ಆ ಪಾಲನ್ನು ದಾಸೋಹಂಭಾವದ ಮೂಲಕ ಸಮಾಜಕ್ಕೆ ಅರ್ಪಿಸುವುದು ಬಸವತತ್ತ್ವ ಪಾಲನೆ ಮಾಡುವವರ ಆದ್ಯ ಕರ್ತವ್ಯವಾಗಿರುತ್ತದೆ.

ಶರಣನೊಬ್ಬ ಕಾಯಕದಿಂದ ಸ್ವಾವಲಂಬಿಯಾಗುವ ಮೂಲಕ ಗುಲಾಮಿ ಮನೋಭಾವದಿಂದ ದೂರ ಉಳಿಯುತ್ತಾನೆ: ತನ್ನ ಶರಣಸಂಕುಲದಲ್ಲಿ ಯಾರೂ ಗುಲಾಮರಾಗಿರಬಾರದು ಎಂಬ ಉದ್ದೇಶದೊಂದಿಗೆ ದಾಸೋಹ ಮಾಡುವುದರ ಮೂಲಕ ಅವರ ಪಾಲನ್ನು ಶಿವನಿಧಿಗೆ ಅರ್ಪಿಸುತ್ತಾನೆ. ದಾಸೋಹದಲ್ಲಿ ಕೊಡುವವರು ದೊಡ್ಡವರಾಗುವುದಿಲ್ಲ; ಆದರೆ ವಿನಮ್ರಭಾವದಿಂದ ತಮ್ಮ ಸಾಮಾಜಿಕ ಕರ್ತವ್ಯ ನಿಭಾಯಿಸುತ್ತಾರೆ. ಪಡೆಯುವವರು ಸಣ್ಣವರಾಗುವುದಿಲ್ಲ ಸಮಾನತೆಯ ವಾತಾವರಣದಲ್ಲಿ ದೇವರ ಪ್ರಸಾದವೆಂದೇ ಪಡೆಯುತ್ತಾರೆ.

ಪೈಗಂಬರರ ಜಕಾತ್ ಪರಿಕಲ್ಪನೆ ಕೂಡ ಹೀಗೆಯೆ ಇದೆ. ಅದು ಶ್ರೀಮಂತರ ಆಸ್ತಿಯಲ್ಲಿನ ಬಡವರ ಪಾಲಾಗಿದೆ. ಕುರಾನ್ ಶ್ರೀಮಂತರನ್ನು 'ಸಂಪತ್ತಿನ ಗುಲಾಮರು' ಎಂದು ಕರೆಯುತ್ತದೆ. 'ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗೆ ಉಂಟೆ?' ಎಂದು ಆಯ್ದಕ್ಕಿ ಲಕ್ಕಮ್ಮ ಪ್ರಶ್ನಿಸುತ್ತಾಳೆ. ಸಂಗ್ರಹ ಬುದ್ಧಿಯು ಗುಲಾಮಗಿರಿಗೆ ಕಾರಣವಾಗುತ್ತದೆ ಎಂದು ಸೂಚಿಸುತ್ತಾಳೆ. 'ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ವಾಯು ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರಿಗೆ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥ' ಎಂದು ಹೇಳುವ ಮೂಲಕ ಜೇಡರ ದಾಸಿಮಯ್ಯನವರು 'ರಾಜಾ ಪ್ರತ್ಯಕ್ಷ ದೇವತಾ' ಎಂಬುದನ್ನು ಅಲ್ಲಗಳೆಯುತ್ತಾರೆ. ಕೊಡುವ ಮೂಲಕ ಗುಲಾಮಗಿರಿಯನ್ನು ಸೃಷ್ಟಿಸುವ ಉಳ್ಳವರನ್ನು 'ಅನ್ಯರು' ಎಂದು ಕರೆಯುತ್ತಾರೆ. ಏಕೆಂದರೆ ಅವರು ಎಲ್ಲಿಂದ ಕೊಡುತ್ತಾರೆ? ಅವರಲ್ಲಿ ಇರುವುದೆಲ್ಲವೂ ದೇವರು ಕೊಟ್ಟದ್ದು ಅಲ್ಲವೆ? ಎಂಬುದು ದಾಸಿಮಯ್ಯನವರ ವಾದ. ಹೀಗೆ ಪಡೆಯುವವರು ಗುಲಾಮಗಿರಿಯಿಂದ ಹೊರಬರುವ ದಾರಿಯನ್ನು ಅವರು ತೋರುತ್ತಾರೆ.

'ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ, ನೀನಾಗಲೆ ಎನ್ನ ನರಕದಲ್ಲಿ ಅದ್ದಿ ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ' ಎಂದು ಕಸಗುಡಿಸುವ ಕಾಯಕದ ಶರಣೆ ಸತ್ಯಕ್ಕ ಹೇಳುವುದರ ಮೂಲಕ ಗುಲಾಮಗಿರಿಯ ಮೂಲವನ್ನು ಸೂಚಿಸುತ್ತಾಳೆ. ಬದುಕಿನಲ್ಲಿ ಬಹಳಷ್ಟು ಸಲ ನಮಗೆ ನಾವೇ ಎದುರಿನವರ ಮುಂದೆ ಗುಲಾಮರಾಗಿ ಬಿಡುತ್ತೇವೆ. ಆತನಿಂದ ನಮಗೆ ಏನಾದರೂ ಸಹಾಯವಾಗಬಹುದು ಎಂಬ ಭಾವವೇ



ನಮ್ಮನ್ನು ಆತನ ಗುಲಾಮನನ್ನಾಗಿಸುತ್ತದೆ. ಆತನು ಸಂಪ್ರೀತನಾಗುವ ಹಾಗೆ ವರ್ತಿಸಲು ಪ್ರಯತ್ನಿಸುತ್ತೇವೆ. ಆಸೆಯ ಕಾರಣದಿಂದ ಇಂಥ ಗುಲಾಮಗಿರಿ ಹುಟ್ಟುತ್ತದೆ.

ಹೀಗೆ ಗುಲಾಮಿ ಸಂಸ್ಕೃತಿ ಬೆಳೆಯುತ್ತ ಹೋಗುತ್ತದೆ. ಈ ಗುಲಾಮಿ ಸಂಸ್ಕೃತಿಯನ್ನು ಭದ್ರಗೊಳಿಸುವುದೇ ಕರ್ಮಸಿದ್ಧಾಂತದ ಗುರಿಯಾಗಿದೆ. ಅದು ಪುಣ್ಯ ಪಾಪದ ಭ್ರಮೆಗಳೊಂದಿಗೆ ಮತ್ತು ಸ್ವರ್ಗದ ಆಸೆ ಹಾಗೂ ನರಕದ ಭಯದಿಂದ ನಮ್ಮನ್ನು ಗುಲಾಮರಾಗಿಸುತ್ತದೆ. 'ಆಸೆಯೆಂಬುದು ಭವದ ಬೀಜ; ನಿರಾಸೆಯೆಂಬುದು ನಿತ್ಯಮುಕ್ತಿ' ಎಂದು ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಹೇಳುತ್ತಾಳೆ. ನಮ್ಮ ಆಸೆಯೆ ಭವದ ಬೀಜವಾಗಿ ನಮ್ಮನ್ನು ಮಾನಸಿಕ ಗುಲಾಮಗಿರಿಗೆ ತಳ್ಳುತ್ತದೆ. ಆಸೆಯ ಕಾರಣ ಸೃಷ್ಟಿಯಾಗುವ ಮಾನಸಿಕ ಗುಲಾಮಗಿರಿಯಿಂದ ಹೊರಬರುವುದೇ ನಿತ್ಯಮುಕ್ತಿ ಎಂದು ಕಾಳವ್ವೆ ಸ್ವತಂತ್ರ ಬದುಕಿನ ದಾರಿ ತೋರಿಸುತ್ತಾಳೆ.

'ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ, ಬೇಡೆ ಬೇಡೆಲೆ ಹಂದೆ' ಎಂದು ಬಸವಣ್ಣನವರು ದೇವರಿಗೆ ಹೇಳುವ ಮೂಲಕ ಬೇಡುವ 'ಸಂಸ್ಕೃತಿ'ಯನ್ನು ಅಲ್ಲಗಳೆಯುತ್ತಾರೆ. 'ಬೇಡುವಾತ ಭಕ್ತನಲ್ಲ' ಎಂದು ಸಾರುತ್ತಾರೆ. ಶರಣರು ದೇವರ ಹಂಗಿನಲ್ಲಿರಲೂ ಇಷ್ಟಪಡುವುದಿಲ್ಲ. 'ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು, ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ' ಎಂದು ಹುಲ್ಲು ಮಾರುವ ಲದ್ದೆಯ ಸೋಮಣ್ಣ ಹೇಳುತ್ತಾನೆ. 'ಹತ್ತು ಮತ್ತರ ಭೂಮಿ, ಬತ್ತದ ಹಯನು, ನಂದಾದೀವಿಗೆಯ ನಡೆಸಿಹೆವೆಂಬವರ ಮುಖವ ನೋಡಲಾಗದು. ಅವರ ನುಡಿಯ ಕೇಳಲಾಗದು. ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ ಪ್ರಾಣಿಗಳಿಗೆ ಭವಿತವ್ಯವ ಕೊಟ್ಟವರಾರೊ?' ಎಂದು ಬಸವಣ್ಣನವರು ಪ್ರಶ್ನಿಸುತ್ತ ಯಾರೂ ದಾನಿಗಳಲ್ಲ ದೇವರೊಬ್ಬನೇ ಮಹಾದಾನಿ ಎಂದು ಸೂಚಿಸುವ ಮೂಲಕ ದಾನಿಗಳೆಂದು ಭಾವಿಸಿದವರ ಅಹಂಕಾರ ಮರ್ದನ ಮಾಡುತ್ತಾರೆ. 'ಮಾಡಿದೆನೆಂಬುದು ಮನದಲಿ ಹೊಳೆದಡೆ ಏಡಿಸಿ ಕಾಡಿತ್ತು ಶಿವನ ಡಂಗುರ' ಎಂದು ಎಚ್ಚರಿಸುತ್ತಾರೆ. ಹೀಗೆ ಬಡವರ ಆತ್ಮಗೌರವವನ್ನು ರಕ್ಷಿಸುವುದೇ ಬಸವಣ್ಣನವರ ಉದ್ದೇಶವಾಗಿತ್ತು. ಕಾಯಕದ ಮೂಲಕ ಅವರನ್ನು ಮಾನಸಿಕ ಗುಲಾಮಗಿರಿಯಿಂದ ಹೊರತರುವುದೇ ಅವರ ಗುರಿಯಾಗಿತ್ತು. ಮಾನವಕುಲವನ್ನು ಗುಲಾಮಗಿರಿಯಿಂದ ವಿಮೋಚನೆಗೊಳಿಸುವುದೇ ಬಸವಣ್ಣನವರ ಅರ್ಥಶಾಸ್ತ್ರದ ಆಶಯವಾಗಿದೆ.

"ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು, ಲಿಂಗಪೂಜೆಯಾದಡೂ ಮರೆಯಬೇಕು, ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ. ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು" ಎಂದು ಆಯ್ದಕ್ಕಿ ಮಾರಯ್ಯನವರು ಸ್ಪಷ್ಟಪಡಿಸಿದ್ದಾರೆ. 'ಕಾಯಕವೇ ಕೈಲಾಸ' ಎಂಬುದು ಬಸವಧರ್ಮದ ಘೋಷವಾಕ್ಯವಾಗಿದೆ. ಕಾಯಕವಿಲ್ಲದೆ ಗುರುಲಿಂಗಜಂಗಮಕ್ಕೆ ಸಂಬಂಧಿಸಿದ ತ್ರಿವಿಧ ದಾಸೋಹ ಮಾಡಲಿಕ್ಕಾಗದು. ಮಾನಸಿಕ ಗುಲಾಮಗಿರಿಯಿಂದ ಹೊರಬರಲಿಕ್ಕಾಗದು. ಸಮಾಜವನ್ನು ಗುಲಾಮಗಿರಿಯಿಂದ ವಿಮೋಚನೆಗೊಳಿಸಲಿಕ್ಕಾಗದು.

ಆತ್ಮಗೌರವ ಕಾಪಾಡಿಕೊಳ್ಳದಿದ್ದರೆ ಪರರ ಹಂಗಿನಲ್ಲಿ ಬೀಳುತ್ತೇವೆ. ಪರರ ಹಂಗಿನಲ್ಲಿ ಬಿದ್ದಾಗ ಮಾನಸಿಕವಾಗಿ ಅವರ ಗುಲಾಮರಾಗುತ್ತೇವೆ. ಗುಲಾಮರಾಗದಂತೆ ಎಚ್ಚರಿಕೆ ವಹಿಸುವುದೇ ಬದುಕಿನ ಗುರಿಯಾಗಿರಬೇಕಾಗುತ್ತದೆ. ಅಂತೆಯೆ ಬಸವಣ್ಣನವರು ಕಾಯಕಸಿದ್ಧಾಂತವನ್ನು ರೂಪಿಸಿದರು ಮತ್ತು ದಾನಿಗಳು ಜನರನ್ನು ಮಾನಸಿಕ ಗುಲಾಮಗಿರಿಗೆ ತಳ್ಳದಂತೆ 'ಅವರ ಸಂಪತ್ತಿನ ಮೂಲ ಮಾಲಿಕ ದೇವರೇ ಆಗಿದ್ದಾನೆ' ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಟ್ಟರು.

ಈ ಮಾನಸಿಕ ಗುಲಾಮಗಿರಿಗೆ ಸಂಬಂಧಿಸಿದಂತೆ ಎರಡು ಘಟನೆಗಳು ನಮ್ಮೆಲ್ಲರ ಕಣ್ಣು ತೆರೆಸುವಂಥವುಗಳಾಗಿವೆ. ಬಹಳ ವರ್ಷಗಳ ಹಿಂದಿನ ಮಾತು. ನಾನು ಬಾಲಕನಾಗಿದ್ದಾಗ ನಡೆದ ಘಟನೆ. ನನ್ನ ಅಜ್ಜಿ ಮತ್ತು ಇತರ ಹೆಣ್ಣುಮಕ್ಕಳ ಜೊತೆ ತೋಟವೊಂದರಲ್ಲಿ ಕಳೆ ತೆಗೆಯುವ ಕೆಲಸಕ್ಕೆ ಗೌರಜ್ಜಿ ಎಂಬ ಅಜ್ಜಿಯೂ ಬರುತ್ತಿದ್ದಳು. ಎಲ್ಲರೂ ಕೆಲಸ ಮುಗಿಸಿಕೊಂಡು ಹೋಗುವಾಗ ತೋಟದಲ್ಲಿನ ಒಂದಿಷ್ಟು ತರಕಾರಿಯನ್ನು ಒಯ್ಯುವುದು ವಾಡಿಕೆಯಾಗಿದ್ದರಿಂದ ತೋಟದ ಮಾಲೀಕರು ಏನೂ ಹೇಳುತ್ತಿರಲಿಲ್ಲ. ಆ ಕೂಲಿಕಾರ ಹೆಣ್ಣುಮಕ್ಕಳು ತಮಗೆ ಬೇಕಾದ ಕಾಯಿಪಲ್ಯೆಯನ್ನು ತೆಗೆದುಕೊಂಡರೂ ಗೌರಜ್ಜಿ ಏನನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಕಸ ತೆಗೆಯುವಾಗ ಕಸವಾಗಿ ಸಿಕ್ಕ ಗೋಳಿಪಲ್ಯೆಯನ್ನು ಆರಿಸಿ ತೆಗೆದುಕೊಂಡು ಹೋಗುತ್ತಿದ್ದಳು. ಮರುದಿನ ಆ ಗೋಳಿಪಲ್ಯೆಯಿಂದ ಮಾಡಿದ ಬಾಜಿಯನ್ನೇ ರೊಟ್ಟಿಯ ಜೊತೆ ಕಟ್ಟಿಕೊಂಡು ಬರುತ್ತಿದ್ದಳು. ಮಧ್ಯಾಹ್ನ ಊಟಕ್ಕೆ ಕುಳಿತಾಗ ಎಲ್ಲರ ಜೊತೆ ಕೂಡದೆ ಪ್ರತ್ಯೇಕವಾಗಿ ಕೂಡುತ್ತಿದ್ದಳು. ಏಕೆಂದರೆ ಉಳಿದವರು ತರತರದ ಬಾಜಿಯನ್ನು ಕಟ್ಟಿಕೊಂಡು ಬಂದು ಹಂಚಿಕೊಂಡು ತಿನ್ನುತ್ತಿದ್ದರು. ಆದರೆ ಗೌರಜ್ಜಿಯ ಬಾಜಿಯು ಕಸದಲ್ಲಿ ಬಂದ ಗೋಳಿಪಲ್ಯೆಯಿಂದ ಮಾಡಿದ ಕಾರಣ ಹಂಚಿಕೊಳ್ಳಲು ತಕ್ಕುದಲ್ಲ ಎಂಬುದು ಆಕೆಯ ಭಾವನೆಯಾಗಿತ್ತು! ಅವಳ ಸ್ವಾಭಿಮಾನಕ್ಕೆ ಉಳಿದವರೆಲ್ಲರೂ ತಲೆಬಾಗುತ್ತಿದ್ದರು. ತೋಟದ ಮಾಲೀಕನೂ ಅವಳ ಬಗ್ಗೆ ಭಯಭಕ್ತಿ ತೋರುತ್ತಿದ್ದ!

ಕೆಲ ದಶಕಗಳ ಹಿಂದೆ ನಾನೊಮ್ಮೆ ದಾವಣಗೆರೆಯ ಬಸ್ ನಿಲ್ದಾಣದಲ್ಲಿ ಬೆಂಗಳೂರು ಬಸ್ಸಿಗಾಗಿ ಕಾಯುತ್ತ ಕುಳಿತಿದ್ದೆ. ಬಸ್ ಬರುವ ಸಮಯವಾಗಿತ್ತು. ಚಪ್ಪಲಿ ಪಾಲಿಶ್ ಮಾಡುವ ಹುಡುಗ ಬಂದ. ಚಪ್ಪಲಿ ಪಾಲಿಶ್ ಮಾಡುವುದಾಗಿ ಹೇಳಿದ. ನಾನು 'ಬಸ್ ಸಮಯ ಆಗಿದೆ ಬೇಡ' ಎಂದೆ. 'ಬೆಳಗಿನಿಂದ ಏನೂ ತಿಂದಿಲ್ಲ ಹಸಿವಾಗಿದೆ. ಪಾಲೀಸಿಗೆ ಬರಿ ನಾಲ್ಕಾಣೆ' ಎಂದ. ಅಷ್ಟರೊಳಗೆ ಬಸ್ ಬಂದೇ ಬಿಟ್ಟಿತು. 'ಪಾಲೀಸ್ ಬೇಡ; ನಾಲ್ಕಾಣೆ ತೆಗೆದುಕೊ' ಎಂದು ಕೊಡಲು ಹೋದೆ. ಆತ ಕೃತಜ್ಞತೆಯಿಂದ ನಿರಾಕರಿಸಿದ!

ಗೌರಜ್ಜಿ ಮತ್ತು ಆ ಚಪ್ಪಲಿ ಪಾಲಿಶ್ ಮಾಡುವ ಹುಡುಗನನ್ನು ನಮ್ಮ ಗುರುಗಳಾಗಿ ಸ್ವೀಕರಿಸಿ, ಅವರ ಹಾಗೆ ಬದುಕಿದರೆ ಖಂಡಿತವಾಗಿ ನಾವೂ ಮಾನಸಿಕ ಗುಲಾಮಗಿರಿಯಿಂದ ಹೊರಬರುತ್ತೇವೆ.

■ ರಂಜಾನ್ ದರ್ಗಾ

...ಉಪವಾಸದ ಬಳಿಕವೂ ಜೀವಂತವಾಗಿ, ಆರೋಗ್ಯವಾಗಿದಲು ಸರ್ಕಾರಕ್ಕೆ ...ತಿಂಗಳಿನ 10 ಸಾವಿರ ರೂ. ಖರ್ಚಾಗುತ್ತಲಿದೆ. ಆದರೆ ಬಿಡುಗಡೆಯಾದನಂತರ ...ಷ್ಟೆಲ್ಲ ಖರ್ಚುವೆಚ್ಚಗಳ ಶರ್ಮಿಳಾ ಭರಿಸಲಾರರು.

...ಅನಿರೀಕ್ಷಿತ ಮಿಗಿಲಾದ ಬದಲಾವಣೆಯೊಂದು ಸಂಭವಿಸಿದೆ. ಶರ್ಮಿಳಾಗೆ ...ಎಲ್ಲರಂತೆ ತನಗೂ ಮದುವೆಯಾಗಿ, ಸಂಸಾರ ನಡೆಸುವ ಆಸೆ ಬಂದಿದೆ. ...ಅವರೀಗ ಪ್ರೇಮಿಯಾಗಿದ್ದಾರೆ! ಗೋವಾ ಸಂಜಾತ ಬ್ರಿಟಿಷ್ ಪ್ರಜೆ, ಕಲಾವಿದ, ...ಕ್ಟಿವಿಸ್ಟ್ ಡೆಸ್ಮಂಡ್ ಕುಟಿನ್ಹೊ ಅವರ ಪ್ರೇಮಿ. ಅಂಥ ಗಂಡಸನ್ನು ತಾನು ...ದುವರೆಗೆ ಭೇಟಿಯೇ ಆಗಿಲ್ಲ ಎನ್ನುವ ಶರ್ಮಿಳಾ ಆತನನ್ನು ...ಮದುವೆಯಾಗಬಯಸುತ್ತಾರೆ. ಆತ ಶರ್ಮಿಳಾಗೆ ಲೆಕ್ಕವಿಲ್ಲದಷ್ಟು ಪುಸ್ತಕಗಳನ್ನೂ, ...ಉಡುಗೊರೆಗಳನ್ನೂ, ರಮ್ಯ ಕನಸುಗಳನ್ನೂ ನೀಡಿದ್ದಾನೆ. ಈಗ ಶರ್ಮಿಳಾ ಜಗವೆಲ್ಲ ...ಡೆಸ್ಮಂಡ್ ಮಯ. ಆತ ಕೋರ್ಟಿನಲ್ಲಿ ತಾನೇ ವಾದಿಸಲು ಶರ್ಮಿಳಾಗೆ ಹೇಳಿ ...ಲಾಯರನ್ನು ನಿರಾಕರಿಸುವಂತೆ ಮನವೊಲಿಸಿದ್ದಾನೆ.

ಆದರೆ ಈ ಬೆಳವಣಿಗೆ ಯಾರಿಗೂ ಇಷ್ಟವಿಲ್ಲ! ಆಕೆ ಉಪವಾಸ ಬಿಡುವುದೂ ಇಷ್ಟವಿಲ್ಲ, ಮದುವೆಯಾಗುವುದೂ ಇಷ್ಟವಿಲ್ಲ!! ಡೆಸ್ಮಂಡ್ ಪದೇಪದೇ ಆಸ್ಪತ್ರೆಗೆ ಬಂದು ತೊಂದರೆ ಕೊಡುತ್ತಿದ್ದಾನೆಂದು ಆರೋಪಿಸಿ ನ್ಯಾಯಾಂಗ ಬಂಧನದಲ್ಲಿಡಲಾಗಿದೆ. ಶರ್ಮಿಳಾ ಭೇಟಿ ನಿರಾಕರಿಸಲಾಗಿದೆ.

ಶರ್ಮಿಳಾ ಅವರ ತಾಯಿ ಸಖೀದೇವಿ ತಮ್ಮ ಮಗಳನ್ನು ಹೆತ್ತು ಮಣಿಪುರದ ಸಮಾಜಕ್ಕಾಗಿ ತ್ಯಾಗ ಮಾಡಿರುವುದಾಗಿಯೂ, ತಮ್ಮ ಕುಟುಂಬವೆಂದೂ ಅವಳ ಹಾಗೂ ಅವಳ ಹೋರಾಟದ ಮಧ್ಯ ನಿಂತಿರಲಿಲ್ಲವೆಂದೂ ಹೇಳುತ್ತ, ಅವಳು ಎಎಫ್‌ಎಸ್ಪಿಎ ಹಿಂದೆಗೆದುಕೊಳ್ಳುವವರೆಗೆ ಉಪವಾಸ ಮುಂದುವರೆಸಬೇಕು; ಸರ್ಕಾರಕ್ಕೆ ಒತ್ತಡ ಹಾಕಬೇಕು; ಇಲ್ಲದಿದ್ದರೆ ಅವಳ ಬದುಕೇ ವ್ಯರ್ಥ ಎನ್ನುತ್ತಾರೆ. ಗಂಡಸರ ದರ್ಪ, ದೌರ್ಜನ್ಯಗಳ ಗಮನಿಸಿ ತಾನೆಂದೂ ಜೀವಮಾನದಲ್ಲಿ ಮದುವೆಯಾಗುವುದಿಲ್ಲ ಎನ್ನುತ್ತಿದ್ದ ತಮ್ಮ ಮಗಳು ಈಗ ಯಾರೋ ದುಷ್ಟನ ಪ್ರಭಾವಕ್ಕೊಳಗಾಗಿ ಮದುವೆಯ ಮಾತನಾಡುತ್ತಿದ್ದಾಳೆಂದೂ; ಆ ಕಾಯ್ದೆ ರದ್ದಾದನಂತರ ಉಪವಾಸ ನಿಲ್ಲಿಸಿದರಷ್ಟೇ ತಾವು ಮಗಳನ್ನು ನೋಡಬಯಸುವುದಾಗಿಯೂ ಹೇಳುತ್ತಾರೆ. ಶರ್ಮಿಳಾ ಸೋದರನದೂ ಹೆಚ್ಚುಕಮ್ಮಿ ಇದೇ ಅಭಿಪ್ರಾಯ.

ಶರ್ಮಿಳಾ ಉಪವಾಸ ಕುಳಿತ ನಂತರ 2003ರಲ್ಲಿ ತಂಗ್ಜಂ ಮನೋರಮಾ ಹತ್ಯೆ ಖಂಡಿಸಿ ನಗ್ನ ಪ್ರತಿಭಟನೆ ನಡೆಸಿದ ತಾಯಂದಿರ ಮುಖಂಡೆ ಸೋಯ್ಬಾಮ್ ಕೂಡಾ ಶರ್ಮಿಳಾ ಉಪವಾಸ ನಿಲ್ಲಿಸುವುದನ್ನು ಖಂಡತುಂಡ ವಿರೋಧಿಸುತ್ತಾರೆ. ಮಹಿಳೆಗೆ ರಸ್ತೆಯಲ್ಲಿ ಬೆತ್ತಲಾಗುವುದೂ ಒಂದೇ, ಸಾಯುವುದೂ ಒಂದೇ. ಸಾಗಿರುತ್ತ ಬೆತ್ತಲಾದರೂ ಸರಿ ಎಂದು ತಾವೆಲ್ಲ ನಗ್ನರಾಗಿ ಇಂಫಾಲದ ಬೀದಿಗಳಲ್ಲಿ ನಡೆದು ಹೋರಾಟ ಮುಂದುವರೆಸಿದ್ದೆವು; ಈಗ ಶರ್ಮಿಳಾ ಉಪವಾಸ ಮುಂದುವರೆಸಲು ಏನಡ್ಡಿ ಎಂದು ಕೇಳುತ್ತಾರೆ!

ಶರ್ಮಿಳಾ ಉಪವಾಸ ಮಣಿಪುರಕ್ಕೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಖ್ಯಾತಿ ಕೊಟ್ಟಿದೆ. ಅವರ ಹೆಸರಿನಲ್ಲಿ ರಾಜ್ಯಕ್ಕೆ ಮಿಲಿಯನ್ನುಗಟ್ಟಲೆ ಡಾಲರ್ ಹರಿದುಬಂದಿದೆ. ಕನಿಷ್ಠ 40 ಎನ್ಜಿಓಗಳು ಕಳೆದ ಐದು ವರ್ಷಗಳಲ್ಲಿ ಅವರ ಬೆಂಬಲಕ್ಕೆಂದು ಶುರುವಾಗಿವೆ. ಅವು ಆರೋಗ್ಯ, ಶಿಕ್ಷಣ, ಸುರಕ್ಷತೆ ಮತ್ತು ಜನರ ರಕ್ಷಣೆಯ ಸಲುವಾಗಿ ಕೆಲಸ ಮಾಡುತ್ತವೆ. ಸ್ವತಃ ಶರ್ಮಿಳಾ ಅವರದೂ 'ಜಸ್ಟ್ ಪೀಸ್ ಫೌಂಡೇಷನ್' ಎಂಬ ಎನ್ಜಿಓ ಇದೆ. ಅದಕ್ಕೆ ಹೊರಗಿನ ಧನಸಹಾಯ ಪಡೆಯುವುದಿಲ್ಲ, ಅವರಿಗೆ ಬಂದ-ಬರುವ ಹಣವೆಲ್ಲ ಅವರ ಎನ್ಜಿಓಗೆ ಹೋಗುತ್ತದೆ. 'ಹಣ ಚಳವಳಿಯನ್ನು ಕೊಲ್ಲುತ್ತದೆ. ನನಗೆ ಹಣ ಬೇಡ, ಜನರ ಬೆಂಬಲ ಬೇಕು' ಎಂದು ಎಂದಿನಿಂದ ಶರ್ಮಿಳಾ ಹೇಳಿದ್ದಾರೆ. ಹೀಗೆ ಇಷ್ಟು ದೀರ್ಘಕಾಲ ಹೋರಾಡಿದಾಕೆ ಈಗ ನಡುಮಧ್ಯ ಉಪವಾಸ ನಿಲ್ಲಿಸಬಾರದು ಎನ್ನುವುದು ಸೋಯ್ಬಾಮ್, ವಿಧವೆಯರ ಸಂಘಟನೆಯ ಅಧ್ಯಕ್ಷೆ ರೇಣು ತಾಕೆಲ್ಲಂಬಂ ಹಾಗೂ ಇನ್ನಿತರರ ಅಭಿಮತ.

ಆದರೆ ಬಂಧುಗಳೂ, ಮಿತ್ರರೂ ಸರ್ಕಾರದ ಜೊತೆ ಕೈಜೋಡಿಸಿ ತನ್ನ ಬಿಡುಗಡೆಯಾಗದಂತೆ ನೋಡಿಕೊಂಡಿದ್ದಾರೆ; ತಾನು ಬಿಡುಗಡೆಯಾಗದೇ ಹೋರಾಡುತ್ತಲೇ ಇರಲಿ ಎನ್ನುವುದು ಅವರ ಆಸೆ ಎಂದು ಶರ್ಮಿಳಾ ಆಪಾದಿಸುತ್ತಾರೆ. ಉಳಿದಂತೆ ಇಡೀ ಮಣಿಪುರ ಯಾವ ಚಳವಳಿ, ಹೋರಾಟವೂ ಇಲ್ಲದೆ ಬೆಚ್ಚಗೆ ಮನೆಯಲ್ಲಿ ಕುಳಿತಿರುವಾಗ ಕಳೆದ 15 ವರ್ಷಗಳಿಂದ ಉಪವಾಸದ ಹೆಸರಿನಲ್ಲಿ ತನ್ನ ಯೌವನ, ಆರೋಗ್ಯ, ಸಮಯ ಎಲ್ಲವನ್ನೂ ಕಳೆದಾಗಿದೆ. ಇನ್ನೆಷ್ಟು ಕಾಲ ತಾನು ಮಾತ್ರ ಹೋರಾಡಬೇಕೆನ್ನುವುದು ಶರ್ಮಿಳಾ ಪ್ರಶ್ನೆ. ಎಂಟು ವರ್ಷದ ಕೆಳಗಿನ ಸಂದರ್ಶನದಲ್ಲಿ 'ನನ್ನ ಹೋರಾಟದ ದಾರಿಯನ್ನು ನಾನೊಬ್ಬಳೇ ತುಳಿಯಬೇಕಾಗಿದೆ. ನನಗೆ ಯಾವ ರಾಜಕಾರಣಿ, ಆಕ್ಟಿವಿಸ್ಟರ ಬೆಂಬಲವೂ ಬೇಡ' ಎಂದಾಕೆ ಇವತ್ತು ಮಣಿಪುರದ ಜನತೆ ತನ್ನನ್ನು ಬದುಕಲೂ ಬಿಡದೆ, ಸಾಯಲೂ ಬಿಡದೆ, ತನ್ನನ್ನು ಮಾತ್ರ ಚಳವಳಿಯ ಹೆಸರಿನ ಮೂರ್ತಿಯಾಗಿಸಿ ತಾವು ಸುಖವಾಗಿದ್ದಾರೆ ಎಂದು ಆರೋಪಿಸುತ್ತಿದ್ದಾರೆ. 'ಮಣಿಪುರದ ಜನತೆ ಹೀಗೇ ನಿಶ್ಚೇಷ್ಟಿತರಾಗೇ ಉಳಿದರೆ ಎಎಫ್‌ಎಸ್ಪಿಎ ಯಾವತ್ತೂ ರದ್ದಾಗುವುದಿಲ್ಲ ಬಹುಶಃ ಆಗ ಸಾವೇ ನನ್ನ ಹೋರಾಟದ ಕೊನೆಯಾಗಬಹುದು. ಸ್ತಬ್ಧವಾಗಿರುವ ಈ ಪೀಳಿಗೆಯಲ್ಲದಿದ್ದರೂ ಬರಲಿರುವ ಪೀಳಿಗೆಗಳಾದರೂ ನನ್ನ ಹೆಜ್ಜೆ ಗುರುತಿನಲ್ಲಿ ಸಾಗಬಹುದು' ಎಂದು ವಿಷಾದದಿಂದ ಹೇಳುತ್ತಾರೆ.

ಸರಿಯುತ್ತಿರುವ ಯೌವನ; ಬಾಧಿಸುತ್ತಿರುವ ಕಾಯಿಲೆ; ಕೇವಲ ತನ್ನ ಉಪವಾಸವೊಂದನ್ನೇ ಹೋರಾಟವಾಗಿಸಿ ಉಳಿದಂತೆ ನಿಷ್ಕ್ರಿಯವಾಗಿರುವ ಜನತೆ; ಹಾರಾಡಬೇಕೆಂಬ ಮನಸು 15 ವರ್ಷದಿಂದ ಮಲಗಿದಲ್ಲೇ ಮಲಗಿ, ಇದ್ದಲ್ಲೇ ಇದ್ದು ಹುಟ್ಟಿರುವ ಏಕತಾನತೆ; ಅದರ ನಡುವೆ ಬೆಚ್ಚನೆಯ ಭಾವನೆಗಳನ್ನು ಹುಟ್ಟಿಸಿದಾತನ ಒಂದು ಹಿಡಿ ಪ್ರೀತಿ ಪಡೆಯಲು ಸಮಾಜ ತೋರುತ್ತಿರುವ ವಿರೋಧ-ಇವೆಲ್ಲ ಶರ್ಮಿಳಾಗೆ ಹೀಗೆನಿಸುವಂತೆ ಮಾಡಿರಬಹುದು. ಅದು ಏನೂ ತಪ್ಪಲ್ಲ.

ಶರ್ಮಿಳಾ ಹೇಳಿದಂತೆ ಮಣಿಪುರದಲ್ಲಿ ತಾಯಂದಿರು ಬೆತ್ತಲಾದ ಹೋರಾಟದ ನಂತರ ಬೇರೆ ಯಾವ ಸಂಘಟಿತ ಹೋರಾಟವೂ ನಡೆಯಲಿಲ್ಲ. ಅಲ್ಲಿರುವ ಅಸಂಖ್ಯ ಬಂಡುಕೋರ ಗುಂಪುಗಳ ಕಾರಣದಿಂದ ಸೇನೆ ಸದ್ಯ ವಾಪಸು ಹೋಗುವ ಲಕ್ಷಣವೂ ಇಲ್ಲ. ಅಂತಾರಾಷ್ಟ್ರೀಯವಾಗಿ ಭಾರತದ ನೆರೆಹೊರೆ ಸಂಬಂಧಗಳು; ಬಾಂಗ್ಲಾದೇಶೀಯರ ಒಳನುಸುಳುವಿಕೆ; ಈಶಾನ್ಯ ರಾಜ್ಯಗಳ ಪರಸ್ಪರ ಕಾದಾಟ; ಮಾದಕ ದ್ರವ್ಯದ ಕಳ್ಳಸಂತೆ ಜಾಲ - ಇವೆಲ್ಲದರಿಂದ ಆ ಪ್ರದೇಶ ಶಾಂತಿಯುತವಾಗಿರಬೇಕಾದರೆ ಅಲ್ಲಿ ಸೇನೆ ಇರಬೇಕೆಂದು ಜನರೇ ಭಾವಿಸುತ್ತಾರೆ. ಬೀದಿ, ಮಾಲ್, ಪಾರ್ಕಿಂಗ್ ಲಾಟ್ ಎಲ್ಲವನ್ನು ಹಫ್ತಾ ವಸೂಲಿಗೆಂದು ಹಂಚಿಕೊಂಡ; ಸರ್ಕಾರಿ ನೌಕರರನ್ನೂ ಹೆದರಿಸಿ ಅವರಿಂದ ಒಂದು ಪಾಲು ಸಂಬಳವನ್ನು ಹಫ್ತಾ ಆಗಿ ಪಡೆಯುವ ಬಂಡುಕೋರ ಗುಂಪುಗಳ ಪರಸ್ಪರ ಕಾದಾಟ ಸೇನೆಯಿಲ್ಲದಿದ್ದರೆ ಸಿವಿಲ್ ವಾರಿನಲ್ಲಿ ಕೊನೆಗೊಳ್ಳುತ್ತದೆ ಎಂದು ಚಿತ್ರಾ ಅಹೆಂತೆಮ್ ಎಂಬ ಮಣಿಪುರದ ಪತ್ರಕರ್ತ, ಆಕ್ಟಿವಿಸ್ಟ್ ಅಭಿಪ್ರಾಯಪಡುತ್ತಾರೆ.


ಶರ್ಮಿಳಾ ದೀರ್ಘಕಾಲ ಬದುಕಬೇಕೆಂದರೆ ಉಪವಾಸ ಕೊನೆಯಾಗಬೇಕು, ಆಕೆ ಸಹಜವಾಗಿ ಆಹಾರ ತೆಗೆದುಕೊಳ್ಳುವಂತಾಗಬೇಕು. ಆಕೆ ಊಟಮಾಡಬೇಕೆಂದರೆ ಸೇನಾ ಕಾಯ್ದೆ ರದ್ದಾಗಬೇಕು. ಅದು ರದ್ದಾಗಬೇಕೆಂದರೆ ಮಣಿಪುರದ ಬಂಡುಕೋರ ಗುಂಪುಗಳು ತಣ್ಣಗಾಗಿ ಸಮಾಜದಲ್ಲಿ ಶಾಂತಿ ನೆಲೆಸಬೇಕು. ಆ ಕಾಲ ಬರುವುದು ಎಂದು? ಉರಿವ ಒಲೆಯ ಮೇಲಿನ ಬಾಣಲೆಯಲ್ಲಿ ಶರ್ಮಿಳಾ ಇನ್ನೆಷ್ಟು ಕಾಲ ಕಾಯುವುದು? ಉಪವಾಸ ಪ್ರತಿಭಟನೆಯ ಒಂದು ಮಾದರಿ ಅಷ್ಟೇ. ಮಾದರಿ ಪೂರಾ ಸಾಂಕೇತಿಕವಾದರೆ; ಒಂದಿಡೀ ರಾಜ್ಯದ ಚಳವಳಿ ಒಬ್ಬ ವ್ಯಕ್ತಿಯ ಹೋರಾಟವನ್ನೇ ಕೇಂದ್ರೀಕರಿಸಿ ನಿಂತುಬಿಟ್ಟರೆ ಆಗುವ ಅಪಾಯ ಇದು.

ಈಗ ಅಲ್ಲಿನ ಪ್ರಜ್ಞಾವಂತರು ತುರ್ತಾಗಿ ಯೋಚಿಸಬೇಕು; ಹೋರಾಟದ ಗುರಿ-ರೂಪುರೇಷೆಗಳನ್ನು ಬದಲಿಸಿಕೊಳ್ಳಬೇಕು; ಇವತ್ತಿಗೆ ಅಲ್ಲಿ ಬೇಕಿರುವುದೇನು ಎಂದರಿತು ಬೇಡಿಕೆಯನ್ನು ಮರುಪರಿಶೀಲಿಸಬೇಕು. ಸೇನೆ ವಾಪಸಾತಿಗಿಂತ ಅದನ್ನು ಮಾನವೀಯಗೊಳಿಸುವ ಕುರಿತು, ಅದಕ್ಕೆ ನಾಗರಿಕ ಉತ್ತರದಾಯಿತ್ವ ಹೊರಿಸುವ ಕುರಿತು ಹೋರಾಡಬಹುದೇ ಎಂದು ಗಮನ ಹರಿಸಬೇಕು.

ಆಗ ಮಾತ್ರ ಶರ್ಮಿಳಾ ಆಧುನಿಕ ಗಾಂಧಾರಿಯಾಗುವ ಸಂಭವ ತಪ್ಪಬಹುದು.

■ ಡಾ.ಎಚ್.ಎಸ್.ಅನುಪಮಾ

ಡಿ.ಕೆ. ರವಿ ನೆನೆಸುತ್ತ



ಹತಾತ್ತನೆ ನಿರ್ಗಮಿಸಿ ಒಂದು ವಾರ ಕಾಲ ಸರ್ಕಾರವನ್ನೇ ಅಲ್ಲಾಡಿಸಿದ ಡಿ.ಕೆ. ರವಿಯ ಸಾವು ಅನಾವರಣಗೊಳಿಸಿದ ಸತ್ಯದರ್ಶನದಿಂದ ಬೆಚ್ಚಿದ ಕೆಲವರು ಬಿಜೆಪಿ ಮತ್ತು ಜೆಡಿಎಸ್ ಪಾರ್ಟಿಗಳು ಬಿತ್ತರಿಸಿದ ಸುಳ್ಳಿಗೇ ಅಂಟಿಕೊಂಡಿದ್ದಾರೆ. ಸಾಮಾನ್ಯವಾಗಿ ಸತ್ಯ ಒಂದು ವಾಕ್ಯದಲ್ಲಿರುತ್ತದೆ, ಸುಳ್ಳು ಸಾವಿರಾರು ಪುಟಗಳಿರುತ್ತದೆ. ಒಂದು ವಾಕ್ಯವನ್ನು ಒಪ್ಪದ ಜನ ತಮ್ಮ ಕಲ್ಪಿತ ಕತೆಗಳನ್ನು ಇನ್ನು ಹೆಣೆಯುತ್ತಲೇ ಇದ್ದಾರೆ. "ರೋಹಿಣಿಯವರು ಮಂಡ್ಯ ಜಿಲ್ಲೆ ಇತ್ತೀಚೆಗೆ ಕಂಡ ದಕ್ಷ ಅಧಿಕಾರಿ ಮತ್ತು ಗೃಹಿಣಿ. ಅಂಥವರ ಜೊತೆ ನಮ್ಮ ರವಿಯ ಹೆಸರು ಸೇರಿಸಿ ಮಾತನಾಡುವುದು ಅಕ್ಷಮ್ಯ. ಒಂದು ವ್ಯವಸ್ಥಿತ ಕೊಲೆಯನ್ನು ಮುಚ್ಚಿ ಹಾಕಲು ಸರ್ಕಾರವೇ ಹೆಣೆದಿರುವ ಕಟ್ಟುಕತೆ" ಎಂಬುದು ರವಿ ಅಭಿಮಾನಿಗಳ ವಾದ. "ರವಿ ದಕ್ಷ, ಪ್ರಾಮಾಣಿಕ, ಭ್ರಷ್ಟ ರಾಜಕಾರಣಿಗಳಿಗೆ ಸಿಂಹ ಸ್ವಪ್ನ. ಇಂಥವನು ಒಬ್ಬ ಗೃಹಿಣಿಯನ್ನು ಪ್ರೀತಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆಂದರೆ ಇದಕ್ಕಿಂತ ಸುಳ್ಳಿನ ಕತೆಯುಂಟೆ?" ಎಂದು ವಾದ ಮಾಡುವವರ ಮನಸ್ಸಿನಲ್ಲಿ ದಕ್ಷನೂ ಪ್ರಾಮಾಣಿಕನೂ ಆದ ವ್ಯಕ್ತಿ ಏಕಪತ್ನಿ ವ್ರತಸ್ಥನೂ ಆಗಿರುತ್ತಾನೆಂಬ ಮೂಢನಂಬಿಕೆ ಇರುವಂತಿದೆ.

ಅಂಥವರನ್ನು ಸುಮ್ಮನಾಗಿಸಲು "ಕೈತೊಳೆದುಕೊಂಡು ಮುಟ್ಟುವಂತಿದ್ದ ಅನಿತಾ ಕುಮಾರಸ್ವಾಮಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಲೇ ಕುಮಾರಣ್ಣ ರಾಧಿಕನ ಹಿಂದೆ ಹೋಗಿ ಕಡೆಗೆ ಮದುವೆಯನ್ನು ಮಾಡಿಕೊಂಡು ಮಗು ಪಡೆಯಲಿಲ್ಲವೇ? ಇದಕ್ಕೇನು ಹೇಳುತ್ತೀರಿ?" ಎಂದರೆ ಮಂಕಾಗುತ್ತಾರೆ. "ಅದೂ ಬೇಡ, ಗುಂಡೂರಾಯರು ವರಲಕ್ಷ್ಮಿಯಿದ್ದರೂ ಮಂಜು ಭಾರ್ಗವಿ ಹಿಂದೆ ಬಿದ್ದಿರಲಿಲ್ಲವೆ? ಅದೂ ಬೇಡ, ಎಪ್ಪತ್ತು ವರ್ಷದ ಎನ್.ಟಿ. ರಾಮರಾವ್ ತನ್ನ ಸಾಮ್ರಾಜ್ಯವನ್ನೇ ಲಕ್ಷ್ಮಿ ಶಿವಪಾರ್ವತಿಗೆ ಧಾರೆ ಎರೆಯಲು ಹೊರಟಿರಲಿಲ್ಲವೆ? ಇತ್ತೀಚಿನ ಉದಾಹರಣೆಗಳೇ ತಗೊಳ್ಳಿ ಯಡಿಯೂರಪ್ಪ ರೇಣುಕಾಚಾರ್ಯ ಮತ್ತು ಉಡುಪಿ ಭಟ್ಟ ಏನು ಕಡಿಮೆ ಪ್ರೇಮಿಗಳೇ?" ಎಂಬ ಪ್ರಸಂಗಗಳ ಸರಮಾಲೆಯನ್ನೇ ಕೊಟ್ಟರೂ, "ಶ್ರೀರಾಮಚಂದ್ರಸಂತಹ ರವಿ ಬೇರೆ, ಉಳಿದ ರಾಜಕಾರಣಿಗಳೇ ಬೇರೆ" ಎಂದು ವಾದಿಸುತ್ತಾರೆ.

ಲಂಕೇಶರು ಬದುಕಿದ್ದಾಗಲೇ ಅವರ ಬಳಿಗೆ ರವಿ ತರದವನೊಬ್ಬನ ಸಮಸ್ಯೆ ಬಂದಿತ್ತು, ಹಾಗೆ ನೋಡಿದರೆ ಅಂತಹ ಸಮಸ್ಯೆಗಳು ಅವರ ಬಳಿಗೆ ಬರುತ್ತಲೇ ಇದ್ದವು. ಅಂತಹ ಗೋಜಲಿನಿಂದ ಹೊರಬರಬೇಕಾದರೆ ಮುಂದೆ ಹೇಗೆ ವರ್ತಿಸಬೇಕೆಂದು ಹೇಳಿ ಕಳಿಸುತ್ತಿದ್ದರು. ಒಮ್ಮೆ ಹೀಗೆಯೇ ಇಬ್ಬರನ್ನು ಕಟ್ಟಿಕೊಂಡು ಹೋಗುತ್ತಿದ್ದವನೊಬ್ಬನಿಗೆ "ಅವಳಿಗೂ ಎರಡು ಬಿಡು, ಇವಳಿಗೂ ಎರಡು ಬಿಡು. ಹುಷಾರಾಗಿರು" ಎಂದು ಹೇಳಿ ಕಳಿಸಿದ್ದರು. "ಹುಷಾರಾಗಿರು" ಎಂದು ಏಕೆ ಹೇಳಿದರೆಂದರೆ ಹಿರಿ ಹೆಂಡತಿ ಆತನ ಮೇಲೆ ಕಣ್ಣು ಇಟ್ಟಿದ್ದಳಂತೆ, ಆತ ತಪ್ಪಿಸಿಕೊಂಡು ನೇರ ಲಂಕೇಶರ ಹತ್ತಿರ ಬಂದಿದ್ದ. ಆ ಬುದ್ಧಿಜೀವಿಗೆ, ಲಂಕೇಶ್ ಹುಷಾರಿನಿಂದ ಬದುಕಲು ಹೇಳಿದ್ದರು!

ಆದ್ರೆ ರವಿ ಹೆಸರಿನವನ ಸಮಸ್ಯೆ ಸ್ವಲ್ಪ ಜಟಿಲವಾಗಿತ್ತು. ಆತನಿಗೆ ಮದುವೆಯಾಗಿ ಮಗು ಇತ್ತು. ಆತ ಗಾಢವಾಗಿ ಪ್ರೀತಿಸುತ್ತಿದ್ದವಳಿಗೂ ಮದುವೆಯಾಗಿ ಎರಡು ಮಕ್ಕಳಿದ್ದವು. ಒಳ್ಳೆಯ ಮನಸ್ಸಿನ ಗೃಹಿಣಿಯಾಗಿದ್ದ ಆಕೆ ಯಾವುದೇ ಅಳುಕಿಲ್ಲದೆ ವರ್ತಿಸುತ್ತಿದ್ದಳು. ಒಳ್ಳೆಯ ಚಿತ್ರ ಬಂದರೆ ರವಿ ಜೊತೆ ಹೋಗಿ ನೋಡಿಬರುತ್ತಿದ್ದಳು. ತನ್ನ ಕೆಲಸಕಾರ್ಯದಲ್ಲಿ ಬಿಡುವಿರದ ಗಂಡ ಆಕೆ ರವಿ ಜೊತೆ ಹೋಗಿ ಸಿನಿಮಾ ನೋಡಲು ಅಡ್ಡಿಪಡಿಸುತ್ತಿರಲಿಲ್ಲ. ಆಕೆಯೂ ಕೂಡ ಒಬ್ಬಳೇ ಹೋಗದೆ ತನ್ನ ಅಸಂಖ್ಯಾತ ಗೆಳತಿಯರಲ್ಲಿ ಯಾರನ್ನಾದರೂ ಜೊತೆಗೆ ಕರೆದುಕೊಂಡೇ ಹೋಗುತ್ತಿದ್ದಳು.

ಈ ಕ್ರಮ ರವಿಗೆ ಮೊದಲು ಸಹ್ಯವಾದರೂ, ಕ್ರಮೇಣ ಅವರೇಕೆ? ಇವರೇಕೆ? ಎಂಬ ತಕರಾರು ತೆಗೆಯತೊಡಗಿದ. ಇದರಿಂದ ಆಕೆ ರವಿಯಲ್ಲಾಗುತ್ತಿದ್ದ ಬದಲಾವಣೆಯನ್ನು ಗುರುತಿಸತೊಡಗಿದ್ದಳು.

ಮುಂದೆ ಸಿನಿಮಾ ಮತ್ತು ಸಮಾರಂಭಗಳಿಗೆ ಹೋದಾಗ ರವಿ ಒತ್ತರಿಸಿ ಕೂರುವುದು ಮತ್ತು ಮೈ ಕೈ ತಾಗಿಸುವ ಕ್ರಿಯೆಯಲ್ಲಿ ಮೊದಲಿನ ಸಹಜತೆ ಇರದಿದ್ದುದನ್ನು ಆಕೆ ಗುರುತಿಸಿದಳು. ರವಿ ಕ್ರಮೇಣ ತನ್ನ ಸೋಗಿನ ಶಿಷ್ಟಾಚಾರದ ನಡವಳಿಕೆ ಬದಿಗೊತ್ತಿ "ಎಲ್ಲಾದರೂ 'ಹೋಗಿಬರೋಣ'" ಎಂದು ತಾಕೀತು ಮಾಡತೊಡಗಿದ.

ಗಲಿಬಿಲಿಗೊಂಡ ಆಕೆ "ನೀನು ಇಲ್ಲಿಯವರೆಗೂ ಇದ್ದಂತೆ ಇದ್ದರೆ ಸರಿ. ಇಲ್ಲವಾದರೆ ನಾನು ನಿನ್ನ ಜೊತೆಯಿಂದ ದೂರ ಸರಿಯಬೇಕಾಗುತ್ತದೆ" ಎಂದು ಎಚ್ಚರಿಸಿದಳು. ಆದರೆ ರವಿ ಅದೆಲ್ಲವನ್ನು ಮೀರಿ ಅವಳನ್ನು ಪಡದೇ ತೀರುವ ಹಂತಕ್ಕೆ ಬಂದು ನಿಂತಿದ್ದ. ಆದ್ದರಿಂದ ದಿನದಲ್ಲಿ ಒಂದು ಬಾರಿ ಫೋನು ಮಾಡುತ್ತಿದ್ದವನು ಗಂಟೆಗೊಮ್ಮೆ ಫೋನ್ ಮಾಡತೊಡಗಿದ. ಈ ಬಗ್ಗೆ ಆಕೆ "ಪಾಪ ಏನೋ ಬರೆಯುತ್ತಿದ್ದಾನಂತೆ. ಅದಕ್ಕೆ ಪದೇಪದೇ ಫೋನ್ ಮಾಡಿ ಮಾಹಿತಿ ಕೇಳುತ್ತಿದ್ದಾನೆ" ಎಂದು ಸಮಜಾಯಿಸಿ ನೀಡಿದಳು.

ಕ್ರಮೇಣ ರವಿಯ ಉನ್ಮಾದ ಜಾಸ್ತಿಯಾಗತೊಡಗಿತು. ಯಾರ ಹಿತವಚನಗಳೂ ತಲೆಗೆ ಬೀಳದಂತಾದವು. ಒಮ್ಮೆ ತನ್ನ ಹೆಂಡತಿಯನ್ನೇ ರಮಿಸಿ ತಾನು ಪ್ರೀತಿಸುತ್ತಿರುವ ಗೆಳತಿ ತನ್ನ ಮೇಲೆ ಕನಿಕರ ತೋರಿ ಒಂದಾಗುವಂತೆ ಒಪ್ಪಿಸುವೆಯಾ ಎಂದು ಹೆಂಡತಿಯನ್ನೇ ಕೇಳಿದ. ಗರಬಡಿದಂತಾದ ಹೆಂಡತಿ "ನನ್ನನ್ನೇನು ತಲೆಹಿಡುಕಿ ಅಂತ ಮಾಡಿದ್ದಿಯಾ? ಅಷ್ಟಕ್ಕೂ ನೀನಂಥವನಾದ್ರು ಪಾಪ ಆಕೆ ಬಹಳ ಒಳ್ಳೆ ಹೆಂಗಸು. ಅಂಥವರ ಬಳಿ ನಿನ್ನ ಚೇಷ್ಟೆ ತೋರಬೇಡ. ಮರಿಯಾದಿಯಾಗಿರು" ಎಂದಳು.

ದಿಕ್ಕುಗಾಣದಂತಾದ ರವಿ ಆಕೆಗೆ ತುಂಬಾ ಪರಿಚಯವಿರುವ ಲಂಕೇಶರ ಬಳಿ ಬಂದ. ಅದೂ ಇದೂ ಮಾತನಾಡಿ, ಅವರನ್ನು ಹೊಗಳಿ, ತನ್ನ ಬದುಕಿನ ಏಕೈಕ ಉದ್ದೇಶ ಹೇಳಿಕೊಂಡ. ಅವನ ದೂರನ್ನು ಸಹಜವಾಗಿ ತೆಗೆದುಕೊಂಡ ಲಂಕೇಶ್ "ಯಾಕಯ್ಯ ನಿನ್ನೆಡ್ತಿ ಚೆನ್ನಾಗಿಲ್ಲವ?" ಎಂದರು. "ಚೆನ್ನಾಗಿದ್ದಾಳೆ ಸಾರ್. ಹಿರಿಯವರೆಲ್ಲಾ ಸೇರಿ ಮಾಡಿದ್ರು. ಒಳ್ಳೆ ಗೃಹಿಣಿ. ಆದ್ರೂ ಏನೋ ಒಂದು ಪ್ರಾಬ್ಲಂ ಇದೆ. ಸೆಕ್ಸ್ ಪ್ರಾಬ್ಲಂ. ನನ್ನನ್ನು ಉದ್ರೇಕಿಸೊ ಅಂತದ್ದು ಏನೂ ಅವಳಲಿಲ್ಲ" ಎಂದ. "ಅಂಗಾಂಗಳಿಲ್ಲವೆ ಅವುಳಲ್ಲಿಯಿಯಾ?" ಎಂದರು.

"ಹೌದು ಸಾರ್. ಹತ್ತು ವರ್ಷದಿಂದ ಪ್ರೀತಿಸಿದ್ದಿನಿ. ಯಾಕೋ ಅವುಳು ಮನಸ್ಸು ಮಾಡ್ತಾಯಿಲ್ಲ, ನೀವಾದ್ರು ಹೇಳಿ ಸಾರ್. ಇಲ್ಲ ಅಂದ್ರೆ, ನನ್ನ ಬದುಕಿಗೆ ಅರ್ಥನೇ ಇಲ್ಲ, ಸಾಯಬೇಕು ಅನ್ನಸ್ತದೆ" ಎಂದ. ಆದಾಗಲೇ ಆತನಲ್ಲಿ ಕಾಮದ ಕಣ್ಣೀರು ತುಂಬಿಕೊಂಡವು. ಇದಕ್ಕೆ ಕರಗಿದ ಲಂಕೇಶ್ "ಲೇ, ಅವುಳೇನು ಚೆನ್ನಾಗಿಲ್ಲ ಕಣಯ್ಯ. ನನ್ನ ಬಗ್ಗೆನೂ ಆಕೆಗೆ ಕುತೂಹಲ ಇದೆ. ಆದ್ರೆ ನನ್ನ ಅಕ್ಕನ್ನೋ ತಂಗಿನ್ನೋ ನೋಡಿದಂಗಾಗುತ್ತೆ. ಆದ್ರಿಂದ ನೋಡನಿರು ಹೇಳ್ತಿನಿ" ಎಂದರು.

ಈ ಭರವಸೆಯಿಂದ ಗೆಲುವಾದ ಆತ ಇನ್ನೇನು ತನ್ನ ಪ್ರೇಯಸಿ ತನ್ನ ಆಲಿಂಗನಕ್ಕೆ ಸಿಕ್ಕೇಬಿಟ್ಟಳೆನ್ನುವಂತೆ ಹೋದ. ಆದರೆ ಲಂಕೇಶರು ಮಾತು ಕೊಟ್ಟಂತೆ ಆಕೆಯನ್ನು ಮಾತನಾಡಿಸಿ ರವಿಯ ಕಾಯಿಲೆ ನಿವಾರಣೆ ಸಾಧ್ಯವೇ ಎಂದು ಕೇಳಿದರು.

ಅದಕ್ಕವಳು, "ಅದೆಲ್ಲ ಸಾಧ್ಯ ಇಲ್ಲ ಸಾರ್. ನಾನು ಇದುವರೆಗೂ ಆ ದೃಷ್ಟೀಲಿ ನೋಡೇ ಇಲ್ಲ. ಆತ ಒಂಥರಾ ನನಿಗೆ ಗೆಳತಿಯಿದ್ದಂಗೆ. ಅದಕ್ಕೋಸ್ಕರವೇ ನಾನು ಅವನು ಜೊತೆ ಎಲ್ಲೆಂದರಲ್ಲಿ ಧೈರ್ಯವಾಗಿ ತಿರುಗಾಡ್ತಿನಿ. ಈಗಿರೋ ಫ್ರೆಂಡ್‌ಶಿಪ್ ಚೆನ್ನಾಗಿದೆ. ಅದೇ ತರ ಇದ್ರೆ ಇರದಿಕ್ಕೇಳಿ, ಇಲ್ಲ ಅಂದ್ರೆ ಅವುನು ನನ್ನತ್ರ ಬರಬೇಡಿ ಅಂತ ಹೇಳಿ" ಎಂದುಬಿಟ್ಟಳು.


ಈ ಘಟನೆಯ ವಾರ ಲಂಕೇಶ್ ಕೆಲವು ಟಿಪ್ಪಣಿಯಲ್ಲಿ ತಮಗಿಷ್ಟವಾದವರನ್ನು ಪಡೆಯುವ ತಳಮಳದ ಬಗ್ಗೆ ದಾಖಲಿಸಿದರು ಮತ್ತೂ ಆತನಿಗೆ ಫೋನು ಮಾಡಿ ಬುದ್ಧಿ ಹೇಳಿದರು. ಆಮೇಲೆ ಆತ ಅವಳನ್ನು ಪಡೆದನೋ ಇಲ್ಲವೋ ತಿಳಿಯಲಿಲ್ಲ. ಆದರೆ ನಮಗೆಲ್ಲಾ ಈ ಪ್ರೀತಿಯ ಝಾರಿ ಉಂಟುಮಾಡುವ ಉನ್ಮಾದದ ಬಗ್ಗೆ ಕುತೂಹಲ ಮೂಡಿತ್ತು. ಅದಕ್ಕೇ ನಮ್ಮ ದಕ್ಷ ಅಧಿಕಾರಿ ಡಿ.ಕೆ. ರವಿ ಮತ್ತು ರೋಹಿಣಿ ನಡುವಿನ ಸಮಸ್ಯೆ ನಮಗೆಲ್ಲಾ ಸಹಜವಾಗಿ ಕಂಡರೆ, ಈ ಬಗ್ಗೆ ಪ್ರತಿಭಟಿಸಿದವರಿಗೆ ಇದಾವುದೂ ಮನವರಿಕೆಯಾಗಿಲ್ಲ.


ಸಿಐಡಿ, ಸಿಬಿಐ ಅಂದರೇನೆಂದು ಗೊತ್ತಿಲ್ಲದ ಮುಗ್ಧರೆಲ್ಲಾ "ಸಿಬಿಐ ಈ ಪ್ರೇಮ ಪ್ರಕರಣ ಸುಳ್ಳೆಂದು ಸಾಬೀತುಮಾಡಿ, ಭೂ ಮಾಫಿಯಾ, ಮರಳು ಮಾಫಿಯಾ ಮತ್ತು ರಾಜಕಾರಣಿಗಳು ಹೊರ ದೇಶದಿಂದ ಕರೆಸಿದ್ದ ಕೊಲೆಗಡುಕರು ರವಿಯನ್ನು ಹಿಡಿದು ಕೈಗೆ ಮತ್ತು ಬರುವ ಸೂಜಿ ಚುಚ್ಚಿ ನಂತರ ನೇತು ಹಾಕಿರುವ ಸಂಗತಿ ಹೊರಬಂದೇ ಬರುತ್ತೆ" ಎಂದು ಕಾಯತೊಡಗಿದ್ದಾರೆ.

ಚಿಡ್ಡಿಗಳು ತೀರ್ಥಹಳ್ಳಿ ನಂದಿತಾ ಸಾವಿನ ವಿಷಯದಲ್ಲಿ ಮಾಡಿದ ಅನಾಹುತವನ್ನೇ ಜೆಡಿಎಸ್‌ನವರು ರವಿ ವಿಷಯದಲ್ಲಿ ಮಾಡಿ ಈ ನಾಡಿನ ಮುಗ್ಧರು ಕ್ಷೋಭೆಗೊಳ್ಳುವಂತೆ ಮಾಡಿಬಿಟ್ಟಿದ್ದಾರೆ. ಸಿದ್ದರಾಮಯ್ಯನ ಸರ್ಕಾರ ಯಾವ ಅಧಿಕಾರಿಯೂ ಆತ್ಮಹತ್ಯೆ ಮಾಡಿಕೊಳ್ಳದಂತೆ ಎಚ್ಚರ ವಹಿಸುವುದು ಒಳ್ಳೆಯದು! ಮಾಡಿಕೊಂಡರೂ ಹಗ್ಗದಲ್ಲಿರುವಾಗಲೇ ಸಿಬಿಐಗೆ ವಹಿಸುವುದು ಇನ್ನೂ ಒಳ್ಳೆಯದು!

■ ಬಿ. ಚಂದ್ರೇಗೌಡ

ನಿಸರ್ಗದ ಕ್ಯಾಲೆಂಡರ್





ಯುಗಾದಿ ಕಳೆದಿದೆ. ನವ ವಸಂತನ ಆಗಮನವಾಗಿದೆ. ಎಲ್ಲೆಲ್ಲೂ ಗಿಡ ಮರಗಳು ಹಸಿರು ತುಂಬಿಕೊಂಡು ಮೈಯೆಲ್ಲಾ ಹೊಸತನದಿಂದ ಅಣಿಯಾಗಿವೆ. ಹೊಂಗೆ, ಮಾವು ಮುಂತಾದವುಗಳಲ್ಲಿನ ತಳಿರು ನವಚೇತನವನ್ನು ತಂದಿದೆ. ರಸ್ತೆಯ ತುಂಬೆಲ್ಲಾ ಹೂವಿನ ಮರಗಳು ಹೂಬಿಟ್ಟು ವಸಂತನ ಆಗಮನದ ಚಂದವನ್ನು ಹೆಚ್ಚಿಸಿವೆ. ನಿಸರ್ಗದ ಜೀವ ಚೇತನ ಕಾಲಕ್ಕೆ ಸರಿಯಾಗಿ ಏನೆಲ್ಲಾ ನಡೆಸಿಕೊಂಡು ಬರುತ್ತಿದೆ. ನಾವಾದರೋ ಹುಟ್ಟಿದ ದಿನ ನೆನಪಲ್ಲಿಟ್ಟು ಲೆಕ್ಕಹಾಕಿ ಕಾಲವನ್ನು ಸಮೀಕರಿಸಿ ಹೀಗಾಯಿತು ಹಾಗಾಯಿತು ಎಂಬ ಕಥನವನ್ನು ಕಟ್ಟುತ್ತೇವೆ. ಇದೇ ಕೆಲಸವನ್ನು ನಿಸರ್ಗವೂ ಅಷ್ಟೇ ಜತನದಿಂದ ಅಥವಾ ಊಹೆಗೂ ನಿಲುಕದಷ್ಟು ಜಾಗರೂಕವಾಗಿ ಮಾಡುತ್ತಾ ತನ್ನದೇ ಕ್ಯಾಲೆಂಡರ್ ನಿರ್ಮಿಸಿಕೊಂಡು ಬರುತ್ತಿದೆ. ಇದನ್ನು ಅರಿಯಲು ಮಾತ್ರ ನಮ್ಮ ಜಾಗರೂಕ ಮನಸ್ಸು ಕುತೂಹಲವನ್ನು ಬೆಸೆದುಕೊಂಡು ಚುರುಕಾಗಿರಬೇಕು. ನಮ್ಮ ಚುರುಕುತನ ಮತ್ತು ಕುತೂಹಲವನ್ನು ಸುತ್ತಮುತ್ತಲಿನ ಗಿಡ ಮರ ಬಳ್ಳಿ ಮತ್ತವುಗಳ ಸುತ್ತ ಕಾಣಬರುವ ಇತರೇ ಜೀವ ಜಂತುಗಳ ಅವಲೋಕನದಲ್ಲಿ ತೊಡಗಿಸಿಕೊಂಡಲ್ಲಿ ಈ ನಿಸರ್ಗದ ಕ್ಯಾಲೆಂಡರ್‌ನ ಸೂಕ್ಷ್ಮತೆ ಸುಲಭವಾಗಿ ಅರ್ಥವಾಗುತ್ತದೆ. ಬ್ರಿಟನ್ನಿನ ಒಂದು ಕುಟುಂಬದ ಆಸಕ್ತಿ ಒಂದು ವೈಜ್ಞಾನಿಕ ಶಾಖೆಯ ವಿಕಸನಕ್ಕೆ ಕಾರಣವಾಗಿದೆ ಎಂದರೆ ಅಚ್ಚರಿಯಾಗುತ್ತದೆ.

ಫೀನಾಲಜಿ ಎಂಬುದು ಕಾಲದೊಂದಿಗೆ ಬದಲಾಗುವ ಜೈವಿಕ ಸಂಗತಿಗಳನ್ನು ಅರಿಯುವ ಅಧ್ಯಯನ ಶಾಖೆ. ಇದರ ಹುಟ್ಟಿಗೆ ಓರ್ವ ವ್ಯಕ್ತಿಯ ಆಸಕ್ತಿಯ ಜತೆಗೆ ಮುಂದೆ ಅವರ ಕುಟುಂಬದ ಕಾಯಕವಾಗಿ ಇಂತಹದ್ದೊಂದು ರೂಪುಗೊಳ್ಳಲು ಕಾರಣವಾಗಿದೆ. ಬ್ರಿಟನ್ನಿನ ರಾಬರ್ಟ್ ಮಾರ್ಶಮ್ ಎಂಬುವರೊಬ್ಬರು ತಮ್ಮ ತೋಟವನ್ನು ನಿರಂತರವಾಗಿ ಗಮನಿಸುತ್ತಾ ವಸಂತದ ಬದಲಾವಣೆಗೆ ಸ್ಫೂರ್ತಿಯಾಗುವ ಸಂಗತಿಗಳನ್ನು ವರ್ಷವರ್ಷವೂ ದಾಖಲಿಸುತ್ತಾ ಬಂದರು. ಹಾಗೆ ನೋಡಿದರೆ ಇಡೀ ತೋಟದ ಜವಾಬ್ದಾರಿಯನ್ನು ವಹಿಸಿಕೊಂಡ ಕಾರಣಕ್ಕೆ ಅಲ್ಲಿನ ಗಿಡ-ಮರಗಳ ಪೋಷಣೆಯ ಆಸಕ್ತಿಯಿಂದ ಅವರು ಇಂತಹ ಸಂಗತಿಗಳಲ್ಲಿ ಕುತೂಹಲ ಬೆಳಸಿಕೊಂಡವರು. ರಾಬರ್ಟ್ ತಮ್ಮ ಅವಲೋಕನವನ್ನು "ವಸಂತದ ಆಗಮನದ ಸ್ಫೂರ್ತಿ" ಎಂದೇ ದಾಖಲಿಸಿದ್ದರು. ಮುಂದೆ ಇದೇ ಕಾಲದೊಡನೆ ಜೈವಿಕ ಕ್ರಿಯೆಗಳ ಸಮೀಕರಣದ ಅಧ್ಯಯನಕ್ಕೆ ನಾಂದಿಯಾಯಿತು. ಇಂತಹದ್ದೊಂದು ಕೆಲಸವನ್ನು 18ನೇ ಶತಮಾನದ ಆದಿಯಲ್ಲೇ ಅವರು ಮಾಡಿದ್ದರೆಂಬುದು ಮಾತ್ರ ಅಚ್ಚರಿಯ ಸಂಗತಿಯೇ.

ರಾಬರ್ಟ್ ಮಾರ್ಶಮ್ ಅವರು ನಿಸರ್ಗದ ಇತಿಹಾಸವನ್ನು ಅರಿಯುವ ಹಂಬಲದಿಂದ ತಮ್ಮ ತೋಟದಲ್ಲಾಗುವ ಬದಲಾವಣೆಗಳನ್ನು ತಿಳಿವಿಗೆ ತರುತ್ತಾ ಅದನ್ನೇ ಟಿಪ್ಪಣಿಗಳಾಗಿಸಿ ಬರೆದಿಡತೊಡಗಿದರು. ಸುಮಾರು 1736 ರಲ್ಲೇ ತಮ್ಮ ಕೆಲಸವನ್ನು ಆರಂಭಿಸಿದ್ದರು. ವಸಂತ ಋತುವಿನ ಆಗಮನವನ್ನು ಅರಿಯಲು ಸುಮಾರು 27 ಸೂಚಕಗಳನ್ನು ದಾಖಲಿಸಿದ್ದರು. ಅವುಗಳಲ್ಲಿ ಮುಖ್ಯವಾಗಿ ನಾಲ್ಕು ಜಾತಿಯ ಗಿಡ ಮರಗಳ ಹೂಬಿಡುವ ಸೂಚನೆಗಳೂ, ಹದಿಮೂರು ಬಗೆಯ ಸಸ್ಯಗಳ ಚಿಗುರೆಲೆಗಳೂ, ವಲಸೆ ಹಕ್ಕಿಗಳ ಉಲಿವ ಗಾನದ ದನಿಯೂ, ಕಪ್ಪೆ ಮುಂತಾದ ಜಲಚರಗಳ ಸಂತಾನೋತ್ಪತ್ತಿಯ ಆರಂಭದ ಸೂಚನೆಗಳು ಸೇರಿಕೊಂಡಿದ್ದವು. ಮೊದಲು ಕಾಣಿಸುವ ಜೀವ ಪರ ಸಂಗತಿ, ಮೊದಲು ಕಾಣಬರುವ ಪಾತರಗಿತ್ತಿ, ಮೊದಲ ಕೋಗಿಲೆಯ ಹಾಡಿನ ಇಂಪೂ ಇವು ಸಹ ಇವರ ದಾಖಲೆಗಳಲ್ಲಿ ಬೆರೆತಿದ್ದವು. ಇದರ ಜತೆಗೆ ಹವಾಮಾನದ ಸಂಗತಿಗಳನ್ನೂ ಕೂಡಿ ನಿರ್ಧಾರಕ್ಕೆ ಅನುಕೂಲತೆಗಳನ್ನು ಕಲ್ಪಿಸಿಕೊಂಡಿದ್ದರು. ವಾತಾವರಣದ ಉಷ್ಣತೆ, ಗಾಳಿಯ ಬೀಸು ದಿಕ್ಕು ಮತ್ತು ತೀವ್ರತೆ, ಅವಕ್ಕೆ ಹೊಂದಿಕೊಂಡಂತಹ ಗಿಡಮರಗಳ ಬೆಳವಣಿಗೆಯ ಗತಿ ಎಲ್ಲವೂ ಅವರ ಅರಿವಿನಿಂದ ದಾಖಲೆಗಳಾಗಿಸಿ ಕಾಲದ ತಿರುವನ್ನು ಸಮೀಕರಿಸಲು ನೆರವಾಗಿದ್ದವು.

ಇವೆಲ್ಲಾ ದಾಖಲೆಗಳೂ 1789ರಲ್ಲಿ ರಾಯಲ್ ಸೊಸೈಟಿಯ ವರದಿಗಳಲ್ಲಿ ಪ್ರಕಟಗೊಂಡವು. ಮುಂದೆ ಇವೇ ಫೀನಾಲಜಿಯ ಅಧ್ಯಯನಗಳ ಆರಂಭಕ್ಕೆ ಮೊದಲಾದವು. ರಾಬರ್ಟ್ ತನ್ನ 89ನೆ ವಯಸ್ಸಿನಲ್ಲಿ 1797ರಲ್ಲಿ ಮರಣ ಹೊಂದುವವರೆಗೂ ದಾಖಲೆಗಳಲ್ಲಿ ನಿರತರಾಗಿದ್ದರು. ಒಟ್ಟಾರೆ ತಮ್ಮ ಬದುಕಿನ 62 ವರ್ಷಗಳನ್ನು ಇದರಲ್ಲಿಯೇ ತೊಡಗಿಸಿಕೊಂಡಿದ್ದರು ಎಂಬುದು ಅಚ್ಚರಿಯೇ ಸರಿ. ಇದೆಲ್ಲಕ್ಕೂ ಅಚ್ಚರಿಯ ಮತ್ತೊಂದು ಸಂಗತಿಯೆಂದರೆ ಮುಂದೆ ಆತನ ಕುಟುಂಬದ ಸದಸ್ಯರು 1958ರ ವರೆಗೂ ಅದೇ ಕೆಲಸವನ್ನು ಮುಂದುವರೆಸಿಕೊಂಡು ಬಂದರು. ಅಂದರೆ ಒಂದೇ ಕುಟುಂಬದ ಸದಸ್ಯರು ಸುಮಾರು ಎರಡು ಶತಮಾನಗಳಿಗಿಂತಲೂ ಹೆಚ್ಚು ಕಾಲದ -ತಮ್ಮದೇ ಆದರೂ- ಇಡೀ ತೋಟದ ಕಾಲದೊಂದಿಗಿನ ಬದಲಾವಣೆಗಳನ್ನು ದಾಖಲಿಸಿದರು. ಇದೊಂದು ಮಹತ್ವದ ದಾಖಲೆಯಾಗಿ ಇಂದಿಗೂ ಬಹುಮುಖ್ಯ ಸಂಗತಿಗಳ ತಿಳಿವಿಗೆ ಕಾರಣವಾಗಿದೆ. ಹೆಚ್ಚೂಕಡಿಮೆ 18, 19 ಮತ್ತು 20ನೇ ಶತಮಾನದ ಕಾಲದೊಡನೆ ಜೀವಿಸಂಗಮದ ಕಥನ ಜೀವಶಾಸ್ತ್ರದಲ್ಲಿ ಬಹು ದೊಡ್ಡ ಆಸ್ತಿ. ಇದೀಗ ರಾಯಲ್ ಸೊಸೈಟಿ ಹಾಗೂ ಇತರೇ ವೈಜ್ಞಾನಿಕ ಸಂಸ್ಥೆಗಳು ಈ ದಾಖಲೆಗಳನ್ನು ಕಾಡಿನ ವಿನಾಶ ಅಥವಾ ಬದಲಾವಣೆಯ ಊಹೆಗಳ ಅಧ್ಯಯನಕ್ಕೆ ಬಳಸುವ ಬಗೆಗೆ ಚಿಂತನೆಗಳನ್ನು ನಡೆಸಿವೆ.

ತೋಟದ ಮನೆಯಾಗಿದ್ದ ಅವರ ಮನೆಯು ಸುಮಾರು 32 ಮಲಗುವ ಕೋಣೆಗಳ ದೊಡ್ಡ ಮನೆಯಾಗಿತ್ತು. ಅಲ್ಲಿ ಹೆಚ್ಚೂಕಡಿಮೆ 30 ಕುದುರೆ ಕಟ್ಟುವ ಲಾಯವೂ ಇತ್ತು. ಇಡೀ ತೋಟದ ಒಟ್ಟು ವಿಸ್ತೀರ್ಣ ಸುಮಾರು 2530 ಎಕರೆಗಳಷ್ಟು ವಿಶಾಲವಾಗಿತ್ತಂತೆ. ಇಂತಹ ತೋಟದ ಮಾಲೀಕರಾದ ರಾಬರ್ಟ್ ಮಾರ್ಶಮ್ ತಮ್ಮ ತೋಟದಿಂದ ಆದಾಯದ ಗಳಿಕೆಗಾಗಿ ಮರದ ತೋಪುಗಳನ್ನು ಬೆಳೆಸಿದ್ದರು. ಅದರ ಲಾಭದಾಯಕ ಕೃಷಿಗೆಂದು ಕಾಲಕಾಲಕ್ಕೆ ತೋಟದಲ್ಲಾಗುವ ಬದಲಾವಣೆಗಳನ್ನು ಅರ್ಥೈಸಿಕೊಂಡು ಕೃಷಿ ಮಾಡುವ ಹಂಬಲದಲ್ಲಿ ಅದನ್ನು ಜಾಗರೂಕವಾಗಿಯೇ ಗಮನಿಸಲು ಆರಂಭಿಸಿದ್ದರು. ತಮ್ಮ ದಾಖಲೆಯನ್ನು ವಸಂತಋತುವಿನ ಆಗಮನಕ್ಕೆ ನಿಸರ್ಗದ ತಯಾರಿ ಎಂದು ಕರೆದ ರಾಬರ್ಟ್ ಅವರಿಗೆ ಮುಂದೊಂದು ದಿನ ಅದು ಮಹತ್ವದ ವೈಜ್ಞಾನಿಕ ಶಾಖೆಯಾದೀತೆಂಬ ಅನಿಸಿಕೆಯೂ ಇರಲಿಲ್ಲ.



21ನೇ ಶತಮಾನದ ಒಂದೂವರೆ ದಶಕಗಳನ್ನು ಸವೆಸಿರುವ ನಮಗೆ ರಾಬರ್ಟ್‌ರ ಕೆಲಸ ದೊಡ್ಡ ಸ್ಫೂರ್ತಿಯಾಗಬೇಕಿದೆ. ನಮ್ಮ ಸ್ಥಳೀಯ ಉದಾಹರಣೆಗಳನ್ನು ಇಂತಹದ್ದೇ ಸಂಗತಿಗಳ ಜತೆ ಸಮೀಕರಿಸಿ ನೋಡಲು ಸಾಧ್ಯವಿದೆ. ಆದರೆ ಅವೆಲ್ಲಾ ನಮ್ಮ ಪಾರಂಪರಿಕ ಜ್ಞಾನಗಳಾಗಿದ್ದು ಆಧುನಿಕತೆಯ ದೌಡಿನಲ್ಲಿ ಮರೆಯಾಗ ತೊಡಗಿವೆ. ಯಾವುದೇ ಮುಂದಾಲೋಚನೆಯೂ ಇಲ್ಲದೆ ರಸ್ತೆಗಳ ನಿರ್ಮಿಸಿ ಇದೀಗ ಅಗಲೀಕರಣದ ಹಂಬಲದಲ್ಲಿ ಸುಲಭವಾಗಿ ಧರೆಗುರುಳುತ್ತಿರುವ ಹೆಮ್ಮರಗಳ ಕುರಿತೋ, ಅದರ ಸುತ್ತಮುತ್ತಲಿನ ಇತರೇ ಜೀವಸಂಕುಲದ ಬಗೆಗೋ ಯಾವುದಾದರೂ ಮಾಹಿತಿ ದಾಖಲೆಗಳಂತಹ ಮಹತ್ವಗಳು ನಮಗೆ ಇಂದು ಅರ್ಥವಾಗಲಾರವು. ಅಥವಾ ಮುಂದೆಯೂ ಯಥಾಪ್ರಕಾರ ಅಂತಹದ್ದೆಲ್ಲವನ್ನೂ ಪಾಶ್ಚಾತ್ಯ ಮಾದರಿಗಳೇ ಕಲಿಸಬೇಕೆಂಬ ಧೋರಣೆ ನಮ್ಮದು. ಅಂತಹ ಪ್ರಯತ್ನವನ್ನಾದರೂ ಮಾಡಬಹುದೋ ಎಂಬ ಆಲೋಚನೆಗಳಿಗೆ ಪೂರಕವಾಗವ ಹಲವು ಸಂಗತಿಗಳು ಹೀಗಿವೆ.

ಅಲೆಮಾರಿ ಸಮುದಾಯದ ಪರಿಸರ ಜ್ಞಾನ

ಅನೇಕ ಪರಿಸರ ಮತ್ತು ವಾತಾವರಣದ ಸಂಗತಿಗಳನ್ನು ಕಾಲಕಾಲಕ್ಕೆ ಸಮೀಕರಿಸುತ್ತಾ ತಮ್ಮ ವೃತ್ತಿಜೀವನವನ್ನು ರೂಪಿಸಿಕೊಂಡವರಲ್ಲಿ ರೈತರು ಅದರಲ್ಲೂ ಪಾರಂಪರಿಕ ಬುಡಕಟ್ಟುಗಳಲ್ಲಿ ಈಗಲೂ ಕಾಣಬಹುದು. ಮಾನವರು ತಮ್ಮ ಬದುಕಿನಲ್ಲಿ ಸಾಕಷ್ಟು ಹಿಂದೆಯೇ ಸುಮಾರು 10-12 ಸಾವಿರ ವರ್ಷಗಳ ಮೊದಲು ಕೃಷಿಯನ್ನು ಹುಟ್ಟುಹಾಕಿದರು. ಅಷ್ಟು ಅಲೆಮಾರಿಗಳಾಗಿದ್ದ ಮಾನವರು ಸಹ ನೆಲೆಯನ್ನು ಕಟ್ಟಿಕೊಂಡು ತಮ್ಮ ಅಲೆಮಾರಿತನಕ್ಕೆ ಕಡಿವಾಣ ಹಾಕಿಕೊಳ್ಳುತ್ತಾ ಬಂದರು. ಪೂರ್ವದ ನಾಗರಿಕತೆಗಳು ನೆಲೆಕಂಡುಕೊಂಡು ಗಮನಿಸಿ ಗುರುತಿಸಿದ ಆಹಾರದ ಬೆಳೆಗಳೇ ಇಂದಿಗೂ ಆಧುನಿಕ ಜಗತ್ತಿನ ಅತೀ ಪ್ರಮುಖ ಬೆಳೆಗಳಾಗಿವೆ. ಇಷ್ಟೆಲ್ಲದರ ಮಧ್ಯೆಯೂ ಅಲೆಮಾರಿಗಳು ಇಂದಿಗೂ ಕಾಣಬರುತ್ತಿರುವುದನ್ನು ಅನೇಕ ದೇಶಗಳಲ್ಲಿ ಕಾಣಬಹುದು. ಭಾರತವೂ ಸೇರಿದಂತೆ ಅನೇಕ ಏಶಿಯಾದ ದೇಶಗಳಲ್ಲಿ ಮತ್ತು ಆಫ್ರಿಕಾ ಆಸ್ಟ್ರೇಲಿಯಾ, ದಕ್ಷಿಣ ಅಮೆರಿಕಾ ದೇಶಗಳಲ್ಲೂ ಅಲೆಮಾರಿಗಳನ್ನು ಕಾಣಬಹುದು. ಅಚ್ಚರಿಯೆಂದರೆ ರಾಬರ್ಟ್ ಒಂದೆಡೆ ನೆಲೆ ನಿಂತು ರೈತನಾಗಿ ಪರಿಸರದ ಆಗುಹೋಗುಗಳನ್ನು ಅರಿಯುತ್ತಾ ಮಹತ್ವಗಳನ್ನು ಕಟ್ಟಿದರು. ಆದರೆ ಈ ಅಲೆಮಾರಿಗಳು ಯಾವುದೇ ದಾಖಲೆಗಳನ್ನೂ ಇಡದೇ ಬಹುಶಃ ಕೇವಲ ಮೌಖಿಕ ಸಂವಹನದಿಂದ ತಲೆಮಾರುಗಳಿಂದ ನಿಸರ್ಗದ ಕ್ಯಾಲೆಂಡರ್ ಅನ್ನು ಅರಿಯುತ್ತಾ ಬಂದವರು. ಇವರ ಕುರಿತ ಇತ್ತೀಚಿನ ಹಲವಾರು ಅಧ್ಯಯನಗಳು ಜಾಗತಿಕವಾಗಿ ಮನ್ನಣೆ ಪಡೆಯಲಾರಂಭಿಸಿವೆ. ಬಹಳ ಮುಖ್ಯವಾಗಿ ಜಾಗತಿಕ ತಾಪಮಾನದ ಏರಿಕೆಯಂತಹ ವಾತಾವರಣದ ಬದಲಾವಣೆಯ ಭಯ ಮಾನವಶಾಸ್ತ್ರೀಯ ಆಸೆಗಳಿಂದ ಇವುಗಳನ್ನು ಕಾಣತೊಡಗಿದೆ.

ಮೂಲತಃ ಅಲೆಮಾರಿಗಳು ಎಂದಾಕ್ಷಣ ಒಂದೆಡೆ ನೆಲೆ ಕಂಡುಕೊಳ್ಳದವರು, ಎಲ್ಲಿಯೂ ನಿಲ್ಲದೆ ಒಂದೇ ನೆಲದ ವ್ಯಾಮೋಹವಿಲ್ಲದವರು. ಆಧುನಿಕತೆಯ ನೆಲದ ಮೋಹಕ್ಕೆ ತೀರ ಭಿನ್ನವಾದ ಸಂಸ್ಕೃತಿಯು ಇವರ ಬದುಕನ್ನು ನಿರ್ವಹಿಸುತ್ತಿದೆ. ಆದರೆ ಇವರ ನೆಲದ ಚಲನಶೀಲವಾದ ಜ್ಞಾನ ಮಾತ್ರ ಅಚ್ಚರಿತರುವಂತಹದ್ದು. ವಾಸ್ತವವಾಗಿ ಅಲೆಮಾರಿಗಳು ಒಂದು ಸೀಮಿತ ಗಡಿಯೊಳಗೆ ನಿರಂತರ ಪಯಣದಲ್ಲಿ ಇರುವವರು. ಆ ಗಡಿಯೊಳಗೆಯೇ ಒಮ್ಮೆ ಕಂಡ ನೆಲವನ್ನು ಮತ್ತೊಮ್ಮೆ ತುಳಿಯುವ ಸಾಧ್ಯತೆಯು ಹೆಚ್ಚೇ ಆಗಿರುತ್ತದೆ. ಆದ್ದರಿಂದ ಈ ಅರ್ಥದಲ್ಲಿ -ಅವರ ಕಾಲ ಮತ್ತು ದೇಶದ -ಸಂಗತಿಗಳು ಅರಿವಿನ ರೂಪದಲ್ಲಿ ವಿಕಸನಗೊಂಡು ಆಯಾ ಪ್ರದೇಶದ ಕಾಲ ಮತ್ತು ಪರಿಸರದ ಪ್ರಜ್ಞಾಪೂರ್ವಕ ತಿಳಿವಳಿಕೆಯನ್ನು ಉಳ್ಳವರಾಗಿದ್ದಾರೆ.

ಕರ್ನಾಟಕದ ಭೌಗೋಳಿಕ ಹಿನ್ನೆಲೆಯಲ್ಲಿ ಅಲೆಮಾರಿ ಸುತ್ತುತ್ತಾ ಕುರಿ ಸಾಕುವ ಕುರುಬರನ್ನೇ ಗಮನಿಸಬಹುದು. ಅವರಲ್ಲಿ ಬಹುಪಾಲು ಮೂಲತಃ ಬೆಳಗಾಂ ಜಿಲ್ಲೆಯವರು. ತುಂಗಭದ್ರಾ ನದಿಯ ತೀರದ ಉದ್ದಕ್ಕೂ ಸುಮಾರು 8-9 ತಿಂಗಳು ಅಲೆದಾಡುತ್ತಾ ಬರುವ ಇವರು ಮಲೆನಾಡಿನಂಚಿನವರೆಗೂ ಬರುತ್ತಾರೆ. ಜಮೀನುಗಳಲ್ಲಿ ಕುರಿ ನಿಲ್ಲಿಸುವ ಕೆಲಸದ ಮೂಲಕ ಅಲ್ಲಲ್ಲೇ ತಂಗುತ್ತಾರೆ. ನಿರಂತರ ಚಲನೆಯಲ್ಲಿದ್ದು ಮತ್ತೆ ಹಿಂದಿರುಗುವ ಮಾರ್ಗವು ಅದೇ ಆಗಿರುತ್ತದೆ. ರಾಜ್ಯದ ಈ ಪ್ರಾಂತ್ಯದ 8-9 ತಿಂಗಳ ಪರಿಸರದ ಆಗುಹೋಗುಗಳನ್ನು ಬಲ್ಲವರಾಗಿರುತ್ತಾರೆ. ಸಾಮಾನ್ಯವಾಗಿ ಒಂದು ಗೊತ್ತಾದ ಕಾಲದಲ್ಲಿ ಗೊತ್ತಾದ ಪ್ರದೇಶದಲ್ಲಿ ಅಲೆಯುತ್ತಿರುತ್ತಾರೆ. ಮುಂದೊಂದು ದಿನ ಅದೇ ಪ್ರದೇಶಕ್ಕೆ ಬರುವ ಅನಿವಾರ್ಯತೆಯೂ ಅವರನ್ನು ಆಯಾ ಪರಿಸರದ ಪರಸ್ಪರ ಪರಿಚಯದೊಂದಿಗೆ ವಿವರಿಸಬಲ್ಲವರಾಗಿದ್ದಾರೆ.

ಅಲೆಮಾರಿಗಳ ಪರಿಸರದ ಪರಿಚಯ ಮತ್ತು ನಿರಂತರ ಚಲನೆ ಎರಡೂ ಅತ್ಯಂತ ಗಟ್ಟಿಯಾದ ಅಂಶಗಳು. ಅಂದರೆ ಕಾಲ ಮತ್ತು ಪರಿಸರದ ಸಂಬಂಧಗಳನ್ನು ನಿರೂಪಿಸುವ ಅವರ ಅರಿವೇ ಅವರ ಪ್ರಮುಖ ಪರಿಸರ ಲೋಕಜ್ಞಾನ. ಇದೇ ಅವರ ಪರಿಸರದ ಕಾಲಜ್ಞಾನವಾಗಿಯೂ ಅಭಿವ್ಯಕ್ತಗೊಂಡಿದೆ. ಅತಿ ಕನಿಷ್ಠ ಅವಶ್ಯಕತೆಗಳ ಮೇಲೆ ಬದುಕಿನ ಆಶಯಗಳುಳ್ಳ ಅಲೆಮಾರಿಗಳು ತಮ್ಮ ಪರಿಸರದ ಮೇಲೆ ಅದ್ಭುತವಾದ ಅರಿವುಳ್ಳವರು. ಹಾಗಾಗಿ ಅವರಿಗೆ ಪರಿಸರದ ಕಾಲ-ಜ್ಞಾನ ಮುಖ್ಯವಾಗಿದೆ. ವಿವಿಧ ದೇಶಗಳ ವೈವಿಧ್ಯಮಯ ಅಲೆಮಾರಿಗಳ ಕುರಿತ ಅಧ್ಯಯನಗಳು ಇಂತಹ ಸಂಗತಿಗಳನ್ನು ದಾಖಲಿಸಿವೆ.

ಮೈಬೆಲ್ ರೀನೆ ಎಂಬ ಅಮೆರಿಕಾದ ಜೀವಶಾಸ್ತ್ರಜ್ಞ ಕೀನ್ಯಾದ ಸಂಬಾರು ಜನಾಂಗದ ಜೊತೆ 20 ವರ್ಷಗಳ ಕಾಲ ಬದುಕುತ್ತಾ ಅಧ್ಯಯನ ನಡೆಸಿ ವಿವಿಧ ವಿಚಾರಗಳನ್ನು ಹೊರಗೆಡಹಿದ್ದಾರೆ. ಬಹುಮುಖ್ಯವಾಗಿ ಹೆಚ್ಚೆಂದರೆ ಕುರುಚಲು, ಹುಲ್ಲು ಬೆಳೆಯಬಹುದಾದ ಫಲವತ್ತತೆವುಳ್ಳ ಮತ್ತು ಮಳೆಯನ್ನು ಪಡೆಯುವ ಪ್ರದೇಶದಲ್ಲೂ ಅದ್ಭುತವಾದ ಬದುಕನ್ನು ಹೈನುಗಾರಿಕೆಯಿಂದ ಸಂಬಾರು ಜನಾಂಗ ನಡೆಸುವ ಕುರಿತು ಬೆಳಕು ಚೆಲ್ಲಿದ್ದಾರೆ. ಇದು ಅವರ ಬದುಕಿನ ಛಲ ಮತ್ತು ಚಾಣಾಕ್ಷತೆ, ಇದರಿಂದ ಅವರು ತಮ್ಮ ಪರಿಸರವನ್ನು ಜತನದಿಂದ ಕಾಣುತ್ತಾರೆ. ಅಲ್ಲದೆ ತಮ್ಮ ಜ್ಞಾನದ ಪರಿಧಿಯೊಳಗೆ ಸುತ್ತಲ ಪರಿಸರದ ಸಂಗತಿಗಳನ್ನು ಪರಿಗಣಿಸುತ್ತಾ ಬದುಕು ನಡೆಸುತ್ತಾರೆ.


ಪಾಲ್ ರಾಬಿನ್‌ಸನ್ ಎಂಬ ಮತ್ತೋರ್ವ ಸಂಶೋಧಕ ಆಫ್ರಿಕಾದ 'ಗಾಬ್ರಾ' ಜನಾಂಗದ ಬರ ಕುರಿತ ಕಾಲಜ್ಞಾನವನ್ನು ದಾಖಲಿಸಿದ್ದಾರೆ. ತುಂಬ ಬರದ ಸಂಕಷ್ಟದಲ್ಲಿ ಬದುಕುವ ಈ ಜನಾಂಗವು ವಿಚಿತ್ರವಾದ ಬರದ ಚಕ್ರಗಳನ್ನು ಗುರುತಿಸಿದೆ. ಅಲ್ಲಿ 14, 35, 42, 63, 80 ಮತ್ತು 100 ವರ್ಷಗಳ ಬರದ ಚಕ್ರಗಳನ್ನು ಗುರುತಿಸಿ ತಮ್ಮ ಬದುಕಿನ ಆಶಯವನ್ನು ಕಟ್ಟುತ್ತಾರೆ. ಇವರಿಗೆ ನಿಸರ್ಗದ ಕ್ಯಾಲೆಂಡರ್‌ನ ವ್ಯವಸ್ಥಿತ ವಿಚಾರಗಳ ಬಗ್ಗೆ ನಿಖರವಾಗಿ ಮಾಹಿತಿಗಳಿರುವುದರಿಂದ ತಮ್ಮ ನಿರೀಕ್ಷೆಗಳನ್ನು ಕಟ್ಟುತ್ತಾರೆ.

ಪಾಲ್ ಸ್ಪೆನ್ಸರ್ ಎಂಬ ಮಾನವಶಾಸ್ತ್ರಜ್ಞ ಸಹ ಪರಿಸರದ ಕಾಲಜ್ಞಾನದ ಅರಿವನ್ನು ಸಂಬಾರು ಸಮುದಾಯದಲ್ಲಿ ಗುರುತಿಸಿದ್ದಾರೆ. ಅವರ ಅರಿವಿನಂತೆ ಮಾನವರ ತಮ್ಮ ಜೀವಿತಾವಧಿ (ಸುಮಾರು 75 ವರ್ಷ) ಯಲ್ಲಿ 3 ಬಾರಿ ಸಾಮಾನ್ಯವಾಗಿ ಬೀಳುವ ಮಳೆಗಿಂತ ಕಡಿಮೆ ಮಳೆಯನ್ನು ಕಾಣುತ್ತಾರಂತೆ. ಯಾವ ಬರವೂ 7 ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ಬಾರದು ಎಂಬುದು ಇವರ ತಿಳಿವಳಿಕೆ.

ಒಟ್ಟಿನಲ್ಲಿ ಅಲೆಮಾರಿಗಳ ಪರಿಸರ ಲೋಕದೃಷ್ಟಿಯು ಬರ ಮತ್ತು ಹಸಿವಿನ ವಿರುದ್ಧದ ಬದುಕಿನ ಆಶಯವಾಗಿರುತ್ತವೆ. ಎರಡು ಬರಗಳ ನಡುವಿನ ಬದುಕನ್ನು ಉಳಿಸಿಕೊಳ್ಳುವ ಛಲವುಳ್ಳವರಾಗಿರುವ ಅಲೆಮಾರಿಗಳು ನಿರಂತರ ಈ ಹೋರಾಟವನ್ನು ನಡೆಸಿದ್ದಾರೆ. ಅದಕ್ಕೆ ಬೇಕಾದ ತಯಾರಿಯನ್ನು ತಮ್ಮ ನಿಸರ್ಗದ ಕ್ಯಾಲೆಂಡರ್‌ನ ಅರಿವಿನ ಮೂಲಕ ನಡೆಸುತ್ತಾರೆ. ಬಹುಪಾಲು ಜಾಗತಿಕ ಅಲೆಮಾರಿ ಸಮುದಾಯಗಳು ಮಳೆಯ ವೈಪರೀತ್ಯ ಪ್ರದೇಶಗಳಲ್ಲೂ ಬದುಕನ್ನು ನಡೆಸುತ್ತಿದ್ದಾರೆ. ನಿಸರ್ಗದ ಕ್ಯಾಲೆಂಡರನ್ನು ಬದುಕಿನ ಭಾಗವಾಗಿಸಿಕೊಳ್ಳುವ ಅಲೆಮಾರಿ ಬದುಕು ಆಧುನಿಕ ಜಗತ್ತಿಗೆ ಒಂದು ಪಾಠ. ಹರಿವ ನೀರು ಹೇಗೆ ಪರಿಶುದ್ಧವೋ ಹಾಗೆ, ಅಲೆದಾಟದ ಮನುಷ್ಯ ಸಹ ಹೆಚ್ಚು ಆರೋಗ್ಯವಂತ. ಸೋಮಾರಿತನ, ಅಲಸ್ಯದ ಆಧುನಿಕ ಜೀವನಕ್ರಮವು ಅನೇಕ ಬಗೆಯ ಆರೋಗ್ಯ ಬದಲಾವಣೆಗಳನ್ನು ತಂದಿದೆ. ಈ ಬದಲಾವಣೆಗಳೆಲ್ಲಾ ನಿಸರ್ಗ ವಿರೋಧಿ ಜೀವನ ಕ್ರಮದ ಬಳುವಳಿಯಾಗಿದ್ದು ಅನಾರೋಗ್ಯಕರ ಲಕ್ಷಣವಾಗಿದೆ.

ರಾಬರ್ಟ್ ಮಾರ್ಶಮ್ ಸಹ 89 ವರ್ಷಗಳ ತುಂಬು ಜೀವನವನ್ನು ನಡೆಸಿದ್ದರು. ಕೊನೆಯ ದಿನಗಳವರೆಗೂ ತೋಟದ ಜವಾಬ್ದಾರಿ ಕೆಲಸಗಳಿಂದ ದೂರವಾದವರಲ್ಲ. ಅವರ ಸಹೋದರಿ ಸಹ 92 ವರ್ಷಗಳ ಕಾಲ ಬದುಕು ನಡೆಸಿದವರು. ನಿಸರ್ಗದೆಡೆಗೆ ನಮ್ಮ ಸಣ್ಣಪುಟ್ಟ ಕುತೂಹಲಗಳು ನಮ್ಮನ್ನು ನಿರಂತರವಾಗಿ ನೆಮ್ಮದಿಯಲ್ಲಿಡಬಲ್ಲವು. ದಿನವೂ ನಮ್ಮ ವಾಕಿಂಗ್ ಪಥದಲ್ಲಿನ ಪುಟ್ಟ ಪುಟ್ಟ ಬದಲಾವಣೆಗಳ ಅನುಭವಿಸುತ್ತಾ ಆನಂದಿಸುವ ಮೋಜಿಗೆ ಅಪಾರ ಶಕ್ತಿಯಿದೆ. ಅದರಲ್ಲೂ ಒಂಟಿಯಾಗಿ ನಡೆದಾಡುವ ಧ್ಯಾನಸ್ಥ ಚಲನೆಯಲ್ಲಿ ಮನಸ್ಸಿನಲ್ಲಿ ಸುಳಿದಾಡುವ ಸಂಗತಿಗಳಿಗೂ ನಮ್ಮ ಸಂತೃಪ್ತಿಯೆಡೆಗೆ ಕೊಂಡೊಯ್ಯುವ ಸಾಧ್ಯತೆ ಇದೆ. ಒಮ್ಮೆ ಒಬ್ಬ ಹೈಸ್ಕೂಲಿನ ವಿದ್ಯಾರ್ಥಿ ಹೇಳುತ್ತಿದ್ದ: "ನಿಸರ್ಗ ನಿಧಾನ ನಿಜ ಆದರೆ ತುಂಬಾ ಜಾಣ!"

ಯೋಗೇಶ್ ಮಾಸ್ಟರ್



ಪ್ರೇತಕಾಂಡಕ್ಕೆ ಮುನ್ನುಡಿ

ಸಮುದಾಯಗಳ ಜೊತೆಗೇ ವ್ಯಕ್ತಿಯು ಗಾಢವಾಗಿ ಗುರುತಿಸಿಕೊಳ್ಳುವುದರಿಂದ, ಆಯಾ ವ್ಯಕ್ತಿಯು ಕಥೆಗಳನ್ನು, ಐತಿಹ್ಯಗಳನ್ನು ಹೇಳುವಾಗ ತನ್ನ ಸಮುದಾಯದ ಹಿಂದಿನ ಪರಂಪರೆಯನ್ನೋ, ಸದ್ಯದ ಸಂಸ್ಕಾರ ಮತ್ತು ಸಂಸ್ಕೃತಿಗಳನ್ನೋ ಅಥವಾ ಸಾಮಾಜಿಕ ವ್ಯವಸ್ಥೆಯ ವಿದ್ಯಮಾನಗಳನ್ನೋ ತನ್ನ ನಿರೂಪಣೆಯಲ್ಲಿ ಹರಿಯಬಿಡುತ್ತಾನೆ. ಅದು ಕೆಲವೊಮ್ಮೆ ವಿಸ್ಮೃತಿಯಲ್ಲಿದ್ದು ಪರೋಕ್ಷವಾಗಿ ಬಂದಿದ್ದಿರಬಹುದು, ಕೆಲವೊಮ್ಮೆ ಪ್ರತ್ಯಕ್ಷವಾಗಿಯೇ ಅದನ್ನು ಉಲ್ಲೇಖಿಸಬಹುದು. ಏನೇ ಆದರೂ ಅವರು ನಿರೂಪಿಸುವಂಥಾ ವಿಷಯಗಳಲ್ಲಿ ಅನೇಕ ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ವಿಚಾರಗಳು ಸೂಕ್ಷ್ಮ ರೀತಿಯಲ್ಲಿ ತೆರೆದುಕೊಳ್ಳುತ್ತಾ ಹೋಗುತ್ತವೆ. ಆದರೆ ಈ ಪೌರಾಣಿಕವಾದಂತಹ ಕಥನಗಳು ಮತ್ತು ವಿಚಾರಗಳು ನಮ್ಮ ಕಾಲದ ಹೊತ್ತಿಗೆ ಇನ್ನೊಂದು ಮುಖವನ್ನೂ ಪಡೆದುಕೊಂಡು ಸವಾಲಾಗಿ ನಿಂತು ಬಿಟ್ಟಿದೆ. ಅದು ಭೌತ ವಿಜ್ಞಾನದ ವಿಷಯಗಳೊಂದಿಗೆ ಮಿಳಿತವಾಗಿರುವಂತಹ ಆಧ್ಯಾತ್ಮಿಕ ಮತ್ತು ಪೌರಾಣಿಕ ವಿಷಯಗಳು.

ಆಧ್ಯಾತ್ಮ ವಿಜ್ಞಾನ, ಪುರಾಣ ತಂತ್ರಜ್ಞಾನ

ಈಗಿನ ಅಧ್ಯಾತ್ಮ ಪ್ರವಚಕರಿಗೆ ಮತ್ತು ಪುರಾಣ ಕಥಾ ನಿರೂಪಕರಿಗೆ ಭೌತಶಾಸ್ತ್ರದ ಅಣು, ಕಣ, ಕಂಪನ, ಎಲೆಕ್ಟ್ರಾನು, ಪ್ರೋಟಾನು, ನ್ಯೂಟ್ರಾನುಗಳು ಮತ್ತು ತರಂಗ ವಿಜ್ಞಾನದ ಪರಿಚಯವಾಗಿ ಈಗಿನ ಶಾಲೆಕಾಲೇಜಿಗೆ ಹೋಗಿ ಬಂದಿರುವವರಿಗೆ ಹೆಚ್ಚು ಅರ್ಥವಾಗುವಾಗುವಂತೆ ಅಥವಾ ಮನವೊಲಿಸುವಂತೆ ಕಥೆಗಳನ್ನು ಕಟ್ಟಲು ಸಾಧ್ಯ ಮಾಡಿಕೊಂಡಿದ್ದಾರೆ. ವಿಜ್ಞಾನ ಕಲಿತ ಅಥವಾ ವೈಜ್ಞಾನಿಕ ವಿಷಯಗಳ ಪರಿಚಯವಿರುವ ಪೀಳಿಗೆಗೆ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರೆಂದರೆ ನಥಿಂಗ್ ಬಟ್ ಪ್ರೋಟಾನ್, ನ್ಯೂಟ್ರಾನ್ ಮತ್ತು ಎಲೆಕ್ಟ್ರಾನ್ ಅಂತ ಅಂದರೆ ಜಿಜ್ಞಾಸು ಭಾವದಲ್ಲಾದರೂ ಕೇಳಿಕೊಳ್ಳುತ್ತಾರೆ. ಹಾಗಾಗಿಯೇ ಇಂದಿನ ದಿನ ಹೆಚ್ಚು ಹೆಚ್ಚು ವಿದ್ಯಾವಂತರು, ವಿಜ್ಞಾನ ಪದವೀಧರರೂ ವಿಜ್ಞಾನಿಗಳಾಗುವ ಬದಲು ಹೆಚ್ಚು ಹೆಚ್ಚು ಯಾವುದ್ಯಾವುದೋ ಶ್ರೀ ಶ್ರೀ ಶ್ರೀಗಳ ಶಿಷ್ಯರಾಗುತ್ತಿದ್ದಾರೆ. ಕಾಲೇಜುಗಳಿಗೆ ಹೋಗಿ ಕಲಿತಿರುವ ನಮ್ಮ ಪೀಳಿಗೆಯ ಎಲ್ಲಾ ಗುರುಗಳೂ ವಿಜ್ಞಾನ ಮತ್ತು ಆಧ್ಯಾತ್ಮಗಳಿಗೆ ಸಮೀಕರಣ ಮಾಡುವುದನ್ನು ಚೆನ್ನಾಗಿಯೇ ಕಲಿತಿದ್ದಾರೆ. ವಿಜ್ಞಾನವೂ ಕೂಡ ಮೌಢ್ಯಕ್ಕೆ ದಾರಿಮಾಡಿಕೊಡುವ ಅಥವಾ ತಮ್ಮ ಪರಂಪರಾನುಗತ ವಿಚಾರಧಾರೆಗಳನ್ನು ಕಾಲಕ್ಕೆ ತಕ್ಕಂತೆ ನಿರೂಪಿಸುತ್ತಾ ಜೀವಂತವಾಗಿಟ್ಟುಕೊಂಡಿರುವ ಕೆಲಸಗಳು ನಡೆಯುತ್ತಿವೆ.

ಭಾರತ ಮತ್ತು ಇತರ ಪಾಶ್ಚಾತ್ಯ ದೇಶಗಳಲ್ಲಿಯೂ ಇಂಥಾ ಪ್ರಭಾವಕ್ಕೆ ಒಳಗಾಗುತ್ತಿರುವುದು ವಿಜ್ಞಾನವೂ ಆಧ್ಯಾತ್ಮದ ಜೊತೆಗೆ ಸೇರಿರುವುದರಿಂದ.

ಅಧ್ಯಾತ್ಮದ ವಿಷಯಗಳ ನಿರೂಪಣೆಯಾಗುವಾಗ ಭೌತವಿಜ್ಞಾನದ ನೆರವಾದರೆ, ಪುರಾಣಗಳ ಕಥೆಗಳನ್ನು ಹೇಳುವಾಗ ವಿವರಣಾತೀತವಾದ ಸತ್ಯದ ಸಂಕೇತ ಎಂದು ಮುಂದಿನ ಅಧ್ಯಯನಕ್ಕೆ ತೆಗೆದಿರಿಸಿಬಿಡುತ್ತಾರೆ. ಹಾಗಾಗಿ ಆ ಪುರಾಣದ ಕಥೆಗಳನ್ನು ಈ ಶಿಷ್ಯ ಪೀಳಿಗೆಗೆ ಒಪ್ಪಲಾಗದಿದ್ದರೂ, ತಿರಸ್ಕರಿಸುವುದೇ ಒಂದು ಪಕ್ಕದಲ್ಲಿಟ್ಟಿರುತ್ತಾರೆ. ಹಾಗೆಯೇ ಇನ್ನೂ ಒಂದು ಬಹಳ ಸೂಕ್ಷ್ಮವಾದ ವಿಜ್ಞಾನವನ್ನೂ ಆಧ್ಯಾತ್ಮ ಪ್ರವಚಕರು ಮತ್ತು ದೇವರು ಅಥವಾ ಪ್ರೇತದ ಬಗ್ಗೆ ಮಾತಾಡುವ ಅತಿಭೌತ ವಿಜ್ಞಾನಿಗಳು ಗಮನಿಸುವುದ್ಯಾವುದೆಂದರೆ, ಅದು ಮನಶಾಸ್ತ್ರ.

ಮನಶಾಸ್ತ್ರದ ಬಗ್ಗೆ ನೇರವಾಗಿ ಅಧ್ಯಯನ ಅಥವಾ ಅಭ್ಯಾಸ ಮಾಡದಿದ್ದರೂ, ಮನುಷ್ಯರ ಮತ್ತು ಅವರ ಮಾನಸಿಕ ಸ್ಥಿತಿಗತಿಗಳ ಬಗ್ಗೆ ನಿರಂತರವಾಗಿ ಸಂಪರ್ಕದಲ್ಲಿರುವ ಕಾರಣದಿಂದ ಸಹಜ ಅನುಭವದ ಆಧಾರದಲ್ಲಿ ಅದು ಚಾಲ್ತಿಯಲ್ಲಿದೆ.


ಅದಕಾರಣದಿಂದಲೇ ವಿಜ್ಞಾನ ಕಲಿತ ವಿದ್ಯಾವಂತರೂ, ತಾಂತ್ರಿಕವಾಗಿ ಪರಿಣಿತರಾಗಿರುವಂತ ಮೇಧಾವಿಗಳೂ, ಹೆಚ್ಚಿನ ಮಟ್ಟದ ವಿಚಾರವಾದಿಗಳೂ ಕೂಡ ಪರಮಹಂಸ ಯೋಗಾನಂದರ ಯೋಗಿಯ ಆತ್ಮಕಥೆಯನ್ನೂ, ಸ್ವಾಮಿ ರಾಮರ ಹಿಮಾಚಲದ ಮಹಾತ್ಮರ ಸನ್ನಿಧಿಯಲ್ಲಿ, ಸ್ವಾಮಿ ರಾಮತೀರ್ಥರ ಪರಮಾತ್ಮಾನುಭವದ ಮಹಾರಣ್ಯಗಳಲ್ಲಿ ಪುಸ್ತಕಗಳನ್ನು ಆರಾಧಿಸುತ್ತಾರೆ. ಇವು ಅಧ್ಯಯನಗಳಿಗೆ ಯೋಗ್ಯವಾಗಿದ್ದರೂ ಕೂಡ ಭಾವಪರವಶತೆಯ ಆರಾಧನೆಯು ವಿಜ್ಞಾನದ ಸಹಾಯದಿಂದ ಅಪ್ರಾಮಾಣಿಕವಾದಂತಹ ಶ್ರದ್ಧೆ ನಂಬುಗೆಗಳ ಕ್ಷೇತ್ರಕ್ಕೆ ಇವು ತಳ್ಳುವ ಆತಂಕಗಳೂ, ಹಾಗಾಗಿರುವಂತಹ ವಿದ್ಯಮಾನಗಳೂ ನಮ್ಮ ಮುಂದೆ ಉದಾಹರಣೆಗಳಾಗಿವೆ.

ಜೊತೆಗೆ ಈಗಿನ ವಿಜ್ಞಾನವೇ ಸಾಮಾನ್ಯ ಕಣ್ಣಿಗೆ ಅಥವಾ ಸ್ಥೂಲ ಗ್ರಹಿಕೆಗೆ ಎಟುಕಲಾರದಂತಹ ಅಚ್ಚರಿಗಳನ್ನು ಉಂಟುಮಾಡುತ್ತಿರುವಾಗ ಪುರಾಣದ ಮತ್ತು ಅಧ್ಯಾತ್ಮದ ಅಚ್ಚರಿಗಳನ್ನು ನಿರಾಕರಿಸಲು ಸಾಮಾನ್ಯ ಜನರಿಗೆ ಆಗದು. ಅದನ್ನು ಬಂಡವಾಳ ಮಾಡಿಕೊಂಡೇ ಗಣೇಶನ ತಲೆ ಕತ್ತರಿಸಿದ ಕಥೆಯನ್ನು ಪ್ಲಾಸ್ಟಿಕ್ ಸರ್ಜರಿಗೆ, ಏರೋಪ್ಲೇನನ್ನು ಪುಷ್ಪಕವಿಮಾನಕ್ಕೆ ಸಮೀಕರಿಸಲಿಕ್ಕೆ ಮುಂದಾಗುವ ಜನರಿರುವುದು. ಹಾಗೆಯೇ ಏರೋಪ್ಲೇನ್ ಮತ್ತು ಪುಷ್ಪಕವಿಮಾನದ ಕಥೆಗಳನ್ನು ಹೇಳುವವರೂ ಮತ್ತು ಕೇಳುವವರೂ ವಿದ್ಯಾವಂತರೇ ಆಗಿರುವುದು.

ಇರಲಿ, ಈ ದೇವರು, ದೇವತೆ, ದೇವ, ದೇವಿ, ಅಧಿದೇವತೆ, ದೈವ, ಭೂತ, ದೆವ್ವ, ಬ್ರಹ್ಮರಾಕ್ಷಸ, ಪ್ರೇತ ಇತ್ಯಾದಿಗಳೆಲ್ಲಾ ಸಾಲುಗಟ್ಟುವಾಗ ಹೊರನೋಟಕ್ಕೆ ಒಳ್ಳೆಯದಕ್ಕೆಲ್ಲಾ ದೇವರು ಎಂಬ ಸಾತ್ವಿಕ ವಿಭಾಗವನ್ನೂ, ಕೆಟ್ಟದಕ್ಕೆಲ್ಲಾ ದೆವ್ವ ಅಥವಾ ಭೂತ ಎಂಬ ನಕಾರಾತ್ಮಕವಾದ ವಿಭಜನೆಯನ್ನೂ ಸ್ಥೂಲ ಮಾಡುವ ಪದ್ಧತಿಯಿದೆ.

ದೇವರು ಎಂಬುದು ಭೌತಿಕವಾಗಿ ಎಂದಿಗೂ ಇಲ್ಲದ ಆದರೆ ಶುದ್ಧ ಪರಿಕಲ್ಪನೆಯೇ ಮಾತ್ರವಾಗಿರುವಂತೆ ದೆವ್ವವೂ ಕೂಡ ಒಂದು ಪರಿಕಲ್ಪನೆಯೇ ಆಗಿದೆ.





ಅಧ್ಯಾತ್ಮದ ಅಥವಾ ಪುರಾಣಗಳ ರಹಸ್ಯಗಳ ಕುರಿತು ಮಾತಾಡುವಾಗ, ಅಂಡಾಂಡ, ಪಿಂಡಾಂಡ ಮತ್ತು ಬ್ರಹ್ಮಾಂಡಗಳನ್ನು ವಿವರಿಸುವಾಗ ಭೌತವಿಜ್ಞಾನದ ಖಗೋಳ ಶಾಸ್ತ್ರದ ನೆರವನ್ನು ತೆಗೆದುಕೊಳ್ಳುವಂತೆ, ವರ, ಶಾಪ ಇತ್ಯಾದಿಗಳ ಪ್ರಭಾವಗಳನ್ನು ವಿವರಿಸುವಾಗ ಅದೇ ಭೌತ ವಿಜ್ಞಾನದ ಕಂಪನ (ತರಂಗ) ಶಾಸ್ತ್ರಗಳನ್ನು ನೆರವಿಗೆ ತೆಗೆದುಕೊಳ್ಳಲಾಗುತ್ತದೆ. ಅಶರೀರವಾಣಿ ಅಥವಾ ಆಕಾಶವಾಣಿ, ಒಬ್ಬರು ಮತ್ತೊಬ್ಬರೊಡನೆ ಅಭೌತಿಕವಾಗಿ ಸಂವಹನ ನಡೆಸಿದರು ಎಂಬುದನ್ನು ಹೇಳುವಾಗ ಶಬ್ದ ತರಂಗಗಳ ವಿಜ್ಞಾನ ಮತ್ತು ಅದರ ಉತ್ಪನ್ನಗಳನ್ನು ಉಪಯೋಗಿಸುತ್ತಿರುವ ಉದಾಹರಣೆಗಳ ಮೂಲಕ ವಿವರಿಸಲಾಗುತ್ತದೆ.

ನಮ್ಮ ಸುತ್ತಲೂ ಶಬ್ದ ತರಂಗಗಳಿದ್ದು, ನಮ್ಮ ಕೈಯಲ್ಲಿರುವ ಟ್ರಾನ್ಸಿಸ್ಟರ್ ಮೂಲಕ ಟ್ಯೂನ್ ಮಾಡಿಕೊಂಡಾಗ ಖಾಲಿ ಎಂದು ಭಾವಿಸಿರಬಹುದಾದ ಅವಕಾಶದಲ್ಲಿ ರೇಡಿಯೋ ಪ್ರಸಾರವನ್ನು ಕೇಳುವ ಉದಾಹರಣೆ, ವಿಜ್ಞಾನ ಕಲಿತ ವ್ಯಕ್ತಿಗೆ ಸಹಜವಾಗಿ ಒಪ್ಪಿಕೊಳ್ಳಲಾಗುತ್ತದೆ.



ಭೂತಶಾಸ್ತ್ರ

ದೇವರು, ಅಧ್ಯಾತ್ಮ ಇತ್ಯಾದಿಗಳನ್ನು ಈ ರೀತಿಯಾಗಿ ಹೇಳುತ್ತಾಬಂದಂತೆ, ಭೂತ ಮತ್ತು ಪ್ರೇತಗಳನ್ನು ವಿವರಿಸುವಾಗ ಮನಶಾಸ್ತ್ರದ ನೆರವನ್ನೂ ತೆಗೆದುಕೊಳ್ಳಲಾಗುತ್ತದೆ. ದೆವ್ವ ಹಿಡಿಯುವುದು ಅಥವಾ ಪ್ರೇತಬಾಧೆ ಎಂಬುದೆಲ್ಲಾ ಒಂದು ಬಗೆಯ ಮಾನಸಿಕ ಸ್ಥಿತಿಯ ಪಲ್ಲಟಗಳು ಎಂದೋ ಅಥವಾ ಮನೋರೋಗವೆಂದೋ ಎಂದು ಹೇಳುವ ಬಗೆಯಲ್ಲ ಇದು. ಬದಲಿಗೆ ಪ್ರೇತಗಳು ಮತ್ತು ಭೂತಗಳು ಎಷ್ಟು ನಿಜ ಎಂಬುದನ್ನು ಸೂಕ್ಷ್ಮ ಮನಸ್ಥಿತಿಯನ್ನು ಮನಶಾಸ್ತ್ರದ ಆಧಾರದ ಮೇಲೆ ವಿವರಿಸುವುದು. ಇದರ ಜೊತೆಗೆ ಭೌತ ವಿಜ್ಞಾನದ ತರಂಗ ಶಾಸ್ತ್ರವೂ ಸೇರುತ್ತದೆ.

ಇರುವ ವಿಷಯಗಳನ್ನು ಹೊಸದಾಗಿ ಅರ್ಥೈಸಬೇಕೆಂದರೂ ಪ್ರಚಲಿತದಲ್ಲಿರುವ ವಿಜ್ಞಾನದ ಯಾವುದಾದರೂ ಶಾಖೆಗಳ ನೆರವನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಎಲ್ಲರಿಗೂ ಇದ್ದೇ ಇದೆ.

ಜ್ಞಾನದೇವನ ಸಮಕಾಲಿನ ಚಾಂಗದೇವನ ವೃತ್ತಾಂತದಲ್ಲಿ ಪ್ರೇತಗಳ ಉಲ್ಲೇಖವಿರುವುದರಿಂದ ಇಷ್ಟು ಹೇಳಬೇಕಾಯ್ತು. ಏಸುವು ದೆವ್ವಗಳನ್ನು ಬಿಡಿಸುವ ಸಂಗತಿಗಳು ಬೈಬಲ್ಲಿನಲ್ಲಿ ಪ್ರಸ್ತಾಪವಾಗಿವೆ. ಗರುಡ ಪುರಾಣದಲ್ಲಿ ಪ್ರೇತಕಾಂಡವೆಂದೇ ಇರುವುದರ ವಿಚಾರಗಳ ಪ್ರಸ್ತಾಪವೂ ಮುಖ್ಯವಾದರೂ, ಈ ಪೀಳಿಗೆಗಳ ಜೊತೆ ಪ್ರೇತಗಳ ಬಗ್ಗೆ ಮಾತಾಡುವ ಅಗತ್ಯತೆ ತೀರಾ ಇದೆ. ಈ ಇತ್ತೀಚೆಗೆ ನಾನು ಭೇಟಿಯಾದ ವಿಚಾರವಾದಿ ಹಿರಿಯರೊಬ್ಬರು ಕೂಡ ಪ್ರೇತಗಳ ಕುರಿತು ಪ್ರಾಯೋಗಿಕ ಪ್ರಾಜ್ಞರ ಹಾಗೆ ಮಾತಾಡಿದ್ದರು. ಅವರು ಪ್ರೇತಗಳು ಇವೆಯೆಂದೂ ಮತ್ತು ಅವುಗಳೊಡನೆ ತಾವು ಸಂಪರ್ಕ ಸಾಧಿಸಬಲ್ಲೆವೆಂದೂ ಸ್ಪಷ್ಟವಾಗಿ ಹೇಳಿದರು. ಹಿರಿಯರಾದ ಅವರು ಹೇಳುವುದನ್ನೆಲ್ಲಾ ಮರು ಮಾತಾಡದೇ ಕೇಳಿಕೊಂಡ ಮೇಲೆ ಪ್ರೇತಗಳ ಕುರಿತಂತೆ ಹಲವಾರು ವಿಷಯಗಳು ಮಾರ್ಗಮಧ್ಯದಲ್ಲಿ ಸಂಧಿಸತೊಡಗಿದವು. ಅವುಗಳಲ್ಲಿ ಜ್ಞಾನೇಶ್ವರನ ಚರಿತ್ರೆಯಲ್ಲಿಯೇ ಚಾಂಗದೇವನ ವೃತ್ತಾಂತ.

ಮರುದ್ಗಣ ಚಾಂಗದೇವ

ಜ್ಞಾನದೇವನ ಜ್ಞಾನ ಮತ್ತು ಆಧ್ಯಾತ್ಮಿಕ ಪ್ರಜ್ಞೆಯು ಜನರಿಗೆ ಪರಿಚಿತವಾದ ಮೇಲೆ, ಆತನು ಒಬ್ಬ ಪವಾಡ ಪುರುಷನೆಂದು ಮನಗಾಣತೊಡಗಿದ ನಂತರ ಆತನ ಮೇಲೆ ಮತ್ತು ಆತನ ತಂಡದ ಮೇಲೆ ಮೊದಲಿನಂತೆ ನಡೆಯುತ್ತಿದ್ದ ನೇರ ಆಕ್ರಮಣಗಳು ನಿಂತವು. ಅದೇ ರೀತಿ ಆತನನ್ನು ವೈಭವೀಕರಿಸುವ ಪ್ರಯತ್ನಗಳೂ ಅಭಿಮಾನಿಗಳಿಂದ ನಡೆದಿರಬೇಕು. ಅದು ಬದುಕಿದ್ದಾಗಲೇ ಆಯಿತೋ ಅಥವಾ ಸತ್ತ ಮೇಲೆ ಆಯಿತೋ. ಆದರೆ, ಆತನ ಸಮಕಾಲೀನ ಎನ್ನಲಾದ ಚಾಂಗದೇವನ ಮುಖಾಮುಖಿ ಯಾದ ಪ್ರಸ್ತಾಪವು ಬಹಳ ಮುಖ್ಯವಾಗಿ ಕಾಣುತ್ತದೆ.

ಯೋಗ ಸಾಮರ್ಥ್ಯವುಳ್ಳ, ಆಧ್ಯಾತ್ಮ ವರ್ಚಸ್ಸಿನ ಬಹುದೊಡ್ಡ ಸಾಧಕನಾಗಿದ್ದ ಚಾಂಗದೇವ ಹದಿನಾಲ್ಕು ನೂರು ವರ್ಷಗಳ ಕಾಲ ಬದುಕಿದ್ದ ಎಂದು ಹೇಳುತ್ತಾರೆ. ಅದೇನೇ ಇರಲಿ, ಆತನೇ ಅಷ್ಟು ವರ್ಷ ಬದುಕಿದ್ದ ಎನ್ನುವುದಕ್ಕಿಂತ ಆ ಗುರುಪರಂಪರೆಯು ಅಷ್ಟು ವರ್ಷ ಹಿನ್ನೆಲೆ ಇತ್ತೆಂದಾದರೂ ಗ್ರಹಿಸಬಹುದು. ಆದರೆ ಚಾಂಗದೇವನಿಗೆ ಗುರುಬೋಧೆ ಯಾಗಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಯಾವ ಗುರುಪರಂಪರೆಗೂ ಸೇರಿದವರೇನಲ್ಲ. ಆದರೆ ಆತ ಬಹು ದೊಡ್ಡ ಖ್ಯಾತಿಯನ್ನು ಗಳಿಸಿದ್ದಂತೂ ನಿಜ. ಭೂಲೋಕದಲ್ಲಿ ಅವತರಿಸಿದ ಮರುದ್ಗಣ ಎಂದೇ ಆತನನ್ನು ಕರೆಯುತ್ತಿದ್ದರು. ಮಹಾರಾಷ್ಟ್ರದ ಪುಣತಾಂಬೆ ಎಂಬ ಊರಿನಲ್ಲಿದ್ದ ಅವರು ತಾಪಿ ನದಿ ದಂಡೆಯ ಮೇಲೆ ಮೊದಲ ಬಾರಿಗೆ ಕಣ್ಣಿಗೆ ಬಿದ್ದರು. ಅವರ ಹಿಂದಿನ ವೃತ್ತಾಂತವೇನೂ ಅಷ್ಟು ತಿಳಿಯದ ಜನ ಹೇಗೆ ಹದಿನಾಲ್ಕು ನೂರು ವರ್ಷಗಳ ಆಯಸ್ಸಿನ ಸಾಧಕನೆಂದು ಕರೆದರೋ ತಿಳಿಯದು. ಶಿರಡಿ ಸಾಯಿಬಾಬಾನ ಹಿನ್ನೆಲೆಯೂ ಜನರಿಗೆ ತಿಳಿದಿರಲಿಲ್ಲ, ಅಲ್ಲಿ ಇಲ್ಲಿ ಅಲೆಯುತ್ತಾ ಬಂದವರು ದ್ವಾರಕಾಮಾಯಿಯಲ್ಲಿ ನೆಲೆ ನಿಂತ ಮೇಲೆ ಅವರ ಬಗ್ಗೆ ಜನರಿಗೆ ತಿಳಿಯಿತು ಮತ್ತು ಒಮ್ಮೆ ಹೆಚ್ಚು ಜನರಿಗೆ ಪರಿಚಿತರಾದ ಸ್ಥಳದಲ್ಲಿಯೇ ನೆಲೆ ನಿಂತರು. ಅದೇ ರೀತಿಯೇ



ಚಾಂಗದೇವರೂ ಕೂಡ ಪುಣತಾಂಬೆಯಲ್ಲಿ ನೆಲೆ ನಿಂತವರು. ಅವರ ರೂಪ ಲಾವಣ್ಯಕ್ಕೆ ಬೆರಗಾಗಿಯೇ ಜನರು ಚಾಂಗದೇವ ಎಂದು ಕರೆಯುತ್ತಿದ್ದರಂತೆ. ಹಾಗಾಗಿ ಅವರ ನಿಜವಾದ ಹೆಸರೂ ತಿಳಿಯದು. ತಮ್ಮ ಯೋಗಬಲದಿಂದ ಸಿದ್ಧಿಯನ್ನು ಹೊಂದುತ್ತಾ ಸಮಾಧಿಸ್ಥರಾಗಿ ಕೂರುತ್ತಾ ಬಂದು ಮೃತ್ಯುವನ್ನು ತಪ್ಪಿಸಿಕೊಂಡು ಹದಿನಾಲ್ಕು ನೂರು ವರ್ಷಗಳತನಕ ಜೀವಿಸಿದ್ದರು ಎಂದು ವ್ಯಕ್ತಿಪುರಾಣವು ಹೇಳುತ್ತದೆ.


ಭಾರತೀಯ ಯೋಗ ಪದ್ಧತಿಯ ಅತಿ ವೈಭವೀಕರಿಸುವ ವಿದ್ವಾಂಸರು ಯೇಸುವಿನ ಕುರಿತೂ ಈ ಬಗೆಯ ಆರೋಪವನ್ನು ಮಾಡುತ್ತಾರೆ. ಯೇಸುವು ಕುರಿತು ಬೈಬಲ್ ಮೌನ ತಾಳುವ ಅವನ ಯೌವನ ಕಾಲದಲ್ಲಿ ಆತ ಭಾರತಕ್ಕೆ ಬಂದಿದ್ದು ಯೋಗ ಸಾಧನೆಗಳನ್ನು ಮಾಡಿ ಅನೇಕ ಸಿದ್ಧಿಗಳನ್ನು ಪಡೆದು ಹೋಗಿದ್ದನಂತೆ. ಅದರಿಂದಲೇ ಆತನಿಗೆ ನೀರಿನ ಮೇಲೆ ನಡೆಯಲು ಆಗಿದ್ದು ಮಾತ್ರವಲ್ಲದೇ ತಾನು ಶಿಲುಬೆಗೆ ಏರಿದಾಗ ಪ್ರಾಣ ಬಿಟ್ಟು (ಬಿಟ್ಟಂತೆ ಮಾಡಿ) ನಂತರ ಸಮಾಧಿಗಿಳಿಸಿದಾಗ ಮತ್ತೆ ಎದ್ದು ಸಮಾಧಿಯ ಕಲ್ಲನ್ನು ತೆಗೆದುಕೊಂಡು ಹೊರಗೆ ಬಂದನಂತೆ. ನಂತರ ಅಲ್ಲಿಂದ ಹೊರಟು ತನಗೆ ಯೋಗಸಿದ್ಧಿಯಾದ ಭಾರತಕ್ಕೇ ಬಂದು ಬೌದ್ಧ ಬಿಕ್ಕುಗಳ ಜೊತೆ ತನ್ನ ಉಳಿದ ಜೀವಮಾನ ಅವರಂತೆಯೇ ಧ್ಯಾನ ಸಾಧನೆಯಲ್ಲಿ ಕಳೆದನಂತೆ. ಕಾಶ್ಮೀರದಲ್ಲೋ, ಹಿಮಾಲಯದ ಮತ್ತೆಲ್ಲೋ ಆತನ ಸಮಾಧಿ ಇದೆಯೆಂದೂ ತೋರಿಸುವ ಮಂದಿ ಇದ್ದಾರಂತೆ. ಇರಲಿ, ಅದರ ಬಗ್ಗೆ ಮುಂದೆ ನೋಡುವ.

ಇತ್ತ ಪುಣತಾಂಬೆಯಲ್ಲಿ ಚಾಂಗದೇವ ಮಹಾಸಮಾಧಿ ಹಚ್ಚಿ ಕೂರುತ್ತಿದ್ದರೆ ಅವರ ಸುತ್ತಲೂ ಅನೇಕ ಪ್ರೇತಗಳು ಇರುತ್ತಿದ್ದವಂತೆ. ಅವುಗಳೋ ಅವರಿಗಾಗಿ ಕಾಯುತ್ತಾ ಕುಳಿತಿದ್ದವಂತೆ. ಚಾಂಗದೇವ ಸಮಾಧಿಯಿಂದ ಎದ್ದಮೇಲೆ "ಎಲ್ರೈ, ಅಲ್ಲಿ ಯಾರಾದರೂ ಇದ್ದೀರಾ?" ಎಂದು ಕೇಳಿದರೆ ಸುತ್ತಮುತ್ತಲಿನ ಪ್ರೇತಗಳು "ನಾವು ಇಲ್ಲಿದ್ದೇವೆ" ಎಂದು ಎದ್ದು ನಿಲ್ಲುತ್ತಿದ್ದವಂತೆ.

ಆ ಪ್ರೇತಗಳು ಅಲ್ಲಿ ಇದ್ದ ಕಾರಣವಾದರೂ ಏನೆಂದರೆ ಮುಕ್ತಿಯ ಕಾರಣಕ್ಕಾಗಿ.

ಜೀವಂತವಾಗಿರುವ ವ್ಯಕ್ತಿಯಲ್ಲಿ ಇರುವಂತಹ ಚೈತನ್ಯಕ್ಕೆ ಆತ್ಮ ಎಂದು ಗುರುತಿಸುವ ಸಂಪ್ರದಾಯವು ಅದಕ್ಕೆ ಹುಟ್ಟಿಲ್ಲ ಸಾವಿಲ್ಲ ಎಂದೂ, ಅದಕ್ಕೆ ಗಂಡು ಹೆಣ್ಣೆಂಬ ಲಿಂಗ ಭೇದವಿಲ್ಲ ಎಂದೂ ಪರಮಾತ್ಮನಿಗೆ ಆರೋಪಿಸಿದಂತಹ ಗುಣಗಳನ್ನು ಆರೋಪಿಸಿದರೂ ಅದೇ ಪರಮಾತ್ಮನಂತೆ ಸರ್ವಾಂತರ್ಯಾಮಿಯಲ್ಲ, ಸರ್ವಶಕ್ತವಲ್ಲ. ಆದರೆ ಆತ್ಮವೂ ಕೂಡ ಅನಾದಿ ಮತ್ತು ಅನಂತ. ಆದರೆ ಅವುಗಳ ಸ್ಥಾನಮಾನ ಬಹಳ ಸೀಮಿತವಾಗಿರುವವು. ಯಾವುದೋ ಅದೃಶ್ಯ ಬಿಂದುವಿನಲ್ಲಿ ಕೇಂದ್ರೀಕೃತವಾಗಿರುವವು. ಅವು ದೇಹದಿಂದ ದೇಹಕ್ಕೆ ಅವರ ಕರ್ಮಾನುಸಾರ ಹೋಗುತ್ತಿರುವವು. ಒಂದು ವೇಳೆ ಏನಾದ್ರೂ ಆದರೆ ಪ್ರೇತಾತ್ಮಗಳಾಗಿ ಉಳಿದು ಬಿಡುವವು. ಇಲ್ಲವಾದರೆ ಮುಂದಿನ ಪಯಣ ಸಾಗಿಸುವವು. ಅತಿ ಪುಣ್ಯ ಕೆಲಸಗಳನ್ನು ಮಾಡಿದ್ದರೆ, ಸಂತ ಜೀವನ ನಡೆಸಿದ್ದರೆ ಪರಮಾತ್ಮನಲ್ಲಿ ಲೀನವಾಗಿ ಮರುಹುಟ್ಟನ್ನು ಪಡೆಯುವುದಿಲ್ಲ.

ಈಗ ಸದ್ಯಕ್ಕೆ ಪ್ರೇತಕಾಂಡವೇನೋ ಅದನ್ನು ನೋಡುತ್ತಾ ಬರೋಣ.




ಡಿ.ಕೆ.ರವಿ ಸಾವು: ಸತ್ಯಕ್ಕೆ ಜಯ ಸಿಗಲಿ

ಆರೇಳು ತಿಂಗಳ ಹಿಂದೆ ನನಗೆ ಅಚ್ಚರಿ, ಬೇಸರ ಹಾಗು ನೋವನ್ನು ತಂದಂತಹ ಸಾವೆಂದರೆ ಅದು ಆಸ್ಕರ್ ವಿಜೇತ ನಟ ರಾಬಿನ್ ವಿಲಿಯಮ್ಸ್‌ನ ಆತ್ಮಹತ್ಯೆ. ನಮ್ಮ ಮನಸ್ಸಿಗೆ ಮುದಕೊಡುವಂತಹ 'ಫ್ಲಬ್ಬರ್', 'ಜುಮಾಂಜಿ', 'ಮಿಸೆಸ್ ಡೌಟ್‌ಫೈರ್' ತರಹದ ಚಿತ್ರಗಳಲ್ಲಿ ನಟಿಸಿದ ಆತನಿಗೆ ನೇಣುಬಿಗಿದುಕೊಂಡು ಸಾಯುವಂತಾದ್ದು ಏನಾಗಿತ್ತು? 'ಜುಮಾಂಜಿ' ನಮ್ಮನ್ನು ಫ್ಯಾಂಟಸಿ ಜಗತ್ತಿಗೆ ಕೊಂಡೊಯ್ದರೂ ಅದರಲ್ಲಿ ತಂದೆಗೆ ವಿಧೇಯತೆ ತೋರದ ಹಟಮಾರಿ ಹುಡುಗ ಆಟವೊಂದರ ಮೂಲಕ ಬದುಕಿನ ಹೋರಾಟದ ಸೂಕ್ಷ್ಮತೆಯನ್ನು ತಿಳಿದು ಬದಲಾಗುವ ಕಥೆಯಿದ್ದರೆ 'ಮಿಸೆಸ್ ಡೌಟ್‌ಫೈರ್' (ಅದರ ಹಿಂದಿಯ ಅವತರಣಿಕೆ ಕಮಲ್ ಹಾಸನ್‌ನ ಚಾಚಿ 420)ನಲ್ಲಿ ಇನ್ನೊಂದು ಬಗೆಯ ಮಾನವ ಸಂಬಂಧದ ಕಥೆಯಿದೆ. ಇಂತಹ ಜಗತ್ತಿಗೇ ಪರೋಕ್ಷವಾಗಿ ಸಂದೇಶ ಹೇಳುತ್ತಾ ನಕ್ಕು ನಗಿಸಿ ಮುದನೀಡುತ್ತಿದ್ದ ಜನಪ್ರಿಯ ನಟನೊಬ್ಬ ನೇಣಿಗೆ ಕೊರಳೊಡ್ಡುತ್ತಾನೆಂದರೆ ನಂಬಲು ಸಾಧ್ಯವೇ?

ನಮ್ಮಂತಹ ಜನರಿಗೆ ಕೆಲವು ಭ್ರಮೆಗಳಿರುತ್ತವೆ. 'ನಟ, ಹೋರಾಟಗಾರ, ಸಾಧಕ ಎಂದರೆ ಆತ ಟ್ವೆಂಟಿಫೋರ್ ಅವರ್ಸ್ ಹಾಗೇ ಇರುತ್ತಾನೆ ಎಂದು. ಹೋರಾಟಗಾರನೆಂದರೆ ಇಡೀ ದಿವಸ ಅವನಿಗೆ ಅದೇ ಕೆಲಸ; ಅವನಿಗೆ ವೈಯಕ್ತಿಕ ಆಲೋಚನೆಗಳೇ ಇಲ್ಲವೇನೋ ಎಂಬಂತೆ ನೋಡುತ್ತಿರುತ್ತೇವೆ. ಆದರೆ ವಸ್ತುಸ್ಥಿತಿ ಹಾಗಿರದು; ಹಾಗಿರಲು ಸಾಧ್ಯವೂ ಇಲ್ಲ. ಅವರಿಗೂ ಕಷ್ಟಸುಖ ನೋವುಗಳು ಆಸೆಆಕಾಂಕ್ಷೆಗಳು ನಮ್ಮ ನಿಮ್ಮಂತೆ ಭ್ರಮೆಗಳು ಎಲ್ಲವೂ ಇದ್ದೇ ಇರುತ್ತವೆ. ಯಾಕೆಂದರೆ ಅವರು ನಮ್ಮನಿಮ್ಮಂತೆ ಮನುಷ್ಯರೇ ಹೊರತು ಭಾವನೆಗಳಿಲ್ಲದ ಯಂತ್ರ ಮಾನವರುಗಳಲ್ಲ ತಾನೆ? ಜಗತ್ತಿನ ಸುಖವನ್ನು ಬೇಕಾದಂತೆ ತಮ್ಮೆಡೆಗೆ ಬರುವಂತೆ ಮಾಡಿಕೊಳ್ಳಬಲ್ಲ ಯಾವುದೇ ಸಮಸ್ಯೆಗಳಿರದ ಆರೋಗ್ಯವಂತ ಮಿಲಿಯಾಧಿಪತಿಗಳು ಕಟ್ಟಡದಿಂದ ಹಾರಿಯೋ, ಗುಂಡು ಹೊಡೆದುಕೊಂಡೋ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳಿವೆ. ಒಬ್ಬ ಮೃದು ಸ್ವಭಾವದವನೋ, ಮುಂಗೋಪಿಯೋ, ಕರುಣಾಳುವೋ, ಕ್ರೂರಿಯೋ, ಧೈರ್ಯಶಾಲಿಯೋ ಅಥವ ಪುಕ್ಕಲನೋ ಎಲ್ಲಾ ದಿನದಲ್ಲೂ ಎಲ್ಲಾ ಸಮಯದಲ್ಲೂ ಆತ ಒಂದೇ ರೀತಿಯಲ್ಲಿರಲಾರ. ಸಾಂದರ್ಭಿಕ ಸನ್ನಿವೇಶಗಳು ಹಾಗು ಆತನ ಆ ಸಂದರ್ಭದ ಮನಸ್ಥಿತಿಗೆ ತಕ್ಕಂತೆ ಆತ ವರ್ತಿಸುತ್ತಿರುತ್ತಾನೆ. ಒಬ್ಬ ಜಿರಲೆಯನ್ನು ಕೊಲ್ಲಲೂ ಹಿಂಜರಿಯುವ ವ್ಯಕ್ತಿ ಸಂದರ್ಭ ಬಂದರೆ ನಾಲ್ಕು ಕೊಲೆಯನ್ನೂ ಮಾಡಬಲ್ಲ. ಅದೇರೀತಿ ಪ್ರೌಢನಂತೆ ವರ್ತಿಸುವ ಬುದ್ಧಿವಂತನೊಬ್ಬ ಯಾವುದೋ ಒತ್ತಡಕ್ಕೊಳಗಾಗಿ ಸ್ಥಿಮಿತ ಕಳಕೊಂಡಲ್ಲಿ ಶುದ್ಧ ಅವಿವೇಕಿಯಂತೆ ವರ್ತಿಸಬಾರದೆಂದೇನಿಲ್ಲ ಎನ್ನುವುದಕ್ಕೆ ಹಲವಾರು ನಿದರ್ಶನಗಳು ನಮ್ಮ ಮುಂದೆಯೇ ಇವೆ. ಜೀವನದ ಸೂತ್ರದಲ್ಲಿ ಟು ಪ್ಲಸ್ ಟೂ ಫೋರೇ ಆಗಬೇಕೆಂಬ ಸಿದ್ಧ ನಿಯಮಕ್ಕೆ ಬೆಲೆಯೇ ಇಲ್ಲ. ಇಲ್ಲಿ ಏನೂ ಕೂಡ ಘಟಿಸಬಹುದು. ಅದೇ ಬದುಕಿನ ವೈಚಿತ್ರ್ಯ.

ಮೊನ್ನೆ ಲಂಕೇಶ್ ಹಾಗು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜನಾನುರಾಗಿ ದಕ್ಷ ಅಧಿಕಾರಿ ರವಿಯವರ ಕುರಿತಾದ ವರದಿಗೆ ವ್ಯಕ್ತವಾಗುತ್ತಿರುವ ಕೆಳಮಟ್ಟದ ಪ್ರತಿಕ್ರಿಯೆ (ಫೇಸ್‌ಬುಕ್, ದೃಶ್ಯ ಮಾಧ್ಯಮ ಇತ್ಯಾದಿಗಳಲ್ಲಿ)ಗಳನ್ನು ನೋಡಿ ಇದನ್ನು ಬರೆಯಬೇಕೆನಿಸಿತು. ನಮ್ಮ ಭಾರತ ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರಗಳಲ್ಲೊಂದು. ಪೈಸೆಯ ಲೆಕ್ಕದಲ್ಲಿ ಈ ಮಾತನ್ನು ಹೇಳುತ್ತಿಲ್ಲ. ಪ್ರಾಕೃತಿಕ ಸಂಪತ್ತು, ಮಾನವ (ಬೌದ್ಧಿಕ ಹಾಗು ಶ್ರಮಿಕ) ಸಂಪನ್ಮೂಲ ಇತ್ಯಾದಿಗಳನ್ನು ನೋಡಿದರೆ ಇದು ಸತ್ಯವೇ ಹೌದು. ಆದರೂ ದೇಶ ಹಿಂದುಳಿದಿರಲು ಇರುವ ಒಂದೇ ಒಂದು ಕಾರಣವೆಂದರೆ ಅದು ಇಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರ. ಇದನ್ನು ತಿಳಿದರೆ ಭ್ರಷ್ಟರಿಗೆ ಸಿಂಹಸ್ವಪ್ನದಂತಿದ್ದ ರವಿಯಂತವರ ಮಹತ್ವ ಏನೆಂದು ಅರ್ಥವಾಗುತ್ತದೆ. ನಿಜಕ್ಕೂ ರವಿಯವರದ್ದು ವ್ಯವಸ್ಥಿತ ಕೊಲೆಯೇ ಆಗಿದ್ದರೆ ಅದರ ಹಿಂದೆ ಎಂತಹ ಪ್ರಭಾವಿಯೇ ಇದ್ದರೂ ಆತನಿಗೆ ಶಿಕ್ಷೆಯಾಗಲೇ ಬೇಕು. ಹಾಗಂತ ನಿಗೂಢ ರೀತಿಯಲ್ಲಿ ಘಟಿಸಿದ ಈ ಪ್ರಕರಣವನ್ನು ಇನ್ನೊಂದು ಬಗೆಯಲ್ಲಿ ವಿಶ್ಲೇಷಿಸುವುದೇ ಪರಮಪಾತಕ ಎನ್ನುವಂತಹ ವಾದ ಎಷ್ಟರಮಟ್ಟಿಗೆ ಸರಿ? ಸತ್ಯವನ್ನು ಹೆಚ್ಚು ಸಮಯ ಜನರಿಂದ ಮುಚ್ಚಿಡಲಾಗದು. ಯಾವುದೋ ಜುಜುಬಿ ಹಣ ಪಡೆದು (ಕೆಲವರ ಆರೋಪದಂತೆ) ಐದಾರು ದಶಕಗಳ



ಜನರ ವಿಶ್ವಾಸಾರ್ಹತೆಯನ್ನು ಒತ್ತೆ ಇಡುವ ಜರೂರತ್ತು ಪ್ರಜಾವಾಣಿಯಂತಹ ಪತ್ರಿಕೆಗೆ ಯಾವತ್ತಿಗೂ ಬಂದಿರಲಾರದು. ಸ್ಪಷ್ಟ ವಿಶ್ವಾಸಾರ್ಹ ಮಾಹಿತಿಗಳಿಲ್ಲದೇ ಈ ಪತ್ರಿಕೆಗಳು ಇಂತಹ ಸುದ್ದಿಯನ್ನು ಖಂಡಿತಾ ಪ್ರಕಟಿಸಲಾರವು. ಇದೀಗ ಬಂದಂತಹ ಎಫ್‌ಎಸ್‌ಸಿ ವರದಿ ಸಹ ಇದನ್ನು ಆತ್ಮಹತ್ಯೆಯೆಂದೇ ಫೊರೆನ್ಸಿಕ್ ಫಲಿತಾಂಶದ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ವರದಿ ಮಾಡಿದೆ. ಪ್ರಕರಣದ ಮತ್ತೊಂದು ಮಗ್ಗುಲಿನ ಸತ್ಯಾಸತ್ಯತೆಗಾಗಿ ಜನ ತಾಳ್ಮೆಯಿಂದ ಕಾಯಬೇಕೇ ಹೊರತು ಆತುರದ ಭಾವನಾತ್ಮಕ ನಿರ್ಧಾರಗಳನ್ನಲ್ಲ.

ಎಷ್ಟೋ ಪ್ರಕರಣಗಳ ಜಟಿಲತೆಯನ್ನು ಬಿಡಿಸಿದ್ದು ಅದರಲ್ಲಿನ ಕೆಲ ಸಣ್ಣ ಸೂಕ್ಷ್ಮ ಸಂಗತಿಗಳು. ತನಿಖೆ ಎಂದಾಕ್ಷಣ ಎಲ್ಲಾ ಕೋನಗಳಿಂದಲೂ ವಿಚಾರವನ್ನು ವಿಮರ್ಶಿಸಲೇ ಬೇಕಾಗುತ್ತದೆ. ತಪ್ಪೋ ಸರಿಯೋ ಸಮಗ್ರ ತನಿಖಾ ಪ್ರಕ್ರಿಯೆಗೆ ಅದು ಅನಿವಾರ್ಯವೂ ಹೌದು. ಈಗಲೇ ಅದನ್ನು ಪೂರ್ತಿಯಾಗಿ ಕೊಲೆಯೇ ಅಥವ ಆತ್ಮಹತ್ಯೆಯೇ ಎಂದು ತೀರ್ಮಾನಿಸಿಯೇ ತನಿಖೆಗಿಳಿಯುವುದು ಖಂಡಿತಾ ತಪ್ಪು. ವ್ಯಕ್ತಿಯ ಮೊಬೈಲ್ ಬಳಸಿ ಇನ್ನೊಬ್ಬಾತ 44 ಅಲ್ಲ 88 ಸಾರಿ ಮೆಸೇಜ್ ಕಳಿಸಬಹುದು ಎಂಬುದೇನೋ ಹೌದಾದರೂ ಪೋಸ್ಟ್ ಮಾರ್ಟಮ್ ವರದಿ ತಿಳಿಸುವ ಸತ್ತ ಸಮಯದ ಬಳಿಕ ಸಂದೇಶ ರವಾನೆಯಾದರಷ್ಟೇ ತಾನೆ ಈ ವಿಚಾರ.

ರವಿಯವರ ಹಾಗು ಅಧಿಕಾರಿಣಿಯ ವಾಟ್ಸಪ್ ಸಂದೇಶಗಳು ಸತ್ಯವೇ ಇದ್ದರೆ "ನಿನ್ನ ಪ್ರೀತಿಯ ಸೆಳೆತದಿಂದ ಹುಚ್ಚನಾಗಬಾರದೆಂದು ಮದುವೆಯಾದೆ. ಆದರೆ, ಮದುವೆಯಾದ ನಂತರ ನಾನು ತಪ್ಪು ಮಾಡಿದೆನೆಂಬ ಅರಿವಾಯಿತು..... ಬದುಕಿನಲ್ಲಿ ಸೋತಿದ್ದೇನೆಂಬ ಅರಿವಾಗಿಯೂ ಯಾವ ಸೆಳೆತ - ಗುರಿಗಳಿಲ್ಲದೇ ಪ್ರಾಣಿಯಂತೆ ಬದುಕುವುದು ನನಗಿಷ್ಟವಿಲ್ಲ.." ಎಂಬಂತಹ ಮಾತುಗಳು ಅನೇಕ ಭಾವನಾತ್ಮಕ ಸಂಗತಿಗಳನ್ನು ಹೇಳುವಂತಿದೆ.

ಇದನ್ನು ನೋಡಿದರೆ ದಿನೇಶ್ ಬಾಬುರವರ 'ಅಮೃತವರ್ಷಿಣಿ' ಸಿನಿಮಾ ನೆನಪಾಗುತ್ತದೆ. ವಿವಾಹಿತ ಹೆಣ್ಣಿನ ಮೇಲೆ ಮೂರನೇ ವ್ಯಕ್ತಿ ಮೋಹಕ್ಕೊಳಗಾಗುವುದು ಅಪರೂಪದ ಸಂಗತಿಯೇನಲ್ಲ. ಮೇಲಿನ ಸಿನಿಮಾ ಬಾಬುರವರ ಗೆಳೆಯನಿಗೆ ಸಂಬಂಧಿಸಿದ ಸತ್ಯ ಘಟನೆಯಾಧಾರಿತ ಕಥೆಯಲ್ಲದೇ ಮೋಹಕ್ಕೊಳಗಾಗಿ ಪ್ರೇಯಸಿಯ ಪತಿಯನ್ನು ಕೊಲೆ ಮಾಡಿದ ಆ ಗೆಳೆಯನಿಗೆ ಆ ಕುರಿತಾದ ಪಶ್ಚಾತ್ತಾಪ ಇಂದಿಗೂ ಇಲ್ಲವಂತೆ. ಆದರೆ ಈ ಪ್ರಕರಣದ ಆತ್ಮಹತ್ಯಾವಾದವು ನಿಜವೇ ಇದ್ದರೆ ಇಲ್ಲಿನ ಜಂಟಲ್‌ಮ್ಯಾನ್ ರವಿ ಮೋಹಕ್ಕೆ ಬಲಿಯಾಗಿ ತಮ್ಮನ್ನು ತಾವು ಕೊಂದುಕೊಂಡರೇ ವಿನಹ ಯಾವುದೇ ಬೇರೆ ತರಹದ ನೀಚಕೃತ್ಯಕ್ಕಾಗಿ ಯೋಚಿಸಲೂ ಇಲ್ಲ ಎಂಬುದು ಗಮನಾರ್ಹ.

ರಾಬಿನ್ ವಿಲಿಯಮ್ಸ್‌ರಂತೆ ರವಿಯವರೂ ಅನೇಕರನ್ನು ಈ ಮೂಲಕ ಅಚ್ಚರಿಗೆಡವಿದ್ದಂತೂ ಹೌದು. ಏನೇ ಇದ್ದರೂ ಸಮಗ್ರ ತನಿಖೆಯ ಮೂಲಕವೇ ಇದರ ಹಿಂದಿನ ಸತ್ಯಾಸತ್ಯತೆ ಹೊರಬರಬೇಕು. ಲಾಭ- ನಷ್ಟಗಳ ಲೆಕ್ಕಾಚಾರದ ರಾಜಕಾರಣಿಗಳ ಸ್ವಾರ್ಥದ ಮಾತಿಗೆ (ತಮ್ಮ ಹಿಡಿತದಲ್ಲಿಲ್ಲದಾಗ ಸಿಬಿಐ ಬಗ್ಗೆ ತುಚ್ಛವಾಗಿ ಮಾತಾಡಿದ್ದವರು ಈಗ ಅದನ್ನು ಇನ್ನಿಲ್ಲದಂತೆ ಹಾಡಿಹೊಗಳುತ್ತಿದ್ದಾರೆ) ಬಲಿಬೀಳದೇ ಹಾಗು ಅನವಶ್ಯಕ ಭಾವನಾತ್ಮಕ ಉದ್ವೇಗಗಳಿಲ್ಲದೇ (ಮೀಡಿಯಾಗಳು ಸ್ಪರ್ಧೆಗೆ ಬಿದ್ದಂತೆ ಬಿಂಬಿಸಿದ ನಂದಿತಾ ಪ್ರಕರಣ ಗೊತ್ತಲ್ಲ) ಎಲ್ಲರೂ ಇದಕ್ಕಾಗಿ ತಾಳ್ಮೆಯಿಂದ ಕಾಯಬೇಕಷ್ಟೆ. ಸತ್ಯಕ್ಕೆ ಜಯ ಸಿಗಲಿ ಎಂಬುದೇ ಎಲ್ಲರ ಹಾರೈಕೆ ತಾನೆ?

-ಆರ್‌ಎಸ್‌ಪಿ, ಮಂಗಳೂರು



ರಾಮ ದೇವರೊ ಅಲ್ಲವೋ ನಂಗೂ ಗೊತ್ತಿಲ್ಲ!! ಆದರೇ ....


ಎಲ್ಲೋ ಯು.ಆರ್.ಅನಂತಮೂರ್ತಿಯವರ 'ಋಜುವಾತು' ಬರಹದಲ್ಲಿ ಓದಿದ ನೆನಪು. ಭಾರತದ ನಾಗರಿಕತೆಯನ್ನು ಪೇಗನ್ ನಾಗರಿಕತೆ ಎನ್ನುತ್ತಾರೆ. ಪೇಗನ್ ಎಂದರೆ ಬಹುದೇವರಾಧನೆಯ ನಂಬಿಕೆಯುಳ್ಳ ನಾಗರಿಕತೆ. ಮೂರು ಕೋಟಿ ದೇವರಿದ್ದಾರೆ ಎಂದು ನಂಬುವ ನಮ್ಮದು ಅದೇ ನಾಗರಿಕತೆ. ದೈವ ಸಾಕ್ಷಾತ್ಕಾರ ಮಾಡಿಕೊಳ್ಳಲು ದಿನಕ್ಕೊಂದು ದೇವಸ್ಥಾನಗಳಿಗೆ ತೆರಳುವವರು ನಮ್ಮಲ್ಲಿದ್ದಾರೆ. ನಮಗೆ ಕಲ್ಲು ದೇವರು, ಮಣ್ಣಿನ ಹುತ್ತವೂ ದೇವರು, ಒಂದು ಬೇವು-ಅರಳಿ ಮರವೂ ದೇವರೆ. ನಾನು ಭಾರತದ ಧರ್ಮಗ್ರಂಥವನ್ನೆಲ್ಲಾ ಗೌರವಿಸುತ್ತೇನೆ, ಅವು ನಮಗೆ ಒಳ್ಳೆಯ ಸಂಸ್ಕೃತಿ ಕೊಟ್ಟಿವೆ. ಆದರೆ ಇಂತಹ ಧರ್ಮಗ್ರಂಥಗಳು ಅಸ್ಪೃಶ್ಯತೆಯನ್ನು ಹುಟ್ಟುಹಾಕಿವೆಯಲ್ಲ ಎನ್ನುವ ದುಗುಡ ಕೂಡ ಇದೆ. ದೇವರನ್ನು ಅವನ ಅಸ್ತಿತ್ವವನ್ನು ತಿಳಿಯುತ್ತಲೇ ಹೋಗುತ್ತೇವೆ. ಅದಕ್ಕೊಂದು ಗಮ್ಯವಿಲ್ಲ. ಉತ್ಸವ, ಹಬ್ಬ ಜಾತ್ರೆ ಬಂದಿತೆಂದರೆ ಖುಷಿ ಪಡುವವರು ಯಾರಿಲ್ಲ ಹೇಳಿ? ಅವೆಲ್ಲ ಭಾರತದ ಶ್ರೀಮಂತ ಸಂಸ್ಕೃತಿ. ಆದರೆ ಇಂತಹ ಸಂಭ್ರಮಗಳು ಕೇವಲ ದೇವರಾರ್ಚನೆಗೆ ಮೀಸಲಾಗುತ್ತಿರುವುದು ವಿಷಾದನೀಯ. ದೈವವನ್ನು ಅಲ್ಲಗಳೆಯಲು ನಾನು ಅತ್ಯಲ್ಪ, ಆದರೇ ಜಾತ್ರೆ, ಹಬ್ಬದ ತಯಾರಿ ಮಾಡುವ ಮಾನವರನ್ನು ಅಸ್ಪೃಶ್ಯರು ಎಂದು ಅಲ್ಲಗಳೆಯುವ ಬ್ರಾಹ್ಮಣ್ಯವನ್ನು ನಾನು ಖಂಡಿಸುತ್ತೇನೆ. ಭೂಮಿಯನ್ನು ಅರಚಿ, ಅಗೆದು, ತೆಗೆದು ಮಾರಿ ತಿನ್ನುವ ಜನರಿಗಾಗಲೀ, ಹೆಣ್ಣನ್ನು ಗೌರವಿಸುತ್ತಲೇ ವೇಶ್ಯಾವಾಟಿಕೆಗೆ ತಳ್ಳುವ ಗೋಮುಖಗಳಿಗಾಗಲೀ, ಮಗಳನ್ನು ಕಾಮಿಸುವ ಅಪ್ಪನಾಗಲೀ ಧಾರ್ಮಿಕ ನೆಲೆಗಟ್ಟಿನಲ್ಲಿ ಸಮರ್ಥಿಸುವುದು ಹೇಯ. ರಾಮನ ಬಗ್ಗೆ ನನಗೆ ಗೊತ್ತಿಲ್ಲ ಆದರೆ ರಾಮಾಯಣವಂತೂ ನಮಗೆ ಒಳ್ಳೆಯ ಮಾರ್ಗದರ್ಶಕ ಗ್ರಂಥವಾಗಲಾರದು. ಈಗಂತೂ ಓಟಿಗಾಗಿ ಗೋರಕ್ಷಣೆ ಮತ್ತು ಧರ್ಮಸಮ್ಮೇಳನ ನಡೆಸುತ್ತಿರುವವರು ರಾಮಾಯಣದ ಮಾರ್ಗದರ್ಶನದಲ್ಲಿ ಬೆಳೆದಿರಬಹುದೆಂಬ ಊಹೆ ನನ್ನಲ್ಲಿ ಉಂಟಾಗುತ್ತದೆ. ಕ್ರೌರ್ಯವನ್ನು ಹುಟ್ಟುಹಾಕಿದ ರಾಮಾಯಣದ ಬಗ್ಗೆ ಹೆಚ್ಚು ನಿಂದಿಸದೆ ವೇದ-ಉಪನಿಷತ್ತುಗಳಲ್ಲಿ ಅಡಗಿರುವ ಪರಮಾರ್ಥ ಸತ್ಯದ ಅರಿವನ್ನು ಪಡೆಯೋಣ ಹಾಗೂ ಕೆಟ್ಟದನ್ನು ನಿರಾಕರಿಸಿ, ಒಳ್ಳೆಯದನ್ನು ಸ್ವೀಕರಿಸೋಣ. "ಆನೋ ಭದ್ರಾಃ ಕ್ರತವ್ರೋ ಯಂತು ವಿಶ್ವತಃ" ಭಾರತಕ್ಕೆ ಶಾಂತಿಯ ಅಗತ್ಯವಿದೆ, ನಮ್ಮೆಲ್ಲರ ಮನಸ್ಸುಗಳು ತಿಳಿಗೊಳ್ಳುವ ಅವಶ್ಯಕತೆ ಇದೆ ಎಂದು ಪ್ರಸ್ತುತದಲ್ಲಿ ಬಾಳಲು ಪ್ರಯತ್ನಿಸೋಣ.

-ಡಾ.ಅಭಿನಂದನ್ ಬಳ್ಳಾರಿ

ಸಾರಾಯಿ ಮಾರಾಟವನ್ನು ಎಲ್ಲರೂ ವಿರೋಧಿಸಬೇಕು

ಸದನದಲ್ಲಾದ ಕರ್ನಾಟಕ ಸರಕಾರದ ಸಾರಾಯಿ ಮಾರಾಟ ಜಾರಿಯ ಪ್ರಸ್ತಾಪ ಸಮಾಜವಾದಿ ಎಂದು ಹೇಳಿಕೊಳ್ಳುವ ಮಾನ್ಯ ಮುಖ್ಯಮಂತ್ರಿಗಳಿಗೆ ತಕ್ಕನಾದುದಲ್ಲ. ಅದಕ್ಕೆ ಯಾವ ಪಕ್ಷದ ವಿರೋಧವೂ ವ್ಯಕ್ತವಾಗಲಿಲ್ಲವೆಂಬ ಅಂಶ ರಾಜ್ಯದಲ್ಲಿ ಲಿಕ್ಕರ್ ಮಾಫಿಯಾ ಬಲಗೊಳ್ಳುತ್ತಿರುವುದರ ಸೂಚನೆ.

ಮದ್ಯ ಮಾರಾಟಗಾರರು ಮದ್ಯದ ಮಾರಾಟವನ್ನು ಹೆಚ್ಚಿಸಬೇಕೆಂದು ಅಬಕಾರಿ ಇಲಾಖೆಯು ಅವರ ಮೇಲೆ ಒತ್ತಡ ಹೇರುತ್ತಿದೆಯೆಂದು ಕೇಳಿದ್ದೇನೆ. ಅದರ ಅರ್ಥ ಬಡಜನರು ಹೆಚ್ಚು ಹೆಚ್ಚು ಕುಡಿಯಬೇಕೆಂದು ಅರ್ಥವಲ್ಲವೆ? ಇದ್ಯಾವುದೂ ಜನರ ಹಿತದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಅಲ್ಲ.



ಈ ಪ್ರಸ್ತಾಪ ಜಾರಿಗೆ ಬಂದರೆ ಅತ್ಯಂತ ಹೆಚ್ಚು ತೊಂದರೆಗೊಳಗಾಗುವವರು ಕೂಲಿ ಕಾರ್ಮಿಕರು, ದಲಿತರು, ಮಹಿಳೆಯರು ಮತ್ತು ಮಕ್ಕಳು. ಆಳುವವರ ನೈತಿಕ ಮೌಲ್ಯಗಳ ರಕ್ಷಕರೆಂದು ಹೇಳಿಕೊಳ್ಳುವ ಮಠಾಧೀಶರು, ಧರ್ಮಗುರುಗಳು ಸರಕಾರದ ಈ ಪ್ರಸ್ತಾಪವನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕೆಂದು ಸ್ವಸ್ಥಂಭವರು ಬಯಸುತ್ತಾರೆ. ಸರಕಾರದಿಂದ ಮಠ-ಮಾನ್ಯಗಳ ನಿಯಂತ್ರಣವನ್ನು ವಿರೋಧಿಸುವಾಗ ಅವರು ತೋರಿಸಿದ ಕ್ರಿಯಾಶೀಲತೆ ಮತ್ತು ಒಗ್ಗಟ್ಟು ಸಾರಾಯಿಯ ವಿಷಯದಲ್ಲೂ ತೋರಿಸಿದರೆ ಸರಕಾರ ಮಣಿಯುವುದರಲ್ಲಿ ಸಂಶಯವಿಲ್ಲ.

ಮಾನಿನಿಯರ ಮಾನ-ಸಮ್ಮಾನ ರಕ್ಷಣೆಗೆ ಬಡಿಗೆ ಹಿಡಿದು ಧಾವಿಸುವ ಸಂಘ ಪರಿವಾರದ ನೈತಿಕ ಪೊಲೀಸ್ ಪೇದೆಗಳು ತಮ್ಮ ನೈತಿಕ ನಿಷ್ಠೆಯನ್ನು ಜನರ ನೈತಿಕತೆಯನ್ನೇ ನುಂಗಿ ಕುಡಿಗೇಡಿಗಳನ್ನಾಗಿ ಮಾಡುವ ಸಾರಾಯಿ ಮಾರಾಟದ ವಿರುದ್ಧ ಬಳಸಲು ಇದು ಸಕಾಲ.

-ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

ದಲಿತರ ಧಾರ್ಮಿಕ ಭಾವನೆಗಳಿಗೆ ಬೆಲೆಯೇ ಇಲ್ಲವೇ??

"ಶ್ರೀ ರಾಮಚಂದ್ರನು ಏಕಪತ್ನಿ ವ್ರತಸ್ಥನಾಗಿರಲಿಲ್ಲ. ಆವನು ಸುಖಲೋಲುಪ್ತನಾಗಿದ್ದ, ಸೀತೆಯೊಂದಿಗೆ ಕೂಡಿ ಮಹಿರಕ ಎಂಬ ಮದ್ಯ ಕುಡಿಯುತ್ತಿದ್ದ, ರಾಜ್ಯಭಾರವನ್ನೆಲ್ಲ ತಮ್ಮನಾದ ಭರತನಿಗೆ ವಹಿಸಿಬಿಟ್ಟಿದ್ದ ಹಾಗೂ ವಿನಾಕಾರಣ ನಿರಪರಾಧಿ ಶೂದ್ರ ತಪಸ್ವೀ ಶಂಭೂಕನನ್ನು ಕೊಂದ" ಎಂದು ಪ್ರೊ.ಭಗವಾನರು ಹೇಳಿದ್ದರಿಂದ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ ಎಂದು ಅವರ ವಿರುದ್ಧ ಪೊಲೀಸರಲ್ಲಿ ಎಫ್‌ಐಆರ್ ದಾಖಲಾಗಿದೆ. ಆದರೆ ಭಗವಾನರು ಹೇಳಿದ ಈ ಮಾತುಗಳೆಲ್ಲ ಡಾ. ಅಂಬೇಡ್ಕರರು ಆಳ ಸಂಶೋಧನೆ ಮಾಡಿ ಬರೆದಿರುವ ಕೃತಿಗಳಿಂದ ಆಯ್ದುಕೊಂಡಿರುವುದಾಗಿದೆ. ಹಾಗಾಗಿ ಭಗವಾನರ ವಿರುದ್ಧ ಎಫ್‌ಐಆರ್ ದಾಖಲಿಸಿರುವುದು ಸ್ವತಃ ಡಾ. ಅಂಬೇಡ್ಕರರ ವಿರುದ್ಧವೇ ಎಫ್‌ಐಆರ್ ದಾಖಲಿಸಿದ್ದಕ್ಕೆ ಸಮ.

ಈ ಜಗತ್ತಿನಲ್ಲಿ ರಾಕ್ಷಸ ಎಂಬ ಜನಾಂಗವೇ ಇರದಿದ್ದರೂ ನಮ್ಮ ಹಿರಿಯರಾಗಿದ್ದ ಇಲ್ಲಿಯ ಬುಡಕಟ್ಟು ಜನರನ್ನು ದುಷ್ಟ ರಾಕ್ಷಸರು, ನೀಚ ಅಸುರರು, ಹೀನ ದಾನವರು ಎಂದು ಕರೆದು, ಅವರು ಋಷಿಗಳನ್ನು ಹಾಗೂ ಮಹಿಳೆಯರನ್ನು ಪೀಡಿಸುತ್ತಿದ್ದರು ಎಂದು ಕಾಲ್ಪನಿಕ ಪುರಾಣ ಕಥೆಕಟ್ಟಿ, ಅದನ್ನು ದಿನಾಲೂ ಟಿವಿ ಸಿನಿಮಾ ನಾಟಕ ಯಕ್ಷಗಾನಗಳಲ್ಲಿ ತೂರಿಸಿ, ಮಕ್ಕಳಿಗೆ ಈ ಕತೆಗಳನ್ನು ಹೇಳಿ-ಹೇಳಿ ಬುಡಕಟ್ಟು ಜನಾಂಗದ ಪೂರ್ವಜರನ್ನು ದಿನಾಲೂ ಅವಮಾನಿಸುತ್ತಿರುವಾಗ ನಮ್ಮಂತಹ ಈಗಿನ ಬುಡಕಟ್ಟು ಜನರ ಧಾರ್ಮಿಕ ಭಾವನೆಗಳಿಗೆ ನೋವಾಗುವುದಿಲ್ಲವೇ?

ಹದಿನೈದು ಕೋಟಿ ವರ್ಷಗಳ ಹಿಂದೆ ಇದ್ದ ಡೈನೊಸಾರುಗಳ ಪಳಿಯುಳಿಕೆಯನ್ನು ನಮ್ಮ ವಿಜ್ಞಾನಿಗಳು ಹುಡುಕಿ ತೆಗೆಯುವಷ್ಟು ತಂತ್ರಜ್ಞಾನ ಮುಂದುವರಿದಿರುವಾಗ ಕೇವಲ ಮೂರು-ನಾಲ್ಕು ಸಾವಿರ ವರ್ಷಗಳ ಹಿಂದೆ ಅಂದರೆ ರಾಮಾಯಣ-ಮಹಾಭಾರತದ ಕಾಲದಲ್ಲಿ ಕೋಟ್ಯಾಂತರ ಸಂಖ್ಯೆಯಲ್ಲಿದ್ದ ನಲ್ವತ್ತು-ಐವತ್ತು ಅಡಿ ಎತ್ತರದ ರಾಕ್ಷಸರ ಒಂದೇ ಒಂದು ಪಳೆಯುಳಿಕೆ ವಿಜ್ಞಾನಿಗಳಿಗೆ ಯಾಕೆ ಪತ್ತೆಯಾಗಿಲ್ಲ? ರಾಕ್ಷಸರು ಇರಲೇ ಇಲ್ಲ ಎಂದಮೇಲೆ ಅವರನ್ನು ಕೊಲ್ಲಲು ಮನುಷ್ಯ ಅಥವಾ ಪ್ರಾಣಿ ರೂಪದಲ್ಲಿ ದೇವರು ಅವತಾರವೆತ್ತಿದ್ದರು ಎಂಬುದು ಸಹ ಸಂಪೂರ್ಣ ಸುಳ್ಳು ಎಂದು ಸಾಬೀತಾಗುವುದಿಲ್ಲವೇ? ಹಾಗಾದರೆ ನಮ್ಮಂತಹ ಶಂಭೂಕನ ವಂಶದ ದಲಿತರ ಧಾರ್ಮಿಕ ಭಾವನೆಗಳಿಗೆ ಬೆಲೆಯೇ ಇಲ್ಲವೇ??

-ವೀರಪ್ಪ ದಿ. ಎನ್, ಮಡಿಕೇರಿ-ಗ

ಪ್ರಜ್ಞಾವಂತರಿಗೆ ಐಐಟಿ ಬೇಡವಂತೆ

ಇತ್ತೀಚಿನ ಕೇಂದ್ರದ ಬಜೆಟ್ಟಿನಲ್ಲಿ ಕರ್ನಾಟಕಕ್ಕೆ ಐಐಟಿ ಮಂಜೂರು ಆದ ಕೂಡಲೇ ಕರ್ನಾಟಕದ ಎಲ್ಲ ಜಿಲ್ಲೆಗಳವರು ಈ ಹೊಸ ಐಐಟಿ ತಮ್ಮ ತಮ್ಮ ಜಿಲ್ಲೆಯಲ್ಲಿ ಸ್ಥಾಪನೆಯಾಗಲಿ ಎಂದು ಹಲವು ಕಾರಣ ಕೊಟ್ಟು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ ಕೇವಲ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಪ್ರಜ್ಞಾವಂತರು ಮಾತ್ರ ಈ ಹೊಸ ಐಐಟಿ ತಮ್ಮ ಜಿಲ್ಲೆಯಲ್ಲಿ ಬೇಡವೇ ಬೇಡ ಎನ್ನುತ್ತಿದ್ದಾರೆ. ಕಾರಣ ಇಲ್ಲಿಯ ನೈತಿಕ ಪೊಲೀಸರು ದಿನಾಲೂ ದಾಂಧಲೆ ನಡೆಸಿ ಪರವೂರಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಬಡಿಯುತ್ತಲೇ ಇರುತ್ತಾರೆ ಆದರೆ ಖಾಕಿ ಪೊಲೀಸರು ಏನೂ ತಪ್ಪು ಮಾಡದ ವಿದ್ಯಾರ್ಥಿಗಳ ಪೋಷಕರಿಂದ ಇನ್ನೂ ತಪ್ಪು ಮಾಡುವುದಿಲ್ಲ ಎಂದು ಮುಚ್ಚಳಿಕೆ ಬರೆಸಿಕೊಂಡು ನೈತಿಕ ಪೊಲೀಸ್‌ಗಿರಿಗೆ ಕುಮ್ಮಕ್ಕು ಕೊಡುತ್ತಲೇ ಹೋಗುತ್ತಾರೆ.

ಮೇಲಾಗಿ ನೆರೆಯ ಭಟ್ಕಳ ಹಾಗೂ ಕಾಸರಗೋಡಿನಿಂದ ವೃತ್ತಿಪರ ಕಾಲೇಜುಗಳಿಗೆ ರಾಜಾರೋಷವಾಗಿ ಗಾಂಜಾ ಹಾಗೂ ಡ್ರಗ್ಸ್ ಪೂರೈಸುವ ಮಾಫಿಯಾಗಳ ಭಾರಿ ಪ್ರಭಾವ ಇಲ್ಲಿ ಇದೆ. ಇವು ರಾಜಕಾರಣಿ ಹಾಗೂ ಪೊಲೀಸರ ಕೃಪಾಪೋಷಿತ ಮಾಫಿಯಾಗಳಾದುದರಿಂದ ಇವನ್ನು ಮಟ್ಟ ಹಾಕುವುದು ಸಾಧ್ಯವಿಲ್ಲ. ಇಡೀ ದಕ್ಷಿಣ ಭಾರತದಲ್ಲಿ ಈ ಎರಡು ಅನಿಷ್ಟಗಳ ಉಪಟಳ ಮಂಗಳೂರು ಹಾಗೂ ಉಡುಪಿ ಜಿಲ್ಲೆಯಲ್ಲಿದ್ದಷ್ಟು ಬೇರೆ ಎಲ್ಲಿಯೂ ಇಲ್ಲ. ಹಾಗಾಗಿ ಭಾರತದ ಎಲ್ಲೆಡೆಯಿಂದ ಕೇವಲ ಪ್ರತಿಭೆಯ ಆಧಾರದಲ್ಲಿ

ಚಿಯಲ್ಲಿ ಸೀಟು ಪಡೆಯುವ ಪ್ರತಿಭಾವಂತ ವಿದ್ಯಾರ್ಥಿ
ಭವಿಷ್ಯ ಹಾಳಾಗುವ ಸಾಧ್ಯತೆ ಈ ಎರಡು ಜಿಲ್ಲೆಯಲ್ಲಿ
ವಾಗಲೂ ಇದ್ದೇ ಇದೆ. ಆದುದರಿಂದ ನಮ್ಮ ಕರಾವಳಿ
ಗಳಿಗೆ ಐಐಟಿ ಬೇಡ.

ಸ್ವಂತ ಜಿಲ್ಲೆಯ ದುರಭಿಮಾನ ಬಿಟ್ಟು ಯೋಚಿಸಿದಾಗ
ವಾಗಿ ಎಲ್ಲ ದೃಷ್ಟಿಯಿಂದಲೂ ಉತ್ತಮ ಶೈಕ್ಷಣಿಕ
ವಾತಾವರಣವಿರುವ ತುಂಬು ಹಸಿರು ಧಾರವಾಡವೇ ಐಐಟಿ
ಸಲು ಸೂಕ್ತ ಸ್ಥಳವೆನಿಸುತ್ತದೆ.

-ಜೆ. ಆರ್. ರೈ, ಮಂಗಳೂರು

ಆರ್ಯರಾಗೋಣ, ನಾವು ಆರ್ಯರಾಗೋಣ

ಮೊನ್ನೆ ಕರಾವಳಿಯ ಸಂಜೆ ಪತ್ರಿಕೆಯಲ್ಲಿ ಶ್ರೀಯುತ
ಶಾಸ್ತ್ರಿ ಬಾಳಿಲರವರು ಕೋಮು ಸೌಹಾರ್ದ ವೇದಿಕೆಗಾಗಿ
ಕೊಟ್ಟ ಹಾಡೊಂದು ಪ್ರಕಟವಾಗಿತ್ತು. ಪ್ರಸ್ತುತ
ರ್ಭದ ಅಗತ್ಯತೆಗೆ ಪೂರಕವಾದಂತಹ ಅದರ ಮೊದಲ
ಲು ಹೀಗಿತ್ತು: 'ಮಾನವರಾಗೋಣ, ನಾವು
ಮಾನವರಾಗೋಣ' ಎಂದು. ಕರಾವಳಿಯಲ್ಲಿ ಜಾತಿಜಾತಿ
ಧರ್ಮಗಳೊಳಗೆ ವಿಷ ಬೀಜ ಬಿತ್ತಿ ಅಸಹನೆಗೆ
ಣರಾಗುತ್ತಿರುವವರಿಗೆ ಪರೋಕ್ಷವಾಗಿ ಎಚ್ಚರಿಸುವಂತಹ
ಮವರೀ ಹಾಡಿನ ಸಾಲಿಗಿಂತಲೂ 'ಆರ್ಯರಾಗೋಣ
ವೈದಿಕರಾಗೋಣ' ಎಂಬ ಚರಣವೇ ಇಂದು
ಹೆಚ್ಚು ಪ್ರಭಾವಶಾಲಿಯಾಗಿದೆ.

ವೈದಿಕರ ಕಣ್ಮಣಿ ಪರಶುರಾಮನ ಹೆಸರಿನ
ವಳಿಯಲ್ಲಿ ಪಕ್ಕಾ ಅವೈದಿಕ ಆಚರಣೆಯಾದ ಭೂತ
ಲಗಳೂ ಭಗವಾಧ್ವಜಗಳಿಂದ ಅಲಂಕೃತಗೊಂಡು
ಕೀಕರಣಗೊಂಡಿವೆ. ಕೋಲಕ್ಕೂ ಮೊದಲು ವೈದಿಕರ
ಷ್ಟ ಹೋಮವೋ ಇನ್ನೊಂದೊ ನಡೆಯಲೇಬೇಕಂತೆ.



ಬಗ್ಗೆ ಕೇಳಿದರೆ ಕೇಳಿದವರನ್ನೇ ಆಯೋಜಕರು
ರುಗುಟ್ಟಿಕೊಂಡು ನೋಡುತ್ತಾರೆ. ಯಾಕೆಂದರೆ ಇಲ್ಲಿನ
ದ್ದರಿಗೆ ವೈದಿಕರ ಆಚರಣೆಯನ್ನು ಅನುಸರಿಸುವುದು
ಷ್ಠೆಯ ವಿಷಯವೇ ಆಗಿಬಿಟ್ಟಿದೆ. ಮೊನ್ನೆ ಸೋಲೂರಿನಲ್ಲಿ
ಸಿಎಂ ಸಿದ್ದರಾಮಯ್ಯನವರು ಮಾತನಾಡುತ್ತಾ
ಸ್.ಬಂಗಾರಪ್ಪ ಹಾಗು ಮೊಯ್ಲಿಯವರು ಇದ್ದಾಗಲೂ
ಲ್ವರ್ಗದವರು ಅವರ ಕಾಲೆಳೆದಿದ್ದರು. ಈಗ ನನಗೂ
ನ್ನೇ ಮಾಡುತ್ತಿದ್ದಾರೆ" ಎಂದಿದ್ದರು. ವಿಚಿತ್ರವೆಂದರೆ
ರು ಆ ರೀತಿಯಾಗಿ ಮಾತನಾಡುತ್ತಿದ್ದ ಕಾರ್ಯಕ್ರಮ
ರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ಹಾಗು
ರ್ಯ ಈಡಿಗ ಮಹಾ ಸಂಸ್ಥಾನ ಆಯೋಜಿಸಿದ
ರ್ಯಕ್ರಮವಾಗಿತ್ತು.


ಕೇರಳದ ನಾರಾಯಣಗುರುಗಳ ಕ್ರಾಂತಿಕಾರಿ ಹೆಜ್ಜೆಗಳು
ಗು ದೂರದ ಮುಂಬೈ ಮೊದಲಾದೆಡೆಗಳಲ್ಲಿ
ದ್ಯಮಗಳಲ್ಲಿ ತೊಡಗಿಕೊಂಡ ಈಡಿಗರ ಛಲದಿಂದಾಗಿ
ರೀಗ ಸಮಾಜದಲ್ಲಿ ಉನ್ನತಿ ಹೊಂದಿದ್ದಾರೆಯೇ ವಿನಹ
ದಶಕಗಳ ಹಿಂದೆ ಕರಾವಳಿಯಲ್ಲಿ ಅವರಿಗೆ ಬಾವಿಯ
ಮುಟ್ಟುವ ಅಧಿಕಾರವೂ ಇದ್ದಿರಲಿಲ್ಲ, ಕೇರಳದಲ್ಲಿ
ಗ ಮಹಿಳೆಯರು ಮೇಲ್ವಸ್ತ್ರವನ್ನು ಧರಿಸುವಂತೆಯೂ
ರಲಿಲ್ಲ. ಅವತ್ತು ಅತ್ಯಂತ ಕೀಳುಮಟ್ಟದಲ್ಲಿ ಪರಿಗಣಿಸಲ್ಪಟ್ಟಿದ್ದ
ಗರು ಈಗ ಅವತ್ತು ದೂಷಣೆಗೆ ಕಾರಣರಾದವರ
ನ್ನೇ ತಮ್ಮ ಮುಂದೆ ಇಟ್ಟುಕೊಂಡಿದ್ದುದು ಆಶ್ಚರ್ಯಕರ
ದೆ. ಈಡಿಗರೇನೋ ಹೌದು ಈ ಆರ್ಯ ಈಡಿಗ
ರೆ ಯಾರು?

ಮೊನ್ನೆ ಇತ್ತೀಚೆಗೆ ನಾಡಿನ ಖ್ಯಾತ ಚಿಂತಕರಲ್ಲೊಬ್ಬರಾದ
ಶ ಅಮೀನ್ ಮಟ್ಟುರವರು ಪುಸ್ತಕ ಬಿಡುಗಡೆ
ಸಮಾರಂಭವೊಂದರಲ್ಲಿ ಜನಾರ್ದನ ಪೂಜಾರಿಯವರ ಬಗ್ಗೆ
ಭವವಾಗಿಯೇ ಮಾತನಾಡುತ್ತಾ, ಅವರು ಸಜ್ಜನ
ಮಾಣಿಕ ಕಾಳಜಿಯ ಮನುಷ್ಯನೇನೋ ಖಂಡಿತ ಆದರೆ
ರ ಗೊಂದಲಮಯ ನಡೆಗಳನ್ನು ನೋಡಿದರೆ ಅವರೇ
ರಾಯಣಗುರುಗಳನ್ನು ಓದಿರಲಿಕ್ಕಿಲ್ಲ ಎಂದಿದ್ದರು. ಪಕ್ಕಾ
ವೈದಿಕ ಹಿನ್ನೆಲೆಯವರಾಗಿದ್ದು ಇದೀಗ "ಆರ್ಯ ಈಡಿಗ"
ಕರೆಸಿಕೊಳ್ಳಲು ಆಸೆಪಡುತ್ತಿರುವ ಎಲ್ಲಾ ಈಡಿಗರಿಗೂ
ರವರ ಈ ಮಾತು ಬಹಳಷ್ಟು ಅನ್ವಯವಾಗುತ್ತದೆ.

-ಅವಿನಾಶ್ ಎಮ್.ಎಸ್., ನೆಲ್ಲಿಕಾರ್

ನಿಮ್ಮ ಅನಿಸಿಕೆಗಳನ್ನು
lankesh70@rediffmail.com ಗೆ ಕಳುಹಿಸಿ
... ಸಂಕ್ಷಿಪ್ತರೂಪದಲ್ಲಿ ಕಳುಹಿಸಬಹುದು. ನಿಮ್ಮ
ಅನಿಸಿಕೆಗಳನ್ನು 9980331427 ನಂಬರಿಗೂ
... ಮೂಲಕ SMS ಕಳುಹಿಸಬಹುದು.

ಜ್ಯೂರಿ ವಿರುದ್ಧ ನಿರ್ದೇಶಕ ದಯಾಳ್ ಗರಂ



ಕನ್ನಡ ಚಲನಚಿತ್ರರಂಗದಲ್ಲಿ ವಿವಾದಗಳಿಗೆ ಕೊರತೆ ಎಂಬುದೇ ಇಲ್ಲ. ಚಿತ್ರ ಶುರುವಾದಾಗ, ಬಿಡುಗಡೆಯಾದಾಗ, ರಾಜ್ಯ ಪ್ರಶಸ್ತಿ ಪ್ರಕಟಗೊಂಡಾಗ ವಿವಾದಗಳು ತಲೆ ಎತ್ತುತ್ತಲೇ ಇರುತ್ತವೆ. ಈಗ ಕಳೆದ ವಾರ ಪ್ರಕಟಗೊಂಡ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಬೆನ್ನಲ್ಲೇ ಹೊಸ ವಿವಾದ ಒಂದು ಭುಗಿಲೆದ್ದಿದೆ. ಪ್ರಸ್ತುತ ವಿವಾದಕ್ಕೆ ನಾಂದಿ ಹಾಡಿರುವವರು ನಿರ್ದೇಶಕ ದಯಾಳ್. "ಈಗ ಪ್ರಕಟಗೊಂಡ ರಾಷ್ಟ್ರೀಯ ಚಲನಚಿತ್ರ ಪಶಸ್ತಿಯಲ್ಲಿ ನಮ್ಮ ಚಿತ್ರ 'ಹಗ್ಗದ ಕೊನೆ'ಗೆ ಮನ್ನಣೆ ಸಿಗದೆ ಅನ್ಯಾಯವಾಗಿದೆ" ಎಂದು ದಯಾಳ್ ಆರೋಪಿಸಿದ್ದಾರೆ.

ದಯಾಳ್ ಪ್ರಕಾರ ಅವರ ಚಿತ್ರಕ್ಕೆ ಕನಿಷ್ಟ ಎರಡು ಅಥವಾ ಮೂರು ವಿಭಾಗಗಳಲ್ಲಿ ಪ್ರಶಸ್ತಿ ಬರಬೇಕಿತ್ತಂತೆ. ಆದರೆ ಅವರ ಚಿತ್ರದ ವಿರುದ್ಧ ಹಲವರು ಲಾಬಿ ಮಾಡಿದ್ದರಿಂದ ಅವರ ಚಿತ್ರ ಪ್ರಶಸ್ತಿ ಗಳಿಸುವಲ್ಲಿ ವಿಫಲವಾಯಿತಂತೆ. ಇಷ್ಟಕ್ಕೂ ದಯಾಳ್ ವಿರುದ್ಧ ಲಾಬಿ ಮಾಡಿರುವವರು ಯಾರು? ಅದಕ್ಕೆ ದಯಾಳ್ ಕೊಡುವ ಉತ್ತರ ಪತ್ರಕರ್ತ ಸುಬ್ರಹ್ಮಣ್ಯ!

ದಯಾಳ್ ಪ್ರಕಾರ ಈ ವರ್ಷ ಸೌತ್ ಜೋನ್ ವಿಭಾಗದಲ್ಲಿ ಜ್ಯೂರಿಯಾಗಿದ್ದ "ಪತ್ರಕರ್ತ ಸುಬ್ರಹ್ಮಣ್ಯ ಮತ್ತು ನನಗೆ ವೈಯಕ್ತಿಕವಾಗಿ ಆಗುವುದಿಲ್ಲ. ಇದೇ ಕಾರಣ ಇಟ್ಟುಕೊಂಡು ಸುಬ್ರಹ್ಮಣ್ಯ ಅವರು ಮೊದಲ ಸುತ್ತಿನಲ್ಲೆ ನಮ್ಮ ಚಿತ್ರವನ್ನು ಅನರ್ಹಗೊಳಿಸಿದರು." ಈಗ ಸುಬ್ರಹ್ಮಣ್ಯ ವಿರುದ್ಧ ದಯಾಳ್ ಚಲನಚಿತ್ರ ವಾಣಿಜ್ಯ ಮಂಡಳಿ, ಚಲನಚಿತ್ರ ಅಕಾಡೆಮಿ, ಚಲನಚಿತ್ರ ನಿರ್ಮಾಪಕರ ಸಂಘದಲ್ಲಿ ದೂರು ದಾಖಲಿಸಿದ್ದಾರೆ. ಅಷ್ಟೇ ಅಲ್ಲದೆ ಖಾಸಗಿ ಚಾನೆಲ್ ಸಂದರ್ಶನದಲ್ಲಿ ಮಾತನಾಡುತ್ತಾ "ಸುಬ್ರಹ್ಮಣ್ಯ ಒಬ್ಬ ನೀಚ ಪತ್ರಕರ್ತ. ಅವರನ್ನು ಯಾವ ಮಾನದಂಡದಲ್ಲಿ ಜ್ಯೂರಿಯಾಗಿ ಆಯ್ಕೆ ಮಾಡಿದರೊ ಗೊತ್ತಿಲ್ಲ" ಎಂದು ಟೀಕಿಸಿದ್ದಾರೆ.

ವಾಸ್ತವವಾಗಿ 'ಹಗ್ಗದ ಕೊನೆ' ಸಿನಿಮಾವನ್ನು ನೋಡಿದ್ದ ಜನರಲ್ಲಿ ಶೇ 99 ಜನ "ಅದು ಪ್ರಶಸ್ತಿ ಗಳಿಸುವಷ್ಟು ಒಳ್ಳೆ ಸಿನಿಮಾ ಅಲ್ಲ. ಸಿನಿಮಾವನ್ನು ನಾಟಕ ರೀತಿಯಲ್ಲಿ ನಿರ್ದೇಶನ ಮಾಡಲಾಗಿದೆ. ಸಿನಿಮಾಗೂ ನಾಟಕಕ್ಕೂ ವ್ಯತ್ಯಾಸ ಗೊತ್ತಿಲ್ಲದ ದಯಾಳ್ ಪ್ರಶಸ್ತಿ ಸುತ್ತಿನಲ್ಲಿ ಇದ್ದ ಬೇರೆ ಸಿನಿಮಾವನ್ನು ನೋಡದೇ ವಿನಾಕಾರಣ ಪತ್ರಕರ್ತ ಸುಬ್ರಹ್ಮಣ್ಯ ಮೇಲೆ ಗೂಬೆ ಕೂರಿಸುವುದು ತಪ್ಪು. ಹೆತ್ತವರಿಗೆ ಹೆಗ್ಗಣ ಮುದ್ದು ಅನ್ನೋ ಹಾಗೆ ದಯಾಳ್‌ಗೆ ತಮ್ಮ ಸಿನಿಮಾ ಮೇಲೆ ಪ್ರೀತಿ. ಆ ಕಾರಣಕ್ಕೇ ಅವರು ಈ ರೀತಿ ಅಪಪ್ರಚಾರ ಮಾಡುತ್ತಿದ್ದಾರೆ" ಎಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಬಿ-ಗ್ರೇಡ್ ಮಸಾಲಾ ಸಿನಿಮಾ ನಿರ್ದೇಶಿಸುತ್ತಿದ್ದ ದಯಾಳ್ ತರಹದ ವ್ಯಕ್ತಿ ಒಂದು ಸದಭಿರುಚಿ ಚಿತ್ರ ಮಾಡಲು ಪ್ರಯತ್ನಿಸಿದ್ದು ಸ್ವಾಗತಾರ್ಹವೇ. ಆದರೆ ತಮ್ಮ ಈ ಪ್ರಯತ್ನಕ್ಕೆ ಪ್ರಶಸ್ತಿ ಸಿಗಲಿಲ್ಲ ಎಂಬ ಕಾರಣಕ್ಕೆ ಪತ್ರಕರ್ತ ಸುಬ್ರಹ್ಮಣ್ಯರನ್ನು ಟೀಕಿಸುವುದು ಸರಿಯಲ್ಲ.

ಈ ವಿವಾದದ ಬೆನ್ನಲ್ಲೇ ಮತ್ತೊಂದು ಗಂಭೀರ ಆರೋಪವನ್ನು ನಿರ್ದೇಶಕ ಬಿ.ಎಸ್.ಲಿಂಗದೇವರು ನಟಿ ತಾರಾ ವಿರುದ್ಧ ಮಾಡಿದ್ದಾರೆ. ಅದೇನೆಂದರೆ "ನಟಿ ತಾರಾ ಡಿ.ಎಫ್.ಎಫ್ ಸೆಲೆಕ್ಷನ್ ಸಮಿತಿಯಲ್ಲಿದ್ದರು. ಕಾನೂನು ಪ್ರಕಾರ ಸೆಲೆಕ್ಷನ್ ಲಿಸ್ಟ್‌ನಲ್ಲಿರುವ ಚಿತ್ರಗಳ ಪಟ್ಟಿಯಲ್ಲಿ ಜ್ಯೂರಿ ಮೆಂಬರ್ಸ್ ನಟಿಸಿರುವ ಚಿತ್ರಗಳು ಇರಬಾರದು. ತಾರಾ ನಟಿಸಿದ್ದ 'ಉಳಿದವರು ಕಂಡಂತೆ' ಚಿತ್ರ ಪ್ರಶಸ್ತಿಯ ರೇಸ್‌ನಲ್ಲಿತ್ತು. ಇದು ಗೊತ್ತಿದ್ದರೂ ಜ್ಯೂರಿಯಲ್ಲಿ ತಾರಾ ಇದ್ದರು. ಅವರು ಜ್ಯೂರಿಯಲ್ಲಿದ್ದರ ಹಿಂದೆ ದುರುದ್ದೇಶ ಇದೆ. ಯಾವುದೋ ಸಿನಿಮಾ ಪರ ಬ್ಯಾಟಿಂಗ್ ಮಾಡುವುದಕ್ಕೆ ತಾರಾ ಹೀಗೆ ಮಾಡಿದ್ದಾರೆ. ಫೈನಲ್ ರೌಂಡ್‌ನಲ್ಲಿ ಡಿ.ಎಫ್.ಎಫ್‌ಗೆ ಗೊತ್ತಾಗಿ ಸಮಿತಿಯಿಂದ ತಾರಾ ಅವರನ್ನ ಹೊರಹಾಕಲಾಗಿದೆ. ತಾರಾ ಅವರಿಂದಾಗಿ ಉತ್ತಮ ಚಿತ್ರವಾಗಿದ್ದ 'ಉಳಿದವರು ಕಂಡಂತೆ' ಚಿತ್ರಕ್ಕೂ ಪ್ರಶಸ್ತಿ ಬಂದಿಲ್ಲ. ಜೊತೆಗೆ ಇತರೆ ಕನ್ನಡ ಚಿತ್ರಗಳ ಪರ ದನಿಯೆತ್ತುವವರೂ ಇಲ್ಲದಂತಾಯಿತು" ಎಂದು ಲಿಂಗದೇವರು ಆರೋಪಿಸಿದ್ದಾರೆ.


ಈ ಆರೋಪಕ್ಕೆ ಪ್ರತಿಕ್ರಿಯಿಸಿರುವ ತಾರಾ "ನಾನು ಈಸ್ಟರ್ನ್ ಜೋನ್ ಸಮಿತಿಯಲ್ಲಿದ್ದದ್ದು. ದಕ್ಷಿಣ ಭಾರತದ ಚಿತ್ರಗಳಿಗೂ ನನಗೂ ಯಾವುದೇ ಸಂಬಂಧವಿರಲಿಲ್ಲ. ಹಾಗಾಗಿ ಲಿಂಗದೇವರು ಮಾಡುತ್ತಿರುವ ಆರೋಪದಲ್ಲಿ



ಹುರುಳಿಲ್ಲ. ಅನಗತ್ಯವಾಗಿ ನನ್ನ ಮೇಲೆ ಆರೋಪ ಮಾಡುತ್ತಿದ್ದಾರೆ. ಕನ್ನಡಕ್ಕೆ ಹೆಚ್ಚು ಪ್ರಶಸ್ತಿಗಳು ಸಿಗಬೇಕು ಅನ್ನೋದು ನನ್ನ ಆಸೆ ಕೂಡ. ಸೆಕೆಂಡ್ ರೌಂಡ್‌ನಲ್ಲಿ ನಾನು ನಟಿಸಿದ್ದ ಚಿತ್ರವಿದ್ದ ಕಾರಣ, ನಾನು ಅನರ್ಹ ಆಗಿದ್ದರಿಂದ, ನಾನೇ ಮೇಲ್ ಮಾಡಿ ಸೆಲೆಕ್ಷನ್ ಕಮಿಟಿಯಿಂದ ಹೊರಬಂದೆ" ಎಂದಿದ್ದಾರೆ.

ಅಂತೂ ಮೊದಲೇ ಹೇಳಿದಂತೆ ನಮ್ಮ ಕನ್ನಡ ಚಿತ್ರರಂಗದಲ್ಲಿ ವಾದವಿವಾದಗಳಿಗೆ ಕೊರತೆ ಇಲ್ಲವೇ ಇಲ್ಲ! ●


ಗಿಮಿಕ್ ನಿರ್ದೇಶಕ ಆರ್.ಚಂದ್ರುವಿನ ಹೊಸ ವರಸೆ



ಗಾಂಧೀನಗರದಲ್ಲಿ ಗಿಮಿಕ್ ನಿರ್ದೇಶಕ ಯಾರು ಅಂದರೆ ಜನ ಹೇಳೋದು ಒಂದೋ 'ಜೋಗಿ' ಪ್ರೇಮ್ ಅಥವಾ 'ಚಾರ್‌ಮಿನಾರ್' ಖ್ಯಾತಿಯ ಆರ್.ಚಂದ್ರು ಅವರುಗಳ ಹೆಸರನ್ನೇ! ಆದರೀಗ ಅವರಿಬ್ಬರಲ್ಲಿ ಹೆಚ್ಚು ಚಾಲ್ತಿಯಲ್ಲಿರುವವರು ಚಂದ್ರು. ಇವರು ಮಾಡಿರುವ ಹೊಸ ಗಿಮಿಕ್‌ನ ಹೆಸರು 'ಬಾಹುಬಲಿ-2'. ಏಪ್ರಿಲ್ 24ಕ್ಕೆ ಶಿವರಾಜ್‌ಕುಮಾರ್ ಅಭಿನಯದ 'ಬಾದ್ಷಾ' ಚಿತ್ರದ ಮುಹೂರ್ತ ಮಾಡುವುದಾಗಿಯೂ ಹೇಳುತ್ತಿರುವ ಚಂದ್ರು "ಈ ಚಿತ್ರದಲ್ಲಿ ತೆಲುಗಿನ 'ಬಾಹುಬಲಿ' ಚಿತ್ರಕ್ಕೆ ಕೆಲಸ ಮಾಡಿದ ತಂತ್ರಜ್ಞರು ಕೆಲಸ ಮಾಡುತ್ತಿದ್ದಾರೆ. ಆ ಕಾರಣಕ್ಕೆ ಇದು ಬಾಹುಬಲಿ ಚಿತ್ರದ ಮುಂದುವರೆದ ಭಾಗ" ಎನ್ನುತ್ತಿದ್ದಾರೆ.

ಆದರೆ ವಾಸ್ತವವಾಗಿ 'ಬಾಹುಬಲಿ' ಸಿನಿಮಾವು ಹಿಸ್ಟಾರಿಕಲ್ ಸಿನಿಮಾ ಆಗಿದ್ದು 'ಬಾದ್ಷಾ' ಒಂದು ಅಂಡರ್‌ವರ್ಲ್ಡ್‌ಗೆ ಸಂಬಂಧಿಸಿದ ಸಿನಿಮಾ. ಹಾಗಿರುವಾಗ ಚಂದ್ರು ಯಾವ ಕಾರಣಕ್ಕೆ ಇದು 'ಬಾಹುಬಲಿ' ಚಿತ್ರದ ಮುಂದುವರೆದ ಭಾಗ ಎನ್ನುತ್ತಿದ್ದಾರೋ ಅದು ಅವರಿಗೆ ಅರ್ಥವಾಗಬೇಕು!

ಸಾಮಾಜಿಕ ಜಾಲತಾಣದಲ್ಲೂ ಬಿಗ್ ಬಿ ದರ್ಬಾರ್



ಮನಸೆಳೆಯುವ ನಟನೆಯ ಮೂಲಕ ಬಾಲಿವುಡ್‌ನಲ್ಲಿ ಜನಪ್ರಿಯತೆಯನ್ನು ಉಳಿಸಿಕೊಂಡಿರುವ ಬಿಗ್ ಬಿ ಅಮಿತಾಭ್ ಬಚ್ಚನ್ ಸಾಮಾಜಿಕ ಜಾಲತಾಣದಲ್ಲೂ ಅತ್ಯಂತ ಜನಪ್ರಿಯ ಎನಿಸಿಕೊಂಡಿದ್ದಾರೆ. ತಮ್ಮ ಬದುಕಿನ ಆನಂದದ ಕ್ಷಣಗಳನ್ನು ಟ್ವಿಟರ್ ಮೂಲಕ ಹಂಚಿಕೊಳ್ಳುವ ಬಿಗ್ ಬಿ ಇದೀಗ 1.4 ಕೋಟಿ ಅಭಿಮಾನಿಗಳನ್ನು ಹೊಂದುವ ಮೂಲಕ ದಾಖಲೆ ನಿರ್ಮಿಸಿದ್ದಾರೆ.

ಟ್ವಿಟರ್‌ನಲ್ಲಿ 1.4 ಕೋಟಿ, ಫೇಸ್‌ಬುಕ್‌ನಲ್ಲಿ 2 ಕೋಟಿ, ಬ್ಲಾಗ್‌ನಲ್ಲಿ 30 ಲಕ್ಷ ಅಭಿಮಾನಿಗಳನ್ನು ಸಂಪಾದಿಸಿ ತುಂಬ ಖುಷಿಯಾಗಿದ್ದೇನೆ ಎಂದು ತಮ್ಮ ಸಂತಸವನ್ನು ಟ್ವಿಟ್ ಮಾಡಿದ್ದಾರೆ ಬಿಗ್ ಬಿ ಅಮಿತಾಭ್ ಬಚ್ಚನ್. ●

ಅನುಷ್ಕ ಪರ ಬಾಲಿವುಡ್ ಬ್ಯಾಟಿಂಗ್



"ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ ಎಳೆದರಂತೆ" ಎಂಬ ಗಾದೆ ಮಾತು ಸದ್ಯಕ್ಕೆ ಈ ನಟಿಗೆ ಅನ್ವಯ ಆಗುತ್ತಿದೆ. ಯಾರು ಈ ನಟಿ? ಬೇರೆ ಯಾರೂ ಅಲ್ಲ, ನಮ್ಮ ಬೆಂಗಳೂರಿನ ಹುಡುಗಿ, ಬಾಲಿವುಡ್ ಬೆಡಗಿ ಅನುಷ್ಕ ಶರ್ಮ ಸದ್ಯಕ್ಕೆ ಬಲಿಪಶುವಾಗಿರುವ ನಟಿ.

ವಿಷಯ ಏನಪ್ಪ ಅಂದ್ರೆ ಕಳೆದ ವಾರ ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ನಡೆದ ವಿಶ್ವ ಕಪ್ ಕ್ರಿಕೆಟ್ ಸೆಮಿಫೈನಲ್ ಪಂದ್ಯದಲ್ಲಿ ತನ್ನ ಪ್ರಿಯತಮ ವಿರಾಟ್ ಕೊಹ್ಲಿಗೆ ಬೆಂಬಲ ನೀಡಲು ಅನುಷ್ಕ ಸಿಡ್ನಿಗೆ ತೆರಳಿದ್ದರು. ಅಂದು ನಡೆದ ಮ್ಯಾಚ್‌ನಲ್ಲಿ ವಿರಾಟ್ ಉತ್ತಮ ಪ್ರದರ್ಶನ ನೀಡದೆ ಕೇವಲ ಒಂದು ರನ್ನಿಗೆ ಔಟ್ ಆದರು. ಕೊನೆಗೆ ಭಾರತ ಪಂದ್ಯದಲ್ಲಿ ಸೋಲು ಅನುಭವಿಸಿತು.

ಇದಕ್ಕೆ ನೇರವಾಗಿ ಅನುಷ್ಕ ಶರ್ಮ ಕಾರಣ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗಳು ಹರಿದಾಡಲಾರಂಭಿಸಿದವು. ಈ ಟೀಕೆಗಳ ವಿರುದ್ಧ ಬಾಲಿವುಡ್ ಮಂದಿ ಅನುಷ್ಕ ಪರ ಬ್ಯಾಟಿಂಗ್ ಮಾಡಿದರು, "ತನ್ನ ಇನಿಯನಿಗೆ ಬೆಂಬಲವಾಗಿ ನಿಂತು ಅವನ ಆಟ ನೋಡಲು ಹೋಗಿದ್ದ ಅನುಷ್ಕ ಮೇಲೆ ಇಲ್ಲಸಲ್ಲದ ಆರೋಪ ಮಾಡುವುದನ್ನು ನಾನು ಖಂಡಿಸುತ್ತೇನೆ" ಎಂದು ಬಾಲಿವುಡ್ ನಟಿ ಪ್ರಿಯಾಂಕ ಚೋಪ್ರ ಟ್ವೀಟ್ ಮಾಡಿದರು.

"ತನ್ನ ಗೆಳೆಯನ ಆಟ ನೋಡಲು ತೆರಳಿದ ಅನುಷ್ಕ ಮೇಲೆ ನಿಜಕ್ಕೂ ಹೆಮ್ಮೆಯ ಭಾವ ಮೂಡುತ್ತದೆ. ಅವರನ್ನು ಅಪಹಾಸ್ಯ ಮಾಡುವುದನ್ನು ನಿಲ್ಲಿಸಿ, ಕ್ರೀಡಾ ಸ್ಫೂರ್ತಿ ಇಲ್ಲದ ನಿಮ್ಮಂಥವರಿಗೆ ಕ್ರಿಕೆಟ್ ಸೂಕ್ತ ಆಟವಲ್ಲ" ಎಂದು ನಟ ಸುಶ್ಮಿತಾ ಸೇನ್ ಹೇಳಿದರು.

"ಅನುಷ್ಕ ಅವರ ಮೇಲೆ ಈ ರೀತಿ ದೂರುತ್ತಿರುವುದು ಅವರ ಸಣ್ಣತನವನ್ನು ಬಿಂಬಿಸುತ್ತದೆ" ಎಂದು ನಿರ್ದೇಶಕ ಸುಭಾಷ್ ಘಾಯ್ ಟ್ವೀಟ್ ಮಾಡಿದರು. ಇಷ್ಟೇ ಅಲ್ಲದೆ ನಟಿಯರಾದ ದಿಯಾ ಮಿರ್ಜಾ, ಸುರ್ವೀನ್ ಚಾವ್ಲಾ ಮುಂತಾದವರು ಅನುಷ್ಕ ಅವರಿಗೆ ಬೆಂಬಲವಾಗಿ ನಿಂತರು. ಸಾಮಾನ್ಯ ಪ್ರಜ್ಞಾವಂತರೂ ಅನುಷ್ಕಾರನ್ನು ಬೆಂಬಲಿಸಿದರು. ಇವರೆಲ್ಲರ ಪ್ರತಿದಾಳಿ ಅದೆಷ್ಟು ಪ್ರಭಾವಶಾಲಿಯಾಗಿತ್ತೆಂದರೆ ಅನುಷ್ಕಾ ವಿರುದ್ಧ ಕೆಂಡಕಾರುತ್ತಿದ್ದವರು ಚುಟಿಪಿಟಿಕ್ ಎನ್ನದೆ ತೆಪ್ಪಗಾದರು. ●

Registered No.RNP/KA/BGS/2036/2014-16 Posted at : PSO, Mysore Road, Friday R B P LANKESH, Kannada Weekly Price Rs. 15/- 15-04-2015 RNI No. KARKAN2005/1464



ಮತ್ತೆ ಒಂದಾದ ಸುದೀಪ್ ಮತ್ತು ಇಂದ್ರಜಿತ್

ಸ್ಟೈಲಿಶ್ ಡೈರೆಕ್ಟರ್ ಇಂದ್ರಜಿತ್ ಲಂಕೇಶ್ ನಿರ್ದೇಶನದ 'ತುಂಟಾಟ' ಚಿತ್ರದಲ್ಲಿ 'ಸುತ್ತ ಮುತ್ತ ಯಾರು ಇಲ್ಲ...' ಹಾಡಿಗೆ ಹೆಜ್ಜೆ ಹಾಕಿದ್ದ ಸುದೀಪ್ ಈಗ ಇಂದ್ರಜಿತ್ ನಿರ್ದೇಶನದ 'ಲವ್ ಯು ಆಲಿಯ' ಚಿತ್ರದಲ್ಲಿ ಕೇಮಿಯೋ ರೋಲ್‌ನಲ್ಲಿ ಮಿಂಚಲಿದ್ದಾರೆ.

ವಿಶೇಷ ಅಂದ್ರೆ, 'ಲವ್ ಯು ಆಲಿಯ' ಚಿತ್ರದಲ್ಲಿ ಸುದೀಪ್, ಸುದೀಪ್ ಆಗೇ ಕಾಣಿಸಿಕೊಳ್ಳುತ್ತಿರುವುದು. ಸುದೀಪ್‌ಗೆ ಸಾನ್ವಿ ಅನ್ನುವ ಮುದ್ದಾದ ಮಗಳಿದ್ದಾಳೆ. ಪುಟಾಣಿಯೊಂದಿಗೆ ಅಪ್ಪನ ಅನುಬಂಧ ಹೇಗಿದೆ ಅನ್ನೋದನ್ನ 'ಲವ್ ಯು ಆಲಿಯ' ಚಿತ್ರದ ಮೂಲಕ ಕಿಚ್ಚ ಸುದೀಪ್ ಬಿಚ್ಚಿಡಲಿದ್ದಾರೆ. 'ಜವಾಬ್ದಾರಿ'ಯುತ ತಂದೆಯಾಗಿ ಕಿಚ್ಚ ಬೆಳ್ಳಿತೆರೆ ಮೇಲೆ ಬರುತ್ತಿರುವುದು 'ಲವ್ ಯು ಆಲಿಯ' ಸ್ಪೆಷಾಲಿಟಿ.

ಅಸಲಿಗೆ ಈ ಚಿತ್ರ ಅಪ್ಪ-ಮಗಳು, ಅಮ್ಮ-ಮಗ ನಡುವಿನ ಅನುಬಂಧವನ್ನ ಸಾರುವ ಸಿನಿಮಾವಂತೆ. ಅದಕ್ಕೆ ಪೂರಕವಾಗಿ ನಿರ್ದೇಶಕ ಇಂದ್ರಜಿತ್ ಲಂಕೇಶ್, ಚಾಟ್ ಶೋ ಸನ್ನಿವೇಶವನ್ನ ಬಳಸಿಕೊಂಡು ಅದರಲ್ಲಿ ಸುದೀಪ್ ಅವರನ್ನು ಅತಿಥಿಯಾಗಿ ಇನ್ವೈಟ್ ಮಾಡಿದ್ದಾರೆ. ಸಂಭಾವನೆ ಪಡೆಯದೇ ಸುದೀಪ್ 'ಲವ್ ಯು ಆಲಿಯ' ಚಿತ್ರದಲ್ಲಿ ನಟಿಸಿರುವುದು ಮತ್ತೊಂದು ಅಚ್ಚರಿ ವಿಷಯ. ಇದಕ್ಕೆ ಕಾರಣ ಇಂದ್ರಜಿತ್ ಲಂಕೇಶ್ ಜೊತೆಗಿನ ಗೆಳೆತನ. ಕ್ರೇಜಿ ಸ್ಟಾರ್ ರವಿಚಂದ್ರನ್, ಬಹುಭಾಷಾ ನಟಿ ಭೂಮಿಕಾ ಚಾವ್ಲಾ, ಸುಧಾರಾಣಿ ಸೇರಿದಂತೆ ದೊಡ್ಡ ತಾರಾಬಳಗ 'ಲವ್ ಯು ಆಲಿಯ' ಚಿತ್ರದಲ್ಲಿದೆ. ಸದ್ಯದಲ್ಲೇ ಚಿತ್ರ ಬಿಡುಗಡೆಯಾಗಲಿದೆ.

ಬಗೆಹರಿದ ರಣವಿಕ್ರಮದ ಸಮಸ್ಯೆ

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅಭಿನಯಿಸಿದ್ದ 'ರಣರಂಗ' ಚಿತ್ರದ "ಜಗವೇ ಒಂದು ರಣರಂಗ.." ಹಾಡಿನ ಸಾಲುಗಳನ್ನ 'ರಣವಿಕ್ರಮ' ಚಿತ್ರದಲ್ಲಿ ಅನುಮತಿ ಪಡೆಯದೆ ಕಾನೂನುಬಾಹಿರವಾಗಿ ಬಳಸಿಕೊಂಡಿದ್ದರಿಂದ ಮತ್ತು ತೆಲುಗಿನ ಹಾಡೊಂದನ್ನ ನಕಲು ಮಾಡಿದ್ದರಿಂದ ಅಸಮಾಧಾನಗೊಂಡಿದ್ದ ಲಹರಿ ವೇಲು 'ರಣವಿಕ್ರಮ' ಚಿತ್ರತಂಡದ ವಿರುದ್ಧ ಕೋರ್ಟ್ ಮೆಟ್ಟಿಲೇರಲು ಚಿಂತಿಸಿದ್ದರು. ಈ ಹಿನ್ನೆಲೆಯಲ್ಲಿ 'ರಣವಿಕ್ರಮ' ಚಿತ್ರ ಬಿಡುಗಡೆಗೆ ದೊಡ್ಡ ತೊಡಕುಂಟಾಗಿತ್ತು.



ಆದರೀಗ ಈ ಬೆಟ್ಟದಂತಹ ಸಮಸ್ಯೆ ಮಂಜಿನಂತೆ ಕರಗಿಹೋಗಿದೆ. 'ರಣವಿಕ್ರಮ' ಚಿತ್ರದ ನಿರ್ಮಾಪಕರಾದ ಜಯಣ್ಣ ಮತ್ತು ಭೋಗೇಂದ್ರ ಅವರು ವೇಲು ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಅದು ಫಲ ನೀಡಿದ್ದರಿಂದ ಈ ವಿವಾದ ಸುಖಾಂತ್ಯ ಕಂಡಿದೆ.

ಲಹರಿ ವೇಲು ಅವರು ಹೇಳುವ ಪ್ರಕಾರ ಚಿತ್ರದ ನಿರ್ಮಾಪಕರು ತಮ್ಮನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. "20 ಕೋಟಿ ವೆಚ್ಚದಲ್ಲಿ ಚಿತ್ರವನ್ನು ನಿರ್ಮಿಸಿದ್ದೇವೆ. ಈಗ ಕೋರ್ಟ್‌ಗೆ ಹೋದರೆ ಚಿತ್ರ ಬಿಡುಗಡೆಗೆ ತೊಂದರೆಯಾಗುತ್ತದೆ" ಎಂದು ವಿನಂತಿಸಿಕೊಂಡರು. ಹಾಗಾಗಿ ತಾವು ರಾಜಿಯಾಗಿದ್ದೇವೆ ಎಂದು ತಿಳಿಸಿದರು.

ಜೀ ವಾಹಿನಿಯ ಹೊಸ ರಿಯಾಲಿಟಿ ಶೋ

'ವೀಕೆಂಡ್ ವಿತ್ ರಮೇಶ್', 'ಡಿವೈಡೆಡ್' ಮತ್ತು 'ಲೈಫ್ ಸೂಪರ್ ಗುರೂ' ಸೇರಿದಂತೆ ಅನೇಕ ವಿಶಿಷ್ಟ ಕಾರ್ಯಕ್ರಮಗಳ ಮೂಲಕ ವೀಕ್ಷಕರ ಮೆಚ್ಚುಗೆಗೆ ಪಾತ್ರವಾಗಿರುವ ಜೀ ಕನ್ನಡ ವಾಹಿನಿ ಇದೀಗ 'ಸಿಂಪಲ್ಲಾಗೊಂದು ಸಿಂಗಿಂಗ್ ಶೋ' ಎಂಬ ಮತ್ತೊಂದು ವಿನೂತನ ರಿಯಾಲಿಟಿ ಶೋ ಆರಂಭಿಸಿದೆ.



ಏಂಜಲ್ ಮೀಡಿಯಾ ವರ್ಕ್ಸ್ ಪ್ರೊಡಕ್ಷನ್ ಸಂಸ್ಥೆ 'ಸಿಂಪಲ್ಲಾಗೊಂದು ಸಿಂಗಿಂಗ್ ಶೋ'ವನ್ನು ನಿರ್ಮಿಸುತ್ತಿದ್ದು ಏಪ್ರಿಲ್ 4 ರಿಂದ ಶನಿವಾರ ಮತ್ತು ಭಾನುವಾರ ರಾತ್ರಿ 9 ರಿಂದ 10 ರವರೆಗೆ ಪ್ರಸಾರವಾಗಲಿದೆ. ಅರುಣ್ ಸಾಗರ್ ಹೊಸ ಅವತಾರದಲ್ಲಿ ಈ ಶೋನ ನಿರೂಪಣೆ ಮಾಡಲಿರುವುದರಿಂದ ಇದು ನೋಡುಗರಿಗೆ ಇಷ್ಟವಾಗುತ್ತದೆ ಎಂಬ ಭರವಸೆ ವಾಹಿನಿಯವರದ್ದಾಗಿದೆ.





ಸದ್ಯದಲ್ಲೇ ಅಸುನೀಗಲಿರುವ ನರ್ತಕಿ ಮತ್ತು ಸಪ್ನ

ದಶಕಗಳಿಂದ ಕನ್ನಡ ಚಿತ್ರರಂಗದಲ್ಲಿ ಬಹುದೊಡ್ಡ ಸಮಸ್ಯೆಯೆಂದರೆ ಅ... ಚಿತ್ರಮಂದಿರಗಳ ಅಭಾವ. ಜೊತೆಗೆ ಬಹುತೇಕ ನಿರ್ಮಾಪಕರಿಗೆ ವ... ನಿರ್ದೇಶಕರಿಗೆ ತಮ್ಮ ಚಿತ್ರವನ್ನು ಕೆಂಪೇಗೌಡ ರಸ್ತೆಯ ಪ್ರಮುಖ ಚಿತ್ರಮಂದಿರ... ರಿಲೀಸ್ ಮಾಡಬೇಕೆಂಬ ಹಠ. ಈ ಕಾರಣಕ್ಕೇ ಎಷ್ಟೋ ನಿರ್ಮಾ... ನಡುವೆ ವಾಣಿಜ್ಯ ಮಂಡಳಿಯಲ್ಲಿ ಜಗಳಗಳಾಗಿದ್ದೂ ಇದೆ.

ಆದರೀಗ ಕೆ.ಜಿ.ರಸ್ತೆಯಲ್ಲಿರುವ ಒಂದೊಂದೇ ಚಿತ್ರಮಂದಿರಗಳು ಸದ್ದಿ... ಬಾಗಿಲು ಹಾಕುತ್ತಿವೆ. ಈಗಾಗಲೇ ಸಾಗರ, ಪಲ್ಲವಿ ಮತ್ತು ಮೆಜೆ... ಚಿತ್ರಮಂದಿರಗಳು ಮುಚ್ಚಿಹೋಗಿ ಅವುಗಳಿದ್ದ ಜಾಗಗಳಲ್ಲಿ ಬಹುಮಹಡಿ... ಶಾಪಿಂಗ್ ಕಾಂಪ್ಲೆಕ್ಸ್‌ಗಳು ತಲೆ ಎತ್ತಿವೆ. ಈಗ ಇದೇ ರಸ್ತೆಯಲ್ಲಿರುವ ಇನ್ನೆ... ಥಿಯೇಟರ್‌ಗಳೂ ಕೊನೆಯ ದಿನಗಳನ್ನು ಎಣಿಸುತ್ತಿವೆ. ಅವು ಮೆಜೆಸ್ಟಿ... ಹೃದಯಭಾಗದಲ್ಲಿರುವ ನರ್ತಕಿ ಮತ್ತು ಸಪ್ನ ಚಿತ್ರಮಂದಿರಗಳು. ಇಲ್ಲಿಯತ... ನರ್ತಕಿ ಚಿತ್ರಮಂದಿರದಲ್ಲಿ ಶುಕ್ರವಾರ ಬಂತೆಂದರೆ ಹಬ್ಬದ ಸಂಭ್ರಮ ಕಾಣಿಸುತ್ತಿ... ಈ ಥಿಯೇಟರ್‌ಗಾಗಿ ಬಿಗ್ ಬಜೆಟ್ ಚಿತ್ರಗಳು ಮುಗಿಬೀಳುತ್ತಿದ್ದವು. ಉಳಿದ... ಸಪ್ನಾ ಚಿತ್ರಮಂದಿರ ಸಣ್ಣ ಬಜೆಟ್ ಚಿತ್ರಗಳ ಪಾಲಿಗೆ ವರದಾನವಾಗಿ... ಈಗ ಈ ಎರಡೂ ಚಿತ್ರಮಂದಿರಗಳ ಲೀಸ್ ಅವಧಿ ಮುಗಿದಿರುವ ಕಾ... ಅವುಗಳಿಗೆ ಬೀಗ ಹಾಕಲಾಗುತ್ತಿದೆ ಎಂದು ಆ ಚಿತ್ರಮಂದಿರ... ಮಾಲೀಕರಾದ ಪ್ರಕಾಶ್ ಎಂ ಶಿಂಧೆ ಹೇಳುತ್ತಿದ್ದಾರೆ. ಈ ಥಿಯೇಟರ್‌ಗ... ಇಷ್ಟು ವರ್ಷಗಳ ಕಾಲ ಕೆಲಸ ಮಾಡುತ್ತಿದ್ದ ಸುಮಾರು 25 ನೌಕ... ಬೀದಿಗೆ ಬೀಳುವ ಆತಂಕದಲ್ಲಿದ್ದಾರೆ. ವಿಧಿಯಿಲ್ಲದೆ ಅವರೆಲ್ಲ ಸಿನಿ... ಕಾರ್ಮಿಕರ ಸಂಘದ ಮೊರೆ ಹೋಗಿದ್ದಾರೆ. ತಾನು ಕಾರ್ಮಿಕರ ಪರವ... ಹೋರಾಡುವ ಭರವಸೆಯನ್ನು ಸಂಘ ನೀಡಿದೆ.

ಆದರೆ ಒಂದು ಮೂಲದ ಪ್ರಕಾರ, ಈ ಎರಡೂ ಥಿಯೇಟರ್... ಲೀಸ್ ಅವಧಿ ಇನ್ನೂ ಮುಗಿದಿಲ್ಲ ನೌಕರರು ಅವರೇ ಕೆಲಸ ಬಿಟ್ಟುಹೋಗುವ... ಮಾಡಿರುವ ಪ್ಲಾನ್ ಇದು. ಯಾಕೆಂದರೆ ನೌಕರರಿಗೆ ವೇತನ ಹೆಚ್ಚಳ, ಉ... ಸೌಲಭ್ಯಗಳನ್ನು ನೀಡಲು ಸಾಧ್ಯವಾಗದೆ ಈ ಮಾರ್ಗವನ್ನು ಅನುಸರಿಸಲಾಗಿ...

ಇನ್ನೊಂದು ಮೂಲದ ಪ್ರಕಾರ, ಈಗಾಗಲೆ 45 ವರ್ಷಗಳ ಲಿ... ಅವಧಿ ಮುಗಿದಿದೆ. ಹಾಗೆಂದು ಒಂದು ತಿಂಗಳ ಹಿಂದೆಯೇ ಮಾಲೀ... ತಿಳಿಸಿದ್ದರು. ಒಂದು ವೇಳೆ ಬೇರೊಬ್ಬರು ಥಿಯೇಟರ್‌ಗಳನ್ನು ಗುತ್ತಿ... ತೆಗೆದುಕೊಂಡರೆ ಈ ಎರಡೂ ಚಿತ್ರಮಂದಿರಗಳು ಇನ್ನೊಂದಷ್ಟು ವ... ಉಸಿರಾಡುತ್ತವೆ. ಇಲ್ಲವಾದರೆ ಈ ಮೂಲಕ ಗಾಂಧಿನಗರದ ಮತ್ತೆರ... ಚಿತ್ರಮಂದಿರಗಳು ಇತಿಹಾಸದ ಪುಟ ಸೇರಲಿವೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com